ಬುಧವಾರ, ಅಕ್ಟೋಬರ್ 30, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 301 | ಪುಟ 16

● www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಕಾಯುವಿಕೆಯ ತಾಪತ್ರಯವನ್ನು ತಪ್ಪಿಸಲು ಬರಲಿದೆ ವರ್ಚುವಲ್ ಟೋಲ್ ವ್ಯವಸ್ಥೆ

ಆಳ-ಅಗಲ
'ದಳಪತಿ' ರಾಜಕಾರಣ: ಹಾವಿನೊಂದಿಗೆ ಆಟ

ಮಳೆ ಅವಾಂತರ: ಈರುಳ್ಳಿ ಬೆಳೆ ನಾಶ 8

ದರ್ಶನ್ ಜಾಮೀನು ಅರ್ಜಿ: ಇಂದು ಆದೇಶ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
80,369	24,466	₹82,860 (ಬೆಂಗಳೂರು)	₹1.03ಲಕ್ಷ (ಬೆಂಗಳೂರು)	84.05

ಮುಡಾ ಪ್ರಕರಣ: ಬೆನ್ನುಬಿದ್ದ ತನಿಖಾತಂಡ ● ಬಿಲ್ಡರ್‌ಗಳ ಮನೆಯಲ್ಲಿ ದಾಖಲೆ ವಶ

ಸಿದ್ದರಾಮಯ್ಯ ಆಪ್ತಗೆ ಇ.ಡಿ ಈಟಿ

ಪ್ರಜಾವಾಣಿ ವಾರ್ತೆ

ರಾಕೇಶ್ ಪಾಪಣ್ಣ

ಬೆಂಗಳೂರು/ಮೈಸೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ನಿವೇಶನ ಹಂಚಿಕೆ ಪ್ರಕರಣದಲ್ಲಿ ದಾಖಲೆಗಳ ಬೆನ್ನುಬಿದ್ದಿರುವ ಜಾರಿ ನಿರ್ದೇಶನಾಲಯವು (ಇ.ಡಿ) ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರ ಆಪ್ತ ಮತ್ತು ಕಾಂಗ್ರೆಸ್ ಮುಖಂಡ ರಾಕೇಶ್ ಪಾಪಣ್ಣ ಅವರ ಮನೆಯಲ್ಲಿ ಸತತ ಎರಡನೇ ದಿನವೂ ಶೋಧ ಮುಂದುವರಿಸಿದ್ದು, ಅವರನ್ನು ವಿಚಾರಣೆ ನಡೆಸಿದೆ.

ಮೈಸೂರಿನ ಹಿನಕಲ್‌ನಲ್ಲಿರುವ ರಾಕೇಶ್ ಪಾಪಣ್ಣ ಅವರ ಮನೆಯಲ್ಲಿ ಸೋಮವಾರ ಬೆಳಿಗ್ಗೆ ಶೋಧ ಆರಂಭಿಸಿದ್ದ ಅಧಿಕಾರಿಗಳು, ಮಂಗಳವಾರ ಸಂಜೆವರೆಗೂ ಅವರ ವಿಚಾರಣೆ ನಡೆಸಿದರು. ಪ್ರಕರಣದ ತನಿಖೆ ಚುರುಕುಗೊಳಿಸಿದ ಇ.ಡಿ ಅಧಿಕಾರಿಗಳ ತಂಡ, ಬದಲಿ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ಬಿಲ್ಡರ್‌ಗಳ ಮನೆ ಮತ್ತು ಕಚೇರಿಗಳಲ್ಲಿ ಶೋಧ ನಡೆಸಿದೆ.

'ಬದಲಿ ನಿವೇಶನ ಹಂಚಿಕೆಗೆ ಸಂಬಂಧಿಸಿದ ಹಲವು ದಾಖಲೆಗಳನ್ನು ರಾಕೇಶ್ ಹಾಗೂ ಬಿಲ್ಡರ್‌ಗಳ ಮನೆಗಳಿಂದ ವಶಕ್ಕೆ ಪಡೆಯಲಾಗಿದೆ' ಎಂದು ಇ.ಡಿ. ಮೂಲಗಳು ಹೇಳಿವೆ.

ರಾಕೇಶ್ ಅವರ ತಂದೆ ಎ. ಪಾಪಣ್ಣ ಅವರಿಗೆ ಸೇರಿದ ಹಿನಕಲ್ ಗ್ರಾಮದ ಸರ್ವೆ ಸಂಖ್ಯೆ 211ರ 3 ಎಕರೆ 5 ಗುಂಟೆ ಜಮೀನನ್ನು, ವಿಜಯನಗರ ಬಡಾವಣೆಗಾಗಿ ಮುಡಾ ಸ್ವಾಧೀನ ಪಡಿಸಿಕೊಂಡಿತ್ತು. ಅದಕ್ಕೆ ಪರಿಹಾರವಾಗಿ '50:50' ಅನುಪಾತದಲ್ಲಿ ಒಟ್ಟು 36,573 ಚ.ಅಡಿ ಅಳತೆಯ 20 ಬದಲಿ ನಿವೇಶನಗಳನ್ನು ಮುಡಾವು ಇದೇ ಜೂನ್ 12ರಂದು ಹಂಚಿಕೆ ಮಾಡಿತ್ತು. ಪ್ರಕರಣವು ವಿವಾದದ ಸ್ವರೂಪ ಪಡೆಯುತ್ತಲೇ ಈ ನಿವೇಶನಗಳ ಹಂಚಿಕೆಗೆ ತಡೆ ನೀಡಲಾಗಿತ್ತು.

ಬಿಲ್ಡರ್ ಮನೆ, ಕಚೇರಿ ಶೋಧ: ಇದಲ್ಲದೇ ಇ.ಡಿ ಅಧಿಕಾರಿಗಳು ಮೈಸೂರು, ಮಂಡ್ಯದ ಹಲವೆಡೆ ಮಂಗಳವಾರ ಹೊಸದಾಗಿ ಶೋಧ ಕಾರ್ಯ ಆರಂಭಿಸಿದ್ದಾರೆ. ರಿಯಲ್ ಎಸ್ಟೇಟ್ ಉದ್ಯಮಿ ಜಯರಾಮ್ ಅವರ ಮನೆ ಮತ್ತು ಕಚೇರಿಗಳಲ್ಲಿಯೂ ಶೋಧ ನಡೆಸಿದ್ದರು. ಅವರು ಎಂಎಂಜಿ ಕನ್‌ಸ್ಟ್ರಕ್ಷನ್ ಮತ್ತು ವಕ್ರತುಂಡ ಹೌಸಿಂಗ್ ಸೊಸೈಟಿ ಎಂಬ ಎರಡು ರಿಯಲ್ ಎಸ್ಟೇಟ್ ಸಂಸ್ಥೆಗಳನ್ನು ನಡೆಸುತ್ತಿದ್ದು, ಎರಡರ ಕಚೇರಿಗಳೂ ಮೈಸೂರಿನ ಕಾಂತರಾಜ ಅರಸ್ ರಸ್ತೆಯಲ್ಲಿವೆ.

9ನೇ ಪುಟ ನೋಡಿ

ದಿನೇಶ್ ಮನೆಗೆ ಸಮನ್ಸ್

ದಿನೇಶ್ ಕುಮಾರ್

ಮುಡಾ ಆಯುಕ್ತರಾಗಿದ್ದ ಜಿ.ಟಿ.ದಿನೇಶ್ ಕುಮಾರ್ ಅವರ ಮನೆಗೆ ಮಂಗಳವಾರ ವಿಚಾರಣೆಗೆಂದು ತೆರಳಿದ್ದ ಇ.ಡಿ ಅಧಿಕಾರಿಗಳು ಬರಿಗೈಲಿ ಮರಳಿದ್ದಾರೆ.

ಬೆಂಗಳೂರಿನ ಬಾಣಸವಾಡಿಯ ದೀಪಿಕಾ ರಾಯಲ್ ಅಪಾರ್ಟ್‌ಮೆಂಟ್ಸ್‌ನಲ್ಲಿರುವ ದಿನೇಶ್ ಅವರ ಮನೆಗೆ ಇ.ಡಿ ಅಧಿಕಾರಿಗಳು ಬೆಳಿಗ್ಗೆಯೇ ತೆರಳಿದ್ದರು. ಈ ವೇಳೆ ಅವರು ಮನೆಯಲ್ಲಿ ಇಲ್ಲ ಎಂಬುದು ಗೊತ್ತಾದ ನಂತರ ಹಲವು ಗಂಟೆ ಅಲ್ಲೇ ಕಾದಿದ್ದರು. ಮಧ್ಯಾಹ್ನ 12ರ ವೇಳೆಗೆ ಮನೆ ಬಾಗಿಲಿಗೆ ಸಮನ್ಸ್ ಅಂಟಿಸಿ ವಾಪಸಾದರು.

'ವಿಚಾರಣೆಗೆ ಹಾಜರಾಗಿ ಎಂದು ಸಮನ್ಸ್‌ನಲ್ಲಿ ಸೂಚಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಮೈಸೂರಿನಲ್ಲಿ ಶೋಧಕ್ಕೆ ಗುರಿಯಾಗಿರುವ ಉದ್ಯಮಿ ಜಯರಾಮ್ ಅವರು, ದಿನೇಶ್ ಮುಡಾ ಆಯುಕ್ತರಾಗಿದ್ದ ಅವಧಿಯಲ್ಲಿ ಅವರೊಂದಿಗೆ ವ್ಯಾವಹಾರಿಕ ಸಂಬಂಧ ಹೊಂದಿದ್ದರು ಎಂಬ ಮಾಹಿತಿ ಇತ್ತು. ಮೈಸೂರು ಮತ್ತು ಮಂಡ್ಯದಲ್ಲಿ ನಡೆದ ಶೋಧಕಾರ್ಯದ ವೇಳೆ ಇದಕ್ಕೆ ಸಂಬಂಧಿಸಿದ ದಾಖಲೆಗಳು ಪತ್ತೆಯಾಗಿವೆ ಎಂದು ತಿಳಿಸಿವೆ.

ನಟೇಶ್ ವಶ, ಬಿಡುಗಡೆ

ಡಿ.ಬಿ.ನಟೇಶ್

ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೆ ನಿವೇಶನ ಹಂಚಿಕೆ ಮಾಡಿದ್ದಾಗ ಮುಡಾ ಆಯುಕ್ತರಾಗಿದ್ದ ಡಿ.ಬಿ. ನಟೇಶ್ ಅವರನ್ನು ಇ.ಡಿ ಅಧಿಕಾರಿಗಳು ಮಂಗಳವಾರ ವಶಕ್ಕೆ ಪಡೆದು, ನಂತರ ಬಿಟ್ಟು ಕಳಿಸಿದ್ದಾರೆ.

ನಟೇಶ್ ಅವರ ಮಲ್ಲೇಶ್ವರದ ಮನೆಯಲ್ಲಿ ಸೋಮವಾರ ಬೆಳಿಗ್ಗೆಯಿಂದಲೇ ಶೋಧಕಾರ್ಯ ನಡೆಸಿದ್ದ ಅವರು, ಮಂಗಳವಾರ ಸಂಜೆ ವಶಕ್ಕೆ ಪಡೆದಿದ್ದರು. ನಂತರ ಶಾಂತಿನಗರದ ಕಚೇರಿಯಲ್ಲಿ ಹೇಳಿಕೆ ದಾಖಲಿಸಿಕೊಂಡ ಬಳಿಕ ಅವರನ್ನು ಮನೆಗೆ ಕಳುಹಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಯಾವ ರೈತರನ್ನೂ ಒಕ್ಕಲೆಬ್ಬಿಸಲ್ಲ: ಸಿಎಂ

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಬೆಂಗಳೂರು: 'ಯಾವ ರೈತರನ್ನೂ ತಮ್ಮ ಜಮೀನುಗಳಿಂದ ಒಕ್ಕಲೆಬ್ಬಿಸುವುದಿಲ್ಲ. ರೈತರಿಗೆ ನೋಟಿಸ್ ನೀಡಿದ್ದರೆ, ಅದನ್ನು ವಾಪಸ್ ಪಡೆಯಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ವಿಜಯಪುರ, ಯಾದಗಿರಿ ಮತ್ತು ಧಾರವಾಡ ಜಿಲ್ಲೆಗಳಲ್ಲಿ ವಕ್ಫ್ ಆಸ್ತಿ ಎಂದು ರೈತರಿಗೆ ನೋಟಿಸ್ ನೀಡಿರುವ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಅವರು ಪ್ರತಿಕ್ರಿಯಿಸಿದರು.

'ಕಂದಾಯ ಸಚಿವ ಕೃಷ್ಣ ಬೈರೇಗೌಡ, ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ, ವಕ್ಫ್ ಸಚಿವ ಜಮೀರ್ ಅಹಮದ್ ಖಾನ್ ಅವರು ಈ ಬಗ್ಗೆ ಈಗಾಗಲೇ ಸ್ಪಷ್ಟನೆ ನೀಡಿದ್ದಾರೆ' ಎಂದರು.

'ನೋಟಿಸ್ ಕೊಡಲು ಬಿಜೆಪಿ ಕಾರಣವೇ?'

ವಿಜಯೇಂದ್ರ

ಬೆಂಗಳೂರು: 'ವಿಜಯಪುರ ಜಿಲ್ಲೆಯಲ್ಲಿ 120 ರೈತರಿಗೆ ವಕ್ಫ್ ನೋಟಿಸ್ ಕೊಟ್ಟಿರುವುದನ್ನು ಸಚಿವರೇ ಒಪ್ಪಿಕೊಂಡಿದ್ದಾರೆ. ಇದಕ್ಕೆ ಬಿಜೆಪಿ ಕಾರಣವೇ? ಬಿಜೆಪಿ ಈ ವಿಷಯವನ್ನು ಕೈಗೆತ್ತಿಕೊಳ್ಳದಿದ್ದರೆ ನೂರಾರು ರೈತರು ಬೀದಿಗೆ ಬೀಳುತ್ತಿದ್ದರು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

'ಸರ್ಕಾರದಿಂದ ಆಗಿರುವ ಅನ್ಯಾಯದ ವಿರುದ್ಧ ರೈತರ ಪರವಾಗಿ ಧ್ವನಿ ಎತ್ತುವ ಕೆಲಸವನ್ನು ಬಿಜೆಪಿ ಮಾಡಿದೆ. ರೈತರ ಬೆಂಬಲಕ್ಕೆ ನಿಲ್ಲುವುದು ರಾಜಕಾರಣವೇ? ರೈತರಿಗೆ ನ್ಯಾಯ ಸಿಗುವವರೆಗೆ ಹೋರಾಟ ಮುಂದುವರಿಸುತ್ತೇವೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

ಅಲ್ಪಸಂಖ್ಯಾತರನ್ನು ಎತ್ತಿಕಟ್ಟುವ, ಜಾತಿ, ಧರ್ಮದ ಆಧಾರದಲ್ಲಿ ವಿಭಜಿಸುವ ಕೆಲಸವನ್ನು ಕಾಂಗ್ರೆಸ್ ಹಿಂದಿನಿಂದಲೂ ಮಾಡಿಕೊಂಡು ಬಂದಿದೆ. ಈಗ ಸಚಿವ ಜಮೀರ್ ಅಹ್ಮದ್ ಖಾನ್ ನೇತೃತ್ವದಲ್ಲಿ ರಾಜ್ಯದಲ್ಲಿ ಬೆಂಕಿ ಹಚ್ಚುವ ಕೆಲಸ ನಡೆದಿದೆ. ಅವರ ನೇತೃತ್ವದಲ್ಲೇ ರೈತರಿಗೆ ಅನ್ಯಾಯ ಮಾಡುವ ಕೆಲಸ ನಡೆಯುತ್ತಿದೆ ಎಂದು ಅವರು ಹೇಳಿದರು.

28 ವಿಧಾನಸಭಾ ಕ್ಷೇತ್ರಗಳಲ್ಲಿ ಪರಿಷ್ಕೃತ ಮತದಾರರ ಕರಡು ಪಟ್ಟಿ ಪ್ರಕಟ; ಜನವರಿ 6ರಂದು ಅಂತಿಮ ಪಟ್ಟಿ

ನಗರದಲ್ಲಿ 1.02 ಕೋಟಿ ಮತದಾರರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ–2025ರಂತೆ ಮತದಾರರ ಕರಡು ಪಟ್ಟಿಯನ್ನು ಮಂಗಳವಾರ ಪ್ರಕಟಿಸಲಾಗಿದ್ದು, ನಗರದ 28 ವಿಧಾನಸಭಾ ಕ್ಷೇತ್ರಗಳಲ್ಲಿ ಒಟ್ಟು 1.02 ಕೋಟಿ ಮತದಾರರಿದ್ದಾರೆ.

2024ರ ಜನವರಿ 22ರ ಅಂತಿಮ ಮತದಾರರ ಪಟ್ಟಿಯಂತೆ ನಗರದಲ್ಲಿ 98.43 ಲಕ್ಷ ಮತದಾರರಿದ್ದರು. ಏಪ್ರಿಲ್‌ನಲ್ಲಿ ನಡೆದ ಲೋಕಸಭೆ ಚುನಾವಣೆ ಸಂದರ್ಭದಲ್ಲಿ 1.01 ಕೋಟಿ ಮತದಾರರಿದ್ದರು.

ಮತದಾರರ ಕರಡು ಪಟ್ಟಿಯಲ್ಲಿ ಹೆಸರು ಬಿಟ್ಟುಹೋಗಿದ್ದಲ್ಲಿ, ತಪ್ಪಾಗಿದ್ದಲ್ಲಿ, ತಪ್ಪಾಗಿ ಸೇರ್ಪಡೆಗೊಂಡಿದ್ದಲ್ಲಿ ಹಾಗೂ ಒಂದು ಭಾಗದ ಸಂಖ್ಯೆಯಿಂದ ಮತ್ತೊಂದು ಭಾಗದ ಸಂಖ್ಯೆಗೆ ವರ್ಗಾವಣೆಯಾಗಬೇಕಿದ್ದಲ್ಲಿ, ಮತದಾರರ ಪಟ್ಟಿಯಿಂದ ಹೆಸರು ತೆಗೆದು ಹಾಕಲು ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ನವೆಂಬರ್ 28ರವರೆಗೆ ಅವಕಾಶ ನೀಡಲಾಗಿದೆ ಎಂದು ಬಿಬಿಎಂಪಿ ಚುನಾವಣೆ ವಿಭಾಗದ ವಿಶೇಷ ಆಯುಕ್ತ ಸೆಲ್ವಮಣಿ ಅವರು ಸುದ್ದಿಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

ಮತದಾರರ ಕರಡು ಪಟ್ಟಿಯನ್ನು ನಗರದ ಎಲ್ಲಾ 28 ವಿಧಾನಸಭಾ ಕ್ಷೇತ್ರಗಳ ಮತದಾರರ ನೋಂದಣಾಧಿಕಾರಿ ಕಚೇರಿ, ಸಹಾಯಕ ಮತದಾರರ ನೋಂದಣಾಧಿಕಾರಿ ಕಚೇರಿ ಹಾಗೂ ವಾರ್ಡ್ ಕಚೇರಿಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯದ ಮುಖ್ಯ ಚುನಾವಣಾಧಿಕಾರಿ ವೆಬ್‌ಸೈಟ್ www.ceokarnataka.kar.nic.in, ಬಿಬಿಎಂಪಿ ವೆಬ್‌ಸೈಟ್ www.bbmp.gov.in ಮತ್ತು Voter Helpline ಆ್ಯಪ್ ಅಥವಾ ವೆಬ್ ಪೋರ್ಟಲ್ Voters.eci.gov.inನಲ್ಲಿಯೂ ಮತದಾರರು ಕರಡು ಪಟ್ಟಿಯನ್ನು ಪರಿಶೀಲಿಸಬಹುದು ಎಂದು ಮಾಹಿತಿ ನೀಡಿದರು.

ವಿಶೇಷ ನೋಂದಣಿ: ಕೇಂದ್ರ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರಿಗಾಗಿ ವಿಶೇಷ ನೋಂದಣಿ ಅಭಿಯಾನ ಹಮ್ಮಿಕೊಳ್ಳಲಾಗುತ್ತಿದೆ.

ನವೆಂಬರ್ 9, 10 ಹಾಗೂ 23, 24ರಂದು ಪಾಲಿಕೆಯ ಕಂದಾಯ ಅಧಿಕಾರಿಗಳು/ ಸಹಾಯಕ ಕಂದಾಯ ಅಧಿಕಾರಿಗಳು/ ವಾರ್ಡ್ ಕಚೇರಿಗಳು/ ಮತಗಟ್ಟೆಗಳಲ್ಲಿ ವಿಶೇಷ ಆಭಿಯಾನ ಆಯೋಜಿಸಲಾಗುತ್ತದೆ ಎಂದು ಸೆಲ್ವಮಣಿ ತಿಳಿಸಿದರು.

ಅಂತಿಮ ಪಟ್ಟಿ: ವಿಶೇಷ ಅಭಿಯಾನದ ನಂತರ ಆಕ್ಷೇಪಣೆಗಳನ್ನು ವಿಲೇವಾರಿ ಮಾಡಿ 2025ರ ಜನವರಿ 1ರ ವೇಳೆಗೆ ಎಲ್ಲವನ್ನೂ ಪರಿಶೀಲನೆ ಮಾಡಲಾಗುತ್ತದೆ. ಕೇಂದ್ರ ಚುನಾವಣಾ ಆಯೋಗದ ಸೂಚನೆಯಂತೆ ಜನವರಿ 6ರಂದು ಮತದಾರರ ಅಂತಿಮ ಪಟ್ಟಿ ಪ್ರಕಟಿಸಲಾಗುವುದು ಎಂದರು.

ಮನೆ ಮನೆಗೆ ಭೇಟಿ: ಮತದಾರರ ಕರಡು ಪಟ್ಟಿಗೆ ಸಂಬಂಧಿಸಿದಂತೆ ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಅವರು ರಾಜಕೀಯ ಪ್ರತಿನಿಧಿಗಳ ಜೊತೆ ಮಂಗಳವಾರ ಸಭೆ ನಡೆಸಿದರು.

28 ವಿಧಾನಸಭಾ ಕ್ಷೇತ್ರವಾರು ಬಿಎಲ್‌ಒಗಳು ಮನೆ-ಮನೆಗೆ ಭೇಟಿ ನೀಡಿ, ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಮತಗಟ್ಟೆ ಮಟ್ಟದ ಏಜೆಂಟ್ (ಬಿಎಲ್‌ಎ) ಅವರೊಂದಿಗೆ ಸಮನ್ವಯ ಸಾಧಿಸಿ, ಅರ್ಹ ಮತದಾರರನ್ನು ಮತದಾರರ ಪಟ್ಟಿಗೆ ಸೇರ್ಪಡೆಗೊಳಿಸಬೇಕು ಎಂದು ಸೂಚಿಸಿದರು.

86,044 ಯುವ ಮತದಾರರು

ನಗರದಲ್ಲಿ 86,044 ಯುವ ಮತದಾರರಿದ್ದು, ಬೆಂಗಳೂರು ದಕ್ಷಿಣ ವಿಧಾನಸಭೆ ಕ್ಷೇತ್ರದಲ್ಲಿ (6,831) ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. 85 ವರ್ಷದಿಂದ 99 ವಯೋಮಾನದ 1.19 ಲಕ್ಷ ಮತದಾರರಿದ್ದಾರೆ. 100 ವರ್ಷಕ್ಕೂ ಹೆಚ್ಚು ವಯಸ್ಸಿನ 4,852 ಮತದಾರರಿದ್ದರೆ, 2,272 ಅನಿವಾಸಿ ಭಾರತೀಯ, 1,708 ಸೇವಾ ಹಾಗೂ 32,213 ಅಂಗವಿಕಲ ಮತದಾರರಿದ್ದಾರೆ.

ಆನ್‌ಲೈನ್ ಅರ್ಜಿ: ಪ್ರಥಮ ಬಾರಿಗೆ ನೋಂದಾಯಿಸಿಕೊಳ್ಳುವವರು, 2025ರ ಜನವರಿ 1ಕ್ಕೆ 18 ವರ್ಷದವರಾಗಿರಬೇಕು. 2007 ಜನವರಿ 1ರವರೆಗೆ ಜನಿಸಿದವರು ಆನ್‌ಲೈನ್ ಮೂಲಕ Voters.eci.gov.in ಅಥವಾ Voter Helpline ಮೊಬೈಲ್ ಆ್ಯಪ್‌ನಲ್ಲಿ ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ.

8,972 ಮತಗಟ್ಟೆಗಳು: ಬೆಂಗಳೂರು ಕೇಂದ್ರ , ಬೆಂಗಳೂರು ದಕ್ಷಿಣ, ಬೆಂಗಳೂರು ಉತ್ತರ ಹಾಗೂ ಬೆಂಗಳೂರು ನಗರದ ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿ ವ್ಯಾಪ್ತಿಯಲ್ಲಿ ಒಟ್ಟು 8,972 ಮತಗಟ್ಟೆಗಳಿವೆ.

1,02,41,226 ಒಟ್ಟು ಮತದಾರರು	52,69,188 ಪುರುಷರು	49,70,207 ಮಹಿಳೆಯರು	1,831 ಇತರೆ

ಅತಿ ಹೆಚ್ಚು ಮತದಾರರ ವಿಧಾನಸಭೆ ಕ್ಷೇತ್ರ	
ಬೆಂಗಳೂರು ದಕ್ಷಿಣ	7,64,895
ಮಹದೇವಪುರ	6,74,390
ಯಶವಂತಪುರ	6,06,975
ಬ್ಯಾಟರಾಯನಪುರ	5,37,020
ಕೆ.ಆರ್.ಪುರ	5,52,163

ಅತಿ ಕಡಿಮೆ ಮತದಾರರ ವಿಧಾನಸಭೆ ಕ್ಷೇತ್ರ	
ಶಿವಾಜಿನಗರ	1,97,245
ರಾಜಾಜಿನಗರ	2,09,367
ಜಯನಗರ	2,17,888
ಮಲ್ಲೇಶ್ವರ	2,30,707
ಶಾಂತಿನಗರ	2,33,84

27 ಸಾವಿರ ಎಪಿಕ್ ರದ್ದು

ನಗರದ 28 ವಿಧಾನಸಭಾ ಕ್ಷೇತ್ರಗಳಲ್ಲಿ ಒಟ್ಟು 27,338 ಮತದಾರರ ಹೆಸರನ್ನು ರದ್ದುಗೊಳಿಸಲಾಗಿದೆ. ಶಿವಾಜಿನಗರದಲ್ಲಿ ಅತಿಹೆಚ್ಚು (6,528) ಮತದಾರರ ಹೆಸರನ್ನು ತೆಗೆದುಹಾಕಲಾಗಿದೆ. 90,190 ಮತದಾರರು ಹೊಸದಾಗಿ ಸೇರ್ಪಡೆಗೊಂಡಿದ್ದಾರೆ. ಮಹದೇವಪುರ ವಿಧಾನಸಭೆ ಕ್ಷೇತ್ರದಲ್ಲಿ 19,237, ಬೆಂಗಳೂರು ದಕ್ಷಿಣದಲ್ಲಿ 19,057, ಯಶವಂತಪುರದಲ್ಲಿ 13,514, ಕೆ.ಆರ್. ಪುರದಲ್ಲಿ 13,091, ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದಲ್ಲಿ 11,671 ಮತದಾರರು ಸೇರ್ಪಡೆಯಾಗಿದ್ದಾರೆ. ಒಟ್ಟಾರೆ 37,568 ಮತದಾರರ ವಿವರಗಳನ್ನು ತಿದ್ದುಪಡಿ ಮಾಡಲಾಗಿದೆ.

ಸುದ್ದಿ 2 ನಿಮಿಷ

ರೈಲ್ವೆ: ಕನ್ನಡದಲ್ಲಿ ಪರೀಕ್ಷೆಗೆ ಅವಕಾಶ– ಸಚಿವ ಸೋಮಣ್ಣ

ಮೈಸೂರು: 'ರೈಲ್ವೆ ಹುದ್ದೆಗಳ ನೇಮಕಾತಿ ನಡೆಯಲಿದ್ದು, ಪ್ರಾದೇಶಿಕ ಭಾಷೆ ಕನ್ನಡದಲ್ಲಿ ಪರೀಕ್ಷೆ ಬರೆಯುವ ಹಾಗೂ ಅರ್ಜಿ ಸಲ್ಲಿಸುವ ಅವಕಾಶ ಒದಗಿಸಲಾಗಿದೆ' ಎಂದು ಕೇಂದ್ರ ಜಲಶಕ್ತಿ ಹಾಗೂ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದರು.

ನಗರದಲ್ಲಿ ಮಂಗಳವಾರ ಏರ್ಪಡಿಸಿದ್ದ ರಾಷ್ಟ್ರೀಯ ಉದ್ಯೋಗ ಮೇಳದಲ್ಲಿ ಮಾತನಾಡಿ, 'ಇದರಿಂದ ಕನ್ನಡಿಗರು ಹೆಚ್ಚು ಉದ್ಯೋಗ ಪಡೆಯಲು ಅನುಕೂಲವಾಗಲಿದೆ' ಎಂದರು.

'ಇಲಾಖೆಯಿಂದ ವಾರ್ಷಿಕ ನೇಮಕಾತಿ ವೇಳಾಪಟ್ಟಿ ಪ್ರಕಟಿಸಲಾಗುವುದು. ಜನವರಿಯಿಂದ ಇಲ್ಲಿಯವರೆಗೆ 60 ಸಾವಿರ ಹುದ್ದೆಗಳ ಭರ್ತಿಗೆ ಇಲಾಖೆಯು ಪ್ರಕ್ರಿಯೆ ನಡೆಸಿದೆ. ದೇಶದ ಆರ್ಥಿಕತೆಗೆ ಮಹತ್ತರವಾದ ಕೊಡುಗೆ ನೀಡುವ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ' ಎಂದು ಹೇಳಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿ, 'ಮುಡಾದಲ್ಲಿ ಇಷ್ಟೊಂದು ಅಕ್ರಮವಾಗಿದೆ ಎಂದುಕೊಂಡಿರಲಿಲ್ಲ. ನಾನು ಈ ಹಿಂದೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದಾಗ, ಮುಡಾದಲ್ಲಿ ಒಟ್ಟು 7,200 ಖಾಲಿ ನಿವೇಶನಗಳನ್ನು ಗುರುತಿಸಿ ಸಾರ್ವಜನಿಕ ಹರಾಜಿಗೆ ತೀರ್ಮಾನಿಸಿದ್ದೆವು. ಆದರೆ ಸಾಧ್ಯವಾಗಲಿಲ್ಲ. ಈಗ ಜಾರಿ ನಿರ್ದೇಶನಾಲಯವು ತನಿಖೆ ಕೈಗೆತ್ತಿಕೊಂಡಿದೆ. ಮುಡಾ ಹಾಗೂ ವಾಲ್ಮೀಕಿ ನಿಗಮ ಪ್ರಕರಣ ಎರಡೂ ತಾರ್ಕಿಕ ಅಂತ್ಯ ಕಾಣಲಿವೆ' ಎಂದರು.

'ಚನ್ನಪಟ್ಟಣ ಉಪಚುನಾವಣೆಯಲ್ಲಿ ಸಿ.ಪಿ.ಯೋಗೇಶ್ವರ್ ಆತುರದ ನಿರ್ಧಾರ ಮಾಡಿದ್ದಾರೆ. ಉಪ ಚುನಾವಣೆಯ ಮೂರು ಕ್ಷೇತ್ರಗಳಲ್ಲೂ ಎನ್‌ಡಿಎ ಗೆಲ್ಲಲಿದ್ದು, ರಾಜ್ಯ ಸರ್ಕಾರಕ್ಕೆ ಎಚ್ಚರಿಕೆಯ ಗಂಟೆಯಾಗಲಿದೆ' ಎಂದರು.

ರಾಜ್ಯೋತ್ಸವ: ಪುಸ್ತಕಗಳಿಗೆ ಶೇ 50ರಷ್ಟು ರಿಯಾಯಿತಿ

ಬೆಂಗಳೂರು: ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ನವೆಂಬರ್ ತಿಂಗಳ ಪೂರ್ತಿ ಪುಸ್ತಕಗಳ ಖರೀದಿ ಮೇಲೆ ಶೇ 50 ರಷ್ಟು ರಿಯಾಯಿತಿ ಘೋಷಿಸಿದೆ.

ಆನ್‌ಲೈನ್ ಮೂಲಕವೂ ಶೇ 50 ರಿಯಾಯಿತಿ ದರದಲ್ಲಿ ಪುಸ್ತಕಗಳನ್ನು ಖರೀದಿಸಬಹುದಾಗಿದೆ. ಪುಸ್ತಕಗಳನ್ನು ಪ್ರಾಧಿಕಾರದ ಜಾಲತಾಣ www.kuvempubhashabharathi.karnataka.gov.in ಮೂಲಕ ಪಡೆಯಬಹುದು ಎಂದು ಪ್ರಾಧಿಕಾರದ ರಿಜಿಸ್ಟ್ರಾರ್ ಈಶ್ವರ್ ಕು. ಮಿರ್ಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ವಾಮಿ, ಅಶೋಕ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬಿ.ಎಸ್‌ಸ್ವಾಮಿ

ಅಶೋಕ್

ಬೆಂಗಳೂರು: ಡಾ.ಎಸ್. ವಿದ್ಯಾಶಂಕರ ಸಾಂಸ್ಕೃತಿಕ ಪ್ರತಿಷ್ಠಾನ ನೀಡುವ 'ವಿದ್ಯಾಶಂಕರ ಪ್ರಶಸ್ತಿ'ಗೆ ಸಂಶೋಧಕರಾದ ಬಿ.ಎಸ್. ಸ್ವಾಮಿ ಹಾಗೂ 'ವಿದ್ಯಾಶಂಕರ ಪುರಸ್ಕಾರ'ಕ್ಕೆ ಅಶೋಕ್ ದೊಮ್ಮಲೂರು ಆಯ್ಕೆಯಾಗಿದ್ದಾರೆ.

ಪ್ರತಿಷ್ಠಾನದ ವತಿಯಿಂದ ಪ್ರತಿವರ್ಷ ಸಂಶೋಧಕರಿಗೆ ಈ ಪ್ರಶಸ್ತಿ ಹಾಗೂ ಪುರಸ್ಕಾರವನ್ನು ನೀಡಲಾಗುತ್ತಿದೆ. 'ವಿದ್ಯಾಶಂಕರ ಪ್ರಶಸ್ತಿ'ಯು ₹ 30 ಸಾವಿರ ನಗದು ಹಾಗೂ 'ವಿದ್ಯಾಶಂಕರ ಪುರಸ್ಕಾರ'ವು ₹ 15 ಸಾವಿರ ನಗದು ಒಳಗೊಂಡಿದೆ.

ನ.21ರಂದು ಸಂಜೆ 5 ಗಂಟೆಗೆ ಬೆಂಗಳೂರಿನ ಜೆ.ಸಿ. ರಸ್ತೆಯಲ್ಲಿರುವ ನಯನ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಪ್ರತಿಷ್ಠಾನ ತಿಳಿಸಿದೆ.

2 ಧ್ವಜ, 2 ಕಂಬ: ಶಿಕ್ಷಕರಿಗೆ ಫಜೀತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ರಾಜ್ಯೋತ್ಸವದ ದಿನ ಶಾಲೆಗಳಲ್ಲಿ ರಾಷ್ಟ್ರಧ್ವಜ ಹಾಗೂ ನಾಡ (ಕನ್ನಡ) ಧ್ವಜಾರೋಹಣವನ್ನು ಪ್ರತ್ಯೇಕ ಕಂಬಗಳಲ್ಲಿ ನೆರವೇರಿಸಬೇಕೆಂಬ ಶಾಲಾ ಶಿಕ್ಷಣ ಇಲಾಖೆ ಸುತ್ತೋಲೆ ಮುಖ್ಯ ಶಿಕ್ಷಕರು, ಸಹ ಶಿಕ್ಷರನ್ನು ಸಂಕಷ್ಟಕ್ಕೆ ಸಿಲುಕಿಸಿದೆ.

ಕರ್ನಾಟಕ ರಾಜ್ಯ ಉದಯವಾಗಿ 50 ವರ್ಷಗಳು ತುಂಬಿರುವ ಕಾರಣ ಎಲ್ಲ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಶಾಲೆಗಳಲ್ಲಿ ನವೆಂಬರ್ 1ರಂದು ಕನ್ನಡ ರಾಜ್ಯೋತ್ಸವವನ್ನು ಕಡ್ಡಾಯವಾಗಿ ಆಚರಿಸಬೇಕು. ಕನ್ನಡ ನಾಡು, ನುಡಿ, ಕಲೆ ಮತ್ತು ಸಂಸ್ಕೃತಿಯ ಬಗ್ಗೆ ಅರಿವು ಮೂಡಿಸಬೇಕು ಎಂದು ಸೂಚಿಸಲಾಗಿದೆ.

ಅಂದು ಬೆಳಿಗ್ಗೆ 8.30ರಿಂದ 9ರ ಒಳಗೆ ಧ್ವಜಾರೋಹಣ ಮಾಡಬೇಕು. ಮೊದಲು ರಾಷ್ಟ್ರಧ್ವಜಾರೋಹಣ, ನಂತರ ಕನ್ನಡ ಧ್ವಜಾರೋಹಣ ಮಾಡಬೇಕು. ರಾಷ್ಟ್ರಧ್ವಜಕ್ಕಿಂತ ಕನ್ನಡ ಧ್ವಜ ಐದು ಅಡಿ ಕೆಳಗಿರಬೇಕು. ಎರಡು ಧ್ವಜಗಳಿಗೆ ಪ್ರತ್ಯೇಕ ಧ್ವಜಸ್ತಂಭ ಬಳಸಬೇಕು. ಕಬ್ಬಿಣದ ಎಂಎಸ್ ಪೈಪುಗಳನ್ನೇ ಬಳಸಬೇಕು. ಮರದ ಕಂಬ ಬಳಸದಂತೆ ಇಲಾಖೆಯ ಆಯುಕ್ತರು ಹೇಳಿದ್ದಾರೆ.

ರಾಜ್ಯದಲ್ಲಿ 47,276 ಸರ್ಕಾರಿ ಶಾಲೆಗಳು ಸೇರಿ ಒಟ್ಟು 72,412 ಶಾಲೆಗಳಿವೆ. ಶೇ 80 ಶಾಲೆಗಳಲ್ಲಿ ಒಂದೇ ಧ್ವಜಸ್ತಂಭವಿದೆ. ಶೇ 20 ಶಾಲೆಗಳಲ್ಲಿ ಒಂದು ಧ್ವಜ ಸ್ತಂಭವೂ ಇಲ್ಲ. ಮತ್ತೊಂದು ಧ್ವಜಸ್ತಂಭ ಸಿದ್ಧಪಡಿಸುವುದು ಕಷ್ಟ ಎನ್ನುತ್ತಾರೆ ಹಲವು ಶಾಲೆಗಳ ಮುಖ್ಯ ಶಿಕ್ಷಕರು.

ಅಕ್ರಮ ನಿಲುಗಡೆ: ಸಂಚಾರಕ್ಕೆ ತೊಂದರೆ

ಸಾರ್ವಜನಿಕರ ವಾಹನ ಸಂಚಾರಕ್ಕೆ ಅಡ್ಡಿ: ಕ್ರಮಕ್ಕೆ ಪೊಲೀಸರ ಹಿಂದೇಟು

ಪ್ರಜಾವಾಣಿ ವಾರ್ತೆ

ಬೆಂಗಳೂರಿನ ಆನಂದ ರಾವ್ ವೃತ್ತದ ಬಳಿ ಖಾಸಗಿ ಬಸ್ಸುಗಳು ರಸ್ತೆಯಲ್ಲಿ ಪಾರ್ಕಿಂಗ್ ಮಾಡಿದ್ದು, ಇತರೆ ವಾಹನಗಳು ಸರಾಗವಾಗಿ ಚಲಿಸುವುದಕ್ಕೆ ಅಡ್ಡಿಯಾಗಿದೆ ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಬೆಂಗಳೂರು: ಮೆಜೆಸ್ಟಿಕ್ ಕೇಂದ್ರ ಬಸ್ ನಿಲ್ದಾಣದ ಸುತ್ತಮುತ್ತ ಖಾಸಗಿ ಬಸ್‌ಗಳನ್ನು ಅಕ್ರಮವಾಗಿ ನಿಲುಗಡೆ ಮಾಡಲಾಗುತ್ತಿದ್ದು, ಇದರಿಂದ ಸಾರ್ವಜನಿಕರ ಸಂಚಾರಕ್ಕೆ ತೊಂದರೆ ಎದುರಾಗಿದೆ.

ರಸ್ತೆ ಬದಿಯಲ್ಲೇ ಬಸ್‌ಗಳನ್ನು ಸಾಲುಗಟ್ಟಿ ನಿಲುಗಡೆ ಮಾಡಲಾಗಿದ್ದು, ಸಾರ್ವಜನಿಕರ ವಾಹನಗಳು ಮುಂದಕ್ಕೆ ಸಾಗಲು ಸಾಧ್ಯವಾಗುತ್ತಿಲ್ಲ. ಖಾಸಗಿ ಬಸ್ ಚಾಲಕರು, ರಸ್ತೆ ಬದಿಯನ್ನೇ ತಂಗುದಾಣ ಮಾಡಿಕೊಂಡಿದ್ದಾರೆ.

ನಗರದಿಂದ ಹೊರ ಜಿಲ್ಲೆ, ಹೊರ ರಾಜ್ಯಗಳಿಗೆ ನಿತ್ಯವೂ ನೂರಾರು ಸಂಖ್ಯೆಯಲ್ಲಿ ಖಾಸಗಿ ಬಸ್‌ಗಳು ಸಂಚರಿಸುತ್ತಿವೆ. ಬಹುತೇಕ ಖಾಸಗಿ ಬಸ್‌ಗಳನ್ನು ಪ್ರಮುಖ ರಸ್ತೆಗಳ ಬದಿಯಲ್ಲಿ ಅಕ್ರಮವಾಗಿ ತಂದು ನಿಲುಗಡೆ ಮಾಡಲಾಗುತ್ತಿದೆ. ಮುಂಜಾನೆ ನಗರಕ್ಕೆ ಬರುವ ಬಸ್‌ಗಳು ಹಗಲಿಡೀ ರಸ್ತೆ ಬದಿಯಲ್ಲೇ ನಿಂತಿರುತ್ತವೆ. ಮೆಜೆಸ್ಟಿಕ್ ಅಕ್ಕಪಕ್ಕದ ರಸ್ತೆಗಳು ಹಾಗೂ ಆನಂದ್ ರಾವ್ ವೃತ್ತದ ಸುತ್ತಮುತ್ತ ಸಮಸ್ಯೆ ತೀವ್ರವಾಗಿದೆ.

ಖಾಸಗಿ ಬಸ್ ನಿಲುಗಡೆ ಮಾಡಿದ್ದ ರಸ್ತೆಗಳಲ್ಲಿ ದ್ವಿಚಕ್ರ ವಾಹನ ಹೊರತುಪಡಿಸಿ ಆಟೊ, ಬಿಎಂಟಿಸಿ ಬಸ್, ಕ್ಯಾಬ್‌ಗಳು ಮುಂದಕ್ಕೆ ಸಾಗಲು ಸಾಧ್ಯವಾತ್ತಿಲ್ಲ ಎಂದು ವಾಹನ ಚಾಲಕರು ಅಳಲು ತೋಡಿಕೊಂಡಿದ್ದಾರೆ. ಈ ಸಂಬಂಧ ದೂರು ನೀಡಿದ್ದರೂ ಸಂಚಾರ ವಿಭಾಗದ ಪೊಲೀಸರು ಕ್ರಮ ಕೈಗೊಳ್ಳುತ್ತಿಲ್ಲ ಎಂದೂ ಆಪಾದಿಸಿದ್ದಾರೆ.

ಮೆಜೆಸ್ಟಿಕ್ ಬಳಿಯ ಪ್ಲಾಟ್‌ಫಾರ್ಮ್ ರಸ್ತೆ, ಧನ್ವಂತರಿ ರಸ್ತೆ, ಕೆಪಿಸಿಸಿ ಕಚೇರಿ ರಸ್ತೆ, ಸುಬೇದಾರ್ ಛತ್ರ ರಸ್ತೆ ಹಾಗೂ ಸುತ್ತಮುತ್ತಲಿನ ವೃತ್ತ ಹಾಗೂ ರಸ್ತೆಗಳಲ್ಲಿ ಖಾಸಗಿ ಬಸ್‌ಗಳು ಸಾಲು ಸಾಲಾಗಿ ನಿಂತಿರುತ್ತವೆ. ಅದೇ ಮಾರ್ಗದಲ್ಲಿ ಸಂಚರಿಸಬೇಕಾದ ಆಂಬುಲೆನ್ಸ್‌ಗಳೂ ತೊಂದರೆಗೆ ಸಿಲುಕುತ್ತಿವೆ.

ಮೆಜೆಸ್ಟಿಕ್ ಸುತ್ತಮುತ್ತ ಇತ್ತೀಚೆಗೆ ದಟ್ಟಣೆ ತೀವ್ರವಾಗಿದೆ. ಖಾಸಗಿ ಬಸ್‌ಗಳು ಪ್ರಯಾಣಿಕರನ್ನು ಮೆಜೆಸ್ಟಿಕ್‌ಗೆ ತಂದು ಬಿಟ್ಟು ಹೊರ ವಲಯಕ್ಕೆ ತೆರಳಬೇಕು. ಆದರೆ, ಹಗಲು ವೇಳೆ ಅಲ್ಲೇ ನಿಂತಿರುತ್ತವೆ. ಇದರಿಂದ ತೊಂದರೆ ಆಗುತ್ತಿದೆ ಎಂದು ಸಾರ್ವಜನಿಕರು ದೂರಿದ್ದಾರೆ.

'ಖಾಸಗಿ ಬಸ್‌ಗಳಿಂದ ಪ್ರಯಾಣಿಕರಿಗೆ ಅನುಕೂಲ ಆಗುತ್ತಿದೆ. ದೂರದ ಪ್ರಯಾಣಕ್ಕೆ ಹೆಚ್ಚಿನವರು ಖಾಸಗಿ ಬಸ್‌ಗಳನ್ನೇ ಅವಲಂಬಿಸಿದ್ದಾರೆ. ಪ್ರತಿನಿತ್ಯ ನೂರಾರು ಖಾಸಗಿ ಬಸ್‌ಗಳು ರಾಜ್ಯದ ವಿವಿಧ ಜಿಲ್ಲೆ ಹಾಗೂ ಹೊರ ರಾಜ್ಯಕ್ಕೆ ತೆರಳುತ್ತವೆ. ಮೆಜೆಸ್ಟಿಕ್ ಬಳಿ ಮಾತ್ರವೇ ನಿಲುಗಡೆಗೆ ಸದ್ಯ ಸ್ವಲ್ಪ ಜಾಗವಿದೆ. ಬೇರೆ ಕಡೆ ನಿಲುಗಡೆಗೆ ಅವಕಾಶ ಇಲ್ಲ. ಪ್ರತ್ಯೇಕ ಸ್ಥಳ ನೀಡಿದರೆ ರಸ್ತೆಯಲ್ಲಿ ಬಸ್ ನಿಲ್ಲಿಸುವುದಿಲ್ಲ' ಎಂದು ಖಾಸಗಿ ಬಸ್ ಚಾಲಕರೊಬ್ಬರು ಪ್ರತಿಕ್ರಿಯಿಸಿದರು.

ನಿಧನ ವಾರ್ತೆ

ಬಿ.ಎನ್. ಮೂರ್ತಿ

ಬೆಂಗಳೂರು: ವಿಶ್ವ ಹಿಂದೂ ಪರಿಷತ್‌ನ ಬೆಂಗಳೂರು (ದಕ್ಷಿಣ) ಕ್ಷೇತ್ರೀಯ ಕಾರ್ಯದರ್ಶಿ ಹಾಗೂ ಕೇಂದ್ರ ಕಾರ್ಯಕಾರಿ ಸದಸ್ಯರಾಗಿದ್ದ ಬಿ. ಎನ್. ಮೂರ್ತಿ (80) ಮಂಗಳವಾರ ನಿಧನರಾದರು. ಮೂರ್ತಿ ಅವರು ಜಯನಗರದ ಮಾಜಿ ಶಾಸಕ ದಿವಂಗತ ಬಿ.ಎನ್ ವಿಜಯಕುಮಾರ್ ಅವರ ಹಿರಿಯ ಸಹೋದರ. ಅವರಿಗೆ ಒಬ್ಬ ಸಹೋದರಿ ಮತ್ತು ಮೂವರು ಸಹೋದರರು ಇದ್ದಾರೆ.

ಎಚ್.ಎ.ಎಲ್‌ನಲ್ಲಿ ಎಂಜಿನಿಯರ್ ಆಗಿದ್ದ ಮೂರ್ತಿ ಅವಿವಾಹಿತರಾಗಿದ್ದರು. ಚಾಮರಾಜನಗರದ ಸೇವಾಭಾರತಿ ಶಿಕ್ಷಣ ಸಂಸ್ಥೆ ಆರಂಭಿಕ ವಿಶ್ವಸ್ಥರಾಗಿ ಕಾರ್ಯನಿರ್ವಹಿಸಿದ್ದರು.

ಶ್ರೀ ರಾಮ ಜನ್ಮಭೂಮಿ ಆಂದೋಲನ, ಗಂಗಾಜಲ ವಿತರಣಾ ಅಭಿಯಾನ, ಗೋಹತ್ಯಾ ನಿಷೇಧ ಚಳವಳಿಗಳಲ್ಲಿ ಮೂರ್ತಿ ಅವರು ಸಕ್ರಿಯರಾಗಿದ್ದರು. ಚಾಮರಾಜಪೇಟೆಯ ಚಿತಾಗಾರದಲ್ಲಿ ಬುಧವಾರ ಬೆಳಿಗ್ಗೆ 11 ಗಂಟೆಗೆ ಮೃತರ ಅಂತ್ಯಕ್ರಿಯೆ ನಡೆಯಲಿದೆ ಎಂದು ಅವರ ಕುಟುಂಬದ ಮೂಲಗಳು ತಿಳಿಸಿವೆ.

ನಗರದಲ್ಲಿ ಇಂದು

ದರ್ಶನ್ ಬಳ್ಳೇಶ್ವರ ಅವರ 'ದೆಹಲಿ ತಲ್ಲಣಗಳು', 'ಹೆಳವರ ಸಂವಹನ' ಪುಸ್ತಕಗಳ ಬಿಡುಗಡೆ: ಹಂ.ಪ. ನಾಗರಾಜಯ್ಯ, ಉದ್ಘಾಟನೆ: ಡಿ. ಸುಧಾಕರ್, ಅಧ್ಯಕ್ಷತೆ: ಡಿ.ಜಿ. ಶಾಂತನಗೌಡ, ಪುಸ್ತಕಗಳ ಕುರಿತು: ಜಿ.ಎನ್. ಧನಂಜಯ ಮೂರ್ತಿ, ಮುತ್ತಯ್ಯ, ಅತಿಥಿಗಳು: ಜಿ.ಎಸ್. ಮಂಜುನಾಥ್, ಕೀರ್ತಿ ಗಣೇಶ್, ಯೋಗೀಶ್ ಬಾಬು, ಆಯೋಜನೆ: ಅವಿರತ ಪುಸ್ತಕ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5



ಹಂಪನಾ

'ಪಂಚವರ್ಣೆ' ಏಕವ್ಯಕ್ತಿ ನಾಟಕ ಪ್ರದರ್ಶನ: ಪ್ರಸ್ತುತಿ: ಮೀರಾ ಎಚ್.ಎನ್., ನಿರ್ದೇಶನ: ಬೇಲೂರು ರಘುನಂದನ್, ಸಂಗೀತ: ಶ್ರೀನಿವಾಸ್ ಪಿ.ಎಚ್., ಬೆಳಕಿನ ನಿರ್ವಹಣೆ: ರವಿಶಂಕರ್, ಸಂಗೀತ ನಿರ್ವಹಣೆ: ಸಂಪತ್ ಲಕ್ಷ್ಮಿ, ಸ್ಥಳ: ಎಂ.ಎಲ್.ಎ. ಕಾಲೇಜಿನ ಸಭಾಂಗಣ, ಮಲ್ಲೇಶ್ವರ, ಸಂಜೆ 5.30

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ:ಬೆಂಅಪ್ರಾ/ನಯೋಸ/CLU-168/1814/2024-25 ದಿನಾಂಕ:28.10.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಕಾರ್ತೀಕೇಯ ಎಂ ಘೋರ್ಪಡೆ ನಂ.404, 4ನೇ ಮಹಡಿ ವಿ.ಕೆ. ಎನ್.ಎಸ್.ಗ್ರೀನ್ ಆರ್ಕೆಡ್, ಜ್ಞಾನಜ್ಯೋತಿನಗರ, ಶಿವ ಲೇಔಟ್, ಬೆಂಗಳೂರು-560 056	ಯಲಹಂಕ	ಹೆಸರಘಟ್ಟ	ಕೃಷ್ಣರಾಜ ಪುರ	6/7	4 ಎಕರೆ 36 ಗುಂಟೆ	ವ್ಯವಸಾಯ ವಲಯ	ವಸತಿ ಉಪಯೋಗ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನನ್ನು ವಾಸದ ಉಪಯೋಗಕ್ಕಾಗಿ ಅಭಿವೃದ್ಧಿಪಡಿಸಿದರೆ ಸದರಿ ಜಮೀನಿನಲ್ಲಿ ವಸತಿ ಕಟ್ಟಡ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ಮನೆಗಳು ಲಭ್ಯವಾಗುತ್ತದೆ. ವಸತಿ ಕಟ್ಟಡದ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಸದರಿ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ' ವಲಯದಿಂದ 'ವಸತಿ' ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ರಾಷ್ಟ್ರೀಯ ರೇಷ್ಮೆಹುಳು ಬೀಜ ಸಂಸ್ಥೆ

ಕೇಂದ್ರೀಯ ರೇಷ್ಮೆ ಮಂಡಳಿ, ಜವಳಿ ಸಚಿವಾಲಯ, ಭಾರತ ಸರ್ಕಾರ
ಕೇಂದ್ರೀಯ ರೇಷ್ಮೆ ಮಂಡಳಿ ಸಂಕೀರ್ಣ, 4ನೇ ಮಹಡಿ, ಬಿ.ಟಿ.ಎಂ. ಬಡಾವಣೆ, ಮಡಿವಾಳ, ಬೆಂಗಳೂರು-560068. ಫೋನ್ : 080-26683251 \ ಫ್ಯಾಕ್ಸ್ : 080-26680387

ಜಾಹೀರಾತು ಸಂ. ಸಿಎಸ್‌ಬಿ/ಎನ್‌ಎಸ್‌ಎಸ್‌ಒ/ಎಸ್ಟಾ./ಎಸ್‌ಎ/01/2024-25 ದಿನಾಂಕ: 30.10.2024

ಖಾಲಿಹುದ್ದೆಗಳ ಭರ್ತಿಗಾಗಿ ಅರ್ಜಿ ಆಹ್ವಾನ

ಕೇಂದ್ರೀಯ ರೇಷ್ಮೆ ಮಂಡಳಿಯ ರಾಷ್ಟ್ರೀಯ ರೇಷ್ಮೆಹುಳು ಬೀಜ ಸಂಸ್ಥೆ, ಬೆಂಗಳೂರು ಇವರಲ್ಲಿನ ರೇಷ್ಮೆ ಕೃಷಿ ಸಹಾಯಕರು ಎಂಬ ಎರಡು ಹುದ್ದೆಗಳನ್ನು (ರಾಷ್ಟ್ರೀಯ ರೇಷ್ಮೆಹುಳು ಬೀಜ ಸಂಸ್ಥೆಯ ಪ್ರಧಾನ ಕಚೇರಿಯಲ್ಲಿ 1 ಹುದ್ದೆ ಮತ್ತು ತಮಿಳುನಾಡಿನ ಯಲಗಿರಿ ಹಿಲ್ಸ್‌ನಲ್ಲಿರುವ ಬೇಸಿಕ್ ಸೀಡ್ ಫಾರಂನಲ್ಲಿ 1 ಹುದ್ದೆ) ಒಂದು ವರ್ಷ ಗುತ್ತಿಗೆ ಆಧಾರದಲ್ಲಿ (ಕಾರ್ಯ ಸಾಮರ್ಥ್ಯದ ನಿಬಂಧನೆಗೆ ಒಳಪಟ್ಟು ವಿಸ್ತರಣೆಯಾಗಬಹುದು) ಭರ್ತಿ ಮಾಡಿಕೊಳ್ಳಲು ನವಂಬರ್ 10, 2024 ರವರೆಗೆ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಿವರಗಳು ನಮ್ಮ http://csb.gov.in/job-opportunities ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತವೆ.

CBC 41109/12/0017/2425 ನಿರ್ದೇಶಕರು

ಭಾರತೀಯ ತಂತ್ರಜ್ಞಾನ ಸಂಸ್ಥೆ ಪಾಟ್ನಾ

(ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದ ಅಡಿಯಲ್ಲಿನ ಒಂದು ಸ್ವಾಯುತ್ತ ಸಂಸ್ಥೆ) ಬಿಹ್ತಾ, ಪಾಟ್ನಾ - 801103

ಜಾಹೀರಾತು ಸಂ.: ಐಐಟಿಪಿ/ಎಫ್‌ಎಸಿಆರ್‌ಇಸಿ/2024/ಆರ್0018 ದಿನಾಂಕ: 16.10.2024

ಜಾಹೀರಾತು

ಐಐಟಿ ಪಾಟ್ನಾ ಇವರು **ಅಸಿಸ್ಟೆಂಟ್ ಪ್ರೊಫೆಸರ್, ಅಸೋಸಿಯೇಟ್ ಪ್ರೊಫೆಸರ್** ಮತ್ತು **ಪ್ರೊಫೆಸರ್** ಹಂತಗಳಲ್ಲಿನ ಫಾಕಲ್ಟಿ ಹುದ್ದೆಗಳಿಗಾಗಿ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಜಾಹೀರಾತು, ಹುದ್ದೆಗಳು, ಅರ್ಹತಾ ಮಾನದಂಡ, ವೇತನ ಶ್ರೇಣಿ ಮತ್ತು ಸೂಚನೆಗಳು ಇತ್ಯಾದಿ ವಿವರಗಳಿಗಾಗಿ ದಯವಿಟ್ಟು ಐಐಟಿ ಪಾಟ್ನಾ ರವರ https://www.iitp.ac.in ವೆಬ್‌ಸೈಟ್‌ಗೆ ಭೇಟಿ ಕೊಡಿ. ಆನ್‌ಲೈನ್ ಅರ್ಜಿ ಸಲ್ಲಿಕೆಗಾಗಿ ಭೇಟಿ ಕೊಡಿ: https://facrecrt.iitp.ac.in

CBC 21366/12/0003/2425 ನಿರ್ದೇಶಕರು, ಐಐಟಿ ಪಾಟ್ನಾ

ಭಾರತ ಸರ್ಕಾರ

ಗ್ರಾಮೀಣ ಕೌಶಲ್ಯಗಳ ವಿಭಾಗ

ಕ್ಯಾಪ್ಟಿವ್ ಎಂಪ್ಲಾಯರ್ ಪ್ರಸ್ತಾವಣೆಗೆ ಆಸಕ್ತಿ ವ್ಯಕ್ತಪಡಿಸುವಿಕೆ

ಕ್ಯಾಪ್ಟೀವ್ ಎಂಪ್ಲಾಯರ್ಸ್ ಮಾದರಿಯಲ್ಲಿ **ದೀನ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯ** ಪಾಲುದಾರ ಉದ್ಯೋಗಿಗಳಿಂದ ಆಸಕ್ತಿ ವ್ಯಕ್ತಪಡಿಸುವಿಕೆಗೆ ಆಹ್ವಾನಿಸಲಾಗಿದೆ.

"ಆಸಕ್ತಿ ವ್ಯಕ್ತಪಡಿಸುವಿಕೆಗೆ" ಆಸಕ್ತಿಯುಳ್ಳ ಅರ್ಜಿದಾರರು, ಈ ಕುರಿತಾದ ಮಾಹಿತಿಯನ್ನು https://kaushalbharat.gov.in, https://kaushalbharat.gov.in/ img/pdf/Captive-EoI.pdf ವೆಬ್‌ಸೈಟ್‌ನಿಂದ ಹೆಚ್ಚಿನ ಮಾಹಿತಿ ಪಡೆದುಕೊಳ್ಳಬಹುದು.

'ಆಸಕ್ತಿ ವ್ಯಕ್ತಪಡಿಸುವಿಕೆ'ಗೆ ಕೊನೆಯ ದಿನಾಂಕ ಅಕ್ಟೋಬರ್ 30, 2024. ಇನ್ನಿತರ ವಿಚಾರಣೆಗಾಗಿ ದಯವಿಟ್ಟು dipalip.nird@gov.in ವಿಳಾಸವನ್ನು ಸಂಪರ್ಕಿಸಿರಿ.

ನಿರ್ದೇಶಕರು (ಕೌಶಲ್ಯ)
ಗ್ರಾಮೀಣ ಕೌಶಲ್ಯಗಳ ವಿಭಾಗ
ಗ್ರಾಮೀಣಾಭಿವೃದ್ಧಿ ಸಚಿವಾಲಯ

CBC 35101/11/0006/2425

ಬೆಂಗಳೂರು ಉಪನಗರ ರೈಲು ಯೋಜನೆ ಕಾಮಗಾರಿ ಪರಿಶೀಲಿಸಿದ ಶಾಲಿನಿ ರಜನೀಶ್

ಕಾಮಗಾರಿ ವಿಳಂಬಕ್ಕೆ ಅಸಮಾಧಾನ

ಪ್ರಜಾವಾಣಿ ವಾರ್ತೆ

ಬಿಎಸ್‌ಆರ್‌ಪಿ ಮಲ್ಲಿಗೆ ಮಾರ್ಗದ ಕನಕನಗರ ಲೆವೆಲ್ ಕ್ರಾಸಿಂಗ್‌ನ ಕಾಮಗಾರಿಯನ್ನು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮಂಗಳವಾರ ಪರಿಶೀಲಿಸಿದರು ಪ್ರಜಾವಾಣಿ ಚಿತ್ರ

ಬೆಂಗಳೂರು: ಬೆಂಗಳೂರು ಉಪನಗರ ರೈಲು ಯೋಜನೆಯ (ಬಿಎಸ್‌ಆರ್‌ಪಿ) ಮಲ್ಲಿಗೆ ಕಾರಿಡಾರ್ ಕಾಮಗಾರಿಯನ್ನು ಮಂಗಳವಾರ ಖುದ್ದಾಗಿ ಪರಿಶೀಲಿಸಿದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಕಾಮಗಾರಿ ವಿಳಂಬ ಆಗುತ್ತಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದರು.

ಬಿಎಸ್‌ಆರ್‌ಪಿ ಕಾಮಗಾರಿ ನಡೆಯು ತ್ತಿರುವ ಕನಕನಗರ ಲೆವೆಲ್ ಕ್ರಾಸಿಂಗ್‌ನ ಕಾಮಗಾರಿ ವೀಕ್ಷಿಸಿದ ಅವರು, 'ಕಾಮಗಾರಿ ವಿಳಂಬವಾಗಲು ಕಾರಣವೇನು? ಏನಾದರೂ ಸಮಸ್ಯೆ ಆಗುತ್ತಿದೆಯೇ' ಎಂದು ಗುತ್ತಿಗೆದಾರರಾಗಿರುವ ಎಲ್ ಆ್ಯಂಡ್ ಟಿ ಕಂಪನಿಯ ಎಂಜಿನಿಯರ್‌ಗಳು, ಕರ್ನಾಟಕ ರೈಲು ಮೂಲ ಸೌಲಭ್ಯ ಅಭಿವೃದ್ಧಿ ಕಂಪನಿ ನಿಯಮಿತದ (ಕೆ- ರೈಡ್) ಅಧಿಕಾರಿಗಳನ್ನು ಪ್ರಶ್ನಿಸಿದರು.

ಇದಕ್ಕೆ ಎಂಜಿನಿಯರ್‌ಗಳು ಹಾಗೂ ಅಧಿಕಾರಿಗಳಿಂದ ಸೂಕ್ತ ಉತ್ತರ ಸಿಗಲಿಲ್ಲ. 'ನಾವು ಇಲ್ಲಿಗೆ ಬಂದಿರುವುದು ನಿಮ್ಮ ಸಮಸ್ಯೆಗಳನ್ನು ಆಲಿಸಿ, ಅದಕ್ಕೆ ಪರಿಹಾರ ಕಂಡುಕೊಳ್ಳಲು. ಆದರೆ, ನೀವು ಸಮರ್ಪಕವಾಗಿ ಉತ್ತರಿಸದಿದ್ದರೆ ಹೇಗೆ? ಸಮಸ್ಯೆ ಬಗೆ ಹರಿಸುವುದಾದರೂ ಹೇಗೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಕೆ-ರೈಡ್ ವ್ಯವಸ್ಥಾಪಕ ನಿರ್ದೇಶಕಿ ಎನ್. ಮಂಜುಳಾ, 'ರೈಲ್ವೆ ಇಲಾಖೆಯ ಜಮೀನು ಒತ್ತುವರಿ ಆಗಿರುವುದರಿಂದ ಮಲ್ಲಿಗೆ ಮಾರ್ಗದ ಕಾಮಗಾರಿ ವಿಳಂಬವಾಗಿದೆ. ಒತ್ತುವರಿಗೆ ತೆರವಿಗೆ ಕ್ರಮ ಕೈಗೊಳ್ಳುವಂತೆ ನೈಋತ್ಯ ರೈಲ್ವೆಗೆ ತಿಳಿಸಲಾಗಿದೆ' ಎಂದು ವಿವರಿಸಿದರು.

'ರೈಲ್ವೆ ಇಲಾಖೆಯಿಂದ ಕೆ-ರೈಡ್‌ಗೆ ಜಮೀನು ಹಸ್ತಾಂತರಿಸುವ ಸಂದರ್ಭದಲ್ಲಿ ಅತಿಕ್ರಮಣ ತೆರವುಗೊಳಿಸಿರಲಿಲ್ಲ. ಈಗ 'ಮಲ್ಲಿಗೆ ಮಾರ್ಗ'ದ ಬೆನ್ನಿಗಾನಹಳ್ಳಿಯಿಂದ ಚಿಕ್ಕಬಾಣಾವರದ ವರೆಗೆ 25 ಕಿ.ಮೀ., ವ್ಯಾಪ್ತಿಯಲ್ಲಿ 62 ಸ್ಥಳಗಳಲ್ಲಿ ಅತಿಕ್ರಮಣ ಆಗಿರುವುದು ಸಮೀಕ್ಷೆಯಿಂದ ಗೊತ್ತಾಗಿದೆ. ಒತ್ತುವರಿ ತೆರವುಗೊಳಿಸಿ ಜಮೀನು ಹಸ್ತಾಂತರಿಸುವಂತೆ ರೈಲ್ವೆ ಇಲಾಖೆ ಅಧಿಕಾರಿಗಳನ್ನು ಕೋರಲಾಗಿದೆ' ಎಂದರು.

ಜಲಮಂಡಳಿಯಿಂದ 32 ಕಡೆ ಪೈಪ್‌ಲೈನ್, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಿಂದ (ಕೆಪಿಟಿಸಿಎಲ್) ಆರು ಸ್ಥಳಗಳಲ್ಲಿ ವಿದ್ಯುತ್ ಕಂಬ, ವಿದ್ಯುತ್ ಪರಿವರ್ತಕಗಳನ್ನು ಸ್ಥಳಾಂತರ ಮಾಡಬೇಕಾಗಿದೆ. ಬಿಎಸ್‌ಆರ್‌ಪಿ ಕಾಮಗಾರಿಗಾಗಿ ಭೂಸ್ವಾದೀನ ಪ್ರಕ್ರಿಯೆ ನಡೆಸುತ್ತಿರುವ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಚುರುಕಾಗಿ ಕೆಲಸ ಮಾಡುತ್ತಿದೆ. ದೇವಸ್ಥಾನ, ಮನೆ, ಖಾಸಗಿ ಕಟ್ಟಡ, ನಿವೇಶನಗಳಿಗೆ ಸೂಕ್ತ ಪರಿಹಾರ ನೀಡಲಾಗುತ್ತದೆ. ಮಲ್ಲಿಗೆ ಮಾರ್ಗದ ಕಾಮಗಾರಿಗೆ ಅಗತ್ಯವಿರುವ ಜಮೀನುಗಳ ಸ್ವಾಧೀನ ಪ್ರಕ್ರಿಯೆಯನ್ನು 2025ರ ಮಾರ್ಚ್ ಒಳಗಾಗಿ ಪೂರ್ಣಗೊಳಿಸಲಾಗುವುದು' ಎಂದು ಹೇಳಿದರು.

'2026ರ ಸೆಪ್ಟೆಂಬರ್ ವೇಳೆಗೆ ಮಲ್ಲಿಗೆ ಮಾರ್ಗದ ಕಾಮಗಾರಿ ಪೂರ್ಣಗೊಳಿಸಲು ಎಲ್ಲ ಕ್ರಮ ಕೈಗೊಳ್ಳಲಾ ಗುತ್ತಿದೆ' ಎಂದರು.

ಮಹಿಳಾ ಇಲಾಖೆಗೆ ಅನುದಾನ: ಕೇಂದ್ರಕ್ಕೆ ಹೆಬ್ಬಾಳಕರ ಒತ್ತಾಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರು ಕೇಂದ್ರ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಅನಿಲ್ ಮಲಿಕ್ ಅವರನ್ನು ಇಲ್ಲಿ ಭೇಟಿಯಾಗಿ ಇಲಾಖೆಗೆ ಸಂಬಂಧಿಸಿದಂತೆ ವಿವಿಧ ವಿಷಯಗಳ ಬಗ್ಗೆ ಚರ್ಚೆ ನಡೆಸಿದರು.

ಅನುದಾನ, ಅಕ್ಕಿ, ಗೋಧಿ ಪೂರೈಕೆ, ಹೊಸ ತಾಲ್ಲೂಕುಗಳ ಸಿಡಿಪಿಓ ಕಚೇರಿ, ಕಾರ್ಯನಿರತ ಮಹಿಳಾ ವಸತಿ ನಿಲಯ ಸೇರಿದಂತೆ ಹಲವು ವಿಷಯಗಳ ಬಗ್ಗೆ ಚರ್ಚಿಸಿದರು.

ನಂತರ, ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯ ಕಾರ್ಯದರ್ಶಿ ಅಮಿತ್ ಯಾದವ್ ಅವರನ್ನು ಭೇಟಿ ಮಾಡಿದ ಸಚಿವರು, ನಶಾ ಮುಕ್ತ ಭಾರತ ಯೋಜನೆಯ ಕುರಿತು ಸಮಾಲೋಚಿಸಿದರು.

ಪ್ರವಾಸೋದ್ಯಮ: 680 ಎಕರೆ ಭೂಮಿ ಮಾರಲು ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಪ್ರವಾಸೋದ್ಯಮ ಇಲಾಖೆಯ ಒಡೆತನದಲ್ಲಿರುವ 680 ಎಕರೆ ಭೂಮಿಯನ್ನು ಮಾರಾಟ ಮಾಡಿ ಅದರಿಂದ ಸಿಗುವ ಹಣವನ್ನು ಪ್ರವಾಸೋದ್ಯಮ ಯೋಜನೆಗಳಿಗೆ ಬಳಸಿಕೊಳ್ಳಲು ಸರ್ಕಾರ ತೀರ್ಮಾನಿಸಿದೆ.

ರಾಜ್ಯ ಸರ್ಕಾರ ಪ್ರಕಟಿಸಿರುವ ಹೊಸ ಪ್ರವಾಸೋದ್ಯಮ ನೀತಿಯಲ್ಲಿ ಈ ಅಂಶವು ಒಳಗೊಂಡಿದ್ದು, ಸೋಮವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ನೀತಿಗೆ ಒಪ್ಪಿಗೆ ನೀಡಲಾಗಿದೆ.

ಅಲ್ಲದೇ, ಪ್ರವಾಸೋದ್ಯಮ ಸ್ವತ್ತುಗಳ ಬ್ಯಾಂಕ್ (ಟೂರಿಸಂ ಅಸೆಟ್ ಬ್ಯಾಂಕ್) ಸೃಷ್ಟಿಸಲು ಉದ್ದೇಶಿಸಲಾಗಿದೆ. ಪ್ರವಾಸೋದ್ಯಮ ಮೌಲ್ಯವುಳ್ಳ ಮತ್ತು ಪ್ರವಾಸೋದ್ಯಮ ಆಸಕ್ತ ಸ್ವತ್ತುಗಳ ಬ್ಯಾಂಕ್ ಅಗತ್ಯವಿದೆ. ಇವುಗಳನ್ನು ಆಧರಿಸಿ ಪ್ಯಾಕೇಜ್ ಪ್ರವಾಸವನ್ನು ರೂಪಿಸಲು ಉದ್ದೇಶಿಸಲಾಗಿದೆ.

ದೇಶಿ ಪ್ರವಾಸಿಗರ ಭೇಟಿಯಲ್ಲಿ ದೇಶದಲ್ಲೇ ಮೊದಲ ಮೂರು ರಾಜ್ಯಗಳ ಪೈಕಿ ಒಂದಾಗುವುದು (48 ಕೋಟಿ ಪ್ರವಾಸಿಗರು), ವಿದೇಶಿ ಪ್ರವಾಸಿಗರ ಭೇಟಿಯಲ್ಲಿ ದೇಶದಲ್ಲಿ ಐದು ರಾಜ್ಯಗಳ ಪೈಕಿ ಒಂದಾಗುವ (20 ಲಕ್ಷ ಪ್ರವಾಸಿಗರು) ಗುರಿ ಹೊಂದಲಾಗಿದೆ. 47 ಸಾವಿರ ಜನರಿಗೆ ನೇರ ಉದ್ಯೋಗ, 1 ಲಕ್ಷ ಜನರಿಗೆ ಪರೋಕ್ಷ ಮತ್ತು ಪ್ರೇರಿತ ಉದ್ಯೋಗ ಸೃಷ್ಟಿಸಲು ಉದ್ದೇಶಿಸಲಾಗಿದೆ. ಪ್ರವಾಸೋದ್ಯಮ ಕ್ಷೇತ್ರಕ್ಕೆ ₹7,800 ಕೋಟಿ ಹೂಡಿಕೆ ಆಕರ್ಷಿಸಲಾಗುವುದು.

'ಒಂದು ಜಿಲ್ಲೆ ಒಂದು ತಾಣ' ಯೋಜನೆಯಡಿ ಪ್ರತಿ ಜಿಲ್ಲೆಗೆ ಒಂದರಂತೆ ಕನಿಷ್ಠ 30 ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಲಾಗುವುದು. ಅಲ್ಲದೇ, ಕನಿಷ್ಠ 50 ಅಂತರರಾಷ್ಟ್ರೀಯ ಪ್ರವಾಸಿ ಮೇಳಗಳಲ್ಲಿ ಕರ್ನಾಟಕದ ಪ್ರವಾಸೋದ್ಯಮದ ವಿಚಾರ ಪ್ರಚಾರ ಮಾಡಲು ಉದ್ದೇಶಿಸಲಾಗಿದೆ.

ಕೋಮು ಸೌಹಾರ್ದ: ಜವಾಬ್ದಾರಿಯುತ ಪ್ರವಾಸೋದ್ಯಮದ ಮೂಲಕ ಆಧ್ಯಾತ್ಮಿಕ ಯಾತ್ರಾ ತಾಣಗಳ ಪ್ರವಾಸೋದ್ಯಮ ಉತ್ತೇಜಿಸಿ ಧಾರ್ಮಿಕ ವೈವಿಧ್ಯ ಮತ್ತು ಶ್ರದ್ಧಾ ಕೇಂದ್ರಗಳ ಬಗ್ಗೆ ಅರಿವು ಮೂಡಿಸಲಾಗುವುದು. ಕೋಮು ಸೌಹಾರ್ದವನ್ನು ಪರಿಗಣಿಸಿ ರಾಜ್ಯದ ಸಿರಿವಂತ ಆಧ್ಯಾತ್ಮಿಕ ಪರಂಪರೆ ಮುನ್ನೆಲೆಗೆ ತರಲಾಗುವುದು ಎಂಬ ಅಂಶವನ್ನೂ ಉಲ್ಲೇಖಿಸಲಾಗಿದೆ.

ಕೃಷಿ, ಪಾಕ ಪದ್ಧತಿ, ಸಿನಿಮಾ

ಕೆಲವು ಅಸಾಂಪ್ರದಾಯಿಕ ಮತ್ತು ವಿನೂತನ ಕ್ಷೇತ್ರಗಳನ್ನು ಪ್ರವಾಸೋದ್ಯಮ ವ್ಯಾಪ್ತಿಗೆ ತರಲಾಗಿದೆ.

ಅವುಗಳು ಹೀಗಿವೆ: ಸಾಹಸ, ಕೃಷಿ, ಕಾರವಾನ್, ಕರಾವಳಿ ಮತ್ತು ಬೀಚ್, ಪಾಕಪದ್ಧತಿ, ಸಾಂಸ್ಕೃತಿಕ, ಪಾರಂಪರಿಕ, ಪ್ರಕೃತಿ ಮತ್ತು ವನ್ಯಜೀವಿ, ಶೈಕ್ಷಣಿಕ, ಚಲನಚಿತ್ರ, ಗಾಲ್ಫ್, ಒಳನಾಡು ಜಲ ಪ್ರವಾಸ, ಸಾಹಿತ್ಯ, ಕಡಲು, ವೈದ್ಯಕೀಯ, ಗಣಿಗಾರಿಕೆ, ಗ್ರಾಮೀಣ, ಆಧ್ಯಾತ್ಮಿಕ, ಕ್ರೀಡೆ, ಬುಡಕಟ್ಟು, ವಿವಾಹ, ವಾರಾಂತ್ಯ, ಆರೋಗ್ಯ.

'ಕ್ಯಾನ್ಸರ್ ಔಷಧಗಳ ದರ ಇಳಿಸಿ'

ನವದೆಹಲಿ (ಪಿಟಿಐ): ಕ್ಯಾನ್ಸರ್ ಗುಣಪಡಿಸಲು ನೀಡಲಾಗುತ್ತಿರುವ ಮೂರು ಜೀವ ರಕ್ಷಕ ಔಷಧಗಳ ಬೆಲೆ ಇಳಿಸುವಂತೆ ಔಷಧ ತಯಾರಿಕಾ ಕಂಪನಿಗಳಿಗೆ ಕೇಂದ್ರ ಸರ್ಕಾರ ಮಂಗಳವಾರ ಸೂಚಿಸಿದೆ.

2024-25ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಟ್ರಾಸ್ಟುಜುಮಾಬ್, ಒಸಿಮೆರ್ಟಿನಿಬ್ ಮತ್ತು ದುರ್ವಾಲುಮಾಬ್ ಔಷಧಗಳ ಮೇಲಿನ ಕಸ್ಟಮ್ಸ್ ಸುಂಕವನ್ನು ಶೇ 10ರಿಂದ ಶೂನ್ಯಕ್ಕೆ ಕಡಿತಗೊಳಿಸಲಾಗಿದೆ.

ರೋಗಿಗಳಿಗೆ ಕೈಗೆಟುಕುವ ಬೆಲೆಗೆ ಈ ಔಷಧಗಳು ದೊರೆಯುವಂತೆ ಮಾಡಲು ಸರ್ಕಾರ ನಿರ್ಧರಿಸಿದೆ. ಗರಿಷ್ಠ ಮಾರಾಟ ದರವನ್ನು (ಎಂಆರ್‌ಪಿ) ಕಡಿತಗೊಳಿಸಿ ಪರಿಷ್ಕರಣೆ ಮಾಡಿರುವ ದರವನ್ನು ಔಷಧಗಳ ಮೇಲೆ ನಮೂದಿಸಬೇಕು ಎಂದು ರಾಷ್ಟ್ರೀಯ ಔಷಧ ಬೆಲೆ ನಿಯಂತ್ರಣ ಪ್ರಾಧಿಕಾರವು ಸೂಚಿಸಿದೆ.

ಈಗಾಗಲೇ, ಈ ಔಷಧಗಳಿಗೆ ಕಸ್ಟಮ್ಸ್ ಸುಂಕದಿಂದ ಸಂಪೂರ್ಣ ವಿನಾಯಿತಿ ನೀಡಲಾಗಿದೆ. ಸುಂಕ ಹಾಗೂ ಜಿಎಸ್‌ಟಿ ಕಡಿತ ಲಾಭವನ್ನು ಗ್ರಾಹಕರಿಗೆ ವರ್ಗಾಯಿಸಬೇಕು ಎಂದು ನಿರ್ದೇಶನ ನೀಡಿದೆ.

ಔಷಧಗಳ ದರದ ಪಟ್ಟಿಯನ್ನು ಡೀಲರ್‌ಗಳು ಮತ್ತು ರಾಜ್ಯ ಔಷಧ ನಿಯಂತ್ರಕರಿಗೆ ನೀಡಬೇಕು. ಎನ್‌ಪಿಪಿಎಗೆ ಈ ಕುರಿತು ಮಾಹಿತಿ ಸಲ್ಲಿಸಬೇಕು ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವಾಲಯ ಹೇಳಿದೆ.

ಐಎಂಎಗೆ ನೂತನ ಕಾರ್ಯಕಾರಿ ಸಮಿತಿ

ಬೆಂಗಳೂರು: ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಕರ್ನಾಟಕ ಶಾಖೆಗೆ 2024-25ನೇ ಸಾಲಿಗೆ ನೂತನ ಕಾರ್ಯಕಾರಿ ಸಮಿತಿ ರಚನೆಯಾಗಿದ್ದು, ಅಧ್ಯಕ್ಷರಾಗಿ ಡಾ.ವಿ.ವಿ. ಚಿನಿವಾಲರ್ ನಿಯೋಜನೆಗೊಂಡಿದ್ದಾರೆ.

ಇತ್ತೀಚೆಗೆ ನಗರದಲ್ಲಿ ನಡೆದ ಸಂಘದ ಸಭೆಯಲ್ಲಿ ಅಧಿಕಾರ ಹಸ್ತಾಂತರ ಪ್ರಕ್ರಿಯೆ ನಡೆದಿದೆ. ನಿಯೋಜಿತ ಅಧ್ಯಕ್ಷರಾಗಿ ಡಾ.ಟಿ.ಎ. ವೀರಭದ್ರಯ್ಯ (ಮುಂದಿನ ಅವಧಿಗೆ), ಉಪಾಧ್ಯಕ್ಷರಾಗಿ ಡಾ.ಟಿ.ಎನ್. ಮರೀಗೌಡ, ಡಾ.ಆರ್.ಎನ್.ಮಲವೇಗೌಡ, ಡಾ.ಸುರೇಶ್ ವಿ. ಸಾಗರದ್, ಡಾ.ಸುಜಾತಾ ಎಸ್. ರಾವ್, 2024-26ರ ಅವಧಿಗೆ ಗೌರವ ಕಾರ್ಯದರ್ಶಿ ಆಗಿ ಡಾ. ಸೂರಿರಾಜು ವಿ., ಗೌರವ ಜಂಟಿ ಕಾರ್ಯದರ್ಶಿಯಾಗಿ ಡಾ. ಮಧುಶಂಕರ್ ಎಲ್., ಗೌರವ ಖಜಾಂಚಿಯಾಗಿ ಡಾ.ಕೆ.ಜಿ. ಶಂಕರನಾರಾಯಣ ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿ ಡಾ.ವಾಣಿ ಕೋರಿ ಅಧಿಕಾರ ಸ್ವೀಕರಿಸಿದ್ದಾರೆ ಎಂದು ಐಎಂಎ ಕರ್ನಾಟಕ ಶಾಖೆ ಪ್ರಕಟಣೆ ತಿಳಿಸಿದೆ.

ಹುಟ್ಟುಹಬ್ಬದ ಶುಭಾಶಯಗಳು

ಡಾ. ಎಂ. ಶ್ರೀನಿವಾಸ್‌ರವರು
ಮಾಜಿ ಸಂಸದರು ಹಾಗೂ ಮಾಜಿ ಶಾಸಕರು
ಛೇರ್ಮನ್ – ಆರ್.ಎಂ.ಎಸ್. ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್

ಶುಭ ಕೋರುವವರು :
ಆರ್.ಎಂ.ಎಸ್. ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್
ಕನಕಪುರ ರಸ್ತೆ, ಬೆಂಗಳೂರು
RMS GROUP OF INSTITUTIONS
Where Tomorrow begins......

HONDA

Scan for Instant Booking**

₹66600
ಎಕ್ಸ್-ಶೋರೂಂ ಬೆಲೆ
(ಕರ್ನಾಟಕ)

ಹೆಚ್ಚಿನ ಮಾಹಿತಿಗಾಗಿ 7230032200 ಮಿಸ್ ಕಾಲ್ ನೀಡಿ

IDFC FIRST Bank Bank*/Credit Card#
HDFC BANK Credit Card#
TATA CAPITAL Two Wheeler Loans*
Chola Enter a better life*

#Cashback Offer available on all Honda two-wheeler models for EMI transactions made using HDFC Bank credit cards & IDFC First Bank credit cards through Pine Labs machines only. #Customers can avail 5% Instant cashback, up to a maximum of Rs. 5000. #Valid on one transaction per card/order during the offer period. #Cashback offer valid until 30th November 2024. #The scheme is available in select outlets only. *Approval of the loan is at the sole discretion of the financiers, and additional documentation may be required. *The interest rates, down payment, and tenure options are based on the financier's assessment of the applicant's credit profile. *The offers/features may be modified or withdrawn at any time without prior intimation. *Offer valid until 30th November 2024. ^3 years of standard and 7 years of free extended warranty only on Shine 100. ^This scheme is offered by Authorised Main Dealers and Associate Dealers. ^Offer valid until 31st October 2024. Product shown in the picture may vary from actual product available in the market. Accessories shown in the picture are not part of standard equipment. **Instant online booking facility available at selected Dealership only.

ಡೀಲರ್ ವಿವರಗಳಿಗಾಗಿ QR ಕೋಡ್ ಸ್ಕ್ಯಾನ್ ಮಾಡಿ

ವೀಡಿಯೋ ಆನಂದಿಸಲು, QR ಕೋಡ್ ಸ್ಕ್ಯಾನ್ ಮಾಡಿ.

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) - 122050, India; **Website:** www.honda2wheelersindia.com; **Customer Care:** customercare@honda.hmsi.in

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; Haiku Honda - **DOMLUR:** 49656565, 9342432156; **INDIRANAGAR:** 9342432157; Dhruvdesh Honda - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; **MALLESHWARAM:** 8971887792; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; VFM Honda - **KR PURAM:** 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9606567111; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; Namma Honda - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; **SIDLAGHATTA:** 9611596113; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com

ಪಟಾಕಿ: ಮಿಂಟೊ ಕಣ್ಣಿನ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಪ್ರತ್ಯೇಕ ವಾರ್ಡ್ • ಗಾಯಗೊಂಡವರ ಚಿಕಿತ್ಸೆಗೆ ಬೆಡ್ ಮೀಸಲು

24 ಗಂಟೆಯೂ ವೈದ್ಯಕೀಯ ಸೇವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀಪಾವಳಿ ಹಬ್ಬದ ಸಂದರ್ಭದಲ್ಲಿ ಪಟಾಕಿ ಅವಘಡಗಳು ಸಂಭವಿಸಿದಲ್ಲಿ ಕಣ್ಣಿಗೆ ಹಾನಿಯಾಗುವುದನ್ನು ತಪ್ಪಿಸಲು ನಗರದ ಕಣ್ಣಿನ ಆಸ್ಪತ್ರೆಗಳು ಅಗತ್ಯ ಸಿದ್ಧತೆ ಮಾಡಿಕೊಂಡಿದ್ದು, ಹಬ್ಬದ ಸಂದರ್ಭದಲ್ಲಿ ದಿನದ 24 ಗಂಟೆಯೂ ಸೇವೆ ನೀಡಲು ಸಜ್ಜಾಗಿವೆ.

ಮಿಂಟೊ, ನಾರಾಯಣ ನೇತ್ರಾಲಯ, ನೇತ್ರಧಾಮ, ಶಂಕರ, ಡಾ. ಅಗರವಾಲ್ ಸೇರಿ ವಿವಿಧ ಕಣ್ಣಿನ ಆಸ್ಪತ್ರೆಗಳು ಚಿಕಿತ್ಸೆಗೆ ಬೇಕಾದ ಔಷಧಗಳನ್ನು ದಾಸ್ತಾನು ಮಾಡಿಕೊಂಡಿವೆ. ಅದೇ ರೀತಿ, ಪ್ರತ್ಯೇಕ ಹಾಸಿಗೆ ವ್ಯವಸ್ಥೆಯನ್ನು ಮಿಂಟೊ, ನಾರಾಯಣ ನೇತ್ರಾಲಯ ಸೇರಿ ಕೆಲ ಆಸ್ಪತ್ರೆಗಳಲ್ಲಿ ಮಾಡಲಾಗಿದೆ.

'ಪಟಾಕಿ ಸಿಡಿತದಿಂದ ಕಣ್ಣಿಗೆ ಹಾನಿಯಾಗುವ ಜತೆಗೆ ಸುಟ್ಟ ಗಾಯಗಳಾಗುವ ಸಾಧ್ಯತೆಗಳಿರುತ್ತವೆ. ಪಟಾಕಿಯ ಜೋರಾದ ಶಬ್ದದಿಂದ ಶ್ರವಣ ಸಮಸ್ಯೆ ಕೂಡ ಉಂಟಾಗುತ್ತದೆ. ಪಟಾಕಿಯಿಂದ ಹೊರಹೊಮ್ಮುವ ರಾಸಾಯನಿಕ ಹೊಗೆಯಿಂದ ಉಸಿರಾಟದ (ಅಸ್ತಮಾ) ಹಾಗೂ ಚರ್ಮದ ತೊಂದರೆಗಳು ಕಾಣಿಸಿಕೊಳ್ಳಲಿವೆ. ಪಟಾಕಿಗಳನ್ನು ಹಚ್ಚಲೇಬೇಕು ಎಂದಾದಲ್ಲಿ ಹೆಚ್ಚಿನ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಿ' ಎಂದು ನಗರದ ನೇತ್ರ ವೈದ್ಯರು ಮನವಿ ಮಾಡಿದ್ದಾರೆ.

'ಹಸಿರು ಪಟಾಕಿಗಳಲ್ಲಿ ರಾಸಾಯನಿಕಗಳ ಬಳಕೆ ಪ್ರಮಾಣ ಶೇ 50ರಷ್ಟು ಕಡಿಮೆ ಇರುತ್ತದೆ. ಹೆಚ್ಚು ಹಾನಿ ಮಾಡುವ ಬೇರಿಯಂ ಮತ್ತು ಲಿಥಿಯಂ ಹೊರತುಪಡಿಸಿ ಇತರೆ ರಾಸಾಯನಿಕಗಳನ್ನು ಬಳಸಲಾಗುತ್ತದೆ. ಇದರಿಂದ ಮಾಲಿನ್ಯ ಪ್ರಮಾಣ ಕಡಿಮೆಯಾದರೂ, ಸ್ಫೋಟ ಮತ್ತು ಶಬ್ದದ ತೀವ್ರತೆ ಸಾಮಾನ್ಯ ಪಟಾಕಿಗಳಂತೆ ಇರುತ್ತದೆ' ಎಂದು ಹೇಳಿದ್ದಾರೆ.

35 ಹಾಸಿಗೆ ವ್ಯವಸ್ಥೆ: 'ಹಬ್ಬದ ಸಮಯದಲ್ಲಿ ಚಿಕಿತ್ಸೆಗೆ ಬೇಕಾದ ಔಷಧವನ್ನು ದಾಸ್ತಾನು ಮಾಡಿಕೊಂಡು, ಶಸ್ತ್ರಚಿಕಿತ್ಸೆಗೆ ಅಗತ್ಯ ಸಿದ್ಧತೆ ಮಾಡಿಕೊಂಡಿದ್ದೇವೆ. ವಿಶೇಷ ತಜ್ಞರನ್ನು ಒಳಗೊಂಡ ವೈದ್ಯರ ತಂಡವು ಸಮಯಾನುಸಾರ ಸೇವೆ ನೀಡಲು ಸಿದ್ಧವಾಗಿದೆ. ಒಟ್ಟು 35 ಹಾಸಿಗೆಗಳನ್ನು ಪಟಾಕಿ ಗಾಯಾಳುಗಳ ಚಿಕಿತ್ಸೆಗಾಗಿ ಮೀಸಲಿಡಲಾಗಿದೆ. ಇವುಗಳಲ್ಲಿ ತಲಾ 10 ಪುರುಷರು ಹಾಗೂ ಮಹಿಳೆಯರಿಗೆ, 15 ಹಾಸಿಗೆಗಳನ್ನು ಮಕ್ಕಳ ಚಿಕಿತ್ಸೆಗೆ ಬಳಸಿಕೊಳ್ಳಲಾಗುತ್ತದೆ. ಕಳೆದ ವರ್ಷ ಪಟಾಕಿ ಗಾಯಕ್ಕೆ 40 ಮಂದಿ ಚಿಕಿತ್ಸೆ ಪಡೆದಿದ್ದಾರೆ' ಎಂದು ಮಿಂಟೊ ಕಣ್ಣಿನ ಆಸ್ಪತ್ರೆ ನಿರ್ದೇಶಕ ಡಾ. ನಾಗರಾಜು ಜಿ. ತಿಳಿಸಿದರು.

'ಪಟಾಕಿಗಳಿಂದ ಉಂಟಾದ ಗಾಯಗಳು ಕಣ್ಣುಗಳ ಮೇಲೆ ಪರಿಣಾಮ ಬೀರುತ್ತವೆ. ಈ ಗಾಯಗಳು ಗಂಭೀರ ಹಾನಿ ಅಥವಾ ಶಾಶ್ವತ ದೃಷ್ಟಿ ನಾಶಕ್ಕೆ ಕಾರಣವಾಗುತ್ತವೆ. ಹಬ್ಬದ ಸಂದರ್ಭದಲ್ಲಿ ಸಂಭವಿಸುವ ಪಟಾಕಿ ಗಾಯಗಳಿಗೆ ಇದೇ 31ರಿಂದ ನ.2ರವರೆಗೆ ದಿನದ 24 ಗಂಟೆಗಳೂ ಚಿಕಿತ್ಸೆ ದೊರೆಯಲಿದೆ' ಎಂದು ರಾಜಾಜಿನಗರದ ನಾರಾಯಣ ನೇತ್ರಾಲಯದ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಎಸ್.ಕೆ. ಮಿತ್ತಲ್ ಹೇಳಿದರು.

ವಿಕ್ಟೋರಿಯಾದಲ್ಲಿ ವ್ಯವಸ್ಥೆ

ಪಟಾಕಿ ಅವಘಡದಿಂದ ಸಂಭವಿಸುವ ಸುಟ್ಟ ಗಾಯಗಳಿಗೆ ತುರ್ತು ಚಿಕಿತ್ಸೆ ನೀಡಲು ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿರುವ ಮಹಾಬೋಧಿ ಸುಟ್ಟ ಗಾಯಗಳ ಚಿಕಿತ್ಸಾ ಕೇಂದ್ರ ಅಗತ್ಯ ಸಿದ್ಧತೆ ಮಾಡಿಕೊಂಡಿದೆ. ಈ ಕೇಂದ್ರಕ್ಕೆ ಅಗತ್ಯ ವೈದ್ಯರು, ಶುಶ್ರೂಷಕರು ಹಾಗೂ ಸಹಾಯಕ ಸಿಬ್ಬಂದಿಯನ್ನು ನಿಯೋಜಿಸಲಾಗಿದ್ದು, ದಿನದ 24 ಗಂಟೆಯೂ ಇಲ್ಲಿ ತುರ್ತು ವೈದ್ಯಕೀಯ ಸೇವೆ ಲಭ್ಯವಿರಲಿದೆ. ತೀವ್ರ ನಿಗಾ ಘಟಕ (ಐಸಿಯು) ಸೌಲಭ್ಯವೂ ಇರಲಿದೆ ಎಂದು ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಡಾ. ರಮೇಶ್ ಕೃಷ್ಣ ಕೆ. ತಿಳಿಸಿದ್ದಾರೆ.

ತುರ್ತು ಸಂಪರ್ಕ ಸಂಖ್ಯೆ: 749880910

ದೀಪಾವಳಿ ಹಬ್ಬದ ಅಂಗವಾಗಿ ಬಸವನಗುಡಿಯ ಉದಯಭಾನು ಕಲಾಸಂಘದ ಆಟದ ಮೈದಾನದಲ್ಲಿ ಇರುವ ಪಟಾಕಿ ಮಳಿಗೆಯಲ್ಲಿ ಮಂಗಳವಾರ ಸಾರ್ವಜನಿಕರು ಪಟಾಕಿ ಖರೀದಿಸಿದರು – ಪ್ರಜಾವಾಣಿ ಚಿತ್ರ: ರಂಜು ಪಿ.

ವೈದ್ಯರು ನೀಡಿದ ಸಲಹೆಗಳು

- ಪಟಾಕಿ ಖರೀದಿಸಲೇಬೇಕಾದಲ್ಲಿ ಐಎಸ್ಐ ಪ್ರಮಾಣೀಕರಣದ ಗುರುತಿನ ಹಸಿರು ಪಟಾಕಿಗಳನ್ನು ಖರೀದಿಸಿ
- ಪಟಾಕಿಗಳ ಮೇಲಿರುವ ಎಚ್ಚರಿಕೆ, ಸೂಚನೆ ಅನುಸರಿಸಿ
- ಕನಿಷ್ಠ 2-3 ಅಡಿ ದೂರದಿಂದ ಪಟಾಕಿ ಹಚ್ಚಿ
- ಪಟಾಕಿ ಹಚ್ಚಲು ಉದ್ದನೆಯ ಕೋಲು ಬಳಸಿ
- ಮೈದಾನ, ಖಾಲಿ ಜಾಗಗಳಲ್ಲಷ್ಟೇ ಪಟಾಕಿ ಹಚ್ಚಿ

- ಬೆಂಕಿ ಹಾಗೂ ಥಟ್ಟನೆ ಹೊತ್ತಿಕೊಳ್ಳುವ ವಸ್ತುಗಳ ಬಳಿ ಪಟಾಕಿ ಸಂಗ್ರಹಿಸಿಡಬೇಡಿ
- ಪಟಾಕಿ ಸುಡುವುದಕ್ಕೆ ಗಾಜಿನ ಬಾಟಲಿಗಳನ್ನು ಬಳಸಬೇಡಿ. ಇದರಿಂದ ಸಿಡಿಯುವ ಚೂರುಗಳು ಕಣ್ಣಿಗೆ ಹಾನಿ ಮಾಡಬಹುದು
- ಮಕ್ಕಳು ಒಂಟಿಯಾಗಿ ಪಟಾಕಿ ಸಿಡಿಸುವುದಕ್ಕೆ ಅವಕಾಶ ನೀಡಬೇಡಿ. ಜತೆಯಲ್ಲಿ ಪಾಲಕರು ಇರಲಿ
- ಪಟಾಕಿ ಸಿಡಿದಾಗ ಕಿಡಿ ಬಿದ್ದರೆ ಕಣ್ಣನ್ನು ಉಜ್ಜಿಕೊಳ್ಳಬೇಡಿ
- ಅರೆಬರೆ ಸುಟ್ಟ ಪಟಾಕಿ ತುಣುಕನ್ನು ಗಾಳಿಯಲ್ಲಿ ಎಸೆಯಬೇಡಿ
- ಕೈಯಲ್ಲೇ ಪಟಾಕಿ ಸಿಡಿಸುವ ಸಾಹಸ ಬೇಡ
- ಅರೆಬರೆ ಸುಟ್ಟ ಪಟಾಕಿಯನ್ನು ಕೈಯಿಂದ ಹೊಸಕಿ ನಂದಿಸಲು ಯತ್ನಿಸಬೇಡಿ

ಸಹಾಯವಾಣಿಗಳು

- **ಮಿಂಟೊ ಕಣ್ಣಿನ ಆಸ್ಪತ್ರೆ:** 9481740137 ಅಥವಾ 08026707176
- **ನಾರಾಯಣ ನೇತ್ರಾಲಯ:** ರಾಜಾಜಿನಗರ ಶಾಖೆ- 080 66121641/1643 ಅಥವಾ 9902546046
- **ನಾರಾಯಣ ನೇತ್ರಾಲಯ, ಎನ್‌ಎಚ್ ಹೆಲ್ತ್ ಸಿಟಿ ಬೊಮ್ಮಸಂದ್ರ:** 080 66660655 ಅಥವಾ 9902821128
- **ನಾರಾಯಣ ನೇತ್ರಾಲಯ ಇಂದಿರಾನಗರ ಶಾಖೆ:** 080 66974000 ಅಥವಾ 9916024455
- **ನಾರಾಯಣ ನೇತ್ರಾಲಯ ಹುಳಿಮಾವು ಶಾಖೆ:** 080 66121618 ಅಥವಾ 9035154170
- **ಶಂಕರ ಕಣ್ಣಿನ ಆಸ್ಪತ್ರೆ:** (ಮಾರತಹಳ್ಳಿ) 080 69038900 ಅಥವಾ 9739270477
- **ರೈನ್‌ಬೋ ಮಕ್ಕಳ ಆಸ್ಪತ್ರೆ:** (ಬನ್ನೇರುಘಟ್ಟ) 9355400341, ಮಾರತಹಳ್ಳಿ ಶಾಖೆ 9355400340, ಹೆಬ್ಬಾಳ ಶಾಖೆ 9355400342
- **ಜಯನಗರದ ನೇತ್ರಧಾಮ:** 080 26088000 ಅಥವಾ 9448071816
- **ಡಾ. ಅಗರವಾಲ್ ಕಣ್ಣಿನ ಆಸ್ಪತ್ರೆ:** ಬನ್ನೇರುಘಟ್ಟ ಶಾಖೆ 08048193419, ರಾಜರಾಜೇಶ್ವರಿ ನಗರ ಶಾಖೆ 918048193501

72 ಮೈದಾನದಲ್ಲಿ ಮಾರಾಟ



'ದೀಪಾವಳಿ ಹಬ್ಬದ ಅಂಗವಾಗಿ ನಗರದ 72 ಮೈದಾನಗಳಲ್ಲಿ ತಾತ್ಕಾಲಿಕವಾಗಿ ಪಟಾಕಿ ಮಾರಾಟಕ್ಕೆ ಅನುಮತಿ ನೀಡಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.

'ಪಟಾಕಿ ಮಾರಾಟಕ್ಕೆ ಸಂಬಂಧಿಸಿದಂತೆ ಪರವಾನಗಿ ಪಡೆಯಲು ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿತ್ತು. ಒಟ್ಟು 1,518 ಅರ್ಜಿಗಳು ಸಲ್ಲಿಕೆ ಆಗಿದ್ದವು. ಅದರಲ್ಲಿ 315 ಪರವಾನಗಿ ನೀಡಲಾಗಿದೆ. ಸುರಕ್ಷತಾ ಕ್ರಮ ತೆಗೆದುಕೊಳ್ಳುವಂತೆ ಮಾರಾಟಗಾರರಿಗೆ ಸೂಚಿಸಲಾಗಿದೆ. ಬಿಬಿಎಂಪಿ, ಅಗ್ನಿಶಾಮಕ ಇಲಾಖೆ, ಬೆಸ್ಕಾಂ, ಮಾಲಿನ್ಯ ನಿಯಂತ್ರಣ ಮಂಡಳಿ, ಜಿಎಸ್‌ಟಿ ಅಧಿಕಾರಿಗಳ ಜತೆಗೂ ಸಭೆ ನಡೆಸಲಾಗಿದೆ' ಎಂದು ವಿವರಿಸಿದರು.

'ಸುರಕ್ಷತಾ ಕ್ರಮದ ಉಸ್ತುವಾರಿಗೆ ವಿವಿಧ ಇಲಾಖೆಗಳನ್ನು ಒಳಗೊಂಡ ತಂಡ ರಚಿಸಲಾಗಿದೆ' ಎಂದು ಮಾಹಿತಿ ನೀಡಿದರು.

ಹಬ್ಬಕ್ಕೂ ಮುನ್ನವೇ ನಗರದಲ್ಲಿ ಪಟಾಕಿ ಅವಘಡ

ನಗರದಲ್ಲಿ ದೀಪಾವಳಿ ಹಬ್ಬಕ್ಕೂ ಮುನ್ನವೇ ಪಟಾಕಿ ಅವಘಡಗಳು ಸಂಭವಿಸುತ್ತಿದ್ದು, ಮಿಂಟೊ ಕಣ್ಣಿನ ಆಸ್ಪತ್ರೆಯಲ್ಲಿ ಸೋಮವಾರ ತಡರಾತ್ರಿ ಒಂದು ಪ್ರಕರಣ ವರದಿಯಾಗಿದೆ. ಕಮ್ಮನಹಳ್ಳಿಯ 18 ವರ್ಷದ ಯುವಕ ಪಟಾಕಿ ಗಾಯದ ಕಾರಣ ಮಿಂಟೊ ಆಸ್ಪತ್ರೆಗೆ ದಾಖಲಾಗಿದ್ದಾನೆ. ಬಿಜಲಿ ಪಟಾಕಿ ಸಿಡಿತ ವೀಕ್ಷಿಸುತ್ತಿದ್ದಾಗ ಕಣ್ಣಿಗೆ ಕಿಡಿ ಸಿಡಿದು, ಗಾಯವಾಗಿದೆ.

'ಯುವಕನಿಗೆ ಚಿಕಿತ್ಸೆ ಒದಗಿಸಲಾಗುತ್ತಿದ್ದು, ದೃಷ್ಟಿ ಸುಧಾರಿಸುತ್ತಿದೆ. ಪಟಾಕಿಗಳನ್ನು ಸಿಡಿಸುವವರಿಗೆ ಮಾತ್ರವಲ್ಲ, ನೋಡುಗರಿಗೂ ಅಪಾಯ. ಆದ್ದರಿಂದ ಪಟಾಕಿಯಿಂದ ಅಂತರ ಕಾಯ್ದುಕೊಳ್ಳಬೇಕು' ಎಂದು ಮಿಂಟೊ ಆಸ್ಪತ್ರೆ ವೈದ್ಯರು ತಿಳಿಸಿದ್ದಾರೆ.

ರಾತ್ರಿ 8ರಿಂದ 10ರ ವರೆಗೆ ಪಟಾಕಿ ಸಿಡಿಸಲು ಅವಕಾಶ

ದೀಪಾವಳಿ ಹಬ್ಬದ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ಆದೇಶದಂತೆ ರಾತ್ರಿ 8ರಿಂದ 10ರವರೆಗೆ ಮಾತ್ರ ಹಸಿರು ಪಟಾಕಿ ಸಿಡಿಸಲು ಅವಕಾಶ ಕಲ್ಪಿಸಲಾಗಿದ್ದು, ಈ ಸಂಬಂಧ ನಗರ ಪೊಲೀಸ್ ಇಲಾಖೆ ಮಾರ್ಗಸೂಚಿ ಪ್ರಕಟಿಸಿದೆ. ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾರ್ಗಸೂಚಿ ಬಿಡುಗಡೆ ಮಾಡಿದರು.

ಮಾರ್ಗಸೂಚಿಯಲ್ಲಿ ಏನಿದೆ?

- ಹಸಿರು ಪಟಾಕಿಗಳನ್ನೇ ಖರೀದಿಸಿ ಪರಿಸರ ಸ್ನೇಹಿ ದೀಪಾವಳಿ ಆಚರಿಸಬೇಕು
- ಹಸಿರು ಪಟಾಕಿ ಖರೀದಿ ಸಂದರ್ಭದಲ್ಲಿ ಕ್ಯೂಆರ್‌ಕೋಡ್ ಸ್ಕ್ಯಾನ್ ಮಾಡಿ ಖಚಿತ ಪಡಿಸಿಕೊಳ್ಳಬೇಕು
- ಅಧಿಕೃತ ಪರವಾನಗಿ ಪಡೆದ ಅಂಗಡಿ/ಮಳಿಗೆಗಳಿಂದಲೇ ಪಟಾಕಿ ಖರೀದಿಸಬೇಕು
- ಕೆಲವು ಅಂಗಡಿಗಳಲ್ಲಿ ಅನಧಿಕೃತವಾಗಿ ಪಟಾಕಿ ಮಾರಾಟ ಮಾಡುವ ಸಾಧ್ಯತೆಯಿದ್ದು, ಅಂತಹ ಸ್ಥಳದಲ್ಲಿ ಪಟಾಕಿ ಖರೀದಿಸಬಾರದು
- ಹೆಚ್ಚು ಶಬ್ದ ಹಾಗೂ ವಾಯು ಮಾಲಿನ್ಯ ಉಂಟು ಮಾಡುವ ಪಟಾಕಿ ಖರೀದಿಸುವುದು ಬೇಡ
- ಚಿಕ್ಕ ಮಕ್ಕಳು ಪಟಾಕಿ ಹಚ್ಚಲು ಅವಕಾಶ ಕೊಡಬಾರದು. ಚಿಕ್ಕ ಮಕ್ಕಳೊಂದಿಗೆ ಪೋಷಕರೂ ಜೊತೆಯಲ್ಲಿದ್ದು, ಸುರಕ್ಷತೆಯ ಬಗ್ಗೆ ಹೆಚ್ಚಿನ ಗಮನಹರಿಸಬೇಕು
- ಜನದಟ್ಟಣೆ ಪ್ರದೇಶ, ಮುಖ್ಯ ರಸ್ತೆ ಹಾಗೂ ವಾಹನಗಳ ನಿಲುಗಡೆ ಸ್ಥಳಗಳಲ್ಲಿ ಪಟಾಕಿ ಸಿಡಿಸಬಾರದು
- ಪಟಾಕಿ ಸುಡುವ ಸಂದರ್ಭದಲ್ಲಿ ಅಂತರ ಕಾಯ್ದುಕೊಳ್ಳಬೇಕು
- ಪಟಾಕಿ ಸಿಡಿಸುವಾಗ ಪ್ರಾಣಿಗಳಿಗೆ ತೊಂದರೆ ಆಗದಂತೆ ಮುನ್ನೆಚರಿಕೆ ಕ್ರಮ ತೆಗೆದುಕೊಳ್ಳಬೇಕು
- ಪಟಾಕಿ ಸಿಡಿಸುವ ಸಂದರ್ಭದಲ್ಲಿ ಕೈಗಳಿಗೆ ಗ್ಲೌಸ್ ಧರಿಸಬೇಕು; ಕಣ್ಣುಗಳಿಗೆ ಸುರಕ್ಷತಾ ಕನ್ನಡಕ ಧರಿಸಬೇಕು
- ಮೊದಲ ಪ್ರಯತ್ನದಲ್ಲಿ ಸಿಡಿಯದ ಪಟಾಕಿಗಳನ್ನು ಹತ್ತಿರಕ್ಕೆ ಹೋಗಿ ಮತ್ತೊಮ್ಮೆ ಪರೀಕ್ಷಿಸುವುದು ಬೇಡ
- ಪಟಾಕಿ ಹಚ್ಚುವ ವೇಳೆ ಬಟ್ಟೆಗಳ ಬಗ್ಗೆ ಹೆಚ್ಚು ಜಾಗ್ರತೆ ವಹಿಸಬೇಕು. ಹತ್ತಿಯ ಬಟ್ಟೆ ಧರಿಸುವುದು ಉತ್ತಮ. ಆದಷ್ಟೂ ಸಿಂಥೆಟಿಕ್, ನೈಲಾನ್, ಪಾಲಿಸ್ಟರ್ ಬಟ್ಟೆ ಧರಿಸುವುದು ಬೇಡ
- ಕೈಯಲ್ಲಿ ಪಟಾಕಿ ಹಿಡಿದು ಹಚ್ಚುವುದು ಅಪಾಯಕಾರಿ. ಪಟಾಕಿ ಸಿಡಿಸುವ ಸಂದರ್ಭದಲ್ಲಿ ಪ್ರಥಮ ಚಿಕಿತ್ಸಾ ಪೆಟ್ಟಿಗೆಯನ್ನು ಹತ್ತಿರದಲ್ಲೇ ಇಟ್ಟುಕೊಳ್ಳಬೇಕು
- ಅವಘಡಗಳು ಸಂಭವಿಸಿದಲ್ಲಿ 112 ಹಾಗೂ 108 ಸಂಪರ್ಕಿಸಬೇಕು. ವೈದ್ಯರ ಸಲಹೆ ಪಡೆದುಕೊಳ್ಳಬೇಕು
- ಸಿಡಿಯದ ಪಟಾಕಿಗಳನ್ನು ಗುಡ್ಡೆ ಹಾಕಿ ಬೆಂಕಿ ಹಚ್ಚುವುದು ಅಪಾಯಕಾರಿ
- ಪಟಾಕಿ ಸಿಡಿಸಿದ ನಂತರ ಮೈದಾನ, ರಸ್ತೆಗಳು, ಮನೆ ಮುಂದಿನ ಅಂಗಳಗಳಲ್ಲಿ ಸ್ವಚ್ಛತೆ ಕಾಪಾಡಬೇಕು
- ನಿಗದಿತ ಸಮಯ ಮೀರಿ ಪಟಾಕಿ ಸಿಡಿಸಿದರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು
- ಹೆಚ್ಚು ಶಬ್ದ ಹೊಮ್ಮುವ ಪಟಾಕಿ ಹಚ್ಚುವುದರಿಂದ ಹಿರಿಯ ನಾಗರಿಕರಿಗೆ, ಅನಾರೋಗ್ಯ ಪೀಡಿತರಿಗೆ, ವಿದ್ಯಾರ್ಥಿಗಳಿಗೆ ತೊಂದರೆ ಆಗುವ ಸಂಭವವಿದೆ. ಆದ್ದರಿಂದ, ಕಡಿಮೆ ಶಬ್ದ ಹೊರಹೊಮ್ಮುವ ಹಸಿರು ಪಟಾಕಿಗಳನ್ನೇ ಹಚ್ಚುವುದು ಸೂಕ್ತ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Multiple Vacancy

WANTED
1) Require Accountant 8-10 year of Experience
2) Cashier Experience with Knowledge of Tally.
3) Branch Manager 5 Years Of Experience.
Salary 20000 to 40000
Laxmi Gold Palace Malleshwaram Bengaluru
914 868 9355

Engg/ Production Technical

REQUIRE ELECTRICANS 3- 4 years Industrial Experience in around Whitefield area for project work Salary based on the experience Contact: 9845557526

WANTED CIVIL ENGG DRAUGHTSMEN Preferably Ladies- one year experience in AUTOCAD. Contact: ESSPEE ASSOCIATES Architects & Engineers Hanumanthnagar, Bangalore Mob: 98453-01767

Teachers/ Professors

SRI VENKATESHWARA College, Tavarekere, Madiwala Requires Physics, Micro Biology, Bio Technology Faculty, Preferred PhD,UGC, NET/KSET. Secretary-9886447657. Mail: nagajois@gmail.com

SRI REVANA SIDDESWARA EDUCATION TRUST HULIYAPPA MALAMMA B.ED COLLEGE Sy no24/1 Chikkajala, Chokkanahalli Bangalore-562157, INVITES Application with necessary certificates from eligible candidates for the following posts (1) Assistant professors Subjects: English, History, Biology. Commerce, Physical Science, Mathematics, QUALIFICATION (As per NCTE Norms) MA/M.Sc., /M.COM M.Ed with 55% & NET/SLET (2) Administrative Staff MCA/M.COM (3) Peon 2nd PUC, Note:a) Apply on or before 15-11-2024, For further details Contact:9343865939 9972856004 9019265415 Sd/Principal

REQUIRED URGENTLY PE MASTER (CP.Ed/BPEd) and PRIMARY HINDI TEACHER. Contact: 9035033560/ 8867569333

Marketing & Sales

LTG INFRASTRUCTURE Limited Real Estate Company in Blore Laggere is looking for Presales Executive / Tele Callers. Call : 9986041188.

RENTAL PROPERTIES

Accommodation Available

Flats

3BHK FLAT Rental for Pure Veg Family in 3rd Phase JPNagar Opp. MTR MiniForest, No Broker, Viewing upon Appointment. Contact: 7795242299

REAL ESTATE SELLING

Commerical

Basavanagudi

COMMERCIAL LEASE (65 years). Corner 8000 sft. Built 18000 sft. RENT POTENTIAL Rs 3 CR YEARLY. Whatsapp (message ONLY): 99029-15651. Brokers excuse. Price Rs 15 cr.

Bangalore North

COMMERCIAL SPACE 30X100 Srirampuram 2 mins from metro with new shed Rs.18000/- 9739732433

General

South

30' X 40' North East facing plot with compound wall and gate available for Sale in Karnasrilayout, Kodinalli, Old Madras Road. Contact Mr. Shankar Rao, Advocate, Indiranagar, Bangalore. Mobile No : 9959883493 - NO BROKERS PLEASE-

Sites

Rajajinagar

RAJAJINAGAR 35X45 BDA old house west facing 17th main near Karur bank 28000/- 9739732433

BUSINESS

Business to Business

Business

WANTED PROMOTERS, Propoganda cum Distributors, Freelance Marketers for Natural Herbal, well established products. Contact: 9448041257.

Business Offers

Finance

MSME LOANS: We arrange MSME Business Loans against your existing or New Businesses also.Contact:7204995189

Business For Sale

ASLEECHICKEN.COM SEEKS a Financial Partner who can invest 50 Lacs. C: 7338999769

PERSONAL

Change of Name

CHANGE OF NAME
I, RENU DEVI W/o. Motian Paswan R/a #7, Horamavu, K. Channasandra, Pooja Garden, Bangalore-560043 Declare that RENU DEVI and SUJOTI DEVI both the Name belong to me only. And have changed my Name to RENU DEVI. Henceforth, I will be known as RENU DEVI for all my Documents and other Transactions. Vide affidavit dated 29.10.2024 Sworn before Notary Uday Kumar. K. Bangalore.

CHANGE OF NAME
I, Valerine Lazarus Pinto aged about 71 Years S/o Lazarus Pinto, R/at #381, Palace Vista, 10th Main, 13th Cross, Nisarga Colony, Horamavu, Bangalore - 560043 have changed my name to VALERIAN PINTO vide affidavit dated 28.10.2024 before notary B.Seshagiri, Bangalore. Henceforth I shall be known as VALERIAN PINTO only.

I, YASMEEN SHABBER Residing at #202, 10th Cross, Rashad Nagar, Bangalore- 560045, have changed my name to YASMEEN, vide affidavit dated 19/10/2024, before notary R. Vishwanath, Bangalore. Henceforth I shall be called YASEEN only.

I SHARMODDIN I have changed my name Sharmoddin Mulla S/o Magdumali Mulla R/o Peth Ammapur Tq Shorapur Dist Yadgir Karnataka 585290 For all purposes

PUBLIC NOTICE

PUBLIC NOTICE
This is to notify the general public that my client intends to purchase the immovable property described in schedule hereunder written from the present owner. Any person/s, institution having any claim or objection in my client proceeding to finalise the sale transaction, they may do so by filing his/ her/ their/ its claim/objection supported with documents so as to reach the undersigned within **7 days** from the date of this publication. No claim shall be entertained after the expiry of the period notified above. Further if no claims or objections is received within the date stipulated above my client would conclude the proposed sale transaction as though there are no claims or objections.

SCHEDULE PROPERTY
All that piece and parcel of the immovable property being Flat bearing **No.2602-2603**, South Tower, **Embassy-I-Four Seasons Private Residencies** measuring **SBA 5864 Sq.ft CA 4398 Sq.ft UDS 1386 Sq.ft** along with **4 covered car parking** bearing **Nos. 147, 148, 149 and 150** in the basement floor assigned with **PID No.98-46-8/28,** constructed over the property bearing Municipal **No.8, Bellary Road, Ganganagar, Bangalore-560032.**
Bounded on the:
East by : 1st C Main Road to Ganganagar
West by : Bellary Road
North by : Property of HMT
South by : Gangenahalli Main Road
Sd/-
M.S.NARAYAN
ADVOCATE
No.18, 3rd Cross Annayappa Block, Kumar Park West Bangalore-560020
Mobile : 9845062134
Bangalore Date:30-10-2024

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH Classifieds More value, more impact — ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com
BOOK NOW
Book your ad with us now! For more details contact:
+91 9845114560 | +91 9901641752 | 080-45557163/164
*Conditions apply

ನಿಧಿ ಆಸೆಗೆ ಪುತ್ರನ ಕೊಲೆಗೆ ಸಂಚು: ಪೊಲೀಸರಿಗೆ ದೂರು

ಮಗನ ರಕ್ಷಣೆಗೆ ತಾಯಿ ಮೊರೆ

ಅಪರಾಧ ಸುದ್ದಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿಧಿಯ ಆಸೆಗೆ ಮಗನನ್ನು ಕೊಲೆ ಮಾಡಲು ಪತಿ ಸಂಚು ರೂಪಿಸಿದ್ದಾರೆ' ಎಂದು ಆರೋಪಿಸಿ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರಿಗೆ ಮಹಿಳೆಯೊಬ್ಬರು ದೂರು ಸಲ್ಲಿಸಿದ್ದಾರೆ.

ಸದ್ದಾಂ ಹುಸೇನ್ ಎಂಬಾತ ಪುತ್ರನ ಹತ್ಯೆಗೆ ಸಂಚು ರೂಪಿಸಿದ್ದಾರೆ ಎಂದು ಹೇಳಲಾಗಿದೆ.

'ಈ ಹಿಂದೆ ದೂರು ನೀಡಲು ಹೋದಾಗ ಕೆ.ಆರ್.ಪುರ ಪೊಲೀಸರು ಪ್ರಕರಣ ದಾಖಲಿಸಿಕೊಳ್ಳಲು ಹಿಂದೇಟು ಹಾಕಿದ್ದರು. ಈಗಲಾದರೂ ನ್ಯಾಯ ಕಲ್ಪಿಸಿ' ಎಂದೂ ಮಹಿಳೆ ಕೋರಿದ್ದಾರೆ.

'2020ರಲ್ಲಿ ಸದ್ದಾಂ ಹುಸೇನ್ ಪರಿಚಯ ಆಗಿತ್ತು. ನಂತರ ಇಬ್ಬರೂ ಮದುವೆ ಮಾಡಿಕೊಂಡಿದ್ದೆವು. ಕೆಲವು ತಿಂಗಳ ಬಳಿಕ ಮಗು ಜನಿಸಿತ್ತು. ಆಗ ಸದ್ದಾಂ ನನ್ನ ಮೇಲೆ ಹಲ್ಲೆ ಮಾಡಿದ್ದರು. ಅಲ್ಲದೇ ತಾಯಿಗೂ ಜೀವ ಬೆದರಿಕೆ ಹಾಕಿದ್ದರು' ಎಂದು ಕಮಿಷನರ್‌ಗೆ ನೀಡಿದ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಹುಸೇನ್ ಕೇರಳದ ಕೆಲವು ವ್ಯಕ್ತಿಗಳ ಜತೆಗೆ ಸೇರಿ ವಾಮಾಚಾರ ಕಲಿತುಕೊಂಡಿದ್ದರು. ನಂತರ ನಿಧಿ ಆಸೆಗೆ ಮಾಟಮಂತ್ರ ಮಾಡಲು ತಯಾರಿ ನಡೆಸಿದ್ದರು. ಈ ವೇಳೆ ತನ್ನ ಮಗನನ್ನು ಬಲಿಕೊಡುವುದಾಗಿ ಹೇಳಿದ್ದರು. ನನ್ನ ತಾಯಿಯನ್ನೂ ಕೊಲ್ಲುವುದಾಗಿ ಬೆದರಿಕೆ ಹಾಕಿದ್ದರು. ಪಕ್ಕದ ಮನೆಯವರ ಸಹಾಯದಿಂದ ನಾನು ಮತ್ತು ನನ್ನ ಮಗ ತಪ್ಪಿಸಿಕೊಂಡು ಬಂದೆವು' ಎಂದಿದ್ದಾರೆ.

'ದೂರು ನೀಡಿದ್ದರೂ ಪೊಲೀಸರು ದೂರು ಸ್ವೀಕರಿಸಿಲ್ಲ. ಆದ್ದರಿಂದ, ಕೂಡಲೇ ಪ್ರಕರಣ ದಾಖಲಿಸಿಕೊಂಡು ಸದ್ದಾಂ ಹುಸೇನ್ ಹಾಗೂ ಆತನ ಸಹಚರ ನಯಾಜ್ ವಿರುದ್ಧ ಕ್ರಮ ಕೈಗೊಳ್ಳಬೇಕು. ನಮಗೆ ರಕ್ಷಣೆಯನ್ನೂ ನೀಡಬೇಕು' ಎಂದು ಮಹಿಳೆ ಕೋರಿದ್ದಾರೆ.

ಸಂಚಾರ ನಿಯಮ ಉಲ್ಲಂಘನೆ: 498 ಪ್ರಕರಣ ದಾಖಲು

ಸಂಚಾರ ನಿಯಮ ಉಲ್ಲಂಘಿಸಿದವರ ವಿರುದ್ಧ ಪಶ್ಚಿಮ ಸಂಚಾರ ವಿಭಾಗದ ಪೊಲೀಸರು 498 ಪ್ರಕರಣ ದಾಖಲಿಸಿಕೊಂಡು ದಂಡ ವಿಧಿಸಿದ್ದಾರೆ. ಒಟ್ಟು ₹2.54 ಲಕ್ಷ ದಂಡ ಸಂಗ್ರಹಿಸಲಾಗಿದೆ.

401 ಪ್ರಕರಣ: ಏಕಮುಖ ರಸ್ತೆ ಹಾಗೂ ನಿರ್ಬಂಧಿತ ರಸ್ತೆಯಲ್ಲಿ ಸಂಚಾರ

49 ಪ್ರಕರಣ; ಪಾದಚಾರಿ ಮಾರ್ಗದಲ್ಲಿ ವಾಹನ ನಿಲುಗಡೆ

48 ಪ್ರಕರಣ; ದ್ವಿಚಕ್ರ ವಾಹನದಲ್ಲಿ ಮೂವರು ಕುಳಿತು ಸವಾರಿ

₹12 ಲಕ್ಷ ಮೌಲ್ಯದ 18 ದ್ವಿಚಕ್ರ ವಾಹನ ಜಪ್ತಿ

ಮಹದೇವಪುರ ಹಾಗೂ ಕೊಡಿಗೇಹಳ್ಳಿ ಠಾಣೆ ಪೊಲೀಸರು ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಮೂವರು ದ್ವಿಚಕ್ರ ವಾಹನ ಕಳ್ಳರನ್ನು ಬಂಧಿಸಿ ₹12 ಲಕ್ಷ ಮೌಲ್ಯದ 18 ದ್ವಿಚಕ್ರ ವಾಹನ ಜಪ್ತಿ ಮಾಡಿದ್ದಾರೆ.

ಕಿರಣ್ (21) ಎಂಬಾತನನ್ನು ಮಹದೇವಪುರ ಪೊಲೀಸರು ಬಂಧಿಸಿದ್ದಾರೆ. ಆತನಿಂದ ₹8 ಲಕ್ಷ ಮೌಲ್ಯದ 11 ದ್ವಿಚಕ್ರ ವಾಹನ ಜಪ್ತಿ ಮಾಡಿದ್ದಾರೆ.

ಎಚ್.ಪಿ. ಕಂಪನಿಯ ಉದ್ಯೋಗಿ ಸಂಸ್ಥೆಯ ಕಚೇರಿ ಎದುರು ದ್ವಿಚಕ್ರ ವಾಹನ ನಿಲ್ಲಿಸಿದ್ದರು. ವಾಪಸ್ ಬರುವಷ್ಟರಲ್ಲಿ ವಾಹನ ಕಳವಾಗಿತ್ತು.

ಕದ್ದ ಬೈಕ್‌ಗಳನ್ನು ಆರೋಪಿ ರೈಲು ನಿಲ್ದಾಣದ ಡೀಸೆಲ್ ಶೆಡ್ ಪಕ್ಕದ ಖಾಲಿ ಜಾಗದಲ್ಲಿ ನಿಲುಗಡೆ ಮಾಡುತ್ತಿದ್ದ. ಅಲ್ಲಿಂದ ಬೈಕ್‌ಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ರಸ್ತೆಬದಿ ನಿಲುಗಡೆ ಮಾಡಿದ್ದ ದ್ವಿಚಕ್ರ ವಾಹನಗಳನ್ನು ಕಳವು ಮಾಡಿ ಪರಾರಿಯಾಗಿದ್ದ ಇಬ್ಬರನ್ನು ಕೊಡಿಗೇಹಳ್ಳಿ ಠಾಣೆ ಪೊಲೀಸರು ಬಂಧಿಸಿ ₹ 3.92 ಲಕ್ಷ ಮೌಲ್ಯದ ಏಳು ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಿದ್ದಾರೆ.

ಆರ್.ಟಿ ನಗರದ ಸಲ್ಮಾನ್ ಪಾಷಾ(22) ಮತ್ತು ಡಿ.ಜೆ.ಹಳ್ಳಿಯ ಅಸ್ಲಾಂ ಪಾಷಾ(23) ಬಂಧಿತರು.

ಸಿ.ಎಂ, ಸಚಿವರ ನಿಂದನೆ: ಎಫ್‌ಐಆರ್ ದಾಖಲು

ಒಳ ಮೀಸಲಾತಿಗೆ ಸಂಬಂಧಿಸಿದಂತೆ ತೆಗೆದುಕೊಂಡ ತೀರ್ಮಾನ ಖಂಡಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವ ಸಂಪುಟದ ಸದಸ್ಯರನ್ನು ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಅವಹೇಳನ ಮಾಡಲಾಗಿದ್ದು, ಈ ಸಂಬಂಧ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಕೆಪಿಸಿಸಿ ಸಂಯೋಜಕ ಸತೀಶ್ ಅವರು ನೀಡಿದ ದೂರಿನ ಮೇರೆಗೆ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಒಳಮೀಸಲಾತಿ ಹೋರಾಟ ಸಮಿತಿ ವಿಜಯನಗರ ಜಿಲ್ಲೆ' ಎಂಬ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಒಳ ಮೀಸಲಾತಿ ಕುರಿತು ರಾಜ್ಯ ಸರ್ಕಾರ ಸಂಪುಟ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನವನ್ನು ಖಂಡಿಸಲಾಗಿದೆ. ಅಲ್ಲದೇ ನಿಂದನಾತ್ಮಕ ಬರಹಗಳನ್ನು ಗ್ರೂಪ್‌ನಲ್ಲಿ ಹರಿಯಬಿಡಲಾಗಿದೆ. ಸಮಾಜದಲ್ಲಿ ಗಲಭೆ ಸೃಷ್ಟಿಸುವ ಉದ್ದೇಶದಿಂದ ಬರಹ ಬರೆದು ಹರಿಯಬಿಡಲಾಗಿದೆ' ಎಂದು ಸತೀಶ್ ದೂರಿನಲ್ಲಿ ತಿಳಿಸಿದ್ದಾರೆ.

₹2.36 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಬೋನಿಫೇಸ್

ನಿಷೇಧಿತ ಮಾದಕವಸ್ತು ಎಂಡಿಎಂಎ ಕ್ರಿಸ್ಟಲ್ ಮಾರಾಟ ಮಾಡುತ್ತಿದ್ದ ನೈಜೀರಿಯಾದ ಇನಿಯಾಂಗ್ ಉನ್ಯಮಿ ಬೋನಿಫೇಸ್ (31) ಎಂಬಾತನನ್ನು ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳದ ಸಿಬ್ಬಂದಿ ಮಂಗಳವಾರ ಬಂಧಿಸಿದ್ದಾರೆ.

ಆರೋಪಿಯಿಂದ 1 ಕೆ.ಜಿ 577 ಗ್ರಾಂ. ಎಂಡಿಎಂಎ ಕ್ರಿಸ್ಟಲ್, ಮೊಬೈಲ್, ಎಲೆಕ್ಟ್ರಾನಿಕ್ ತೂಕದ ಯಂತ್ರ ಜಪ್ತಿ ಮಾಡಲಾಗಿದೆ. ಇವುಗಳ ಮೌಲ್ಯ ₹2.36 ಕೋಟಿ ಎಂದು ಅಂದಾಜಿಸಲಾಗಿದೆ. 'ಶ್ರೀನಿಧಿ ಲೇಔಟ್‌ನ ದೊಡ್ಡನಾಗಮಂಗಲದ ಮನೆಯೊಂದರಲ್ಲಿ ವಿದೇಶಿ ವ್ಯಕ್ತಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು' ಎಂದು ಸಿಸಿಬಿ ಪೊಲೀಸರು ಹೇಳಿದರು.

'2020ರಲ್ಲಿ ವೈದ್ಯಕೀಯ ವೀಸಾ ಪಡೆದು ಭಾರತಕ್ಕೆ ಬಂದು ನೋಯ್ಡಾದಲ್ಲಿ ನೆಲಸಿದ್ದ. ಅದೇ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ನೆಲಸಿದ್ದ ವಿದೇಶಿ ಮೂಲದ ಮಹಿಳಾ ಡ್ರಗ್ಸ್ ಪೆಡ್ಲರ್ ಪರಿಚಯ ಆಗಿತ್ತು. ಅಲ್ಲಿಂದ ಬೆಂಗಳೂರಿಗೆ ಬಂದಿದ್ದ ಆರೋಪಿ, ಆಕೆಯ ಜತೆಗೆ ಸೇರಿಕೊಂಡು ಡ್ರಗ್ಸ್ ಮಾರಾಟ ದಂಧೆ ನಡೆಸುತ್ತಿದ್ದ. ವಿದೇಶಿ ಮಹಿಳೆ ತಲೆಮರೆಸಿಕೊಂಡಿದ್ದು, ಹುಡುಕಾಟ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ಟಾಕ್ಸಿಕ್' ಚಿತ್ರ: ಅರಣ್ಯ ಅಪರಾಧ ಪ್ರಕರಣ ದಾಖಲಿಸಲು ಸಚಿವರ ಖಂಡ್ರೆ ಸೂಚನೆ

ಚಿತ್ರೀಕರಣಕ್ಕೆ ಅರಣ್ಯ ನಾಶ: ಆರೋಪ

ಪ್ರಜಾವಾಣಿ ವಾರ್ತೆ

1. ಹಸಿರಿನಿಂದ ಕೂಡಿರುವ ಎಚ್‌ಎಂಟಿ ಅರಣ್ಯ ಪ್ರದೇಶ (ಹಳೆಯ ಚಿತ್ರ) 2. ಅರಣ್ಯ ನಾಶವಾಗಿರುವ ದೃಶ್ಯ (ಈಗಿನ ಚಿತ್ರ)

ಬೆಂಗಳೂರು: ಎಚ್‌ಎಂಟಿ ವಶದಲ್ಲಿರುವ ಅರಣ್ಯ ಜಮೀನಿನಲ್ಲಿ 'ಟಾಕ್ಸಿಕ್' ಎಂಬ ಸಿನಿಮಾ ಚಿತ್ರೀಕರಣಕ್ಕೆ ಬೃಹತ್ ಸೆಟ್ ಹಾಕಿ, ಮರ–ಗಿಡಗಳನ್ನು ಕಡಿದಿರುವುದಕ್ಕೆ ಕಾರಣರಾದವರ ವಿರುದ್ಧ ಅರಣ್ಯ ಅಪರಾಧ ಪ್ರಕರಣ ದಾಖಲಿಸಲು ಸೂಚಿಸಲಾಗಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

'ಸಿನಿಮಾ ತಂಡ ನಿಯಮಾನುಸಾರ ಅನುಮತಿ ಪಡೆದಿದೆಯೆ? ಎಂಬುದನ್ನು ಪರಿಶೀಲಿಸಬೇಕು. ಅನುಮತಿ ಕೊಟ್ಟಿದ್ದರೆ ಅರಣ್ಯ ಜಮೀನಿನಲ್ಲಿ ಮರ ಕಡಿತಲೆಗೆ ಅನುಮತಿ ನೀಡಿದ ಅಧಿಕಾರಿ ವಿರುದ್ಧವೂ ಶಿಸ್ತು ಕ್ರಮ ಜರುಗಿಸಬೇಕು' ಎಂದು ಅವರು ಸೂಚನೆ ನೀಡಿದ್ದಾರೆ.

'ಎಚ್‌ಎಂಟಿ ತನ್ನ ವಶದಲ್ಲಿರುವ ಅರಣ್ಯ ಜಮೀನನ್ನು ಚಿತ್ರೀಕರಣಕ್ಕೆ ಮತ್ತು ಖಾಲಿ ಜಾಗವನ್ನು ದಿನದ ಆಧಾರದ ಮೇಲೆ ಬಾಡಿಗೆ ನೀಡುತ್ತಿರುವುದನ್ನೂ ಗಮನಿಸಲಾಗಿದೆ. ಕೆನರಾ ಬ್ಯಾಂಕ್‌ಗೆ ಎಚ್‌ಎಂಟಿ ಮಾರಾಟ ಮಾಡಿದೆ ಎನ್ನಲಾದ ಅರಣ್ಯ ಜಮೀನಿನಲ್ಲಿ 'ಟಾಕ್ಸಿಕ್' ಚಿತ್ರದ ಚಿತ್ರೀಕರಣ ಹಲವು ತಿಂಗಳಿಂದ ನಡೆಯುತ್ತಿದೆ. ಇದಕ್ಕಾಗಿ ಬೃಹತ್ ಸೆಟ್ ಹಾಕಲಾಗಿದೆ. ಅಲ್ಲಿ ನೂರಾರು ಮರ, ಗಿಡಗಳನ್ನು ಕಡಿಯಲಾಗಿದೆ. ಇದು ದಂಡನೀಯ ಅಪರಾಧ. ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರದಿಂದ ಹಿಂದಿನ ಮತ್ತು ಈಗಿನ ಉಪಗ್ರಹ ಚಿತ್ರಗಳನ್ನು ಪಡೆಯಲಾಗಿದೆ' ಎಂದು ಹೇಳಿದ್ದಾರೆ.

ಬೆಂಗಳೂರು ಪೀಣ್ಯ ಪ್ಲಾಂಟೇಷನ್ 1 ಮತ್ತು 2 ರಲ್ಲಿ ಒಟ್ಟು 599 ಎಕರೆ ಮೀಸಲು ಅರಣ್ಯ ಎಂದು ಅಧಿಸೂಚನೆ ಹೊರಡಿಸಲಾಗಿತ್ತು. ಇದನ್ನು 1960ರಲ್ಲಿ ಡಿನೋಟಿಫಿಕೇಷನ್ ಮಾಡದೇ ಕಾನೂನು ಬಾಹಿರವಾಗಿ ಎಚ್‌ಎಂಟಿ ಸಂಸ್ಥೆಗೆ ದಾನ, ಮಂಜೂರು ಹೆಸರಿನಲ್ಲಿ ಹಸ್ತಾಂತರಿಸಲಾಗಿದೆ. ಡಿನೋಟಿಫಿಕೇಷನ್ ಆಗದೆ, ಎಚ್‌ಎಂಟಿ ವಶದಲ್ಲಿರುವ ಜಮೀನು ಅರಣ್ಯವೇ ಆಗಿದೆ. ಎಚ್‌ಎಂಟಿ ವಿವಿಧ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಿಗೆ ಮತ್ತು ವ್ಯಕ್ತಿಗಳಿಗೆ ಅಕ್ರಮವಾಗಿ ಮಾರಾಟ ಮಾಡಿದೆ ಎಂದು ತಿಳಿಸಿದ್ದಾರೆ.

ಪ್ರಗತಿಯಲ್ಲಿರುವ ನೇಮಕಾತಿ ಪ್ರಕ್ರಿಯೆ ಅಬಾಧಿತ– ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಜಾರಿ ಕುರಿತು ಪರಾಮರ್ಶೆ ನಡೆಸಿ ವರದಿ ನೀಡಲು ರಚಿಸಲಾಗುವ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೇತೃತ್ವದ ಏಕ ಸದಸ್ಯ ಆಯೋಗದ ವರದಿ ಬರುವವರೆಗೆ ಯಾವುದೇ ಹೊಸ ನೇಮಕಾತಿಗಳಿಗೆ ಅಧಿಸೂಚನೆ ಹೊರಡಿಸುವುದಿಲ್ಲ. ಆದರೆ, ಸದ್ಯ ಪ್ರಗತಿಯಲ್ಲಿರುವ ಎಲ್ಲ ನೇಮಕಾತಿ ಪ್ರಕ್ರಿಯೆಗಳು ಮುಂದುವರಿಯಲಿವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

'ಆಯೋಗದ ವರದಿ ಬರುವವರೆಗೆ ಹೊಸ ನೇಮಕಾತಿ ಪ್ರಕ್ರಿಯೆಗಳನ್ನು ಮಾತ್ರ ಸ್ಥಗಿತಗೊಳಿಸಲು ಸೀಮಿತವಾಗಿ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ಎಲ್ಲ ನೇಮಕಾತಿ ಪ್ರಕ್ರಿಯೆಗಳನ್ನು ಸ್ಥಗಿತಗೊಳಿಸಿಲ್ಲ' ಎಂದು ತಿಳಿಸಿದ್ದಾರೆ.

'ಕೆಲವು ಪತ್ರಿಕೆಗಳಲ್ಲಿ ಪ್ರಕಟಗೊಂಡಿರುವ ಸುದ್ದಿಯು ಉದ್ಯೋಗ ಆಕಾಂಕ್ಷಿಗಳಲ್ಲಿ ಗೊಂದಲಕ್ಕೆ ಕಾರಣವಾಗಿರುವುದು ನನ್ನ ಗಮನಕ್ಕೆ ಬಂದಿದೆ. ಈಗಾಗಲೇ ಪ್ರಕಟಗೊಂಡಿರುವ ನೇಮಕಾತಿ ಅಧಿಸೂಚನೆಗಳಿಗೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸಿ, ಪರೀಕ್ಷೆಗೆ ತಯಾರಿ ನಡೆಸುತ್ತಿರುವವರು ಯಾವುದೇ ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ' ಎಂದು ಮುಖ್ಯಮಂತ್ರಿಯವರು ತಿಳಿಸಿದ್ದಾರೆ.

'ಪರಿಶಿಷ್ಟ ಜಾತಿಗಳಿಗೆ ಒಳಮೀಸಲಾತಿ ನೀಡುವ ನಿರ್ಣಯವನ್ನು ಸೋಮವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಕೈಗೊಂಡಿದ್ದೇವೆ. ಮೀಸಲಾತಿಯ ಹಂಚಿಕೆ, ಸುಪ್ರೀಂ ಕೋರ್ಟ್‌ನ ಆದೇಶ ಪಾಲನೆ ಹಾಗೂ ಇನ್ನಿತರೆ ವಿಷಯಗಳಲ್ಲಿ ಸೂಕ್ತ ನಿರ್ಣಯಗಳನ್ನು ಕೈಗೊಳ್ಳಲು ಅನುಕೂಲವಾಗಲಿ ಎಂಬ ಉದ್ದೇಶದಿಂದ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದ ಏಕಸದಸ್ಯ ಆಯೋಗ ರಚನೆಗೆ ತೀರ್ಮಾನಿಸಲಾಗಿದೆ. ವರದಿ ಸಲ್ಲಿಸಲು ಈ ಆಯೋಗಕ್ಕೆ ಮೂರು ತಿಂಗಳ ಸಮಯ ನಿಗದಿಪಡಿಸಲಾಗಿದೆ. ವರದಿ ಸಲ್ಲಿಕೆ ಆಗುವವರೆಗೆ ರಾಜ್ಯ ಸಿವಿಲ್ ಸೇವೆಗಳಲ್ಲಿನ ಮೀಸಲಾತಿ ಅನ್ವಯವಾಗುವ ವೃಂದಗಳ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಹೊಸದಾಗಿ ಯಾವುದೇ ಅಧಿಸೂಚನೆ ಹೊರಡಿಸಬಾರದು ಎಂಬ ನಿರ್ಣಯ ತೆಗೆದುಕೊಳ್ಳಲಾಗಿದೆ' ಎಂದೂ ಅವರು ವಿವರಿಸಿದ್ದಾರೆ.

ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ನಿರ್ಮಾಣಕ್ಕೆ ಮುಂದಾದ ಎನ್‌ಎಚ್‌ಎಐ

ತಲೆ ಎತ್ತಲಿವೆ 24 ಪಾದಚಾರಿ ಮೇಲ್ಸೇತುವೆ

• ಓದೇಶ ಸಕಲೇಶಪುರ

ರಾಮನಗರ: ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಪಾದಚಾರಿಗಳು ರಸ್ತೆ ದಾಟುವುದಕ್ಕೆ ಪೂರಕವಾಗಿ, ಮಾರ್ಗದುದ್ದಕ್ಕೂ 24 ಪಾದಚಾರಿ ಮೇಲ್ಸೇತುವೆ (ಎಫ್‌ಒಬಿ) ನಿರ್ಮಾಣಕ್ಕೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕಡೆಗೂ ಚಾಲನೆ ನೀಡಿದೆ.

ರಾಜಧಾನಿ ಮತ್ತು ಸಾಂಸ್ಕೃತಿಕ ನಗರಿ ನಡುವೆ ತ್ವರಿತ ಸಂಪರ್ಕ ಕಲ್ಪಿಸುವ 118 ಕಿ.ಮೀ. ಉದ್ದದ ಈ ಹೆದ್ದಾರಿಯನ್ನು (ಬಿಎಂಎಸಿಎಚ್: ಬೆಂಗಳೂರು–ಮೈಸೂರು ಆಕ್ಸೆಸ್ ಕಂಟ್ರೋಲ್ಡ್ ಹೈವೆ) 2023ರ ಮಾರ್ಚ್ 11ರಂದು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದ್ದರು.

'ಯೋಜನೆಯು ಪೂರ್ಣಗೊಳ್ಳುವುದಕ್ಕೆ ಮುಂಚೆ ವಾಹನಗಳಿಗೆ ಮುಕ್ತವಾಗಿದ್ದ ಹೆದ್ದಾರಿಯಲ್ಲಿ ಪಾದಚಾರಿಗಳು ರಸ್ತೆ ದಾಟುವುದೇ ದೊಡ್ಡ ಸವಾಲಾಗಿತ್ತು. ಸಾರ್ವಜನಿಕರಿಗೆ ಆಗುತ್ತಿದ್ದ ಅನಾನುಕೂಲ ಗಮನಿಸಿ ನಿಗದಿತ ಸ್ಥಳಗಳಲ್ಲಿ ಪಾದಚಾರಿ ಮೇಲ್ಸೇತುವೆ ನಿರ್ಮಿಸಲು ಟೆಂಡರ್ ಕರೆದು, ಕೆಲವೆಡೆ ಕೆಲಸ ಶುರು ಮಾಡಲಾಗುತ್ತಿದೆ' ಎಂದು ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದರು.

ರಾಮನಗರ ತಾಲ್ಲೂಕಿನ ಕಣಮಿಣಕಿ ಬಳಿ ಬೆಂಗಳೂರು–ಮೈಸೂರು ಹೆದ್ದಾರಿಗೆ ನಿರ್ಮಿಸಿರುವ ಬೇಲಿಯನ್ನು ಹಾದು ರಸ್ತೆ ದಾಟುವ ಸ್ಥಳೀಯರು

ಪ್ರತಿಭಟಿಸಿದ್ದ ಸ್ಥಳೀಯರು: ಹೆದ್ದಾರಿಯಲ್ಲಿ ವಾಹನಗಳ ಓಡಾಟ ಶುರುವಾದ ಬಳಿಕ ಎರಡೂ ಕಡೆ ಬೇಲಿ ಹಾಕಲಾಗಿದೆ. ಟೋಲ್ ಪಾವತಿಸುವ ವಾಹನಗಳನ್ನು ಬಿಟ್ಟರೆ ಬೇರೆ ವಾಹನಗಳಿಗೆ ಪ್ರವೇಶವಿಲ್ಲ. ಪಾದಚಾರಿಗಳು ರಸ್ತೆ ದಾಟಬೇಕಾದರೆ ಕನಿಷ್ಠ ಎರಡ್ಮೂರು ಕಿಲೊಮೀಟರ್ ದೂರ ಹೋಗಬೇಕು. ರಸ್ತೆ ದಾಟಲು ಮೇಲ್ಸೇತುವೆ ನಿರ್ಮಿಸುವಂತೆ ಸ್ಥಳೀಯರು ಆರಂಭದಲ್ಲಿ ಪ್ರತಿಭಟನೆ ನಡೆಸಿದ್ದರು.

'ಕೂಗಳತೆ ದೂರದಲ್ಲಿರುವ ಹೆದ್ದಾರಿಯಾಚೆಗಿನ ಸ್ಥಳಕ್ಕೆ ಹೋಗಲು ಬಳಸಿಕೊಂಡು ಬರಬೇಕಿದೆ. ಈ ಭಾಗದಲ್ಲಿರುವ ಸಣ್ಣಪುಟ್ಟ ಕಾರ್ಖಾನೆಗಳಿಗೆ ನಿತ್ಯ ನೂರಾರು ಜನ ಗ್ರಾಮೀಣ ಭಾಗಗಳಿಂದ ಉದ್ಯೋಗಕ್ಕೆ ಬರುತ್ತಾರೆ. ಬಸ್ ಸೇರಿದಂತೆ ಇತರ ವಾಹನಗಳಲ್ಲಿ ಬಂದಿಳಿಯುವ ಅವರು ರಸ್ತೆ ದಾಟಲು ಇಂದಿಗೂ ಪರದಾಡುತ್ತಾರೆ' ಎಂದು ಹೆದ್ದಾರಿ ಹಾದು ಹೋಗಿರುವ ಕಣಿಮಿಣಕಿ ಗ್ರಾಮದ ಮಂಜುನಾಥ್ 'ಪ್ರಜಾವಾಣಿ'ಗೆ ತಿಳಿಸಿದರು.

> **ಹೆದ್ದಾರಿಯ ವ್ಯಾಪ್ತಿಯಲ್ಲಿ ಸ್ಥಳೀಯ ಪೊಲೀಸರ ಸಲಹೆ ಪಡೆದು, ಜನರಿಗೆ ಅನುಕೂಲವಾಗುವ ಸ್ಥಳಗಳಲ್ಲಿ 24 ಪಾದಚಾರಿ ಮೇಲ್ಸೇತುವೆ ನಿರ್ಮಿಸಲಾಗುತ್ತಿದೆ**
> **ರಾಹುಲ್ ಗುಪ್ತ,** ಯೋಜನಾ ನಿರ್ದೇಶಕ, ಬಿಎಂಎಸಿಎಚ್, ಮೈಸೂರು–ರಾಮನಗರ

118 ಕಿ.ಮೀ. ಉದ್ದ: ಬೆಂಗಳೂರು ಗ್ರಾಮಾಂತರ ಜಿಲ್ಲೆ ವ್ಯಾಪ್ತಿಯ ಕುಂಬಳಗೋಡಿನಿಂದ ಆರಂಭವಾಗುವ 118 ಕಿ.ಮೀ. ಉದ್ದದ ಹೆದ್ದಾರಿಯು ರಾಮನಗರ ಜಿಲ್ಲೆಯಲ್ಲಿ 55 ಕಿ.ಮೀ., ಮಂಡ್ಯದಲ್ಲಿ 58 ಕಿ.ಮೀ. ಹಾಗೂ ಮೈಸೂರು ಜಿಲ್ಲೆಯಲ್ಲಿ 5 ಕಿ.ಮೀ. ಹಾದು ಹೋಗುತ್ತದೆ. ಪಟ್ಟಣ, ನಗರಗಳು ಹಾಗೂ ಪ್ರಮುಖ ಹಳ್ಳಿಗಳಿಗೆ ಸಂಪರ್ಕಕ್ಕೆ ಕೆಲವೆಡೆ ಮೇಲ್ಸೇತುವೆ ಇರುವುದನ್ನು ಬಿಟ್ಟರೆ ಪಾದಚಾರಿಗಳು ರಸ್ತೆ ದಾಟಲು ವ್ಯವಸ್ಥೆ ಇಲ್ಲ.

'ಸ್ಥಳೀಯರ ಒತ್ತಾಯಕ್ಕೆ ಮಣಿದು ಶೇಷಗಿರಿಹಳ್ಳಿ ಬಳಿ ಆರಂಭದಲ್ಲಿ ಸ್ಥಳೀಯರು ರಸ್ತೆ ದಾಟುವುದಕ್ಕಾಗಿ ಕೆಳಸೇತುವೆ ನಿರ್ಮಾಣಕ್ಕೆ ಪ್ರಾಧಿಕಾರ ಕೈ ಹಾಕಿತ್ತು. ಆದರೆ, ಅರ್ಧಂಬರ್ಧ ಕಾಮಗಾರಿ ಮುಗಿಸಿ ಮತ್ತೆ ಅತ್ತ ತಿರುಗಿ ನೋಡಲಿಲ್ಲ. ಇದರಿಂದಾಗಿ, ಸೇತುವೆ ಕೆಲಸ ನನೆಗುದಿಗೆ ಬಿದ್ದಿದೆ. ಅದನ್ನು ಪೂರ್ಣಗೊಳಿಸಿದ್ದರೆ ಸ್ಥಳೀಯರಿಗೆ ಅನುಕೂಲವಾಗುತ್ತಿತ್ತು' ಎಂದು ಗ್ರಾಮದ ಯೋಗೇಶ್ ಹೇಳಿದರು.

ಬೇಲಿ ಮುರಿದು ದಾಟುವ ಜನ

ಒಂದೂವರೆ ವರ್ಷದ ಹಿಂದೆ ಹೆದ್ದಾರಿ ಸಂಚಾರಕ್ಕೆ ಮುಕ್ತವಾದಾಗಿನಿಂದ ಒಂದು ಬದಿಯಿಂದ ಮತ್ತೊಂದು ಬದಿಗೆ ದಾಟಲು ಸ್ಥಳೀಯರು ಹಾಗೂ ಉದ್ಯೋಗಿಗಳು ಪರದಾಡುತ್ತಿದ್ದಾರೆ. ರೈತರು ತಮ್ಮ ದನಕರುಗಳನ್ನು ಹೆದ್ದಾರಿಯಾಚೆ ಇರುವ ಜಮೀನಿಗೆ ಕರೆದೊಯ್ಯುವುದು ದೊಡ್ಡ ಸವಾಲಾಗಿದೆ. ಹಾಗಾಗಿ, ಹೆದ್ದಾರಿಯ ಎರಡೂ ಬದಿ ಅಳವಡಿಸಿರುವ ತಂತಿ ಬೇಲಿಯನ್ನು ಕತ್ತರಿಸಿ ರಸ್ತೆ ದಾಟಲು ವ್ಯವಸ್ಥೆ ಮಾಡಿಕೊಂಡಿದ್ದಾರೆ.

'ಬೆಳಿಗ್ಗೆ– ಸಂಜೆ ಹೆದ್ದಾರಿ ದಾಟುವವರು ಹೆಚ್ಚು. ವೇಗವಾಗಿ ಸಂಚರಿಸುವ ವಾಹನಗಳನ್ನು ಲೆಕ್ಕಿಸದೆ ಹೆದ್ದಾರಿ ದಾಟುವ ಉದ್ಯೋಗಿಗಳು, ರೈತರು ಸೇರಿದಂತೆ ಸ್ಥಳೀಯರು ಅಪಘಾತಕ್ಕೀಡಾಗಿದ್ದಾರೆ. ಕೆಲವರು ಪ್ರಾಣ ಕಳೆದುಕೊಂಡಿದ್ದರೆ, ಉಳಿದವರು ಗಾಯಾಳುಗಳಾಗಿದ್ದಾರೆ. ಹೆದ್ದಾರಿ ಪ್ರಾಧಿಕಾರದವರು ಆದಷ್ಟು ಬೇಗ ಪಾದಚಾರಿ ಮೇಲ್ಸೇತುವೆ ಪೂರ್ಣಗೊಳಿಸಬೇಕು' ಎಂದು ಮಂಚನಾಯಕನಹಳ್ಳಿಯ ಶಿವಕುಮಾರ್ ಒತ್ತಾಯಿಸಿದರು.

ಎಲ್ಲೆಲ್ಲಿ ಮೇಲ್ಸೇತುವೆ?

- **ಬೆಂಗಳೂರು:** ಕಣಿಮಿಣಿಕೆ
- **ರಾಮನಗರ:** ಮಂಚನಾಯಕನಹಳ್ಳಿ, ಕಲ್ಲು-ಗೋಪನಹಳ್ಳಿ
- **ಮಂಡ್ಯ:** ಎಚ್.ಹೊಸದೊಡ್ಡಿ, ಮಾದಾಪುರ, ದಬ್ಬನಗೊಂಡ, ರುದ್ರಾಕ್ಷಿ ಪುರ, ಅಗರಲಿಂಗನದೊಡ್ಡಿ, ಮೊಬ್ಬಲಗೆರೆ, ಗೆಜ್ಜಲಗೆರೆ ಕೈಗಾರಿಕಾ ಪ್ರದೇಶ, ಗೆಜ್ಜಲಗೆರೆ, ಕೆಎಂಎಫ್ ಗೆಜ್ಜಲಗೆರೆ, ಬಿ. ಗೌಡಗೆರೆ, ಬೂದನೂರು–2, ಕಾಳೇನಹಳ್ಳಿ–2, ರಾಗಿ-ಮುದ್ದನಹಳ್ಳಿ, ಸಿದ್ದಾಪುರ, ಗಣಂಗೂರು, ಗೌಡಹಳ್ಳಿ
- **ಮೈಸೂರು:** ಬ್ರಹ್ಮಪುರ, ಕಳಸ್ತವಾಡಿ, ಸಿದ್ದಲಿಂಗಪುರ

'ಸಾಮಾಜಿಕ ನ್ಯಾಯದ ವಿಚಾರದಲ್ಲಿ ರಾಜಿ ಇಲ್ಲ'

ಒಳ ಮೀಸಲಾತಿ ಜಾರಿ ನಿರ್ಣಯ • ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗೆ ಮಾದಿಗ ಸಮುದಾಯದ ಅಭಿನಂದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಮಾಜಿಕ ನ್ಯಾಯದ ವಿಚಾರದಲ್ಲಿ ರಾಜಿ ಮಾಡಿಕೊಳ್ಳದೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಒಳ ಮೀಸಲಾತಿ ಪರವಾಗಿ ನಿರ್ಣಯ ತೆಗೆದುಕೊಂಡಿದ್ದೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಒಳ ಮೀಸಲಾತಿ ಜಾರಿಗೆ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ತೆಗೆದುಕೊಂಡ ಕಾರಣಕ್ಕೆ ತಮ್ಮನ್ನು ಅಭಿನಂದಿಸಿದ ಮಾದಿಗ ಸಮುದಾಯದ ಮುಖಂಡರು ಮತ್ತು ಒಳಮೀಸಲಾತಿ ಹೋರಾಟದ ನಾಯಕರನ್ನು ಉದ್ದೇಶಿಸಿ ಮಾತನಾಡಿದ ಅವರು, 'ಸಾಮಾಜಿಕ ನ್ಯಾಯ ಹಾಗೆಯೇ ಬರುವುದಿಲ್ಲ. ಇಂತಹ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ' ಎಂದರು.

'ಮಾದಿಗ ಸಮುದಾಯ ಒಳ ಮೀಸಲಾತಿಗಾಗಿ ದಶಕಗಳಿಂದ ಹೋರಾಟ ನಡೆಸಿದೆ. ಸುಪ್ರೀಂಕೋರ್ಟ್ ಕೂಡ ಈಗ ತೀರ್ಪು ನೀಡಿದೆ. ನಾವು ಜಾರಿ ಮಾಡಲೇಬೇಕಿದೆ. 101 ಪರಿಶಿಷ್ಟ ಜಾತಿಗಳಿವೆ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಮುಖ್ಯ. ಎಲ್ಲರನ್ನೂ ಸಮಾಧಾನ ಮಾಡಲು ಸಾಧ್ಯ ಇಲ್ಲದಿದ್ದರೂ ಶೇ 90ರಷ್ಟು ಸಮುದಾಯಗಳಿಗೆ ಸಮಾಧಾನ ಆಗುವ ತೀರ್ಮಾನವನ್ನು ನಮ್ಮ ಸರ್ಕಾರ ಮಾಡಲಿದೆ' ಎಂದರು.

'ಗೃಹ ಸಚಿವ ಜಿ. ಪರಮೇಶ್ವರ ಅವರ ನಿವಾಸದಲ್ಲಿ ನಡೆದ ದಲಿತ ಶಾಸಕರ ಸಭೆಯಲ್ಲಿ, ಒಳ ಮೀಸಲಾತಿಗೆ ಯಾವುದೇ ವಿರೋಧ ಇಲ್ಲ ಎನ್ನುವ ನಿರ್ಣಯ ತೆಗೆದುಕೊಳ್ಳಲಾಗಿತ್ತು. ಹೀಗಾಗಿ ಎಲ್ಲರೂ ಒಳಮೀಸಲಾತಿ ಪರವಾಗಿದ್ದಾರೆ. ತೆಲಂಗಾಣ ಸರ್ಕಾರ ಈಗಾಗಲೇ ಒಳ ಮೀಸಲಾತಿ ಜಾರಿಗೆ ಆಯೋಗ ರಚಿಸಿದೆ. ಅಲ್ಲಿನ ಮುಖ್ಯಮಂತ್ರಿ ಜೊತೆಗೂ ಇತ್ತೀಚೆಗೆ ಮೈಸೂರಿನಲ್ಲಿ ಈ ಬಗ್ಗೆ ಚರ್ಚೆ ಮಾಡಿದ್ದೇನೆ. ಹರಿಯಾಣದಲ್ಲೂ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ಆಗಿದೆ. ಆದರೆ ಆದೇಶ ಆಗಿಲ್ಲ' ಎಂದರು.

'ಸೋಮವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಎಚ್.ಸಿ. ಮಹದೇವಪ್ಪ ಅವರು ಒಳಮೀಸಲಾತಿ ವಿಚಾರ ಪ್ರಸ್ತಾಪಿಸಿದರು. ಪ್ರಿಯಾಂಕ್ ಖರ್ಗೆ, ಆರ್.ಬಿ. ತಿಮ್ಮಾಪುರ, ಕೆ.ಎಚ್. ಮುನಿಯಪ್ಪ ಸೇರಿದಂತೆ ಎಲ್ಲರೂ ಒಳ ಮೀಸಲಾತಿಗೆ ಒಪ್ಪಿಗೆ ಸೂಚಿಸಿದರು. ಯಾರೂ ವಿರೋಧ ವ್ಯಕ್ತಪಡಿಸಲಿಲ್ಲ. ಆದರೆ, ಪರಿಶೀಲನಾರ್ಹ ದತ್ತಾಂಶ ಅಗತ್ಯವಿದೆ ಎನ್ನುವ ಸಂಗತಿ ಚರ್ಚೆಗೆ ಬಂತು. ಹೀಗಾಗಿ, ಈ ಬಗ್ಗೆ ಪರಾಮರ್ಶೆಗೆ ಆಯೋಗ ರಚಿಸಲು ನಿರ್ಧರಿಸಿದ್ದೇವೆ. ಆಯೋಗ ನಿಗದಿತ ಅವಧಿಯ ಒಳಗೆ ವರದಿ ನೀಡುವ ನಿರೀಕ್ಷೆ ಇದೆ. ವರದಿ ಬಂದ ತಕ್ಷಣ ಒಳ ಮೀಸಲಾತಿ ಜಾರಿ ಮಾಡಲಾಗುವುದು' ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮಾದಿಗ ಸಮುದಾಯದ ಮುಖಂಡರು ಮತ್ತು ಒಳಮೀಸಲಾತಿ ಹೋರಾಟದ ನಾಯಕರು ಮಂಗಳವಾರ ಅಭಿನಂದಿಸಿದರು. ಮಾಜಿ ಸಚಿವ ಎಚ್. ಆಂಜನೇಯ, ಸಚಿವ ಆರ್.ಬಿ. ತಿಮ್ಮಾಪುರ, ರಾಜ್ಯ ಸಭೆಯ ಮಾಜಿ ಸದಸ್ಯ ಎಲ್. ಹನುಮಂತಯ್ಯ ಮುಂತಾದವರು ಇದ್ದರು

> **ಮಾದಿಗ ಸಮುದಾಯದ ಭಾಗ್ಯದ ಬಾಗಿಲು ಮುಖ್ಯಮಂತ್ರಿ ಸಿದ್ದರಾಮಯ್ಯ ತೆರೆದಿದ್ದಾರೆ. ಇಡೀ ಸಮುದಾಯ ಅವರ ಬೆನ್ನಿಗೆ ನಿಲ್ಲಲಿದೆ**
> **ಎಚ್. ಆಂಜನೇಯ** ಮಾಜಿ ಸಚಿವ

> **ಹೋರಾಟಕ್ಕೆ ಅ. 28 ಚರಿತ್ರಾರ್ಹ ದಿನ. ಉಳಿದ ಯಾರೇ ಆಗಲಿ ಈ ಗಟ್ಟಿತನ ತೋರುತ್ತಿರಲಿಲ್ಲ. ಸಿದ್ದರಾಮಯ್ಯನವರು ಇದ್ದ ಕಾರಣಕ್ಕೆ ಇದು ಸಾಧ್ಯವಾಗಿದೆ**
> **ಆರ್.ಬಿ. ತಿಮ್ಮಾಪುರ** ಅಬಕಾರಿ ಸಚಿವ

> **ನಮ್ಮ ಸಿದ್ದರಾಮಯ್ಯ ಅವರು ಸಾಹು ಮಹಾರಾಜ್ ಮತ್ತು ನಾಲ್ವಡಿ ಅರಸರ ಪರಂಪರೆಯವರು. ಹೀಗಾಗಿಯೇ, ಒಳ ಮೀಸಲಾತಿ ಜಾರಿ ನಿರ್ಣಯ ಕೈಗೊಳ್ಳಲು ಸಾಧ್ಯವಾಗಿದೆ**
> **ಎಲ್. ಹನುಮಂತಯ್ಯ** ರಾಜ್ಯಸಭೆ ಮಾಜಿ ಸದಸ್ಯ

'ಒಳ ಮೀಸಲಾತಿ ಶೀಘ್ರ ಜಾರಿಗೆ ತರಬೇಕು'

'ಒಳ ಮೀಸಲಾತಿ ಆದಷ್ಟು ಶೀಘ್ರ ಜಾರಿಗೆ ತರಬೇಕು. ಈ ಬಗ್ಗೆ ಪರಾಮರ್ಶಿಸಲು ರಚಿಸಲಾಗುವ ಆಯೋಗಕ್ಕೆ ವರದಿ ನೀಡಲು ಮೂರು ತಿಂಗಳಿಗಿಂತ ಹೆಚ್ಚು ಕಾಲಾವಕಾಶ ನೀಡಬಾರದು' ಎಂದು ಮಾಜಿ ಸಚಿವರಾದ ಎಚ್. ಆಂಜನೇಯ, ಶಿವಣ್ಣ, ಮಾಜಿ ಸಂಸದರಾದ ಬಿ.ಎನ್. ಚಂದ್ರಪ್ಪ, ಎಲ್. ಹನುಮಂತಯ್ಯ ನೇತೃತ್ವದ ನಿಯೋಗ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಸದಾಶಿವನಗರದಲ್ಲಿರುವ ಮನೆಯಲ್ಲಿ ಭೇಟಿ ಮಾಡಿ ಮನವಿ ಮಾಡಿತು.

ಆಗ ಪ್ರತಿಕ್ರಿಯಿಸಿದ ಶಿವಕುಮಾರ್, 'ಚುನಾವಣಾ ಪ್ರಣಾಳಿಕೆಯಲ್ಲಿಯೇ 'ಒಳ ಮೀಸಲಾತಿ ಜಾರಿ ಭರವಸೆ ನೀಡಿದ್ದೆವು. ಚಿತ್ರದುರ್ಗದ ಸಮಾವೇಶದಲ್ಲೂ ಮಾತು ಕೊಟ್ಟಿದ್ದೆವು. ಅದಕ್ಕೆ ನಾವು ಬದ್ಧರಾಗಿದ್ದೇವೆ. ಒಳ ಮೀಸಲಾತಿ ವಿಚಾರದಲ್ಲಿ ಪರಿಶೀಲನಾರ್ಹ ದತ್ತಾಂಶವನ್ನು ಪರಿಗಣಿಸಬೇಕು ಮತ್ತು ಎಲ್ಲ ವರ್ಗಕ್ಕೂ ನ್ಯಾಯ ಸಿಗಬೇಕು ಎಂಬ ಉದ್ದೇಶದಿಂದ ಆಯೋಗ ರಚಿಸಲು ತೀರ್ಮಾನಿಸಲಾಗಿದೆ' ಎಂದರು.

'ಮತ್ತೊಂದು ಆಯೋಗ ಅನಗತ್ಯ'

ಬೆಂಗಳೂರು: ಕಾಂತರಾಜ ವರದಿ ಮತ್ತು ಸದಾಶಿವ ಆಯೋಗದ ವರದಿಯ ಮಾಹಿತಿ ಆಧಾರದಲ್ಲಿ ಒಳಮೀಸಲಾತಿ ನೀಡಬೇಕು. ಮತ್ತೊಂದು ಆಯೋಗ ರಚನೆಯ ಅಗತ್ಯವಿಲ್ಲ ಎಂದು ಕೇಂದ್ರದ ಮಾಜಿ ಸಚಿವ ಎ.ನಾರಾಯಣಸ್ವಾಮಿ ಹೇಳಿದರು.

'ಕಾಂತರಾಜ ವರದಿ ನಿಮ್ಮ ಬಳಿಯೇ ಇದೆ. ನಮ್ಮ ಕಣ್ಣೊರೆಸಲು, ಸಮಾಜದ ದಿಕ್ಕು ತಪ್ಪಿಸಲು, ಒಳ ಮೀಸಲಾತಿ ಕೊಡುವುದನ್ನು ತಪ್ಪಿಸಲು ಹೊಸ ಆಯೋಗದ ರಚನೆಗೆ ಮುಂದಾಗಿದೆ' ಎಂದು ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ದೂರಿದರು.

'ಮತ್ತೊಮ್ಮೆ ಹೊಸ ಅಂಕಿ– ಅಂಶ ಪಡೆಯವುದು ಸುಲಭವಲ್ಲ. ಅದಕ್ಕೆ ವರ್ಷಗಟ್ಟಲೆ ಕಾಯ ಬೇಕಾಗಬಹುದು. ಕಾಂಗ್ರೆಸ್ ಪಕ್ಷಕ್ಕೆ ಒಳಮೀಸಲಾತಿ ಜಾರಿ ಮಾಡುವ ಇಚ್ಛಾ ಶಕ್ತಿ ಇಲ್ಲ ಎಂಬುದು ಮನವರಿಕೆ ಆಗುತ್ತಿದೆ. ಒಳಮೀಸಲಾತಿಗೆ ಆಯೋಗದ ಮೇಲೆ ಆಯೋಗ ರಚಿಸಿದರೆ ಏನು ಪ್ರಯೋಜನ? ಎಷ್ಟು ದಶಕಗಳು ಕಾಯಬೇಕು' ಎಂದು ಪ್ರಶ್ನಿಸಿದರು.

ಜಾತಿವಾರು ಜನಗಣತಿ ವರದಿ ಬಿಡುಗಡೆ ಏಕಿಲ್ಲ?: ಎಚ್.ಡಿ.ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಾತಿವಾರು ಜನಗಣತಿ ವರದಿಯನ್ನು ಸರ್ಕಾರ ಇನ್ನೂ ಏಕೆ ಬಿಡುಗಡೆ ಮಾಡಿಲ್ಲ. ಕಾಂತರಾಜ ಮತ್ತು ಜಯಪ್ರಕಾಶ್ ಹೆಗ್ಡೆ ಅವರ ವರದಿ ಸ್ವೀಕರಿಸಿ ಎಷ್ಟು ದಿನ ಆಯಿತು? ಅದನ್ನು ಇಟ್ಟುಕೊಂಡು ಏನು ಮಾಡುತ್ತಿದ್ದೀರಾ?' ಎಂದು ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕುಮಾರಸ್ವಾಮಿ ವರದಿ ಸ್ವೀಕರಿಸಿರಲಿಲ್ಲವೆಂದು ಸಿದ್ದರಾಮಯ್ಯ ಆರೋಪಿಸಿದ್ದರು. ಅಧಿಕಾರಕ್ಕೆ ಬಂದು ಒಂದೂವರೆ ವರ್ಷ ಆಯಿತು. ಕಾಂತರಾಜ ವರದಿ ಇಟ್ಟುಕೊಂಡು ಗಂಧದ ಕಡ್ಡಿ ಹಚ್ಚಿ ಬೆಳಗುತ್ತಿದ್ದಾರೆಯೇ? ಉಪ ಸಮಿತಿ ರಚಿಸುವುದಾಗಿ ಹೇಳುತ್ತಿದ್ದಾರೆ. ಇಂತಹ ಸಬೂಬು ಹೇಳಿ ಎಷ್ಟು ದಿನ ಕಳೆಯುತ್ತೀರಾ? ಚುನಾವಣೆ ಘೋಷಣೆ ಆಗಿದ್ದು ಈಗ. ಲೋಕಸಭೆ ಚುನಾವಣೆ ಮುಂಚೆ ವರದಿ ಸ್ವೀಕಾರ ಮಾಡಿದ್ದೀರಿ. ಯಾಕೆ ಬಿಡುಗಡೆ ಮಾಡಲಿಲ್ಲ' ಎಂದು ಪ್ರಶ್ನಿಸಿದರು.

'ಚನ್ನಪಟ್ಟಣ ಕ್ಷೇತ್ರದ ಉಪ ಚುನಾವಣೆಯಲ್ಲಿ ನನ್ನ ಹಾಗೂ ನನ್ನ ತಂದೆ ದೇವೇಗೌಡರ ಬಗ್ಗೆ ಕಾಂಗ್ರೆಸ್ ನಾಯಕರು ಮಾಡುತ್ತಿರುವ ಅವಹೇಳನಕಾರಿ ಟೀಕೆಗಳಿಗೆ ಈಗ ಉತ್ತರ ಕೊಡುವುದಿಲ್ಲ. ಚುನಾವಣೆ ಮುಗಿದು ಫಲಿತಾಂಶ ಹೊರಬಂದ ಮೇಲೆ ಉತ್ತರಿಸುತ್ತೇನೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ದೇವೇಗೌಡರ ಆರೋಗ್ಯದಿಂದ ಹಿಡಿದು ನಮ್ಮ ಪಕ್ಷದ ಹಲವಾರು ನಿರ್ಧಾರ, ನನ್ನ ಹಾಗೂ ಕುಟುಂಬದ ಬಗ್ಗೆ ಕಾಂಗ್ರೆಸ್ ನಾಯಕರು ಮಾತನಾಡುತ್ತಿದ್ದಾರೆ. ಇವರಿಗೆ ಜನರೇ ತಕ್ಕಪಾಠ ಕಲಿಸಲಿದ್ದಾರೆ. ಅವರೊಬ್ಬರೇ ಒಕ್ಕಲಿಗರಾ? ನಾವೂ ಒಕ್ಕಲಿಗರೇ ಎಂದು ಚರ್ಚೆ ಮಾಡುತ್ತಿದ್ದಾರೆ. ಎಲ್ಲದಕ್ಕೂ ಫಲಿತಾಂಶದ ನಂತರ ಉತ್ತರ ಕೊಡುತ್ತೇನೆ' ಎಂದರು.

ದುಬೈನಲ್ಲಿ ನಡೆದ ನಾಡಪ್ರಭು ಕೆಂಪೇಗೌಡರ ಉತ್ಸವದಲ್ಲಿ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿದರು. ಉಪೇಂದ್ರ, ಟಿ.ಎಸ್. ನಾಗಾಭರಣ, ಅಶ್ವತ್ಥ ನಾರಾಯಣ, ಸಚಿವ ಕೆ. ವೆಂಕಟೇಶ್, ಸಿ.ಟಿ. ರವಿ ಇದ್ದರು

ದುಬೈನಲ್ಲಿ ಕೆಂಪೇಗೌಡ ಉತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡರ ಸ್ಮರಣೆಗಾಗಿ ಕನ್ನಡ ಪರಂಪರೆ ಮತ್ತು ಸಂಸ್ಕೃತಿಯನ್ನು ಸ್ಮರಿಸುವ ಉತ್ಸವ ದುಬೈನಲ್ಲಿ ಈಚೆಗೆ ಅದ್ದೂರಿಯಾಗಿ ನೆರವೇರಿತು.

ದುಬೈನ ಕನ್ನಡ ಒಕ್ಕೂಟಗಳು ಮತ್ತು ದುಬೈ ಒಕ್ಕಲಿಗರ ಸಂಘದ ಸಹಯೋಗದೊಂದಿಗೆ ನಡೆದ ಈ ಕಾರ್ಯಕ್ರಮದಲ್ಲಿ ಅಪಾರ ಸಂಖ್ಯೆಯ ಕನ್ನಡಿಗರು ಮತ್ತು ರಾಜ್ಯದ ಅತಿಥಿಗಳು ಭಾಗವಹಿಸಿದ್ದರು.

ಕಾರ್ಯಕ್ರಮ ಉದ್ಘಾಟಿಸಿದ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ, 'ಕನ್ನಡಿಗರ ಏಕತೆಯ ಪ್ರತಿಬಿಂಬ ಈ ಉತ್ಸವ. ಕನ್ನಡ ನಾಡು ಮತ್ತು ಭಾವೈಕ್ಯತೆಯನ್ನು ಜಾಗೃತಗೊಳಿಸುವ ಮಹತ್ವದ ಕಾರ್ಯವಾಗಿದೆ. ಈ ಉತ್ಸವ ಕೆಂಪೇಗೌಡರ ಆದರ್ಶಗಳನ್ನು ಸ್ಮರಿಸುವ ಮತ್ತು ಪ್ರೇರಣೆ ಮಾಡುವ ಕೆಲಸ ಮಾಡಲಿದೆ' ಎಂದು ತಿಳಿಸಿದರು.

ಇದೇ ವೇಳೆ ರಾಜ್ಯದ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು. ಪಶುಸಂಗೋಪನಾ ಸಚಿವ ಕೆ. ವೆಂಕಟೇಶ್, ಶಾಸಕರಾದ ಡಾ. ಸಿ.ಎನ್. ಅಶ್ವತ್ಥ ನಾರಾಯಣ, ರವಿಕುಮಾರ್ ಗಣಿಗ, ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ, ಚಿತ್ರನಟ ಉಪೇಂದ್ರ ಭಾಗವಹಿಸಿದ್ದರು.

ಕಾರ್ಯಕ್ರಮದ ಮುಖ್ಯ ಸಂಘಟಕ ಕಿರಣ್ ಗೌಡ, 'ನಮ್ಮ ಪರಂಪರೆ, ಸಂಸ್ಕೃತಿ ಮತ್ತು ಕೆಂಪೇಗೌಡರ ಆದರ್ಶಗಳನ್ನು ಮುಂದಿನ ತಲೆಮಾರಿಗೂ ಪರಿಚಯಿಸಲು ಈ ಉತ್ಸವ ಮಾದರಿಯಾಗಿದೆ' ಎಂದು ಸಂತಸ ವ್ಯಕ್ತಪಡಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮ, ಸಂಗೀತ, ನೃತ್ಯ ಪ್ರದರ್ಶನ ನಡೆಯಿತು.

ನೀರಿನ ಸುಸ್ಥಿರ ಬಳಕೆಯಲ್ಲಿ ಅರಿವಿನ ಕೊರತೆ: ಕೃಷ್ಣ ಬೈರೇಗೌಡ

ಬೃಹತ್ ಜಲ ಮೂಲಗಳನ್ನು ವಿವೇಚನಾರಹಿತವಾಗಿ ಬಳಸುವಿಕೆ: ನೀರು, ಸುಸ್ಥಿರತೆ ಶೃಂಗಸಭೆಯಲ್ಲಿ ಸಚಿವರ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೀರಿನ ಸುಸ್ಥಿರ ಬಳಕೆಗೆ ಸಂಬಂಧಿಸಿದಂತೆ ಜನರಲ್ಲಿ ಅರಿವಿನ ಕೊರತೆ ಇದೆ. ಈ ಬಗ್ಗೆ ಎಚ್ಚೆತ್ತುಕೊಂಡಿರುವ ರಾಜ್ಯ ಸರ್ಕಾರವು ಕ್ರಮ ತೆಗೆದುಕೊಂಡಿದೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಮಂಗಳವಾರ ಆಯೋಜಿಸಿದ್ದ, 'ನೀರು ಮತ್ತು ನೈರ್ಮಲ್ಯ, ಸುಸ್ಥಿರತೆ' ಶೃಂಗಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ನೀರಿನ ದೊಡ್ಡ ಮೂಲಗಳನ್ನು ವಿವೇಚನಾರಹಿತವಾಗಿ ಬಳಸಲಾಗುತ್ತಿದೆ ಮತ್ತು ಕಲುಷಿತಗೊಳಿಸಲಾಗುತ್ತಿದೆ. ನೀರಾವರಿ ಪ್ರದೇಶಗಳಲ್ಲಿ ಬಳಕೆ ಯಥೇಚ್ಛವಾಗಿದ್ದರೆ, ಒಣ ಪ್ರದೇಶಗಳಲ್ಲಿ ತೀವ್ರ ಕೊರತೆ ಇದೆ. ನೀರಿನ ಸುಸ್ಥಿರ ಬಳಕೆ ಬಗ್ಗೆ ಅರಿವು ಇಲ್ಲದೇ ಇರುವುದರಿಂದಲೇ ಹೀಗಾಗುತ್ತಿದೆ' ಎಂದರು.

'ನೈರ್ಮಲ್ಯದಲ್ಲೂ ನಾವು ಹಿಂದೆ ಉಳಿದಿದ್ದೇವೆ. ಸ್ವಚ್ಛಭಾರತ ಯೋಜನೆಯಿಂದ ಪರಿಸ್ಥಿತಿ ಸ್ವಲ್ಪ ಸುಧಾರಿಸಿದರೂ, ವೈಜ್ಞಾನಿಕವಾಗಿ ತ್ಯಾಜ್ಯ ವಿಲೇವಾರಿ ಮಾಡುವಲ್ಲಿ ಹಿಂದಿದ್ದೇವೆ. ಈ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಸಂಬಂಧಿತ ಇಲಾಖೆಗಳು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು' ಎಂದರು.

'ಈ ಮೊದಲು ಮನೆ–ಮನೆಗೆ ಕುಡಿಯುವ ನೀರು ಪೂರೈಕೆಯಲ್ಲಿ ಹಿಂದುಳಿದಿದ್ದೆವು. ಈಗ ಎಲ್ಲ ಮನೆಗಳಿಗೆ ಕುಡಿಯುವ ನೀರು ಪೂರೈಕೆ ಸಾಧ್ಯವಾಗುತ್ತಿಲ್ಲವಾದರೂ, ಗಣನೀಯ ಪ್ರಗತಿ ಸಾಧಿಸಿದ್ದೇವೆ. ಪ್ರತಿದಿನ ಮನೆಮನೆಗೆ ಕನಿಷ್ಠ 55 ಲೀಟರ್‌ನಷ್ಟು ಕುಡಿಯುವ ನೀರು ಒದಗಿಸುವ ಮಟ್ಟಕ್ಕೆ ಬಂದಿದ್ದೇವೆ' ಎಂದರು.

'ಹವಾಮಾನ ವೈಪರೀತ್ಯ ಎದುರಿಸುವ ಸವಾಲು'

'ಅತಿಹೆಚ್ಚು ಮಳೆಯಾಗುವ ಮತ್ತು ಅತ್ಯಂತ ಒಣ ಪ್ರದೇಶಗಳೆರಡೂ ಕರ್ನಾಟಕದಲ್ಲಿವೆ. ಮುಂಗಾರು ಆರಂಭದಲ್ಲಿ ಮಳೆ ಕೊರತೆಯಾಗಿತ್ತು. ಮುಂಗಾರು ಅಂತ್ಯ ಮತ್ತು ಹಿಂಗಾರಿನ ಆರಂಭದ ವೇಳೆಗೆ ಅತಿವೃಷ್ಟಿಯಾಗಿದೆ. ಇಂತಹ ಹವಾಮಾನ ವೈಪರೀತ್ಯವನ್ನು ಎದುರಿಸುವ ಸವಾಲು ಇದೆ' ಎಂದು ಸಚಿವ ಕೃಷ್ಣ ಬೈರೇಗೌಡ ಹೇಳಿದರು.

'ಜುಲೈ 10ಕ್ಕೆ ಸರ್ವಪಕ್ಷಗಳ ಸಭೆ ಕರೆದು, ತಮಿಳುನಾಡಿಗೆ ನೀರು ಹರಿಸದೇ ಇರುವ ಬಗ್ಗೆ ಚರ್ಚೆ ನಡೆಸಲಾಗಿತ್ತು. ಜುಲೈ 22ರ ವೇಳೆಗೆ ಪ್ರವಾಹ ಸ್ಥಿತಿ ತಲೆದೋರಿತ್ತು. 12 ದಿನಗಳಲ್ಲಿ ಬರದ ಸ್ಥಿತಿ ಬದಲಾಗಿ ಪ್ರವಾಹ ತಲೆದೋರಿತ್ತು. ಸೆಪ್ಟೆಂಬರ್‌ನಲ್ಲಿ ಬೆಂಗಳೂರಿನಲ್ಲಿ ಶೇ 78ರಷ್ಟು ಮಳೆ ಕೊರತೆಯಾಗಿತ್ತು, ಅಕ್ಟೋಬರ್‌ನಲ್ಲಿ ದಾಖಲೆಯಷ್ಟು ಮಳೆ ಸುರಿಯಿತು. ಈ ಹಿಂದಿನಿಂದಲೂ ಇರುವ ಸಮಸ್ಯೆಗಳ ಜತೆಗೆ ಈ ಸ್ವರೂಪದ ಹೊಸ ಸಮಸ್ಯೆಗಳೂ ಎದುರಾಗುತ್ತಿವೆ' ಎಂದರು.

'ನೀರು ಮತ್ತು ನೈರ್ಮಲ್ಯ, ಸುಸ್ಥಿರತೆ' ಶೃಂಗಸಭೆಯಲ್ಲಿ ಸಚಿವರಾದ ಪ್ರಿಯಾಂಕ್ ಖರ್ಗೆ ಮತ್ತು ಕೃಷ್ಣ ಬೈರೇಗೌಡ ಚರ್ಚೆ ನಡೆಸಿದರು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಾದ ಅಂಜುಂ ಪರ್ವೇಜ್, ಉಮಾ ಮಹದೇವನ್, ಕಿಯೋನಿಕ್ಸ್ ಅಧ್ಯಕ್ಷ ಶರತ್ ಬಚ್ಚೇಗೌಡ ಮತ್ತು ಇಸ್ರೇಲ್ ನಿಯೋಗದ ಪ್ರತಿನಿಧಿ ಇವೂಟ್ ಡಿ ವಿಟ್ ಇದ್ದರು ಪ್ರಜಾವಾಣಿ ಚಿತ್ರ

ಚಿತ್ರಾವಳಿ

ಸಾಕ್ರ ವರ್ಲ್ಡ್ ಆಸ್ಪತ್ರೆಯು ವಿಶ್ವ ಪಾರ್ಶ್ವವಾಯು ದಿನಾಚರಣೆ ಅಂಗವಾಗಿ 'ರೈಸ್ ಅಬೌವ್ ಸ್ಟ್ರೋಕ್' ಶೀರ್ಷಿಕೆಯಡಿ ವಾಕಥಾನ್ ಆಯೋಜಿಸಿತ್ತು. ಸಾಕ್ರ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಯುಚಿ ನಗಾನೊ, ಉಪ ವ್ಯವಸ್ಥಾಪಕ ನಿರ್ದೇಶಕ ನವೋಯಾ ಮಾಟ್ಸುಮಿ ಹಾಗೂ ವೈದ್ಯ ಸಿಬ್ಬಂದಿ ಭಾಗವಹಿಸಿದ್ದರು

ವಚನಜ್ಯೋತಿ ಬಳಗ ಆಯೋಜಿಸಿದ್ದ ಘಟ್ಟಿವಾಳಯ್ಯ ಜಯಂತಿಯಲ್ಲಿ ವಕೀಲ ಗಂಗಾಧರಪ್ಪ ದಂಪತಿಯನ್ನು ಸನ್ಮಾನಿಸಲಾಯಿತು. ಬಳಗದ ಪಿನಾಕಪಾಣಿ, ಪ್ರಭು ಇಸುವನಹಳ್ಳಿ, ಉಪನ್ಯಾಸಕಿ ಸುಜಾತ ಮೇಲೇಗೌಡ, ದಾಸರಹಳ್ಳಿ ಲಿಂಗಾಯತ ಸಂಘದ ಅಧ್ಯಕ್ಷ ಸುರೇಶ್, ವಿಶ್ವಬಸವಸೇನೆಯ ಮಹೇಶ್ವರ ಕಲ್ಬುರೆ ಉಪಸ್ಥಿತರಿದ್ದರು

ಬಜೆಟ್‌ನಲ್ಲಿ ₹3 ಲಕ್ಷ ಕೋಟಿ ಅನುದಾನ ಮೀಸಲು: ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ

ಕೌಶಲ ಆಧಾರಿತ ಉದ್ಯೋಗ ಸೃಷ್ಟಿಗೆ ಒತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೌಶಲ ಆಧಾರಿತ ಉದ್ಯೋಗ ಸೃಷ್ಟಿಗೆ ಕೇಂದ್ರ ಸರ್ಕಾರ ಒತ್ತು ನೀಡುತ್ತಿದ್ದು, ಬಜೆಟ್‌ನಲ್ಲಿ ₹ 3 ಲಕ್ಷ ಕೋಟಿ ಅನುದಾನ ಮೀಸಲಿಡಲಾಗಿದೆ ಎಂದು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ನಗರದ ಸೆಂಟ್ರಲ್ ಕಾಲೇಜಿನಲ್ಲಿ ಅಂಚೆ ಇಲಾಖೆ ಮಂಗಳವಾರ ಆಯೋಜಿಸಿದ್ದ ಉದ್ಯೋಗ ಮೇಳ ಕಾರ್ಯಕ್ರಮದಲ್ಲಿ ಸಾಂಕೇತಿಕವಾಗಿ 25 ಮಂದಿಗೆ ನೇಮಕಾತಿ ಪತ್ರ ವಿತರಿಸಿ ಅವರು ಮಾತನಾಡಿದರು.

ಕೇಂದ್ರ ಸರ್ಕಾರದ 12 ಇಲಾಖೆಗಳಲ್ಲಿ ನೇಮಕಾತಿ ಮಾಡಿಕೊಳ್ಳಲಾಗಿದೆ. 2047ಕ್ಕೆ ವಿಕಸಿತ ಭಾರತ ಗುರಿ ತಲುಪಬೇಕೆಂಬ ಛಲದೊಂದಿಗೆ ಮೋದಿ ಅವರು ಕೌಶಲ ಆಧಾರಿತ ಉದ್ಯೋಗ ಸೃಷ್ಟಿಗೆ ಉತ್ತೇಜನ ಕೊಡುತ್ತಿದ್ದಾರೆ. 'ಮೇಕ್ ಇನ್ ಇಂಡಿಯಾ', 'ಆತ್ಮನಿರ್ಭರ ಭಾರತ' ಪರಿಕಲ್ಪನೆಗಳ ಅಡಿಯಲ್ಲಿ ಮೋದಿ ಅವರು, ಉದ್ಯೋಗ ಸೃಷ್ಟಿಗೆ ದೊಡ್ಡ ಪ್ರಮಾಣದಲ್ಲಿ ಉತ್ತೇಜನ ಕೊಡುತ್ತಿದ್ದಾರೆ. ಭಾರತವನ್ನು ಮೂರನೇ ಅತಿದೊಡ್ಡ ಆರ್ಥಿಕ ಶಕ್ತಿಯನ್ನಾಗಿ ರೂಪಿಸಲು ಇದು ಸಹಕಾರಿ ಆಗುತ್ತದೆ ಎಂದು ಹೇಳಿದರು.

ಅಂಚೆ ಇಲಾಖೆ ಕಾರ್ಯವನ್ನು ಶ್ಲಾಘಿಸಿದ ಸಚಿವರು, ಮೊದಲ ಹಂತದ ಉದ್ಯೋಗ ಮೇಳದಲ್ಲಿ ಇಲಾಖೆಯು 30 ಸಾವಿರ ಯುವ ಜನರಿಗೆ ಉದ್ಯೋಗ ನೀಡಿದೆ. ಎರಡನೇ ಹಂತದಲ್ಲಿ 20 ಸಾವಿರ ಮಂದಿಗೆ ಉದ್ಯೋಗ ನೀಡಿದೆ ಎಂದರು.

ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸಂಸದ ಡಾ. ಸಿ.ಎನ್.ಮಂಜುನಾಥ್ ಮಾತನಾಡಿ, 'ದೇಶದಲ್ಲಿ ನಿರುದ್ಯೋಗ ಸಮಸ್ಯೆ ಶೇಕಡ 8ರಿಂದ 7ಕ್ಕೆ ಇಳಿದಿದೆ. ಉದ್ಯೋಗಿಗಳು ಸಕಾರಾತ್ಮಕ ಮನೋಭಾವ ಬೆಳೆಸಿಕೊಂಡು, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು. ಕೇವಲ ಸರ್ಕಾರಿ ಕೆಲಸ ನೆಚ್ಚಿಕೊಳ್ಳಬಾರದು, ಖಾಸಗಿ ಸಂಸ್ಥೆಗಳಲ್ಲೂ ಸಿಗುವ ಉದ್ಯೋಗಾವಕಾಶ ಬಳಸಿಕೊಳ್ಳಬೇಕು. ಸ್ಪರ್ಧಾತ್ಮಕ ಜಗತ್ತಿನಲ್ಲಿ ಪದವಿ ಮುಖ್ಯವಲ್ಲ, ಕೌಶಲ ಇರಬೇಕು' ಎಂದು ಹೇಳಿದರು.

ಅಂಚೆ ಇಲಾಖೆಯ ಕರ್ನಾಟಕ ವೃತ್ತದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ರಾಜೇಂದ್ರ ಕುಮಾರ್ ಹಾಜರಿದ್ದರು. ಉದ್ಯೋಗ ಮೇಳದಲ್ಲಿ 160 ಮಂದಿ ಆಯ್ಕೆಯಾಗಿದ್ದಾರೆ.

ಬೆಂಗಳೂರಿನಲ್ಲಿ ಮಂಗಳವಾರ ಅಂಚೆ ಇಲಾಖೆ ಆಯೋಜಿಸಿದ್ದ ಉದ್ಯೋಗ ಮೇಳದಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ನೇಮಕಾತಿ ಪತ್ರ ವಿತರಿಸಿದರು. ಪೋಸ್ಟ್ ಮಾಸ್ಟರ್ ಜನರಲ್ ಎಸ್. ರಾಜೇಂದ್ರ ಕುಮಾರ್, ಸಂಸದ ಡಾ.ಸಿ.ಎನ್. ಮಂಜುನಾಥ್ ಇದ್ದರು ಪ್ರಜಾವಾಣಿ ಚಿತ್ರ

ಕಾಡಾನೆ ಸಾವು

ಹಾರೋಹಳ್ಳಿ ಆನೇಕಲ್ ರಸ್ತೆಯ ಉರುಗನದೊಡ್ಡಿ ಬಳಿ ಗೋಚರಿಸಿದ ಆನೆ ಕಳೇಬರ

ಹಾರೋಹಳ್ಳಿ: ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ ವ್ಯಾಪ್ತಿ ಉರುಗನದೊಡ್ಡಿ ಬಳಿ ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ಕಾಡಾನೆಯೊಂದು ಸೋಮವಾರ ಹೃದಯಾಘಾತದಿಂದ ಮೃತಪಟ್ಟಿದೆ.

ಸ್ಥಳಕ್ಕೆ ಬಂದ ವೈದ್ಯಾಧಿಕಾರಿಗಳು, ಪರೀಕ್ಷೆ ನಡೆಸಿ ಆನೆ ಹೃದಯಾಘಾತದಿಂದ ಮೃತಪಟ್ಟಿದೆ ಎಂದು ವರದಿ ನೀಡಿದ್ದಾರೆ.

ಆನೆ ಹಲವು ದಿನಗಳಿಂದ ಅನಾರೋಗ್ಯದಿಂದ ಬಳಲಿದ್ದು ರಸ್ತೆ ದಾಟುವ ವೇಳೆ ಹೃದಯಾಘಾತವಾಗಿ ಮೃತಪಟ್ಟಿದೆ ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.

ಉರುಗನದೊಡ್ಡಿ ತಾಲ್ಲೂಕಿನ ಗಡಿ ಭಾಗವಾಗಿದ್ದು ಆನೇಕಲ್‌ಗೆ ಹೊಂದಿಕೊಂಡಂತೆ ಇದೆ.

ತಂತ್ರಜ್ಞಾನ



ಟೋಲ್ ಬೂತ್‌ಗಳಲ್ಲಿ ವಾಹನಗಳ ಸರತಿ ಸಾಲು. (ಪ್ರಜಾವಾಣಿ ಸಂಗ್ರಹಚಿತ್ರ)

ವರ್ಚುವಲ್ ಟೋಲ್ ವ್ಯವಸ್ಥೆ

ಅವಿನಾಶ್ ಬಿ.

ಬೆಂಗಳೂರು-ಮೈಸೂರು ನಡುವಿನ ರಾಷ್ಟ್ರೀಯ ಹೆದ್ದಾರಿ 275 ಸಹಿತ ದೇಶದ ಹಲವಾರು ಪ್ರಮುಖ ಹೆದ್ದಾರಿಗಳಲ್ಲಿ ಉಪಗ್ರಹ ಆಧಾರಿತ ರಸ್ತೆ ಸುಂಕ ವಸೂಲಿ ಮಾಡುವ ವ್ಯವಸ್ಥೆಯನ್ನು ಇತ್ತೀಚೆಗೆ ಕೇಂದ್ರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು ಘೋಷಿಸಿದೆ. ದೇಶದಾದ್ಯಂತ ಟೋಲ್ ಬೂತ್‌ಗಳನ್ನು ಇಲ್ಲವಾಗಿಸುವ ಪ್ರಯತ್ನದ ಭಾಗವಿದು. ಟೋಲ್ ಬೂತ್‌ಗಳಲ್ಲಿ ಈ ಹಿಂದೆ ಇದ್ದ ನಗದು ವ್ಯವಸ್ಥೆ ಮತ್ತು ಈಗ ಇರುವ RFID ಆಧಾರಿತ ಫಾಸ್ಟ್ಯಾಗ್ ರೀಡಿಂಗ್ ವ್ಯವಸ್ಥೆಯ ಮೂಲಕ ಟೋಲ್ ಬೂತ್‌ಗಳಲ್ಲಿ ಗಂಟೆಗಟ್ಟಲೆ ಕಾಯಬೇಕಾದ ಪರಿಸ್ಥಿತಿ ಸುಧಾರಣೆಯಾಗಿಲ್ಲ. ಹೀಗಾಗಿ, ಟೋಲ್ ಬೂತ್‌ಗಳನ್ನೇ ರದ್ದು ಮಾಡಿ, ಸ್ವಯಂಚಾಲಿತ ಉಪಕರಣವೊಂದರ ಮೂಲಕ ಹೆದ್ದಾರಿ ಸುಂಕವನ್ನು ಲೆಕ್ಕಾಚಾರ ಹಾಕಿ, ಪ್ರೀಪೇಯ್ಡ್ ವ್ಯವಸ್ಥೆಯ ಮೂಲಕ ಸಂಗ್ರಹಿಸುವ ವ್ಯವಸ್ಥೆಯನ್ನು ಭಾರತ ಸರ್ಕಾರ ಪರಿಗಣಿಸಿದೆ.

ಏನಿದು ಜಿಎನ್‌ಎಸ್‌ಎಸ್ ಆಧಾರಿತ ಎಲೆಕ್ಟ್ರಾನಿಕ್ ಟೋಲ್ ಸಂಗ್ರಹಣೆ?: ಹಿಂದೊಮ್ಮೆ ಹೊಸದಾಗಿ ₹ 2 ಸಾವಿರ ಮುಖಬೆಲೆಯ ಕರೆನ್ಸಿ ನೋಟುಗಳು ಬಂದಾಗ, ಚರ್ಚೆಗೊಳಗಾದ ಒಂದು ವಿಚಾರ ನೆನಪಿರಬಹುದು. ಆ ನೋಟಿನೊಳಗೆ ಒಂದು ಚಿಪ್ ಇರಿಸಲಾಗುತ್ತದೆ, ನೋಟನ್ನು ಎಲ್ಲೇ ಬಚ್ಚಿಟ್ಟರೂ ಸುಲಭವಾಗಿ ಪತ್ತೆ ಮಾಡಬಹುದು ಅಂತ. ಈ ತಂತ್ರಜ್ಞಾನ ಅಸಾಧ್ಯವಾದುದೇನಲ್ಲ. ಇಂಥದ್ದೇ ತಂತ್ರಜ್ಞಾನ ಈಗಾಗಲೇ ಸಾಕಷ್ಟು ಸಾಧನಗಳಲ್ಲಿ, ಅಂದರೆ ಸ್ಮಾರ್ಟ್‌ಫೋನ್‌ಗಳಲ್ಲಿ, ಬ್ಯಾಗ್‌ಗಳಿಗೆ ಲಗತ್ತಿಸಬಹುದಾದ ಟ್ಯಾಗ್‌ಗಳಲ್ಲಿ, ಸ್ಮಾರ್ಟ್ ವಾಚ್‌ಗಳಲ್ಲಿ ಮತ್ತು ಫಿಟ್‌ನೆಸ್ ಟ್ರ್ಯಾಕರ್ ಆ್ಯಪ್‌ಗಳಲ್ಲಿ ಬಳಕೆಯಾಗುತ್ತಿದೆ. ಎಲ್ಲೇ ಇದ್ದರೂ ಅದನ್ನು ಪತ್ತೆ ಮಾಡುವುದು ಸುಲಭ. ಇದು ಗ್ಲೋಬಲ್ ಪೊಸಿಶನಿಂಗ್ ಸಿಸ್ಟಂ (ಜಿಪಿಎಸ್) ಎಂಬ ತಂತ್ರಜ್ಞಾನದ ಫಲ.

ಅದೇ ರೀತಿ, ನಮ್ಮ ಸ್ಮಾರ್ಟ್ ಫೋನ್‌ಗಳಲ್ಲಿರುವ ಮ್ಯಾಪ್ ಹೆಸರಿನ ಆ್ಯಪ್ ಹೇಗೆ ಕೆಲಸ ಮಾಡುತ್ತದೆ ಎಂಬ ಬಗ್ಗೆ ಯೋಚಿಸಿದರೆ, ನಾವು ಎಲ್ಲಿಗೆಲ್ಲ ಹೋಗುತ್ತೇವೆ, ಯಾವ ಗಲ್ಲಿಯಲ್ಲಿ ತಿರುಗುತ್ತೇವೆ, ಎಲ್ಲಿ ಬಲಕ್ಕೆ ಹೋಗಬೇಕು, ಎಲ್ಲಿ ಎಡಕ್ಕೆ ಹೊರಳಬೇಕು ಎಂಬಿತ್ಯಾದಿಯಾಗಿ ನಮ್ಮನ್ನು ಹಿಂಬಾಲಿಸುತ್ತಲೇ ನಮಗೆ 'ಮಾರ್ಗ'ದರ್ಶನ ಮಾಡುತ್ತಾ ಇರುತ್ತದೆಯಲ್ಲ ಆ್ಯಪ್? ಇಂಟರ್ನೆಟ್ ಇಲ್ಲದಿದ್ದರೂ, ನೇರವಾಗಿ ಬಾಹ್ಯಾಕಾಶದಲ್ಲಿ ಸಂಚರಿಸುತ್ತಿರುವ ಉಪಗ್ರಹಕ್ಕೆ ನೇರ ಸಂಪರ್ಕಿಸುವ ಜಿಪಿಎಸ್ ವ್ಯವಸ್ಥೆಯ ಮೂಲಕ ಇದು ಸಾಧ್ಯವಾಗುತ್ತದೆ.

ಇದೇ ಜಿಪಿಎಸ್ ಜೊತೆಗೆ ಭಾರತದ್ದೇ ಆದ ಜಿಪಿಎಸ್ ಆಧಾರಿತ ಜಿಯೋ ಆಗ್ಮೆಂಟೆಡ್ ನ್ಯಾವಿಗೇಶನ್ (GAGAN) ಮತ್ತು ನಾವಿಕ್ (ನ್ಯಾವಿಗೇಶನ್ ವಿತ್ ಇಂಡಿಯನ್ ಕಾನ್‌ಸ್ಟಲೇಶನ್)ತಂತ್ರಜ್ಞಾನಗಳನ್ನು ಬಳಸಿ, ಉಪಗ್ರಹ ಸಂಕೇತಗಳನ್ನು ಹೊಂದಿಸಿಕೊಂಡು ಜಾಗತಿಕ ನ್ಯಾವಿಗೇಶನ್ ಉಪಗ್ರಹ ವ್ಯವಸ್ಥೆ (GNSS) ಕಾರ್ಯಾಚರಿಸುತ್ತದೆ. ಇದನ್ನು ಹೊಂದಿರುವ ವ್ಯಕ್ತಿಯ ಇರವನ್ನು ಖಚಿತವಾಗಿ ತಿಳಿಯಬಹುದಾಗಿದ್ದು, ಆತ ಅಥವಾ ಆತನ ವಾಹನವು ಯಾವ ಸಮಯದಲ್ಲಿ ಎಷ್ಟು ದೂರ ಕ್ರಮಿಸಿದೆ ಎಂಬುದನ್ನು ನಿಖರವಾಗಿ ಲೆಕ್ಕಾಚಾರ ಹಾಕುವುದು ಸಾಧ್ಯವಾಗುತ್ತದೆ. ಇದಕ್ಕೆ ಭಾರತ ಸರ್ಕಾರದೊಂದಿಗೆ ಕೈಜೋಡಿಸಿರುವುದು ಮೆಟ್ರೊ ಇನ್ಫ್ರಾಸಿಸ್ ಎಂಬ ಸಂಸ್ಥೆ.

ಹೇಗೆ ಕೆಲಸ ಮಾಡುತ್ತದೆ?

ವಾಹನಗಳಲ್ಲಿ ಆನ್-ಬೋರ್ಡ್ ಯುನಿಟ್ (ಒಬಿಯು) ಎಂಬ ಸಾಧನವನ್ನು ಅಳವಡಿಸಬೇಕಾಗುತ್ತದೆ. ಇದು ಉಪಗ್ರಹವನ್ನು ಸಂಪರ್ಕಿಸಿ ವಾಹನದ ಚಲನೆಯನ್ನು ಟ್ರ್ಯಾಕ್ ಮಾಡಲು ಸಹಕಾರಿ. ಟೋಲ್ ಇರುವ ರಾಷ್ಟ್ರೀಯ ಹೆದ್ದಾರಿಗಳಿಗೆ ಪ್ರವೇಶಿಸುವ ಮತ್ತು ಹೆದ್ದಾರಿಯಿಂದ ನಿರ್ಗಮಿಸುವ ಕಡೆಗಳಲ್ಲಿ ಗೇಟ್ ಇರುವ ಟೋಲ್ ಬೂತ್‌ಗಳ ಬದಲಾಗಿ, ಮುಕ್ತವಾಗಿರುವ ದೊಡ್ಡ ದ್ವಾರಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗುತ್ತದೆ. ವಾಹನದ ನೋಂದಣಿ ಸಂಖ್ಯೆ, ವಾಹನದ ವಿಧದ ದತ್ತಾಂಶವನ್ನು ಹೊಂದಿರುವ ಒಬಿಯು ಮತ್ತು ರಸ್ತೆಯ ಮೇಲಿರುವ ಕ್ಯಾಮೆರಾಗಳು ಪರಸ್ಪರ 'ಸಂಧಿಸಿ', ಒಳ ಪ್ರವೇಶ ಮತ್ತು ಹೊರಗೆ ಹೋಗುವ ಸ್ಥಳವನ್ನು, ಸಮಯವನ್ನು ಗುರುತು ಮಾಡಿಟ್ಟುಕೊಳ್ಳುತ್ತವೆ. ಡಿಜಿಟಲ್ ಇಮೇಜ್ ಪ್ರೊಸೆಸಿಂಗ್ ಎಂಬ ವಿಧಾನದ ಮೂಲಕ ತತ್ಸಂಬಂಧಿತ ಅಲ್ಗಾರಿದಂ ಬಳಸಿ ಸಿಸಿಟಿವಿ ಕ್ಯಾಮೆರಾಗಳು ದಾಖಲಿಸಿಕೊಳ್ಳುವ ಮಾಹಿತಿಯ ಆಧಾರದಲ್ಲಿ ವಾಹನವು ಎಷ್ಟು ದೂರ ಕ್ರಮಿಸಿತು ಎಂದು ತಿಳಿದುಕೊಂಡು, ಅದಕ್ಕನುಗುಣವಾಗಿ ಎಷ್ಟು ಹಣ ತೆರಬೇಕಾಗುತ್ತದೆ ಎಂಬುದನ್ನು ಪೂರ್ವನಿಗದಿತ ವ್ಯವಸ್ಥೆಯಿಂದ ಲೆಕ್ಕಾಚಾರ ಹಾಕಲಾಗುತ್ತದೆ. ನಂತರ ಒಬಿಯುಗೆ ಸಂಪರ್ಕಗೊಂಡಿರುವ ಡಿಜಿಟಲ್ ವ್ಯಾಲೆಟ್‌ನಿಂದ ಶುಲ್ಕವು ಸ್ವಯಂಚಾಲಿತವಾಗಿ ಕಡಿತವಾಗುತ್ತದೆ. ಫಾಸ್ಟ್ಯಾಗ್‌ನ ಪಾವತಿ ವ್ಯವಸ್ಥೆಯಲ್ಲಿದ್ದ ಪೂರ್ವಪಾವತಿ ವ್ಯವಸ್ಥೆ ಇಲ್ಲೂ ಇರುತ್ತದೆ.

ಹೊಸ ಟೋಲ್ ಪದ್ಧತಿಯಿಂದ ನಮಗೇನು ಪ್ರಯೋಜನ?

ಮುಖ್ಯವಾಗಿ ಟೋಲ್ ಬೂತ್‌ಗಳಲ್ಲಿ ಕಾಯಬೇಕಾದ ಸಂದರ್ಭದಿಂದಾಗಿ ಜನ ರೋಸಿ ಹೋಗಿದ್ದಾರೆ. ಈ ಕಾಯುವಿಕೆಯ ತಾಪತ್ರಯ ಮತ್ತು ಉದ್ದುದ್ದ ಸರತಿಯಲ್ಲಿ ನಿಲ್ಲಿಸಬೇಕಾದ ಪ್ರಮೇಯವು ಹೊಸ ವ್ಯವಸ್ಥೆಯಿಂದ ತಪ್ಪುತ್ತದೆ. ವಾಹನದ ನೋಂದಣಿ ಸಂಖ್ಯೆ, ಯಾವ ವಿಧದ ವಾಹನ ಎಂಬಿತ್ಯಾದಿ ಲಭ್ಯ ದತ್ತಾಂಶಕ್ಕೆ ಅನುಗುಣವಾಗಿ, ಸುಂಕವಿರುವ ಹೆದ್ದಾರಿಯಿಂದ ಹೊರ ಬಂದ ತಕ್ಷಣ ಡಿಜಿಟಲ್ ವ್ಯಾಲೆಟ್‌ನಿಂದ ಶುಲ್ಕವು ತಾನಾಗಿ ಕಡಿತವಾಗುತ್ತದೆ. 2021ರಲ್ಲಿ ಜಾರಿಗೆ ಬಂದಿರುವ ಫಾಸ್ಟ್ಯಾಗ್ ಎಂಬ, ಚಿಪ್ ಇರುವ ಟ್ಯಾಗ್ ಅನ್ನು ಓದಲು ತಗುಲುವ ಸಮಯದ ಉಳಿತಾಯವಾಗಿ, ಯಾವುದೇ ಅಡೆತಡೆಯಿಲ್ಲದೆಯೇ ವಾಹನಗಳು ಸಂಚರಿಸಬಹುದು.

20 ಕಿ.ಮೀ. ವ್ಯಾಪ್ತಿಯ ನಂತರ ಪ್ರಯಾಣಿಸಿದ ದೂರಕ್ಕಷ್ಟೇ ಸುಂಕ ವಿಧಿಸಲಾಗುವುದರಿಂದ, ಹೆದ್ದಾರಿ ಸುತ್ತಮುತ್ತ ಮನೆಗಳಿರುವ ಜನರಿಗೂ ದೊಡ್ಡ ಹೊರೆಯಾಗದು ಎಂಬ ನಿರೀಕ್ಷೆ ಇದೆ. ಆರಂಭದಲ್ಲಿ ಪರೀಕ್ಷಾರ್ಥವಾಗಿ ಈ ವರ್ಚುವಲ್ ಟೋಲ್ ವ್ಯವಸ್ಥೆ ಜಾರಿಗೆ ಬರುತ್ತಿದ್ದು, ಫಾಸ್ಟ್‌ಟ್ಯಾಗ್ ಜತೆಗೆ ಜಿಎನ್‌ಎಸ್‌ಎಸ್ ಆಧಾರಿತ ಇಟಿಸಿ ವ್ಯವಸ್ಥೆಯನ್ನು ಪರಿಚಯಿಸಲಾಗುತ್ತದೆ. ಇದರಲ್ಲಿ ಎದುರಾಗಬಹುದಾದ ಸಮಸ್ಯೆಗಳನ್ನು ಸರಿಪಡಿಸಿಕೊಂಡು, ಉಳಿದ ಹೆದ್ದಾರಿಗಳಿಗೂ ಈ ವ್ಯವಸ್ಥೆಯನ್ನು ವಿಸ್ತರಿಸಲಾಗುತ್ತದೆ.

ಒಂದು ಮಾಹಿತಿಯ ಪ್ರಕಾರ, ಸದ್ಯ ಭಾರತದಲ್ಲಿ ವರ್ಷಕ್ಕೆ ₹40 ಸಾವಿರ ಕೋಟಿಗೂ ಹೆಚ್ಚು ಟೋಲ್ ಅಂದರೆ ಹೆದ್ದಾರಿ ಸುಂಕ ಸಂಗ್ರಹವಾಗುತ್ತಿದೆ ಎಂದರೆ, ವಾಹನಗಳ ಪ್ರಮಾಣ ಎಷ್ಟಿದೆ ಎಂಬುದು ನಿಮ್ಮ ಲೆಕ್ಕಾಚಾರಕ್ಕೆ ಬಿಟ್ಟ ವಿಚಾರ. ವಾಹನಗಳ ಸಂಖ್ಯೆ ಪ್ರತಿ ವರ್ಷವೂ ಹೆಚ್ಚಾಗುತ್ತಿರುವಂತೆಯೇ, ಟೋಲ್ ಬೂತ್‌ಗಳು ಸಮೀಪ ಬಂದಾಗ ವಾಹನದ ವೇಗ ನಿಧಾನ ಮಾಡುವುದು, ನಿರ್ದಿಷ್ಟ ಸಾಲಿನಲ್ಲೇ ಹೋಗುವುದು, ಸರತಿ ಸಾಲಿನಲ್ಲಿ ಕಾಯುವುದೇ ಮುಂತಾದ ರೀತಿಯಲ್ಲಿ ಸಮಯ ವ್ಯಯವಾಗದಂತೆ ತಡೆಯಲು ಈ ಆಧುನಿಕ ಟೋಲ್ ವ್ಯವಸ್ಥೆ ಅನಿವಾರ್ಯ. ಆದರೆ, 60 ಕಿ.ಮೀ.ಗೆ ಒಂದರಂತೆ ಮಾತ್ರ ಟೋಲ್ ಬೂತ್‌ಗಳಿರುತ್ತವೆ ಎಂದು ಕೇಂದ್ರ ಸಚಿವರು ಸಂಸತ್ತಿನಲ್ಲಿ ಆಡಿದ ಮಾತು ಇನ್ನೂ ಪಾಲನೆಯಾಗಿಲ್ಲ. ಜೊತೆಗೆ, ವಾಹನಗಳಿಗೆ ರಸ್ತೆ ತೆರಿಗೆ ಕಟ್ಟಿದ ಹೊರತಾಗಿಯೂ ಮತ್ತೆ ಟೋಲ್ ತೆರಬೇಕು ಯಾಕೆ ಎಂಬ ಅಸಮಾಧಾನ ಜನರಲ್ಲಿನ್ನೂ ಇದೆ. ಇವುಗಳ ನಡುವೆಯೇ ಜನರು ಈ ಹೊಸ ವ್ಯವಸ್ಥೆಗೆ ಹೇಗೆ ಸ್ಪಂದಿಸುತ್ತಾರೆ ಎಂಬುದು ಕಾದುನೋಡಬೇಕಾಗಿದೆ.

ಕದ್ದ ಪಾಠವನ್ನು ತೋರಿಸುವ ಕಾಣದ ಗುರುತು

ಕೊಳ್ಳೇಗಾಲ ಶರ್ಮ

'....... ಹೋಟೆಲಿನಿಂದ ಕದ್ದದ್ದು' ಎನ್ನುವ ಗುರುತು ಹಾಕಿರುವ ತಟ್ಟೆ, ಲೋಟಗಳನ್ನು ಹೋಟೆಲಿನಲ್ಲಿ ನೋಡಿದ್ದೀರಲ್ಲ. ತಮ್ಮ ವಸ್ತುವನ್ನು ಯಾರೂ ಕದಿಯದಿರಲಿ. ಕದ್ದರೂ ಅದನ್ನು ಗುರುತಿಸುವುದು ಸುಲಭವಾಗಲಿ ಎಂದು ಈ ರೀತಿಯಲ್ಲಿ ಹಚ್ಚೆ ಹಾಕುತ್ತಾರಷ್ಟೆ. ಎಐ ಬಳಸಿ ಬರೆಯುವ ಪಾಠದಲ್ಲಿಯೂ ಹೀಗೆ ಗುರುತು ಹಚ್ಚಬಹುದಂತೆ.

ಇತ್ತೀಚೆಗೆ ಗೂಗಲ್ ಜೆಮಿನಿಯ ವಿಜ್ಞಾನಿಗಳು ಅಂತಹುದೊಂದು ತಂತ್ರವನ್ನು ಬಿಡುಗಡೆ ಮಾಡಿದ್ದಾರೆ ಎಂದು ನೇಚರ್ ಪತ್ರಿಕೆ ವರದಿ ಮಾಡಿದೆ. ಸಿಂಥ್‌ಐಡಿ ಎಂದು ಹೆಸರಿಸಿದ ಈ ತಂತ್ರಜ್ಞಾನವನ್ನು ಗೂಗಲ್ ಮೈಂಡ್ ಸಂಸ್ಥೆಯ ಸುಮಂತ್ ದತ್ತಾತ್ರಿ ಮತ್ತು ಸಂಗಡಿಗರು ಅಭಿವೃದ್ಧಿ ಪಡಿಸಿದ್ದಾರೆ.

ಗೂಗಲ್ ಜೆಮಿನಿ, ಚಾಟ್‌ಜಿಪಿಟಿ ಮೊದಲಾದ ಪಠ್ಯಗಳನ್ನು ಸೃಷ್ಟಿಸುವ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಅಥವಾ ಎಐ ಅಥವಾ ಯಾಂತ್ರಿಕ ಬುದ್ಧಿಮತ್ತೆಯ (ಯಾಂಬು) ತಂತ್ರಜ್ಞಾನಗಳು ಕಳೆದ ಎರಡು ವರ್ಷಗಳಿಂದ ಸುದ್ದಿ ಮಾಡುತ್ತಿವೆ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ನಡೆಸುವ ಪರೀಕ್ಷೆಗಳಲ್ಲಿ ಚಾಟ್‌ಜಿಪಿಟಿ ಬಳಸಿ ಉತ್ತರಗಳನ್ನು ಬರೆಯದಂತೆ ನಿಷೇಧವನ್ನೂ ಹೇರಲಾಗಿದೆ. ಕದಿಯಬೇಡ ಎನ್ನುವುದು ಸುಲಭ. ಕದ್ದರೇ, ಇಲ್ಲವೇ ಎನ್ನುವುದನ್ನು ಪತ್ತೆ ಮಾಡುವುದು ಸ್ವಲ್ಪ ಕಷ್ಟವೇ. ಚಾಟ್‌ಜಿಪಿಟಿ, ಗೂಗಲ್ ಜೆಮಿನಿ, ಮೆಟಾಎಐ ಮೊದಲಾದ ಯಾಂಬು-ತಂತ್ರಾಂಶಗಳು ಈ ತೊಂದರೆಯನ್ನು ಎದುರಿಸಲು ಹೆಣಗುತ್ತಿವೆ. ಕಳೆದ ವರ್ಷ ಮಾಧ್ಯಮಗಳಿಗೆ ಛಾಯಾಚಿತ್ರಗಳನ್ನು ಒದಗಿಸುವ ಗೆಟ್ಟಿ ಇಮೇಜಸ್ ಸಂಸ್ಥೆ ಎಐ ತಂತ್ರಜ್ಞಾನವನ್ನು ಬಳಸಿ ಚಿತ್ರಗಳನ್ನು ಒದಗಿಸುವ ಹಲವು ಸಂಸ್ಥೆಗಳ ವಿರುದ್ಧ ದಾವೆ ಹೂಡಿತ್ತು. ಈಗಾಗಲೇ ಇರುವ ಚಿತ್ರಗಳನ್ನು ಬಳಸಿಕೊಂಡು, ತಿದ್ದಿ, ಹೊಸ ಚಿತ್ರ ಅಥವಾ ಕಲೆಯಂತೆ ಮಾಡಬಹುದು. ನಿಮ್ಮದೇ ಫೋಟೊವನ್ನು ಹಾಕಿದಾಗ ಅದು ಮುಂದೆಂದೋ ನೀವು ಕಾಣಬಹುದಾದ ರೀತಿಯಲ್ಲಿ ತಿದ್ದಿ ಪ್ರಕಟಿಸುವ ಆ್ಯಪ್‌ಗಳನ್ನು ತಮಾಷೆಗೆ ಬಳಸಿರಬಹುದಷ್ಟೆ. ನೀವು ಕೊಟ್ಟ ನಿಮ್ಮ ಚಿತ್ರಗಳನ್ನು ಈ ಆ್ಯಪ್‌ಗಳು ಅಥವಾ ಅವುಗಳಂಥ ಇತರೆ ತಂತ್ರಾಂಶಗಳು ಮುಂದೆ ಬಳಸಿಕೊಂಡು ಹೊಸ ಚಿತ್ರಗಳನ್ನು ಸೃಷ್ಟಿಸುತ್ತವೆ. ಅಂತಹ ಸಂದರ್ಭದಲ್ಲಿ ಆ ಚಿತ್ರದ ಒಡೆಯ ನೀವೋ, ಅಥವಾ ಆ ತಂತ್ರಾಂಶವೋ? ನಿಮ್ಮ ಚಿತ್ರವನ್ನು ಬಳಸಿಕೊಂಡದ್ದಕ್ಕೆ ಆ ಕಂಪೆನಿ ಒಪ್ಪಿಗೆ ಪಡೆಯಬೇಕೇ? ಚಿತ್ರದ ಹಕ್ಕುಸ್ವಾಮ್ಯ ನಿಮ್ಮದಾಗಿದ್ದರೆ, ಆ ಹೊಸ ಚಿತ್ರವೂ ನಿಮ್ಮದೇ? ಇಲ್ಲವಾದರೆ ಏನು ಮಾಡಬೇಕು?

ಇದು ಒಂದು ಸಮಸ್ಯೆ. ಇಂಟರ್‌ನೆಟ್‌ನಲ್ಲಿ ದೊರೆಯುವ ಮಾಹಿತಿ, ಚಿತ್ರಗಳು, ದತ್ತಾಂಶಗಳೆಲ್ಲವನ್ನೂ ಜೆಮಿನಿ, ಮೆಟಾ ಮೊದಲಾದ ತಂತ್ರಜ್ಞಾನಗಳು ಬಳಸಿಕೊಳ್ಳುತ್ತವೆ. ಯಾರದ್ದೋ ಹಕ್ಕುಸ್ವಾಮ್ಯ ಇರುವಂತಹ ಚಿತ್ರಗಳನ್ನು ಇನ್ಯಾರೋ ತಿದ್ದಿ ಬಳಸಿಕೊಂಡು ಲಾಭ ಮಾಡಿಕೊಳ್ಳಬಹುದು. ಇದನ್ನು ತಡೆಯಲು ಚಿತ್ರಗಳಲ್ಲಿಯೇ ಕಂಡೂ ಕಾಣದಂತಹ ಕೆಲವು ಗುರುತುಗಳನ್ನು ಮಾಡುತ್ತಾರೆ. ಇವನ್ನು ವಾಟರ್‌ಮಾರ್ಕ್ ಎನ್ನುತ್ತಾರೆ. ಚಿತ್ರಗಳನ್ನು ನೀವು ಬಳಸಿದಾಗಲೂ ಇವು ಉಳಿದುಕೊಂಡಿರುತ್ತವೆ. ಆ ಚಿತ್ರದ ಮೂಲ ಎಲ್ಲಿಯದು ಎಂದು ತಿಳಿದುಬಿಡುತ್ತದೆ. ಆದರೆ ಪಾಠಗಳ ವಿಷಯದಲ್ಲಿ ಇದು ಸುಲಭವಲ್ಲ. ಪರೀಕ್ಷೆಯನ್ನು ಬರೆಯುವ ವಿದ್ಯಾರ್ಥಿ ಚಾಟ್‌ಜಿಪಿಟಿ ಬಳಸಿಕೊಂಡು ಉತ್ತರವನ್ನು ಬರೆಯಬಹುದು. ಆ ಮಟ್ಟಿಗೆ ತಂತ್ರಜ್ಞಾನ ಅಭಿವೃದ್ಧಿಯಾಗಿದೆ. ನೀವೇ ಬರೆದಷ್ಟು ಸುಂದರವಾಗಿ ಎಲ್ಲ ಮಾಹಿತಿಯನ್ನು ಒಟ್ಟು ಮಾಡಿ ಲೇಖನವನ್ನು ಯಾಂಬು-ತಂತ್ರಜ್ಞಾನಗಳು ಬರೆಯಬಲ್ಲುವು. ಹಾಗೆ ಎಐ ಬಳಸಿ ವೈಜ್ಞಾನಿಕ ಪ್ರಬಂಧಗಳನ್ನೂ ಬರೆದವರಿದ್ದಾರೆ. ಇಡೀ ಪುಸ್ತಕವನ್ನೂ ಯಾಂಬು ಬಳಸಿ ಬರೆಯಲಾಗಿದೆ. ಕಾರೊಂದರ ಚಿಪ್‌ನಲ್ಲಿ ಇದ್ದ ಅದರ ಓಡಾಟದ ಮಾಹಿತಿಯನ್ನು ಹಾಗೂ ಜಿಪಿಎಸ್ ನಕ್ಷೆಗಳನ್ನು ನೀಡಿ, ಅದರ ಆಧಾರದ ಮೇಲೆ 'ಎಐ ವನ್ ದಿ ರೋಡ್' ಎನ್ನುವ ಪುಸ್ತಕವನ್ನು ಆರೇಳು ವರ್ಷಗಳ ಹಿಂದೆಯೇ ರಚಿಸಿತ್ತು. ಆದರೆ, ಆಗೆಲ್ಲ ಇದೊಂದು ಸಮಸ್ಯೆ ಎನ್ನಿಸುತ್ತಿರಲಿಲ್ಲ. ಯಾಂಬು ಎಲ್ಲರ ಕೈಗೂ ಎಟುಕುವ ಸಾಧನವಾಗಿರಲಿಲ್ಲ. 2023 ಅದನ್ನು ಬದಲಿಸಿತು. ಓದದೆಯೇ ಪ್ರಬಂಧಗಳ ಸಾರವನ್ನು ಒಟ್ಟು ಮಾಡಬಹುದಾಯಿತು. ಆ ಸಾರವನ್ನು ಆಧರಿಸಿ ಲೇಖನ, ಪ್ರಬಂಧ, ಪುಸ್ತಕವನ್ನೂ ಬರೆಯಬಹುದಲ್ಲ? ಹೀಗೆ ತಮ್ಮದೇ ಬರೆಹ ಎನ್ನುವಂತೆ ಬಿಂಬಿಸಿಕೊಂಡ ಬರೆಹವನ್ನು ಎಐ ಸೃಷ್ಟಿ ಎಂದು ಗುರುತಿಸುವುದು ಅವಶ್ಯಕವೆನ್ನಿಸಿತು. ವಿಜ್ಞಾನ ಹಾಗೂ ವಾಣಿಜ್ಯ ಪ್ರಪಂಚದಲ್ಲಿ ಕೃತಿಚೌರ್ಯ ಎನ್ನುವುದು ಕಾಳಜಿಯ ವಿಷಯ. ಬೇರೊಬ್ಬರ ಬರೆಹವನ್ನು ಕದ್ದದ್ದನ್ನು ಪತ್ತೆ ಹಚ್ಚಲು ಕಾಪಿಸ್ಕೇಪ್ ಮೊದಲಾದ ಹಲವು ಕೃತಿಚೌರ್ಯ ಪತ್ತೆ ತಂತ್ರಾಂಶಗಳಿವೆ. ಆದರೆ ಯಾಂಬುವಿನ ಬರೆಹವನ್ನೇ ಕದ್ದರೆ ಅದನ್ನು ಪತ್ತೆ ಮಾಡುವುದು ಹೇಗೆ? ಯಾಂಬುವಿನ ಬಳಕೆಯನ್ನು ಪತ್ತೆ ಹಚ್ಚಲು ಈ ಹಿಂದೆಯೂ ಪ್ರಯತ್ನಗಳು ನಡೆದಿದ್ದುವು. ಯಾಂಬು ಬಳಸಿ ತಿದ್ದಿದ ಚಿತ್ರಗಳನ್ನು ಮೂಲದೊಂದಿಗೆ ಹೋಲಿಸುವ ತಂತ್ರಾಂಶಗಳಿವೆ. ಇಷ್ಟು ಶ್ರಮ ಪಡುವ ಬದಲು ಯಾಂಬು ಬರೆಹಗಳಲ್ಲಿಯೇ ಅದನ್ನು ಪತ್ತೆ ಮಾಡುವ ವಾಟರ್‌ಮಾರ್ಕ್ ಬಚ್ಚಿಟ್ಟರೆ ಹೇಗೆ? ಸಿಂಥ್‌ಐಡಿ ಈ ತಂತ್ರವನ್ನು ಬಳಸುತ್ತದೆ.

ಯಾವುದೇ ಪಾಠವನ್ನು ಬರೆಯುವಂತೆ ತಿಳಿಸುವ ನಿರ್ದೇಶನಗಳು ಮೂಲಪಾಠಗಳಂತೆ. ಇವುಗಳಲ್ಲಿರುವ ಪದಗಳನ್ನು ಆಧರಿಸಿ ಯಾಂಬು ಹೊಸ ಪಾಠವನ್ನು ಬರೆಯುತ್ತದೆ. ಇದು ವಿವಿಧ ಹಂತಗಳಲ್ಲಿ ನಡೆಯುವ ಕ್ರಿಯೆ. ಪ್ರತಿ ಹಂತದಲ್ಲಿಯೂ ಹೀಗೆ ಬರೆಯುವಾಗ ಮೂಲಪಾಠದಲ್ಲಿರುವ ಯಾವುದೋ ಒಂದು ಪದವನ್ನು ಬದಲಿಸುತ್ತದೆ. ಅದಕ್ಕೆ ಒಂದು ಗುಪ್ತಸಂಖ್ಯೆಯನ್ನೂ ಅಂಟಿಸಿಬಿಡುತ್ತದೆ. ಅಂತಿಮವಾಗಿ ಪಾಠ ಸಿದ್ಧವಾಗುವಾಗ ಈ ಬದಲಾಯಿಸಿದ ಪದ, ಅಂಶಗಳ ಸಂಖ್ಯೆ ಬರುತ್ತದಷ್ಟೆ. ಇದೇ ವಾಟರ್ ಮಾರ್ಕ್. ಈ ಪಾಠವನ್ನು ಯಾಂಬುವಿನಿಂದ ಕದ್ದದ್ದು ಎಂದು ಬರೆದ ಹಾಗೆ.

ಅನಂತರ ಹೊಸ ಪಾಠವೊಂದನ್ನು ಗುರುತಿಸಲು ನೀಡಿದರೆ ಇದೇ ಯಾಂಬು, ಆ ಗುಪ್ತಸಂಖ್ಯೆ ಎಷ್ಟಿರಬಹುದು ಎಂದು ಲೆಕ್ಕಿಸುತ್ತದೆ. ಅದು ಒಂದು ನಿರ್ದಿಷ್ಟ ಮಿತಿಗಿಂತ ಹೆಚ್ಚಿದ್ದಲ್ಲಿ ಯಾಂಬುಸೃಷ್ಟಿ ಎಂದೂ, ಕಡಿಮೆ ಇದ್ದಲ್ಲಿ ಸ್ವಂತ ಬರೆಹವೆಂದೂ ತೀರ್ಮಾನಿಸಿಬಿಡುತ್ತದೆ. ಹೀಗೆ ಇದು ಪ್ರತಿಯೊಂದು ಸೃಷ್ಟಿಗೂ ವಿಭಿನ್ನ ವಾಟರ್ ಮಾರ್ಕ್ ನೀಡಬಲ್ಲುದು. ಇದು ನೀಡುವ ವಾಟರ್ ಮಾರ್ಕ್ ಬರೆದ ಪಾಠದಲ್ಲಿ ಇದೆ ಎಂದೇ ತಿಳಿಯುವುದಿಲ್ಲ. ಇಂತಹ ಸುಮಾರು ಎರಡು ಕೋಟಿ ಪಾಠಗಳಲ್ಲಿ ಇದ್ದ ವಾಟರ್‌ಮಾರ್ಕ್ ಜನರಿಗೆ ಕಾಣಿಸಲೇ ಇಲ್ಲ.

ಹಾಗಿದ್ದರೆ ಈ ರೀತಿಯ ಪರಿಶೀಲನೆ ನಡೆಯುವಾಗ ಯಾಂಬು ನಿಧಾನವಾಗುವುದಿಲ್ಲವೇ? ಇಲ್ಲವಂತೆ. ಸಾಮಾನ್ಯವಾಗಿ 15.527 ಮಿಲಿಸೆಕೆಂಡಿನೊಳಗೆ ಪಾಠವನ್ನು ಸೃಷ್ಟಿಸುವ ವ್ಯವಸ್ಥೆಯಲ್ಲಿ ವಾಟರ್‌ಮಾರ್ಕ್ ಕೂಡಿಸಿದರೆ ಅದು ಕೇವಲ 0.57% ನಿಧಾನವಾಗುತ್ತದೆ. 15.615 ಮಿಲಿಸೆಕೆಂಡಿನೊಳಗೆ ಪ್ರತಿಕ್ರಿಯಿಸುತ್ತದೆ ಎನ್ನುತ್ತಾರೆ ಸಿಂಥ್‌ಐಡಿ ಕರ್ತರು. ಇದನ್ನೂ ಅಳಿಸಿಬಿಡಬಹುದಂತೆ. ಆದರೆ ಹಾಗೆ ಮಾಡಬೇಕಾದರೆ ಯಾಂಬು-ಲಿಖಿತ ಪಾಠವನ್ನು ತಿದ್ದಬೇಕು. ಅದೂ ಅರ್ಧಕ್ಕರ್ಧ ಪಾಠವನ್ನು ತಿದ್ದಬೇಕಾಗಿ ಬರಬಹುದು. ಹಾಗೆ ಮಾಡಿದರೂ, ಹೊಸ ಬರೆಹ ಸೃಷ್ಟಿಸಿದ ಹಾಗೆಯೇ ಅಲ್ಲವೇ? ಆಗ ಅದು ಯಾಂಬುಬರೆಹ ಎನ್ನಿಸಿಕೊಳ್ಳಲಿಕ್ಕಿಲ್ಲ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ವಿಜ್ಞಾನ

ವಿದ್ಯುಚ್ಛಕ್ತಿ ಪ್ರವಾಹದ ಕಾಂತೀಯ ಪರಿಣಾಮಗಳು

13) ಗೃಹ ಬಳಕೆಯ ವಿದ್ಯುತ್ ಮಂಡಲಗಳ ಬಗ್ಗೆ ಬರೆಯಿರಿ

ಉತ್ತರ:–

ಎಲ್ಲಾ ಗೃಹಬಳಕೆಯ ವಿದ್ಯುತ್ ಮಂಡಲಗಳಿಗೆ ವಿದ್ಯುತ್‌ಫ್ಯೂಸ್ ಒಂದು ಪ್ರಮುಖ ಘಟಕವಾಗಿದೆ.

ವಿದ್ಯುತ್ ಮಂಡಲದಲ್ಲಿರುವ ಫ್ಯೂಸ್, ಮಂಡಲ ಹಾಗೂ ವಿದ್ಯುತ್ ಉಪಕರಣಗಳಿಗೆ ಓವರ್ ಲೋಡ್‌ನಿಂದ ಉಂಟಾಗುವ ಹಾನಿಯಿಂದ ರಕ್ಷಿಸುತ್ತದೆ. ಸಜೀವ ತಂತಿ ಮತ್ತು ತಟಸ್ಥ ತಂತಿಗಳು ಎರಡೂ ನೇರ ಸಂಪರ್ಕಕ್ಕೆ ಬಂದಾಗ ಓವರ್ ಲೋಡ್ ಉಂಟಾಗಬಹುದು. (ತಂತಿಗಳ ಮೇಲಿನ ಅವಾಹಕ ಹೊದಿಕೆ ಹಾನಿಗೊಳಗಾದಾಗ ಅಥವಾ ವಿದ್ಯುತ್ ಉಪಕರಣದಲ್ಲಿ ಯಾವುದಾದರೂ ದೋಷವಿದ್ದರೆ ಇದು ಸಂಭವಿಸುತ್ತದೆ) ಇಂತಹ ಸನ್ನಿವೇಶಗಳಲ್ಲಿ ಮಂಡಲದಲ್ಲಿನ ವಿದ್ಯುತ್‌ಪ್ರವಾಹವು ಥಟ್ಟನೆ ಬಹಳ ಹೆಚ್ಚಾಗಿ ಬಿಡುತ್ತದೆ. ಇದನ್ನು ಹ್ರಸ್ವಮಂಡಲ (short circuit) ಎನ್ನುವರು. ವಿದ್ಯುತ್‌ಫ್ಯೂಸ್‌ನ ಬಳಕೆಯು ಮಂಡಲದಲ್ಲಿ ಅಯಾಚಿತವಾಗಿ ಉಂಟಾಗುವ ಹೆಚ್ಚಿನ ಪ್ರಮಾಣದ ವಿದ್ಯುತ್ ಪ್ರವಾಹವನ್ನು ನಿಲ್ಲಿಸುವ ಮೂಲಕ ವಿದ್ಯುತ್ ಮಂಡಲ ಮತ್ತು ವಿದ್ಯುತ್ ಉಪಕರಣಗಳಿಗೆ ಉಂಟಾಗುವ ಹಾನಿಯನ್ನು ತಡೆಯುತ್ತದೆ. ಫ್ಯೂಸ್‌ನಲ್ಲಿ ಜರುಗುವ ಜೌಲ್‌ನ ತಾಪದಿಂದ ಫ್ಯೂಸ್ ಕರಗಿ ಅದರಿಂದ ವಿದ್ಯುತ್ ಸಂಪರ್ಕ ಕಡಿತಗೊಳ್ಳುತ್ತದೆ. ಸರಬರಾಜಾಗುವ ವೋಲ್ಟೇಜ್‌ನ (ವಿಭವಾಂತರ) ಆಕಸ್ಮಿಕ ಹೆಚ್ಚಳದಿಂದ ಓವರ್ ಲೋಡ್ ಸಂಭವಿಸಬಹುದು. ಕೆಲವು ಸಂದರ್ಭಗಳಲ್ಲಿ ಹಲವು ಉಪಕರಣಗಳನ್ನು ಒಂದೇ ಸಾಕೆಟ್‌ಗೆ ಜೋಡಿಸುವುದರಿಂದಲೂ ಓವರ್ ಲೋಡ್ ಉಂಟಾಗಬಹುದು.

****

ಲೋಹಗಳು ಮತ್ತು ಅಲೋಹಗಳು

ಬಹು ಆಯ್ಕೆ ಪ್ರಶ್ನೆಗಳು

1. ಈ ಕೆಳಗಿನವುಗಳಲ್ಲಿ ಯಾವ ಜೋಡಿಯು ಸ್ಥಾನಪಲ್ಲಟ ಕ್ರಿಯೆಯನ್ನು ಉಂಟುಮಾಡುತ್ತದೆ?
   (a) $NaCl$ ದ್ರಾವಣ ಮತ್ತು ತಾಮ್ರದ ಲೋಹ
   (b) $MgCl_2$ ದ್ರಾವಣ ಮತ್ತು ಅಲ್ಯುಮಿನಿಯಂ ಲೋಹ
   (c) $FeSO_4$ ದ್ರಾವಣ ಮತ್ತು ಬೆಳ್ಳಿಯ ಲೋಹ
   (d) $AgNO_3$ ದ್ರಾವಣ ಮತ್ತು ತಾಮ್ರದ ಲೋಹ.
2. ಕಬ್ಬಿಣದ ಕಾವಲಿ ತುಕ್ಕು ಹಿಡಿಯದಂತೆ ತಡೆಗಟ್ಟಲು ಈ ಕೆಳಗಿನವುಗಳಲ್ಲಿ ಯಾವ ವಿಧಾನ ಸೂಕ್ತವಾಗಿದೆ?
   (ಎ) ಗ್ರೀಸ್ ಹಚ್ಚುವುದು (ಬಿ) ಬಣ್ಣ ಹಚ್ಚುವುದು
   (ಸಿ) ಸತುವಿನ ಲೇಪನ ಮಾಡುವುದು (ಡಿ) ಮೇಲಿನ ಎಲ್ಲವೂ
3. ಒಂದು ಧಾತುವು ಆಕ್ಸಿಜನ್‌ನ ಜೊತೆ ಪ್ರತಿವರ್ತಿಸಿ ಹೆಚ್ಚಿನ ಕರಗುವ ಬಿಂದುವನ್ನು ಹೊಂದಿರುವ ಸಂಯುಕ್ತವನ್ನು ಉಂಟುಮಾಡುತ್ತದೆ. ಈ ಸಂಯುಕ್ತವು ನೀರಿನಲ್ಲಿ ಸುಲಭವಾಗಿ ಕರಗುತ್ತದೆ. ಸಾಮಾನ್ಯವಾಗಿ ಆ ಧಾತು ಯಾವುದಾಗಿರಬಹುದೆಂದರೆ.............................
   (ಎ) ಕ್ಯಾಲ್ಸಿಯಂ (ಬಿ) ಕಾರ್ಬನ್
   (ಸಿ) ಸಿಲಿಕಾನ್ (ಡಿ) ಕಬ್ಬಿಣ
4. ಆಹಾರ ಪದಾರ್ಥಗಳ ಡಬ್ಬಿಗಳನ್ನು ತವರದಿಂದ ಲೇಪನಮಾಡಲಾಗಿರುತ್ತದೆಯೇ ಹೊರತು ಸತುವಿನಿಂದಲ್ಲ ಕಾರಣ......
   (ಎ) ಸತು ತವರಕ್ಕಿಂತ ದುಬಾರಿ.
   (ಬಿ) ಸತುವಿನ ಕರಗುವ ಬಿಂದು ತವರಕ್ಕಿಂತ ಹೆಚ್ಚು.
   (ಸಿ) ಸತುವು ತವರಕ್ಕಿಂತ ಹೆಚ್ಚು ಕ್ರಿಯಾಶೀಲವಾಗಿದೆ.
   (ಡಿ) ಸತುವು ತವರಕ್ಕಿಂತ ಕಡಿಮೆ ಕ್ರಿಯಾಶೀಲವಾಗಿದೆ.

ಉತ್ತರ:– (1)ಡಿ (2)ಸಿ (3)ಎ (4)ಸಿ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಯಾವುದನ್ನು ಲೋಹೀಯ ಕಾಂತಿ ಅಥವಾ ಹೊಳಪು (lustre) ಎನ್ನುವರು

ಉತ್ತರ:– ಲೋಹಗಳು ಶುದ್ಧ ಸ್ಥಿತಿಯಲ್ಲಿ ಹೊಳಪಾದ ಮೇಲ್ಮೈಯನ್ನು ಹೊಂದಿರುತ್ತವೆ. ಇದನ್ನೇ ಲೋಹೀಯ ಕಾಂತಿ ಅಥವಾ ಹೊಳಪು (lustre) ಎನ್ನುವರು.

2) ಲೋಹದ ಭೌತ ಗುಣಗಳನ್ನು ಬರೆಯಿರಿ

ಉತ್ತರ:– ಲೋಹದ ಭೌತ ಗುಣಗಳು

ಅ) ಲೋಹವು ಹೊಳಪನ್ನು ಹೊಂದಿದೆ

ಆ) ಲೋಹವು ಕಠಿಣವಾಗಿರುತ್ತವೆ

ಇ) ಲೋಹವು ಕುಟ್ಯತೆ ಗುಣವನ್ನು ಹೊಂದಿದೆ. {ಲೋಹಗಳನ್ನು ಕುಟ್ಟಿ ತೆಳುವಾದ ಹಾಳೆಗಳನ್ನಾಗಿ ಮಾಡಬಹುದು. ಈ ಗುಣವನ್ನು ಕುಟ್ಯತೆ (malleability) ಎನ್ನುವರು}

ಈ) ಲೋಹಗಳು ತನ್ಯತೆಯ ಗುಣವನ್ನು ಹೊಂದಿದೆ. {ತೆಳುವಾದ ತಂತಿಗಳನ್ನಾಗಿ ಎಳೆಯಬಹುದಾದ ಲೋಹಗಳ ಸಾಮರ್ಥ್ಯಕ್ಕೆ ತನ್ಯತೆ (ductility) ಎನ್ನುವರು.}

ಉ) ಲೋಹಗಳು ಉಷ್ಣದ ಉತ್ತಮ ವಾಹಕಗಳು ಮತ್ತು ಅತಿ ಹೆಚ್ಚಿನ ಕರಗುವ ಬಿಂದುಗಳನ್ನು ಹೊಂದಿವೆ

ಊ) ಲೋಹಗಳ ಮೂಲಕ ವಿದ್ಯುತ್ ಪ್ರವಹಿಸುತ್ತದೆ

ಎ) ಲೋಹಗಳು ಒಂದು ಗಟ್ಟಿಯಾಗಿ ಬಡಿದರೆ ಶಬ್ದ ಉತ್ಪತ್ತಿ ಮಾಡುತ್ತವೆ

3) ಯಾವುದಕ್ಕೆ ಶಾಬ್ದನ (sonorous) ಎನ್ನುವರು?

ಉತ್ತರ:– ಒಂದು ಗಟ್ಟಿಯಾದ ಮೇಲ್ಮೈಗೆ ಬಡಿದಾಗ ಶಬ್ದ ಉಂಟುಮಾಡುವ ಲೋಹಗಳ ಗುಣವನ್ನು ಶಾಬ್ದನ(sonorous) ಎನ್ನುವರು

4) ಲೋಹಗಳಲ್ಲಿ ಇರುವ ಕುಟ್ಯತೆ ಗುಣ ಎಂದರೇನು?

ಉತ್ತರ:– ಕೆಲವು ಲೋಹಗಳನ್ನು ಕುಟ್ಟಿ ತೆಳುವಾದ ಹಾಳೆಗಳನ್ನಾಗಿ ಮಾಡಬಹುದು ಈ ಗುಣವನ್ನು ಕುಟ್ಯತೆ (malleability) ಎನ್ನುವರು. ಚಿನ್ನ ಮತ್ತು ಬೆಳ್ಳಿ ಅತಿ ಹೆಚ್ಚಿನ ಕುಟ್ಯ ಗುಣ ಹೊಂದಿರುವ ಲೋಹಗಳು

4) ಒಂದು ದ್ರವರೂಪದ ಅಲೋಹವನ್ನು ಹೆಸರಿಸಿ

ಉತ್ತರ:– ಬ್ರೋಮಿನ್

5) ಒಂದು ದ್ರವರೂಪದ ಲೋಹವನ್ನು ಹೆಸರಿಸಿ

ಉತ್ತರ:– ಪಾದರಸ

6) ಹೊಳೆಯುವ ಅಲೋಹವನ್ನು ಬರೆಯಿರಿ

ಉತ್ತರ:– ಅಯೋಡಿನ್

7) ವಿಭಿನ್ನ ರೂಪದಲ್ಲಿ ದೊರೆಯುವ ಅಲೋಹ ಯಾವುದು?

ಉತ್ತರ:– ಕಾರ್ಬನ್

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

II PUC BIOLOGY

EVOLUTION

10. Which are the various steps involved in the origin of life?

Ans:- (........Contd)

$CH_4 + NH_3 + CO_2 + H_2O \rightarrow$ Amino acids

$CH_4 + NH_3 + CO_2 + N_2 + H_2 + H_2O \rightarrow$ Purines + Pyrimidines

(ii) **Energy** from solar radiations, lighting, volcanic eruptions, cosmic and other high energy rays and hot earth.

(iii) Alternate **condensation and evaporation.**

(iv) **Right chemicals** like compounds of carbon, hydrogen, nitrogen and water.

(5) Formation of Complex Compounds -

The abiogenically formed simple organic compounds, oxides of copper, iron and saturated hydrides were in low concentration in hot dilute soup. Near shore-lines they tended to concentrate. Evaporation of water from the area and a source of energy made the chemicals to interact, condense and polymerise. A number of complex organic compounds were formed.

i) Sugar + ... + Sugar → Disaccharides, Oligosaccharides, Polysaccharides.

ii) Fatty Acids + ... + Glycerol → Fats, Phospholipids, Other Lipids.

iii) Amino Acid + ... + Amino Acids → Peptides, Polypeptides, Proteins (Protenoids)

iv) (a) Nitrogen Base (Purine or Pyrimidine) + Pentose Sugar + Phosphoric Acid → Nucleotide.

b) Nucleotide+ ..... + Nucleotide → Nucleic Acids.



Chemical evolution on early earth.

1. Raw gaseous materials in early atmosphere.

2. Formation of simple organic compounds.

3. Production of complex organic compounds.

4. Concentration of organic compounds on sea shore and occurrence of more complex synthetic reactions required for origin of living systems.

All the above reactions occurred without the assistance of enzymes. It was due to specific conditions of the external environment.

II Biological Evolution (Formation of 1st Life)

Early prebiotic chemical systems having one or more properties of living systems are called protobionts. There are three requirements for the prebiotic systems to form first living systems.

a) Presence of self reproducing molecules or replicators.

b) Mutations during copying of replicators and formation of chemicals.

c) Supply of energy to the system of replicators and their partial separation from the general environment. Prebiotic systems developed 3 types of protobionts which separated them partially from the environment. They are coacervates, microspheres and vesicles.

(6) Coacervation - Organic molecules became concentrated on the sea shore or in the crevices of submerged rocks to form a sort of sludge. Here proteins formed colloidal hydrophilic complexes. They also got surrounded by envelops of water molecules due to presence of Coalescence produced aggregates like **coacervates, microspheres** or vesicles.

Coacervates were reversible emulsoid structures with chemical aggregates depending upon the composition of soup.



Coacervate or microsphere formation and division. A, aggregation on shore B, a protobiont C, division.

(7) Formation of Protocells or Eobionts – Proteins got associated with the membrane covering of protoboints. Some of them were **chromophores.** Chromophores could absorb light energy and create an electric potential across the membrane. It provided energy for chemical reactions to occur inside. RNAs seem to develop the ability to catalyse a number of these reactions, including the formation of proteins and their own replication. Early biological world was **RNA world** where RNA functioned as both genetic material as well as catalyst. This is supported by the fact that some ribosomal RNAs are known to have both catalytic and informational properties. Several viruses have RNA as genetic material. Later on, DNA evolved as genetic material while the enzyme function shifted to proteinaceous substances. It produced protocells or eobionts. **Protocells** were pre-living systems which had the machinery to perform several reactions, grow and divide. Some scientists believe that viruses evolved during this period and are actually protocells. *(Contd.....)*

ಸೀಟ್ ಬ್ಲಾಕಿಂಗ್ ಕೆಇಎ ವರದಿ ಸಿದ್ಧ

ಬೆಂಗಳೂರು: ಎಂಜಿನಿಯರಿಂಗ್ ಕಾಲೇಜುಗಳಲ್ಲಿ 'ಸೀಟ್ ಬ್ಲಾಕಿಂಗ್' ಅಕ್ರಮ ನಡೆದಿರುವ ಬಗೆಗಿನ ಮಾಹಿತಿ ಕಲೆ ಹಾಕಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಅದಕ್ಕೆ ಸಂಬಂಧಿಸಿದ ವರದಿಯನ್ನು ಉನ್ನತ ಶಿಕ್ಷಣ ಇಲಾಖೆಗೆ ಶೀಘ್ರ ಸಲ್ಲಿಸಲಿದೆ.

ಪ್ರಮುಖ ಕಾಲೇಜುಗಳಲ್ಲಿ ಬೇಡಿಕೆ ಇರುವ ಕೋರ್ಸ್‌ಗಳಿಗೆ ಸೀಟು ಹಂಚಿಕೆಯಾಗಿದ್ದರೂ, ಪ್ರವೇಶ ಪಡೆಯದ 2,348 ವಿದ್ಯಾರ್ಥಿಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನೋಟಿಸ್ ನೀಡಿತ್ತು.

ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸುವ ಸಿಇಟಿಯಲ್ಲಿ ಉನ್ನತ ರ್‍ಯಾಂಕ್ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳು ಎರಡನೇ ಸುತ್ತು ಪೂರ್ಣಗೊಳ್ಳುವವರೆಗೂ ಸೀಟು ಹಿಡಿದಿಟ್ಟುಕೊಂಡು ಕೊನೆಯ ಸುತ್ತಿನ ನಂತರ ತಮಗೆ ಹಂಚಿಕೆಯಾದ ಕಾಲೇಜಿಗಳಿಗೆ ಪ್ರವೇಶ ಪಡೆಯದೇ ಇತರೆ ವಿದ್ಯಾರ್ಥಿಗಳಿಗೆ ನಷ್ಟ ಮಾಡಿದ್ದಾರೆ ಎಂದು ಕೆಇಎ ದೂರಿತ್ತು.

ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸೀಟ್ ಬ್ಲಾಕಿಂಗ್ ಕುರಿತು ವಿಸ್ತೃತ ಚರ್ಚೆ ಮಾಡಲಾಗಿತ್ತು.

'ಸಭೆಯ ಸೂಚನೆಯಂತೆ ಮಾಹಿತಿ ಸಿದ್ಧಪಡಿಸಲಾಗಿದೆ. ಹಲವು ವಿದ್ಯಾರ್ಥಿಗಳು ನೋಟಿಸ್‌ಗೆ ಉತ್ತರ ನೀಡಿದ್ದಾರೆ. ಇನ್ನಷ್ಟು ಉತ್ತರಗಳನ್ನು ಸಂಗ್ರಹಿಸಿ ಒಂದೆರಡು ದಿನಗಳಲ್ಲಿ ವರದಿ ಸಲ್ಲಿಸಲಾಗುವುದು' ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಕಾಸರಗೋಡು ಬಳಿಯ ನೀಲೇಶ್ವರ: ಚಾವಣಿ ಇಲ್ಲದ ಶೆಡ್ ಒಳಗೆ ಹಾರಿದ ಕಿಡಿ

ಪಟಾಕಿ ದುರಂತ: 154 ಮಂದಿಗೆ ಗಾಯ

ಪ್ರಜಾವಾಣಿ ವಾರ್ತೆ

ನೀಲೇಶ್ವರ (ಕಾಸರಗೋಡು): ಪಟ್ಟಣದ ಅಂಇಾಟ್ಟಂಬಲಂ ವೀರರ್‌ಕಾವ್ ದೈವಸ್ಥಾನದಲ್ಲಿ ವಾರ್ಷಿಕ ಜಾತ್ರೆ ವೇಳೆ, ದಾಸ್ತಾನು ಇಟ್ಟಿದ್ದ ಪಟಾಕಿಗಳು ಸೋಮವಾರ ರಾತ್ರಿ 12.15ರ ಸುಮಾರಿಗೆ ಆಕಸ್ಮಿಕವಾಗಿ ಸ್ಫೋಟಿಸಿ ಸಂಬಂಧಿಸಿದ ಅಗ್ನಿದುರಂತದಲ್ಲಿ 154 ಮಂದಿ ಗಾಯಗೊಂಡಿದ್ದಾರೆ.

ಗಾಯಾಳುಗಳನ್ನು ಕಾಸರಗೋಡು, ಕಣ್ಣೂರು, ಕಾಞಂಗಾಡ್‌ನ ವಿವಿಧ ಆಸ್ಪತ್ರೆಗಳಿಗೆ ಹಾಗೂ ಮಂಗಳೂರಿನ ಎ.ಜೆ ಆಸ್ಪತ್ರೆ, ಕೆ.ಎಸ್.ಹೆಗ್ಡೆ ಮತ್ತು ಫಾದರ್ ಮುಲ್ಲರ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಗಾಯಾಳುಗಳಲ್ಲಿ 21 ಮಂದಿ ತೀವ್ರ ನಿಗಾ ಘಟಕಗಳಲ್ಲಿ (ಐಸಿಯು) ಚಿಕಿತ್ಸೆ ಪಡೆಯುತ್ತಿದ್ದು, ಒಬ್ಬರ ಸ್ಥಿತಿ ಚಿಂತಾಜನಕ ಆಗಿದೆ. 52 ಮಂದಿ ಚಿಕಿತ್ಸೆ ಪಡೆದು ಮಂಗಳವಾರ ಸಂಜೆ ಮನೆಗೆ ತೆರಳಿದ್ದಾರೆ.

ನೀಲೇಶ್ವರ–ಕಣ್ಣೂರು ಹೆದ್ದಾರಿ ಬದಿಯಲ್ಲಿರುವ ಈ ದೈವಸ್ಥಾನದಲ್ಲಿ ಮೂವಾಳಂಕುಳಿ ಚಾಮುಂಡಿಯ ವಾರ್ಷಿಕ ಕಳಿಯಾಟ್ಟಂ ಮಹೋತ್ಸವದ ಅಂಗವಾಗಿ ಮಂಗಳವಾರ ತೆಯ್ಯಂ ನಿಗದಿಯಾಗಿತ್ತು. ಈ ಪ್ರಯುಕ್ತ ಸೋಮವಾರ ತಡ ರಾತ್ರಿ ಕುಳಿಚ್ಚುತೋಟ್ಟಂ (ವೆಳ್ಳಾಟಂ) ನಡೆಯಬೇಕಿತ್ತು. ಇದನ್ನು ನೋಡಲು ಸುತ್ತಮುತ್ತಲ ಗ್ರಾಮಗಳ ಸಾವಿರಕ್ಕೂ ಹೆಚ್ಚು ಮಂದಿ ಸೇರಿದ್ದರು. ವೆಳ್ಳಾಟಂ ಇನ್ನೇನು ಆರಂಭವಾಗಬೇಕು ಎನ್ನುವಷ್ಟರಲ್ಲಿ ಪಟಾಕಿಯೊಂದನ್ನು ಸಿಡಿಸಲಾಗಿತ್ತು. ಅದರ ಕಿಡಿ ಹಾರಿ, ಮಾಲೆ ಪಟಾಕಿ ಮೇಲೆ ಬಿದ್ದಿದ್ದೇ ದುರಂತಕ್ಕೆ ಕಾರಣ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

'ಪಟಾಕಿ ಸಂಗ್ರಹಿಸಿದ್ದ ಶೆಡ್‌ನ ಮೇಲ್ಭಾಗ ತೆರೆದೇ ಇತ್ತು. ಅದರ ಮೂಲಕ ಪಟಾಕಿಯ ಕಿಡಿ ಹಾರಿ ಒಮ್ಮೆಲೇ ಧಗ್ ಎಂದು ಉರಿಯಿತು. ನಂತರ ಭಾರಿ ಸದ್ದಿನೊಂದಿಗೆ ಎಲ್ಲ ಪಟಾಕಿಗಳೂ ಸಿಡಿದವು. ಎಲ್ಲೆಡೆ ಹೊಗೆ ಆವರಿಸಿತು' ಎಂದು ಅವರು ವಿವರಿಸಿದರು.

ಈ ದುರಂತದ ಬಳಿಕ ಕಳಿಯಾಟಂ ಅನ್ನು ಸ್ಥಗಿತಗೊಳಿಸಲಾಗಿದೆ. ಹೆಚ್ಚು ಸಾಮರ್ಥ್ಯವಿಲ್ಲದ ಚೀನಾದ ಪಟಾಕಿಗಳನ್ನು ಮಾತ್ರ ಶೆಡ್‌ನಲ್ಲಿ ಇರಿಸಲಾಗಿತ್ತು. ಹೀಗಾಗಿ ದುರಂತದ ತೀವ್ರತೆ ಕಡಿಮೆಯಾಗಿತ್ತು ಎನ್ನಲಾಗಿದೆ. ಗಾಯಗೊಂಡವರಲ್ಲಿ ಹಸುಗೂಸು, ಮಕ್ಕಳು ಮತ್ತು ವೃದ್ಧರೂ ಇದ್ದರು.

'ಪಟಾಕಿಯನ್ನು ಜನರು ಸೇರುವ ಜಾಗದ ಬಳಿಯಲ್ಲೇ ಸಂಗ್ರಹಿಸಿಟ್ಟಿದ್ದು ನಿಯಮಬಾಹಿರ. ಇದರಿಂದಾಗಿ ಹೆಚ್ಚು ಮಂದಿ ಗಾಯಗೊಂಡಿದ್ದಾರೆ' ಎಂದು ಪೊಲೀಸ್ ವರಿಷ್ಠಾಧಿಕಾರಿ ಡಿ.ಶಿಲ್ಪ ತಿಳಿಸಿದ್ದಾರೆ.

'ಹಿಂದಿನ ವರ್ಷಗಳಲ್ಲಿ ದೈವಸ್ಥಾನದ ಹಿಂಭಾಗದಲ್ಲಿ ಪಟಾಕಿ ಸಿಡಿಸುತ್ತಿದ್ದರು. ಈ ಬಾರಿ ಜನರು ಸೇರಿದ್ದ ಜಾಗದಲ್ಲೇ ಸಿಡಿಸಿದ್ದಾರೆ. ಪಟಾಕಿಗೆ ಬೆಂಕಿ ಹಚ್ಚುತ್ತಿದ್ದಂತೆ ಅನೇಕ ಭಕ್ತರು ವಿರೋಧ ವ್ಯಕ್ತಪಡಿಸಿದ್ದಾರೆ. ಆದರೆ ಅದನ್ನು ಕಿವಿಗೆ ಹಾಕಿಕೊಳ್ಳದೆ ಸಿಡಿಸಿದ್ದೇ ಘಟನೆಗೆ ಕಾರಣ' ಎಂದು ಭಕ್ತರು ದೂರಿದ್ದಾರೆ.

ದೈವಸ್ಥಾನ ಆಡಳಿತ ಸಮಿತಿಯ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಕಾಸರಗೋಡು ಜಿಲ್ಲಾಧಿಕಾರಿ ಡಿ. ಇಂಬಶೇಖರನ್ ತಿಳಿಸಿದ್ದಾರೆ. ಅಧ್ಯಕ್ಷ ಮತ್ತು ಕಾರ್ಯದರ್ಶಿಯನ್ನು ವಶಕ್ಕೆ ಪಡೆಯಲಾಗಿದೆ.

ತನಿಖೆಗೆ ವಿಶೇಷ ತಂಡ: ವೀರರ್‌ಕಾವ್ ದೈವಸ್ಥಾನದಲ್ಲಿ ಸಂಭವಿಸಿದ ಪಟಾಕಿ ದುರಂತದ ತನಿಖೆಗೆ ಕಾಞಂಗಾಡ್ ಡಿವೈಎಸ್‌ಪಿ ನೇತೃತ್ವದಲ್ಲಿ ವಿಶೇಷ ತಂಡ ರಚಿಸಲಾಗಿದೆ ಎಂದು ಘಟನಾ ಸ್ಥಳಕ್ಕೆ ಭೇಟಿ ನೀಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಿ.ಶಿಲ್ಪಾ ಮಾಧ್ಯಮಗಳಿಗೆ ತಿಳಿಸಿದ್ದಾರೆ. ಜಿಲ್ಲಾಡಳಿತದ ಪರವಾಗಿ ಸಹಾಯಕ ಜಿಲ್ಲಾಧಿಕಾರಿ ತನಿಖೆ ನಡೆಸಲಿದ್ದಾರೆ ಎಂದು ಜಿಲ್ಲಾಧಿಕಾರಿ ಡಿ. ಇಂಬಶೇಖರನ್ ತಿಳಿಸಿದ್ದಾರೆ.

ಸಮಗ್ರ ತನಿಖೆ: ದುರಂತದ ಬಗ್ಗೆ ಸಮಗ್ರ ತನಿಖೆ ನಡೆಸಲಾಗುವುದು ಎಂದು ಕೇರಳದ ಕೈಗಾರಿಕಾ ಸಚಿವ ಪಿ.ರಾಜೀವ್ ತಿಳಿಸಿದ್ದಾರೆ. ಸ್ಥಳಕ್ಕೆ ಭೇಟಿ ನೀಡಿದ ಅವರು ಮಾಧ್ಯಮದವರೊಂದಿಗೆ ಮಾತನಾಡಿ, 'ಸುಡುಮದ್ದು ಸಿಡಿಸುವಾಗ ನಿಂಬಂಧನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು' ಎಂದರು.



ಪಟಾಕಿ ಸ್ಫೋಟ ನಡೆದ ಸ್ಥಳದಲ್ಲಿ ತನಿಖಾ ತಂಡದವರು ಪರಿಶೀಲನೆ ನಡೆಸಿದರು(ಎಡಚಿತ್ರ) ಸಿಡಿದ ಪಟಾಕಿಯ ಅವಶೇಷಗಳು ಸಮೀಪದ ತೋಟಕ್ಕೆ ಬಿದ್ದಿವೆ ಚಿತ್ರಗಳು: ಜಿಲ್ಲಾಡಳಿತ

ಸಾವು– ಬದುಕಿನ ಹೋರಾಟ

ಮಂಗಳೂರು: ಆತನಿನ್ನೂ 17 ವರ್ಷದ ಬಾಲಕ. ಕೈಗಾರಿಕಾ ತರಬೇತಿ ಸಂಸ್ಥೆಯೊಂದರ ವಿದ್ಯಾರ್ಥಿ. ಆತನ ದೇಹದ ಶೇ 50 ರಷ್ಟು ಭಾಗಗಳು ಸುಟ್ಟುಹೋಗಿವೆ. ನಿನ್ನೆವರೆಗೂ ಓಡಾಡಿಕೊಂಡು ಚೆನ್ನಾಗಿದ್ದ ಹುಡುಗ, ಈಗ ಸಾವು ಬದುಕಿನ ನಡುವೆ ಹೋರಾಡುತ್ತಿದ್ದಾನೆ.

ಪಟಾಕಿ ದುರಂತದಲ್ಲಿ ಗಾಯಗೊಂಡಿರುವ ನೀಲೇಶ್ವರ ಸಮೀಪದ ಚೆರ್ವತ್ತೂರು ಗ್ರಾಮದ ಧನುಷ್ ಅವರ ಸ್ಥಿತಿ ಇದು. ಇಲ್ಲಿನ ಎ.ಜೆ. ಆಸ್ಪತ್ರೆಯ ಸರ್ಜಿಕಲ್ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿರುವ ಆತ ಬೇಗ ಚೇತರಿಸಿಕೊಳ್ಳಲಿ ಎಂದು ಬಂಧುಗಳು ಪ್ರಾರ್ಥಿಸುತ್ತಿದ್ದಾರೆ.

'ಕಾಸರಗೋಡು ಜಿಲ್ಲೆಯ ಆಸ್ಪತ್ರೆಗಳ ಸುಟ್ಟಗಾಯಗಳ ವಾರ್ಡ್‌ಗಳೆಲ್ಲ ಭರ್ತಿಯಾಗಿವೆ. ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದು ಬಳಿಕ ಆಂಬುಲೆನ್ಸ್ ಚಾಲಕ ನೀಡಿದ ಸಲಹೆ ಮೇರೆಗೆ ನಮ್ಮ ಅಣ್ಣನ ಮಗನನ್ನು ಚಿಕಿತ್ಸೆಗಾಗಿ ಮಂಗಳೂರಿಗೆ ಕರೆತಂದೆವು' ಎಂದು ಇನ್ನೊಬ್ಬ ಗಾಯಾಳು ಅತುಲ್ ಬಾಬು ಅವರ ಚಿಕ್ಕಪ್ಪ ಅಜಯ್ ತಿಳಿಸಿದರು.

ದುರಂತದಲ್ಲಿ ಗಂಭೀರವಾಗಿ ಗಾಯಗೊಂಡಿರುವ 21 ಮಂದಿಯನ್ನು ಇಲ್ಲಿನ ಎ.ಜೆ. ಆಸ್ಪತ್ರೆಗೆ ದಾಖಲಿಸಲಾಗಿದೆ. ಇವರಲ್ಲಿ ಕೆಲವರ ಸ್ಥಿತಿ ಚಿಂತಾಜನಕವಾಗಿದೆ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ. ಕೆ.ಎಸ್. ಹೆಗ್ಡೆ ಆಸ್ಪತ್ರೆಯಲ್ಲಿ ಮೂವರು, ಫಾದರ್ ಮುಲ್ಲರ್ ಆಸ್ಪತ್ರೆಯಲ್ಲಿ ಒಬ್ಬರು ಚಿಕಿತ್ಸೆಗೆ ದಾಖಲಾಗಿದ್ದಾರೆ.

ದತ್ತಮಾಲಾ ಅಭಿಯಾನ 4ರಿಂದ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಚಿಕ್ಕಮಗಳೂರು ದತ್ತ ಪೀಠದಲ್ಲಿನ ಇಸ್ಲಾಮಿಕ್ ಅತಿಕ್ರಮಣ ಮುಕ್ತಿಗೊಳಿಸಿ ಸಂಪೂರ್ಣ ಹಿಂದೂ ಪೀಠ ಸ್ಥಾಪಿಸಲು ದತ್ತಮಾಲಾ ಅಭಿಯಾನ ನವೆಂಬರ್ 4ರಿಂದ 10ರವರೆಗೆ ನಡೆಯಲಿದೆ' ಎಂದು ಶ್ರೀರಾಮ ಸೇನೆ ರಾಜ್ಯ ಪ್ರಧಾನ ಕಾರ್ಯದರ್ಶಿ ಆನಂದ್ ಶೆಟ್ಟಿ ಅಡ್ಯಾರ್ ತಿಳಿಸಿದರು.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಈ ಮಾಹಿತಿ ನೀಡಿದ ಅವರು, ನವೆಂಬರ್ 4ರಂದು ಮಾಲಾಧಾರಣೆ, 7ರಂದು ದತ್ತ ದೀಪೋತ್ಸವ, 9ರಂದು ಪಡಿ ಸಂಗ್ರಹ (ಭಿಕ್ಷಾಟನೆ) ನಡೆಸಲಾಗುವುದು. 10ರಂದು ಚಿಕ್ಕಮಗಳೂರಿನಲ್ಲಿ ಧರ್ಮಸಭೆ, ಶೋಭಾಯಾತ್ರೆ, ದತ್ತ ಪೀಠದಲ್ಲಿ ಹೋಮ, ಹವನ, ಪ್ರಸಾದ ವಿತರಣೆ ಜರುಗುವುದು ಎಂದು ತಿಳಿಸಿದರು.

ಧರ್ಮಸಭೆಯಲ್ಲಿ ಶ್ರೀರಾಮ ಸೇನೆ ಗೌರವಾಧ್ಯಕ್ಷ, ಜೇವರ್ಗಿ ಕರುಣೇಶ್ವರ ಮಠದ ಸಿದ್ಧಲಿಂಗ ಸ್ವಾಮೀಜಿ, ಶ್ರೀಕ್ಷೇತ್ರ ಗಾಣಗಾಪುರದ ವಿವೇಕ ಚಿಂತಾಮಣಿ ಮಾಹಾರಾಜ ದಿವ್ಯಸಾನಿಧ್ಯ ವಹಿಸುವರು. ಹಿಂದುತ್ವವಾದಿ ಮಾಧವಿ ಲತಾ, ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ, ಮಾಜಿ ಸಂಸದ ಪ್ರತಾಪ ಸಿಂಹ ಭಾಗವಹಿಸಲಿದ್ದು, ಶ್ರೀರಾಮ ಸೇನೆ ಸ್ಥಾಪಕಾಧ್ಯಕ್ಷ ಪ್ರಮೋದ್ ಮುತಾಲಿಕ್ ಕಾರ್ಯಕ್ರಮಗಳ ನೇತೃತ್ವ ವಹಿಸುವರು ಎಂದು ಹೇಳಿದರು.

ರಾಜ್ಯದಿಂದ ಹತ್ತು ಸಾವಿರಕ್ಕೂ ಅಧಿಕ ಮಾಲಾಧಾರಿಗಳು ಅಭಿಯಾನದಲ್ಲಿ ಭಾಗವಹಿಸಲಿದ್ದಾರೆ ಎಂದು ಅವರು ಹೇಳಿದರು.

ವಕ್ಫ್ ಆಸ್ತಿ ವಿವಾದ: ಕಾಂಗ್ರೆಸ್ ಸರ್ಕಾರದ ವಿರುದ್ಧ ಆಕ್ರೋಶ

ರೈತರ ಆಸ್ತಿ ಕಬಳಿಸುವ ಹುನ್ನಾರ: ಕಾರಜೋಳ

ಪ್ರಜಾವಾಣಿ ವಾರ್ತೆ

ವಿಜಯಪುರ: ವಕ್ಫ್ ಮಂಡಳಿ ನೀಡಿದ ನೋಟಿಸ್‌ನಿಂದ ಆತಂಕದಲ್ಲಿರುವ ರೈತರ ಅಹವಾಲು ಆಲಿಸಲು ಮಂಗಳವಾರ ಸಂಸದ ಗೋವಿಂದ ಕಾರಜೋಳ ನೇತೃತ್ವದ ರಾಜ್ಯ ಬಿಜೆಪಿ ತಂಡ ಜಿಲ್ಲೆಗೆ ಭೇಟಿ ನೀಡಿತು. ಕೃಷಿಕರು, ಮಠಾಧೀಶರು ಹಾಗೂ ಜಿಲ್ಲಾಧಿಕಾರಿಯನ್ನು ಭೇಟಿಯಾಗಿ, ಮಾಹಿತಿ ಸಂಗ್ರಹಿಸಿತು.

ಗೋವಿಂದ ಕಾರಜೋಳ ಮಾತನಾಡಿ, 'ಪ್ರಧಾನಿಯವರು ವಕ್ಫ್ ಕಾಯ್ದೆಗೆ ತಿದ್ದುಪಡಿ ತರಲು ಮುಂದಾಗಿದ್ದಾರೆ. ಇದಕ್ಕೆ ಕಾಂಗ್ರೆಸ್ ಮತ್ತು ಮಿತ್ರ ಪಕ್ಷಗಳು ತೀವ್ರ ವಿರೋಧ ವ್ಯಕ್ತಪಡಿಸಿವೆ. ಈ ಹಿನ್ನೆಲೆಯಲ್ಲಿ ಜಂಟಿ ಸದನ ಸಮಿತಿ ರಚಿಸಲಾಗಿದೆ' ಎಂದರು.

'ನವೆಂಬರ್‌ನಲ್ಲಿ ನಡೆಯುವ ಅಧಿವೇಶನದಲ್ಲಿ ಮಸೂದೆ ಮಂಡಿಸಲು ಸಿದ್ಧತೆ ನಡೆದಿದೆ. ರಾಜ್ಯ ಸರ್ಕಾರ ರೈತರ ಭೂಮಿ ಕಬಳಿಸುವ ಹುನ್ನಾರ ನಡೆಸಿದೆ' ಎಂದರು.

'ಪರಿಶಿಷ್ಟ ಜಾತಿ ಮತ್ತು ಪಂಗಡದವರ ಭೂಮಿ ಕಿತ್ತುಕೊಳ್ಳಲು ಸರ್ಕಾರ ಮುಂದಾಗಿದೆ. ದೇವಸ್ಥಾನದ ಪೂಜೆ ಮಾಡುವವರಿಗೆ ನೀಡಿದ ಭೂಮಿಯನ್ನೂ ವಕ್ಫ್‌ಗೆ ಸೇರಿದ್ದು ಎಂದು ಹೇಳಲಾಗಿದೆ. ಮಸೀದಿ, ದರ್ಗಾದಲ್ಲಿ ಕೆಲಸ ಮಾಡುವ ಮುಲ್ಲಾ, ಮೌಲ್ವಿಗಳ ಆಸ್ತಿಗೂ ಕುತ್ತು ಬಂದಿದೆ. ಸರ್ಕಾರಿ ಜಮೀನನ್ನು ಕೂಡ ವಕ್ಫ್ ಆಸ್ತಿ ಎಂದು ಮಾಡಿದ್ದಾರೆ. ಎಲ್ಲರ ಆಸ್ತಿಯನ್ನು ಕಬಳಿಸಿ, ಆ ಆಸ್ತಿಗೆ ವಕ್ಫ್ ಅನ್ನು ಮಾಲೀಕನನ್ನಾಗಿ ಮಾಡಲು ಕಾಂಗ್ರೆಸ್ ಸರ್ಕಾರ ಕೈಹಾಕಿದೆ' ಎಂದು ಆರೋಪಿಸಿದರು.

'ವಿಜಯಪುರ ಜಿಲ್ಲೆಯಿಂದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಕೈಗೊಂಡಿರುವ ವಕ್ಫ್ ಆಸ್ತಿ ವಿರುದ್ಧ ಹೋರಾಟಕ್ಕೆ ಬಿಜೆಪಿಯು ದೆಹಲಿಯಿಂದ ಹಳ್ಳಿಯವರೆಗೆ ಸಂಪೂರ್ಣ ಬೆಂಬಲ ನೀಡಲಿದೆ' ಎಂದರು.

ಜಿಗಜಿಣಗಿ, ಯತ್ನಾಳ ಗೈರು: ಬಿಜೆಪಿ ತಂಡದಲ್ಲಿ ಸಂಸದ ರಮೇಶ ಜಿಗಜಿಣಗಿ ಮತ್ತು ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಹೆಸರಿದ್ದರೂ ಇಬ್ಬರೂ ಪಾಲ್ಗೊಳ್ಳದೇ ಗೈರಾದರು.

ಶಾಸಕ ಮಹೇಶ ಟೆಂಗಿನಕಾಯಿ, ಹರೀಶ ಪೂಂಜಾ, ವಿಧಾನ ಪರಿಷತ್ ಮಾಜಿ ಸದಸ್ಯ ಅರುಣ ಶಹಪೂರ, ಬಿಜೆಪಿ ರೈತ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಕಲ್ಮರುಡಪ್ಪ, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಆರ್.ಎಸ್.ಪಾಟೀಲ ಕೂಚಬಾಳ, ಬಸವರಾಜ ಯಂಕಂಚಿ, ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ ಇದ್ದರು.

> ಸಮಗ್ರ ಮಾಹಿತಿ ಒಳಗೊಂಡ ವರದಿಯನ್ನು ಬಿಜೆಪಿ ಕೇಂದ್ರ ಮತ್ತು ರಾಜ್ಯ ಘಟಕಕ್ಕೆ ಸಲ್ಲಿಸುತ್ತೇವೆ. ಬಿಜೆಪಿ ರೈತರ ಪರ ನಿಲ್ಲಲಿದೆ
> **ಗೋವಿಂದ ಕಾರಜೋಳ,** ಸಂಸದ

ವಿಜಯಪುರ ಜಿಲ್ಲೆಯ ಪಡಗಾನೂರಿನ ಸೋಮೇಶ್ವರ ದೇವಾಲಯಕ್ಕೆ ಮಂಗಳವಾರ ಸಂಸದ ಗೋವಿಂದ ಕಾರಜೋಳ ನೇತೃತ್ವದ ಬಿಜೆಪಿ ತಂಡ ಭೇಟಿ ನೀಡಿತು. ಶಾಸಕ ಮಹೇಶ ಟೆಂಗಿನಕಾಯಿ, ಹರೀಶ ಪೂಂಜಾ, ವಿಧಾನ ಪರಿಷತ್ ಮಾಜಿ ಸದಸ್ಯ ಅರುಣ ಶಹಪೂರ ಇದ್ದರು

'ನೋಟಿಸ್ ಕೊಟ್ಟಿದ್ದೇ ಬಿಜೆಪಿ ಸರ್ಕಾರ'

ಬೆಂಗಳೂರು: 'ವಕ್ಫ್ ಆಸ್ತಿ ವಿಚಾರದಲ್ಲಿ ಬಿಜೆಪಿ ಕೆಟ್ಟ ರಾಜಕಾರಣ ಮಾಡುತ್ತಿದೆ. 2019ರಿಂದ 2022ರವರೆಗೆ ರಾಜ್ಯದಲ್ಲಿ ಅವರದೇ ಸರ್ಕಾರ ಇದ್ದಾಗ ವಿಜಯಪುರ ಜಿಲ್ಲೆಯ ರೈತರಿಗೆ ವಕ್ಫ್ ಮಂಡಳಿ ಮೂಲಕ ನೋಟಿಸ್ ನೀಡಲಾಗಿತ್ತು' ಎಂದು ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಹೇಳಿದ್ದಾರೆ.

ಬಿಜೆಪಿ ಆಡಳಿತದ ಅವಧಿಯಲ್ಲಿ ನೀಡಿದ್ದ ನೋಟಿಸ್ ಜೊತೆ, 'ಎಕ್ಸ್' ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, 'ಆಗ ಇರದ ಹಿಂದೂ ಪ್ರೇಮವನ್ನು ಈಗ ಕಪೋಲಕಲ್ಪಿತ ಸುಳ್ಳುಗಳ ಮೂಲಕ ಬಿಜೆಪಿಯವರು ವ್ಯಕ್ತಪಡಿಸುತ್ತಿದ್ದಾರೆ' ಎಂದು ಟೀಕಿಸಿದ್ದಾರೆ.

ರೈತರಿಂದ ಅಹೋರಾತ್ರಿ ಧರಣಿ

ರೈತರ ಪಹಣಿಯಲ್ಲಿ ವಕ್ಫ್ ಆಸ್ತಿ ಎಂದು ನಮೂದಿಸಿದ್ದನ್ನು ವಿರೋಧಿಸಿ ರೈತ ಸಂಘದ ನೇತೃತ್ವದಲ್ಲಿ ರೈತರು ವಿಜಯಪುರ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಮಂಗಳವಾರ ಅಹೋರಾತ್ರಿ ಧರಣಿ ನಡೆಸಿದರು. ಸ್ಥಳದಲ್ಲೇ ಅಡುಗೆ ಸಿದ್ಧಪಡಿಸಿ, ಊಟ ಮಾಡಿದರು.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ಮುಖಂಡ ಉಮೇಶ ಕಾರಜೋಳ, ಅಖಂಡ ಕರ್ನಾಟಕ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ, ರಾಜ್ಯ ರೈತ ಸಂಘ ಹಸಿರು ಸೇನೆ ಜಿಲ್ಲಾಧ್ಯಕ್ಷ ಸಂಗಮೇಶ ಸಗರ ಪಾಲ್ಗೊಂಡಿದ್ದರು.

ಇಂಡಿಯಲ್ಲಿ ಸುದ್ದಿಗಾರರ ಜೊತೆ ರೈತ ಮುಖಂಡ ಕೋಡಿಹಳ್ಳಿ ಚಂದ್ರಶೇಖರ್ ಮಾತನಾಡಿ, 'ರೈತರ ಪಹಣಿಯಲ್ಲಿ ವಕ್ಫ್ ಮಂಡಳಿ ಹೆಸರು ಸೇರಿಸಿದ್ದನ್ನು ಈ ಕೂಡಲೇ ಹಿಂಪಡೆಯಬೇಕು. ಇಲ್ಲದಿದ್ದರೆ, ರಾಜ್ಯದೆಲ್ಲೆಡೆ ಹೋರಾಟ ಮಾಡುತ್ತೇವೆ' ಎಂದರು.

ನ.5ರಂದು ಹಾಜರಾಗಲು ಸೂಚನೆ

ಧಾರವಾಡ: ತಾಲ್ಲೂಕಿನ ಉಪ್ಪಿನಬೆಟಗೇರಿಯ ಕೆಲ ರೈತರ ಪಹಣಿಯಲ್ಲಿ 'ಜಮೀನು ವಕ್ಫ್ ಆಸ್ತಿ ಒಳಪಟ್ಟಿರುತ್ತದೆ' ಎಂದು ನಮೂದಾದ ಕುರಿತು ಚರ್ಚಿಸಲು ನವೆಂಬರ್ 5ರಂದು ತಹಶೀಲ್ದಾರ್ ಕಚೇರಿಗೆ ಹಾಜರಾಗುವಂತೆ ರೈತರಿಗೆ ಮೌಖಿಕವಾಗಿ ತಿಳಿಸಲಾಗಿದೆ.

'ನವೆಂಬರ್ 5ರಂದು ವಿಚಾರಣೆ ನಡೆಸಲಾಗುವುದು. ಉಪ್ಪಿನ ಬೆಟಗೇರಿಯ ನಾಲ್ಕು ಪಹಣಿಯಲ್ಲಿ (6 ರೈತರು) 'ವಕ್ಫ್' ಎಂದು ದಾಖಲಾಗಿರುವುದು ಕಂಡುಬಂದಿದೆ. ಎರಡೂ ಕಡೆಯವರ (ವಕ್ಫ್ ಅಧಿಕಾರಿ ಮತ್ತು ರೈತರು) ದಾಖಲೆಗಳನ್ನು ಪರಿಶೀಲಿಸಿ, ಸಮಸ್ಯೆ ಪರಿಹರಿಸಲಾಗುವುದು' ಎಂದು ತಹಶೀಲ್ದಾರ್ ದೊಡ್ಡಪ್ಪ ಹೂಗಾರ 'ಪ್ರಜಾವಾಣಿ'ಗೆ ತಿಳಿಸಿದರು.

ಪುನೀತ್ ರಾಜ್‌ಕುಮಾರ್ ಸಮಾಧಿಗೆ ಅಶ್ವಿನಿ ಪುನೀತ್ ರಾಜ್‌ಕುಮಾರ್, ವಂದಿತಾ, ನಟ ರಾಘವೇಂದ್ರ ರಾಜ್‌ಕುಮಾರ್ ದಂಪತಿ ಹಾಗೂ ಕುಟುಂಬದ ಸದಸ್ಯರು ಪೂಜೆ ಸಲ್ಲಿಸಿದರು ಪ್ರಜಾವಾಣಿ ಚಿತ್ರ

ಪುನೀತ್ 3ನೇ ವರ್ಷದ ಪುಣ್ಯಸ್ಮರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ಪುನೀತ್ ರಾಜ್‌ಕುಮಾರ್ ಅವರು ಅಗಲಿ ಮೂರು ವರ್ಷಗಳು ಉರುಳಿವೆ. ಮಂಗಳವಾರ (ಅ.29) ಪುನೀತ್ ಅವರ ಪತ್ನಿ ಅಶ್ವಿನಿ ಪುನೀತ್ ರಾಜ್‌ಕುಮಾರ್, ಮಗಳು ವಂದಿತಾ, ನಟ ಶಿವರಾಜ್‌ಕುಮಾರ್ ದಂಪತಿ, ನಟ ರಾಘವೇಂದ್ರ ರಾಜ್‌ಕುಮಾರ್ ದಂಪತಿ ಸೇರಿದಂತೆ ಕುಟುಂಬದ ಸದಸ್ಯರು ಇಲ್ಲಿನ ಕಂಠೀರವ ಸ್ಟುಡಿಯೊದಲ್ಲಿರುವ ಪುನೀತ್ ಅವರ ಸಮಾಧಿಗೆ ಪೂಜೆ ಸಲ್ಲಿಸಿದರು.

ಅ.29, 2021 ರಂದು ಪುನೀತ್ ಅವರು ಅಕಾಲಿಕವಾಗಿ ನಿಧನರಾದರು. ಪೂಜೆ ಸಲ್ಲಿಸಿದ ಬಳಿಕ ಅಶ್ವಿನಿ ಪುನೀತ್ ರಾಜ್‌ಕುಮಾರ್ ಹಾಗೂ ವಂದಿತಾ ಅವರು ಪುನೀತ್ ಅವರ ನೆಚ್ಚಿನ ತಿಂಡಿ, ಸಿಹಿ ತಿನಿಸುಗಳನ್ನು ಎಡೆ ಇಟ್ಟರು. ವರ್ಷ ಉರುಳಿದಂತೆ ಪುನೀತ್ ಅವರ ಸಮಾಧಿಗೆ ಭೇಟಿ ನೀಡುವವರ ಸಂಖ್ಯೆ ಹೆಚ್ಚುತ್ತಲೇ ಇದೆ. ಮಂಗಳವಾರವೂ ಸಾವಿರಾರು ಜನರು ಸಮಾಧಿಗೆ ಭೇಟಿ ನೀಡಿ ಪುಷ್ಪನಮನ ಸಲ್ಲಿಸಿದರು. ದಸರಾ ಸಂದರ್ಭ ಮೈಸೂರಿನಲ್ಲಿ ವಿದ್ಯುದ್ದೀಪಾಲಂಕಾರ ಮಾಡಿದವರೇ ಇಲ್ಲಿ ಸಮಾಧಿ ಸುತ್ತಮುತ್ತ ವಿದ್ಯುದ್ದೀಪಾಲಂಕಾರ ಮಾಡಿದ್ದಾರೆ. ಪುಣ್ಯಭೂಮಿಯ ಆವರಣದಲ್ಲೇ ಅಭಿಮಾನಿಗಳು ನೇತ್ರದಾನದ ಪ್ರತಿಜ್ಞೆ ತೆಗೆದುಕೊಂಡರು. ಅನ್ನದಾನ ಮತ್ತು ರಕ್ತದಾನದ ಕಾರ್ಯಗಳೂ ನಡೆದವು. ಪುನೀತ್ ರಾಜ್‌ಕುಮಾರ್ ಹುಟ್ಟಿದ ವರ್ಷ, ನಿಧನರಾದ ವರ್ಷ ಹಾಗೂ 2024ರಲ್ಲಿ ಬಿಡುಗಡೆಗೊಂಡ ನಾಣ್ಯಗಳನ್ನು, ನೋಟ್‌ಗಳನ್ನು ಬಳಸಿಕೊಂಡು ರಚಿಸಿದ ಕಲಾಕೃತಿಗಳು ನೆರೆದವರನ್ನು ಸೆಳೆದವು.

'ಪ್ರತಿನಿತ್ಯವೂ ಅವನ ನೆನಪಿನಲ್ಲೇ ಇದ್ದೇವೆ. ಜನಗಳ ಪ್ರೀತಿ ಕಮ್ಮಿ ಆಗುತ್ತಲೇ ಇಲ್ಲ. ಅವರ ಪ್ರೀತಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಪುನೀತ್ ಅವರ ಗುಣಗಳನ್ನು ನಿಮ್ಮಲ್ಲೂ ಮುಂದುವರಿಸಿ ಎಂದು ಅಭಿಮಾನಿಗಳಲ್ಲಿ ಕೇಳಿಕೊಳ್ಳುತ್ತೇನೆ' ಎಂದು ನಟ ರಾಘವೇಂದ್ರ ರಾಜ್‌ಕುಮಾರ್ ಹೇಳಿದರು.

'ಕಲ್ಯಾಣ'ದಲ್ಲೂ 'ವಕ್ಫ್ ಆಸ್ತಿ' ಸದ್ದು

ಪ್ರಜಾವಾಣಿ ವಾರ್ತೆ

ಕಲಬುರಗಿ/ ಯಾದಗಿರಿ: ಕಲ್ಯಾಣ ಕರ್ನಾಟಕದ ಕಲಬುರಗಿ, ಯಾದಗಿರಿ, ಕೊಪ್ಪಳ ಹಾಗೂ ಬೀದರ್ ಜಿಲ್ಲೆಗಳಲ್ಲೂ ರೈತರ ಜಮೀನಿನ ಪಹಣಿಯಲ್ಲಿ 'ವಕ್ಫ್ ಆಸ್ತಿ' ಎಂದು ನಮೂದಾಗಿರುವ ಪ್ರಕರಣ ಬೆಳಕಿಗೆ ಬಂದಿದೆ. ಕೆಲವೆಡೆ ನೋಟಿಸ್ ಸಹ ನೀಡಲಾಗಿದ್ದು, ಸಾಲ ಸೌಲಭ್ಯ ಸಿಗುತ್ತಿಲ್ಲ ಎಂದು ರೈತರು ಅಸಮಾಧಾನ ಹೊರಹಾಕಿದ್ದಾರೆ.

ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ 35 ರೈತರಿಗೆ ಎರಡು ಬಾರಿ ನೋಟಿಸ್ ಜಾರಿ ಮಾಡಿ ವಿಚಾರಣೆ ಮಾಡದೆ ರೈತರನ್ನು ವಾಪಸ್ ಕಳುಹಿಸಲಾಗಿದೆ. ಅವಿಭಜಿತ ಚಿತ್ತಾಪುರ ತಾಲ್ಲೂಕಿನಲ್ಲಿ 247 (ಕಾಳಗಿ, ಶಹಾಬಾದ್ ಸೇರಿ) ಮಂದಿಗೆ ನೋಟಿಸ್ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಇನ್ನೊಂದೆಡೆ ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ಕೊಂಗಂಡಿ ಗ್ರಾಮದ 20ಕ್ಕೂ ಅಧಿಕ ರೈತರ ಜಮೀನಿನ ಪಹಣಿಯಲ್ಲಿ ವಕ್ಫ್ ಮಂಡಳಿ ಹೆಸರು ಸೇರ್ಪಡೆಯಾಗಿದೆ.

ನೋಟಿಸ್ ನೀಡಿಲ್ಲ: 'ವಕ್ಫ್ ಆಸ್ತಿಗೆ ಸಂಬಂಧಿಸಿದಂತೆ ವಕ್ಫ್ ಮಂಡಳಿಯಿಂದ ಜಿಲ್ಲೆಯ ರೈತರಿಗೆ ನೋಟಿಸ್ ನೀಡಿಲ್ಲ. ಈ ವಿಷಯದಲ್ಲಿ ರೈತರಿಗೆ ತೊಂದರೆ ಉಂಟಾಗುವ ನಿಟ್ಟಿನಲ್ಲಿ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ಯಾದಗಿರಿ ಜಿಲ್ಲಾಧಿಕಾರಿ ಡಾ.ಸುಶೀಲಾ ಬಿ. ಸ್ಪಷ್ಟನೆ ನೀಡಿದ್ದಾರೆ.

'2019ರಿಂದ 2023ರವರೆಗೆ ಜಿಲ್ಲಾ ವಕ್ಫ್ ಬೋರ್ಡ್‌ನಿಂದ ರೈತರಿಗೆ ಯಾವುದೇ ನೋಟಿಸ್ ನೀಡಿಲ್ಲ. ಜಿಲ್ಲೆಯ ಎಲ್ಲ ತಹಶೀಲ್ದಾರ್ ಕಚೇರಿಯಿಂದ ರೈತರಿಗೆ ನೋಟಿಸ್ ನೀಡಿದ್ದಾರೆ. ಈ ಬಗ್ಗೆ ಮಾಹಿತಿ ಪಡೆಯಲಾಗುವುದು' ಎಂದು ಜಿಲ್ಲಾ ವಕ್ಫ್ ಅಧಿಕಾರಿ ಸಲೀಂ ಪಾಷಾ ತಿಳಿಸಿದ್ದಾರೆ.

300 ರೈತರಿಗೆ ನೋಟಿಸ್: 'ಜಿಲ್ಲೆಯ 300ಕ್ಕೂ ಹೆಚ್ಚು ರೈತರ ಜಮೀನು ವಕ್ಫ್ ಹೆಸರಿಗೆ ಬದಲಾವಣೆ ಮಾಡಲಾಗಿದೆ. ರೈತರು ಜಮೀನು ಕಳೆದುಕೊಳ್ಳುವ ಭೀತಿಯಲ್ಲಿದ್ದಾರೆ. ಶೀಘ್ರದಲ್ಲೇ ಇದರ ವಿರುದ್ಧ ಹೋರಾಟ ನಡೆಸಲಾಗುವುದು' ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ ಘಟಕದ ಅಧ್ಯಕ್ಷ ಸಿದ್ರಾಮಪ್ಪ ಆಣದೂರೆ ತಿಳಿಸಿದ್ದಾರೆ.

ಕೊಪ್ಪಳ ಜಿಲ್ಲೆಯ ಕುಕನೂರು ತಾಲ್ಲೂಕಿನ 481 ಎಕರೆ ರೈತರ ಭೂಮಿಯ ಪಹಣಿಯಲ್ಲಿ ವಕ್ಫ್ ಮಂಡಳಿ ಆಸ್ತಿ ಎಂದು ನಮೂದಿಸಲಾಗಿದೆ.

ರೈತರಿಗೆ ಅನ್ಯಾಯವಾಗಿದ್ದರೆ ಸರಿಪಡಿಸಲಾಗುವುದು ಎಂದು ಸಚಿವ ಶರಣಬಸಪ್ಪ ದರ್ಶನಾಪುರ ಹೇಳಿದ್ದಾರೆ.

ಸರ್ಕಾರಿ ನಿವೇಶನ ಆಸ್ತಿಗೆ ವಕ್ಫ್ ಹೆಸರು

ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನ ಸಾವಳೇಶ್ವರ ಗ್ರಾಮದಲ್ಲಿನ ಸರ್ಕಾರಿ ನಿವೇಶನದ 8 ಎಕರೆ ಆಸ್ತಿಯ ಪಹಣಿ ಪತ್ರದಲ್ಲಿ ಜಮೀನು ವಕ್ಫ್ ಆಸ್ತಿಗೆ ಒಳಪಟ್ಟಿರುತ್ತದೆ ಎಂದು ನಮೂದಿಸಲಾಗಿದೆ.

'30 ವರ್ಷಗಳ ಹಿಂದೆ ವಿವಿಧ ವಸತಿ ಯೋಜನೆಗಳಡಿ ಬಡ ಫಲಾನುಭವಿಗಳಿಗೆ ನಿವೇಶನ ಹಂಚಿಕೆ ಮಾಡಲು ರಾಜ್ಯ ಸರ್ಕಾರವು ತಹಶೀಲ್ದಾರ್ ಹೆಸರಿನಲ್ಲಿ ಗ್ರಾಮದ ಸರ್ವೆ ನಂಬರ್ 188ರಲ್ಲಿ 8 ಎಕರೆ ಜಮೀನು ಖರೀದಿಸಿತ್ತು. ನೂರಾರು ಫಲಾನುಭವಿಗಳಿಗೆ ನಿವೇಶನವನ್ನೂ ಹಂಚಿಕೆಯೂ ಮಾಡಿತ್ತು. 150ಕ್ಕೂ ಹೆಚ್ಚು ಮನೆಗಳು ನಿರ್ಮಾಣ ಆಗಿದ್ದು, ಈ ಆಸ್ತಿ ವಕ್ಫ್‌ಗೆ ಸೇರಿದೆ ಎಂದು ಏಕಾಏಕಿ ಪಹಣಿಯಲ್ಲಿ ನಮೂದು ಆಗಿದೆ' ಎಂದು ವಕೀಲ ವೈಜನಾಥ ಎಸ್.ಝುಳಕಿ ಆರೋಪಿಸಿದ್ದಾರೆ.

ಹಾಸನ: ಸಿಪಿಐ ವಿರುದ್ಧ ಡಿಸಿ ಆಕ್ರೋಶ

ಹಾಸನ: ಹಾಸನಾಂಬೆ ದೇವಿ ದರ್ಶನೋತ್ಸವ ವೇಳೆ ಪೊಲೀಸರು ಮತ್ತು ಜಿಲ್ಲಾಧಿಕಾರಿ ಕಚೇರಿ ಸಿಬ್ಬಂದಿ ಮಧ್ಯೆ ಮಂಗಳವಾರ ರಾತ್ರಿ ವಾಗ್ವಾದ ನಡೆದಿದ್ದು, ಕೈಕೈ ಮಿಲಾಯಿಸಿದ್ದಾರೆ. ಅದರಿಂದ ಸಿಟ್ಟಾದ ಜಿಲ್ಲಾಧಿಕಾರಿ ಸಿ.ಸತ್ಯಭಾಮಾ ಅವರು ಮಳವಳ್ಳಿ ಸಿಪಿಐ ರವಿ ಅವರನ್ನು ತರಾಟೆಗೆ ತೆಗೆದುಕೊಂಡ ಘಟನೆಯೂ ನಡೆಯಿತು.

ಶಿಷ್ಟಾಚಾರದ ವಾಹನ ತಡೆದಿದ್ದಕ್ಕೆ ಜಿಲ್ಲಾಧಿಕಾರಿ ಆಪ್ತ ಸಹಾಯಯಕ ಶಶಿ ಹಾಗೂ ಪೊಲೀಸ್ ಅಧಿಕಾರಿಗಳ ಮಧ್ಯೆ ಮಾತಿನ ಚಕಮಕಿ ನಡೆಯಿತು. ಆ ವೇಳೆ ಪೊಲೀಸರು, ಶಶಿ ಅವರನ್ನು ಹೊರಕ್ಕೆ ತಳ್ಳಿದ್ದರು.

ವಿಷಯದ ತಿಳಿದು ಸಿಸಿಟಿವಿ ಕ್ಯಾಮೆರಾ ಪರಿಶೀಲಿಸಿದ ನಂತರ ಬಂದ ಜಿಲ್ಲಾಧಿಕಾರಿ, 'ಇಂಥ ವರ್ತನೆ ಸರಿಯಲ್ಲ. ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಹೇಳಿ ಅಮಾನತು ಮಾಡಿಸುತ್ತೇನೆ' ಎಂದು ಪೊಲೀಸರಿಗೆ ಎಚ್ಚರಿಕೆ ನೀಡಿದರು. ಅದೇ ಕಾರಣಕ್ಕೆ, ಮಳವಳ್ಳಿ ಸಿಪಿಐ ರವಿ ಮತ್ತು ಜಿಲ್ಲಾಧಿಕಾರಿ ನಡುವೆ ವಾಗ್ವಾದ ನಡೆಯಿತು.

'ನಮ್ಮ ಮಹಿಳಾ ಪಿಎಸ್‌ಐಗೆ ಗಾಯವಾಗಿದೆ. ಕೂಡಲೇ ಚಿಕಿತ್ಸೆ ಕೊಡಿಸಿ. ನಿಮ್ಮ ಪಿಎ ವರ್ತನೆಯೇ ಘಟನೆಗೆ ಕಾರಣ' ಎಂದು ರವಿ ದೂರಿದರು. 'ಗೇಟ್ ಮುಂದೆ ಪೊಲೀಸರ ಬದಲು, ಕಂದಾಯ ಅಧಿಕಾರಿಗಳು ನಿಂತು ಕೆಲಸ ನಿರ್ವಹಿಸಿ' ಎಂದು ಸಿ.ಸತ್ಯಭಾಮಾ, ಆದೇಶಿಸಿ, ನಿರ್ಗಮಿಸಿದರು. ಎಸ್ಪಿ ಮೊಹಮ್ಮದ್ ಸುಜೀತಾ ಭೇಟಿ ನೀಡಿ, ಪರಿಶೀಲಿಸಿದರು.

ಉದ್ಯೋಗ ವಾಣಿ

ರಕ್ಷಣಾ ವಿದ್ಯುನ್ಮಾನ ಮತ್ತು ಅದಕ್ಕೂ ಮೀರಿದ

ಭಾರತ್ ಎಲೆಕ್ಟ್ರಾನಿಕ್ಸ್ | भारत इलेक्ट्रॉनिक्स | BHARAT ELECTRONICS
QUALITY, TECHNOLOGY, INNOVATION

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್
(ರಕ್ಷಣಾ ಮಂತ್ರಾಲಯದ ಅಧೀನ ಭಾರತ ಸರ್ಕಾರದ ಒಂದು ಉದ್ಯಮ)
(CIN: L32309KA1954GOI000787)

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ಒಂದು ನವರತ್ನ ಕಂಪನಿ ಮತ್ತು ರಕ್ಷಣಾ ಮಂತ್ರಾಲಯದ ಅಧೀನ ಭಾರತದ ಪ್ರಮುಖ ರಕ್ಷಣಾ ಎಲೆಕ್ಟ್ರಾನಿಕ್ಸ್ ಕಂಪನಿಯು ತನ್ನ ಬೆಂಗಳೂರು ಸಂಕೀರ್ಣಕ್ಕೆ ವ್ಯವಸ್ಥಾಪಕರು (ಇ-5) ಹುದ್ದೆಗಾಗಿ ಕೂಡಲೆ ನಿಯುಕ್ತಿ / ಪುನ:ಉದ್ಯೋಗದ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ / ನಿವೃತ್ತಿ ಹೊಂದಿದ ನೌಕಾ ಅಧಿಕಾರಿಗಳ ಅವಶ್ಯಕತೆ ಇದೆ.

ಹುದ್ದೆ / ಶ್ರೇಣಿ	ಹುದ್ದೆಗಳ ಸಂಖ್ಯೆ	ಅರ್ಹತೆ ಮಾನದಂಡ ಮತ್ತು ಅನುಭವ 01.10.2024ರಂದು	ವಿದ್ಯಾರ್ಹತೆ	ವೇತನ ಶ್ರೇಣಿ
ವ್ಯವಸ್ಥಾಪಕರು (ಇ-5)	ಸಾಮಾನ್ಯ-02 ಇ.ಹಿ.ವ.-01 ಒಟ್ಟು-03	ಕಮಾಂಡರ್ / ಲೆಫ್ಟಿನೆಂಟ್ ಕಮಾಂಡರ್ ಶ್ರೇಣಿಯಲ್ಲಿ 4 ವರ್ಷಗಳ ಜೇಷ್ಠತಾ ಶ್ರೇಣಿಯೊಂದಿಗೆ ಕನಿಷ್ಠ 12 ವರ್ಷಗಳ ಸಂಗತ ಅನುಭವ	ಎಲೆಕ್ಟ್ರಾನಿಕ್ಸ್ / ಕಂಪ್ಯೂಟರ್ ಸೈನ್ಸ್ / ಎಲೆಕ್ಟ್ರಿಕಲ್ ವಿಷಯದಲ್ಲಿ ಉತ್ತೀರ್ಣ ಶ್ರೇಣಿಯ ಬಿ.ಇ./ ಬಿ.ಟೆಕ್ ಪದವಿ	ರೂ. 70,000 -3%- 2,00,000

ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕ 20.11.2024. ಹೆಚ್ಚಿನ ವಿವರಗಳೊಂದಿಗೆ ಅರ್ಜಿಯನ್ನು ಸಲ್ಲಿಸಲು ದಯವಿಟ್ಟು ಅಧಿಕೃತ ವೆಬ್ ಸೈಟ್ **www.bel-india.in**ನಲ್ಲಿನ **CAREERS** ಲಿಂಕ್ ಅನ್ನು ವೀಕ್ಷಿಸಿ.

ಸಹಿ./-
ದಿನಾಂಕ:30.10.2024 ವ್ಯವಸ್ಥಾಪಕರು - ಮಾ.ಸಂ.(ಎನ್.ಎಸ್. - ಎಸ್ ಮತ್ತು ಸಿ ಎಸ್)

'ಹರ್ ಏಕ್ ಕಾಮ್ ದೇಶ್ ಕೆ ನಾಮ್'

ECOF Industries Private Limited

ECOF INDUSTRIES PVT LTD requires for their Plant Locations at Malur and Hoskote, Karnataka.

ENGINEERS (CODE: IE 0118)

Qualifications: Diploma in Mechanical / Electrical & Electronics / Instrumentation & Electronics

TECHNICIANS (CODE: TS 0118)

Qualifications: ITI in Mechanical / Electrical & Electronics

Preferred more than 1-3 years industrial experience.
Freshers also can apply as Trainee.
Equal Opportunity Provider.

Attractive Salary and Perks will be offered to the right candidate. In addition, Bachelor Accommodation, Local Conveyance and Meal will be provided.

Send detailed Resume with CODE to:
hr@ecofindustries.com (or)
Post Box No: 1460
Teynampet P.O., Chennai-600 018.
www.ecofindustries.com

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಅಜ್ಞಾನಿಗಳೊಂದಿಗೆ ವಾಗ್ವಾದ ನಡೆಸುವ ಬದಲು ಮೌನವಾಗಿ ಇರುವುದು ಲೇಸು.

-ಪೈಥಾಗರಸ್

ಡಿಜಿಟಲ್ ಅರೆಸ್ಟ್, ಸೈಬರ್ ವಂಚನೆ ತಡೆಗೆ ಜಾಗೃತಿ, ಮುನ್ನೆಚ್ಚರಿಕೆಯೇ ಮಾರ್ಗ

ಡಿಜಿಟಲ್ ಅರೆಸ್ಟ್ ಮತ್ತು ಇತರ ಸೈಬರ್ ವಂಚನೆಯ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರೇ ತಮ್ಮ 'ಮನದ ಮಾತು' ಬಾನುಲಿ ಕಾರ್ಯಕ್ರಮದಲ್ಲಿ ಪ್ರಸ್ತಾಪಿಸಿರುವುದು ಈ ವಿಚಾರ ಎಷ್ಟು ಗಂಭೀರ ಎಂಬುದನ್ನು ಸೂಚಿಸುತ್ತದೆ. ಎರಡು ವರ್ಷಗಳ ಹಿಂದೆ ಡಿಜಿಟಲ್ ಅರೆಸ್ಟ್ ನಮಗೆ ಗೊತ್ತೇ ಇಲ್ಲದ ಮತ್ತು ನಂಬಲು ಕೂಡ ಸಾಧ್ಯವಿಲ್ಲದ ಸಂಗತಿಯಾಗಿತ್ತು. ಆದರೆ ಈಗ, ಡಿಜಿಟಲ್ ಅರೆಸ್ಟ್ ಎಂಬುದು ನಿಜಜೀವನದ ದೊಡ್ಡ ಬೆದರಿಕೆಯಾಗಿದೆ. ಪ್ರಧಾನಿಯೇ ಎಚ್ಚರಿಕೆ ನೀಡುವಷ್ಟು ಗಂಭೀರವೂ ಆಗಿದೆ. ವಂಚಕರು ಪೊಲೀಸ್, ಸಿಬಿಐ, ಡ್ರಗ್ಸ್ ತಡೆ ಘಟಕ ಮತ್ತು ಕೆಲವೊಮ್ಮೆ ಭಾರತೀಯ ರಿಸರ್ವ್ ಬ್ಯಾಂಕ್ ಅಧಿಕಾರಿಗಳ ಹೆಸರು ಹೇಳಿಕೊಂಡು ವಂಚಿಸಲು ಯತ್ನಿಸುತ್ತಾರೆ. ಅವರು ಒಡ್ಡುವ ಮಾನಸಿಕ ಒತ್ತಡ ಎಷ್ಟಿರುತ್ತದೆ ಎಂದರೆ ಸಂತ್ರಸ್ತರು ದಿಗಿಲುಗೊಳ್ಳುತ್ತಾರೆ ಎಂದು ಪ್ರಧಾನಿ ಹೇಳಿದ್ದಾರೆ. ವಂಚನೆಯು ಭಾರತದ ಒಳಗಿನಿಂದ ಮಾತ್ರವಲ್ಲದೆ, ಮ್ಯಾನ್ಮಾರ್, ಲಾವೋಸ್, ಕಾಂಬೋಡಿಯಾದಂತಹ ದೇಶಗಳಿಂದಲೂ ನಡೆಯುತ್ತಿದೆ ಎಂದು ಗೃಹ ಸಚಿವಾಲಯ ಹೇಳಿದೆ. ಭಾರತೀಯ ಸೈಬರ್ ಅಪರಾಧ ತಡೆ ಸಮನ್ವಯ ಕೇಂದ್ರದ ಮೂಲಕ ಗೃಹ ಸಚಿವಾಲಯವು ಸೈಬರ್ ಅಪರಾಧ ಕೃತ್ಯಗಳನ್ನು ನಿಯಂತ್ರಿಸುತ್ತದೆ. ಆದರೆ, ವಂಚನೆ ನಡೆಸಲು ಈ ಕೇಂದ್ರದ ಹೆಸರನ್ನು ಬಳಸಿಕೊಂಡದ್ದೂ ಇದೆ.

ಸೈಬರ್ ಭದ್ರತಾ ಸಂಸ್ಥೆಗಳು ಮತ್ತು ವ್ಯವಸ್ಥೆ ಇನ್ನೂ ಹೆಚ್ಚು ಕ್ರಿಯಾಶೀಲವಾಗಿ ಕೆಲಸ ಮಾಡಬೇಕು

ಈ ವರ್ಷದ ಮೊದಲ ತ್ರೈಮಾಸಿಕದಲ್ಲಿ ಜನರು ಡಿಜಿಟಲ್ ಅರೆಸ್ಟ್‌ನಿಂದಾಗಿ ಸುಮಾರು ₹120 ಕೋಟಿ ಕಳೆದುಕೊಂಡಿದ್ದಾರೆ ಎಂದು ಕೆಲವು ವರದಿಗಳು ಹೇಳುತ್ತಿವೆ. ಡಿಜಿಟಲ್ ಅರೆಸ್ಟ್ ಮಾತ್ರವಲ್ಲ, 'ನಿಮ್ಮ ಗ್ರಾಹಕರನ್ನು ತಿಳಿದುಕೊಳ್ಳಿ' (ಕೆವೈಸಿ) ಪರಿಷ್ಕರಣೆ, ಬ್ಯಾಂಕ್ ಖಾತೆ, ಷೇರು ವಹಿವಾಟು, ಹೂಡಿಕೆ ಇತ್ಯಾದಿ ಹೆಸರಿನಲ್ಲಿ ಕೂಡ ವಂಚನೆ ನಡೆಯುತ್ತಿದೆ. ವಿದ್ಯಾವಂತರು ಮತ್ತು ತಿಳಿವಳಿಕೆಯುಳ್ಳವರು ಸಹ ಸೈಬರ್ ವಂಚನೆಯ ಸಂತ್ರಸ್ತರಾಗಿದ್ದಾರೆ. ಕೈಗಾರಿಕೋದ್ಯಮಿಯೊಬ್ಬರನ್ನು ಡಿಜಿಟಲ್ ಅರೆಸ್ಟ್‌ಗೆ ಒಳಪಡಿಸಿ ₹7 ಕೋಟಿ ದೋಚಿದ ಘಟನೆಯೂ ನಡೆದಿದೆ. ದೇಶವು ಈಗ ಡಿಜಿಟಲ್ ಲೋಕ ಪ್ರವೇಶಿಸಿದೆ ಮತ್ತು ನಮ್ಮ ಜೀವನದ ವಿವಿಧ ಆಯಾಮಗಳಲ್ಲಿ ಡಿಜಿಟಲ್ ಜಗತ್ತು ಹಾಸುಹೊಕ್ಕಾಗಿದೆ. ಹಲವು ಜನರು ಡಿಜಿಟಲ್ ಡೇಟಾ ಮತ್ತು ಚಟುವಟಿಕೆಗಳಲ್ಲಿ ತೀವ್ರ ಆಸಕ್ತಿ ತಳೆದಿದ್ದಾರೆ. ಜಾಗೃತಿ ಕೊರತೆಯ ಕಾರಣದಿಂದ ಜನರು ವಂಚಕರ ಬಲೆಗೆ ಬೀಳುತ್ತಾರೆ. ಸರ್ಕಾರದ ಕೆಲವು ಸಂಸ್ಥೆಗಳ ಕುರಿತು ಇರುವ ಭಯದಿಂದಾಗಿ ಈ ಸಂಸ್ಥೆಗಳ ಪ್ರತಿನಿಧಿಗಳ ಹೆಸರಿನಲ್ಲಿ ಕರೆ ಮಾಡಿದ ವಂಚಕರಿಗೆ ಜನರು ಪ್ರಶ್ನಿಸದೆಯೇ ಶರಣಾಗಿಬಿಡುತ್ತಾರೆ. ಚಾತುರ್ಯದಿಂದ ಹೆಣೆದ ಮೋಸದ ಬಲೆಯೊಳಗೆ ಬಿದ್ದ ಜನ ಹೆಚ್ಚಾಗಿ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ ಮತ್ತು ಸ್ವತಂತ್ರ ಚಿಂತನೆಯನ್ನು ಕಳೆದುಕೊಂಡುಬಿಡುತ್ತಾರೆ. ಜನರಲ್ಲಿ ಅಂತರ್ಗತವಾಗಿರುವ ನಂಬುವ ಸ್ವಭಾವ, ತಮಗೆ ಹೇಳಿದ ವಿಚಾರ ಅಥವಾ ತಮ್ಮ ಮುಂದೆ ಇರಿಸಲಾದ ಸಂಗತಿಯನ್ನು ಪ್ರಶ್ನಿಸುವುದಕ್ಕೆ ಇರುವ ಇರುಸುಮುರುಸು ಜನ ವಂಚನೆಗೆ ಒಳಗಾಗಲು ಮುಖ್ಯ ಕಾರಣಗಳಾಗಿರುತ್ತವೆ. ಇದು ಒಂದು ಹಣದ ಆಟ; ಇದು ನಿಜವೆಂದೇ ಕುರುಡಾಗಿ ನಂಬುವ ಜನ ಆಟದಲ್ಲಿ ಸೋಲುತ್ತಾರೆ.

ನ್ಯಾಷನಲ್ ಸೈಬರ್ ಕ್ರೈಮ್ ರಿಪೋರ್ಟಿಂಗ್ ಪೋರ್ಟಲ್‌ನಲ್ಲಿ ಈ ವರ್ಷದ ಮೊದಲ ಮೂರು ತಿಂಗಳಲ್ಲಿ ಏಳು ಲಕ್ಷ ದೂರುಗಳು ದಾಖಲಾಗಿವೆ. ನಾಚಿಕೆಯ ಕಾರಣಕ್ಕೆ ಅಥವಾ ಕಳೆದುಕೊಂಡ ಹಣಕ್ಕೆ ಸಮರ್ಪಕ ದಾಖಲೆ ಇಲ್ಲದ ಕಾರಣಕ್ಕೆ ಹಲವರು ದೂರು ದಾಖಲಿಸುವ ಗೋಜಿಗೇ ಹೋಗುವುದಿಲ್ಲ. ಹಾಗಾಗಿ, ಸೈಬರ್ ವಂಚನೆ ಪ್ರಕರಣಗಳ ಸಂಖ್ಯೆ ಇನ್ನೂ ಬಹಳ ಹೆಚ್ಚೇ ಇರಬಹುದು. 'ಜನರು ಹೆದರಿಕೊಳ್ಳಬಾರದು ಮತ್ತು ತಮ್ಮ ವೈಯಕ್ತಿಕ ಮಾಹಿತಿಯನ್ನು ಹಂಚಿಕೊಳ್ಳಬಾರದು. ಶಾಂತವಾಗಿ ಇರಬೇಕು. ತಕ್ಷಣವೇ ಸೈಬರ್ ಪೊಲೀಸರಿಗೆ ದೂರು ನೀಡಬೇಕು' ಎಂದು ಪ್ರಧಾನಿ ಹೇಳಿದ್ದಾರೆ. ಸೈಬರ್ ಭದ್ರತಾ ಸಂಸ್ಥೆಗಳು ಮತ್ತು ವ್ಯವಸ್ಥೆ ಕ್ರಿಯಾಶೀಲವಾಗಿ ಕೆಲಸ ಮಾಡಬೇಕು. ಸೈಬರ್ ವಂಚಕರಿಗಿಂತ ಭದ್ರತಾ ಸಂಸ್ಥೆಯು ಹೆಚ್ಚು ಚಾತುರ್ಯದಿಂದ ಕೆಲಸ ಮಾಡಿ, ವಂಚನೆಯನ್ನು ತಡೆಯಬೇಕು.

ದಿನದ ಟ್ವೀಟ್

ಡಿಎನ್‌ಎ ಪ್ರಯೋಗಾಲಯ: ಗುಣಮಟ್ಟ ಸುಧಾರಿಸಲಿ

ಇಂತಹವು, ಮಹಿಳೆಯರು ಮತ್ತು ಹೆಣ್ಣುಮಕ್ಕಳಿಗೆ ನ್ಯಾಯ ಒದಗಿಸುವ ದಿಸೆಯಲ್ಲಿ ಕಾರ್ಯಪ್ರವೃತ್ತರಾಗಿರುವವರು ಹೆಚ್ಚು ಗಮನಹರಿಸದ ಸಂಗತಿಗಳು. ಮಧ್ಯಪ್ರದೇಶದಲ್ಲಿ ಪೋಕ್ಸೊ ಅಡಿ ದಾಖಲಾಗಿರುವ 3,700 ಪ್ರಕರಣಗಳು ಡಿಎನ್‌ಎ ವಿಶ್ಲೇಷಣೆಯಲ್ಲಿನ ವಿಳಂಬದ ಕಾರಣಕ್ಕಾಗಿ ಇತ್ಯರ್ಥವಾಗದೆ ಬಾಕಿ ಉಳಿದಿವೆ. ಭಾರತದಾದ್ಯಂತ ಡಿಎನ್‌ಎ ಪ್ರಯೋಗಾಲಯಗಳು ಅತಿ ಹೆಚ್ಚು ಕಾರ್ಯದೊತ್ತಡ ಎದುರಿಸುತ್ತಿವೆ ಮತ್ತು ಕಳಪೆ ಕಾರ್ಯನಿರ್ವಹಣೆ ಹೊಂದಿವೆ.

ದೀಪಿಕಾ ನಾರಾಯಣ್ ಭಾರದ್ವಾಜ್, ಪತ್ರಕರ್ತೆ, ಚಿತ್ರ ನಿರ್ದೇಶಕಿ

ಕಿಡಿನುಡಿ

ಇದು, ಏನಾದರೂ ಮಾಡಲೇಬೇಕಾದ ವಿಷಯ. ದುರ್ಗಾ ಪೂಜಾ ಮೇಳದಲ್ಲಿ ಜನದಟ್ಟಣೆಯನ್ನು ಉತ್ತಮವಾಗಿ ನಿರ್ವಹಿಸಿರುವುದನ್ನು ನಾನು ಕಂಡಿದ್ದೇನೆ. ಮೇಳದಲ್ಲಿ ಬೃಹತ್ ಜನಜಂಗುಳಿಯನ್ನು ನಿರ್ವಹಿಸಲು ಸಾಧ್ಯವಾಗುವುದಾದರೆ ರೈಲು ನಿಲ್ದಾಣಗಳಲ್ಲೂ ಈ ಕಾರ್ಯ ಮಾಡಲು ಸಾಧ್ಯ.

(ಚೀನಾದಲ್ಲಿ ಮೇ ಡೇ ರಜೆ ಆರಂಭವಾಗುವ ಮೇ 1ರಂದು ರೈಲು ನಿಲ್ದಾಣಗಳಲ್ಲಿ ಕಂಡುಬರುವ ಭಾರಿ ಜನಜಂಗುಳಿಯನ್ನು ಸುಲಭವಾಗಿ ನಿರ್ವಹಿಸಲಾಗುತ್ತದೆ, ದೀಪಾವಳಿ ಮತ್ತು ಹೋಳಿ ಸಂದರ್ಭಗಳಲ್ಲಿ ಭಾರತೀಯ ರೈಲ್ವೆಯು ಜನಜಂಗುಳಿಯನ್ನು ನಿರ್ವಹಿಸುವುದಕ್ಕೆ ಇದನ್ನು ಹೋಲಿಸಿ ನೋಡಬೇಕಾಗಿದೆ ಎಂಬ ವ್ಯಂಗ್ಯಭರಿತ ಟೀಕೆಗೆ ಪ್ರತಿಕ್ರಿಯೆ)

ಅಭಿನವ್

25 ವರ್ಷಗಳ ಹಿಂದೆ

ಶನಿವಾರ, 30-10-1999

- **ಒರಿಸ್ಸಾದಲ್ಲಿ ಮತ್ತೆ ಚಂಡಮಾರುತ ಭಾರಿ ಸಾವು ನೋವು ಶಂಕೆ**

ಭುವನೇಶ್ವರ, ಅ. 29 (ಪಿಟಿಐ, ಯುಎನ್‌ಐ)– ಭಾರಿ ಚಂಡಮಾರುತದಿಂದ ಒರಿಸ್ಸಾದ ಕರಾವಳಿ ತತ್ತರಿಸಿದೆ. 260 ಕಿಲೊಮೀಟರ್ ವೇಗದಲ್ಲಿ ಬಂದು ಅಪ್ಪಳಿಸಿದ ಚಂಡಮಾರುತದಿಂದ ಭಾರಿ ಸಾವು–ನೋವು ಸಂಭವಿಸಿರಬಹುದು ಎಂದು ಶಂಕಿಸಲಾಗಿದೆ.

ಪ್ರಾಥಮಿಕ ವರದಿಗಳ ಪ್ರಕಾರ, ಸುಮಾರು 15 ಮಂದಿ ಚಂಡಮಾರುತಕ್ಕೆ ಬಲಿಯಾಗಿದ್ದು, 20 ಮೀನುಗಾರರು ನಾಪತ್ತೆ ಆಗಿದ್ದಾರೆ.

- **ಗ್ರಾಮ ಪಂಚಾಯ್ತಿ ಮರು ಜಾರಿಗೆ ನಿರ್ಧಾರ**

ಬೆಂಗಳೂರು, ಅ. 29– ಹಿಂದಿನ ಗ್ರಾಮ ಪಂಚಾಯ್ತಿ ವ್ಯವಸ್ಥೆಯನ್ನು ಮತ್ತೆ ಜಾರಿಗೊಳಿಸಲು ಹಾಗೂ ಇದಕ್ಕಾಗಿ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಗೆ ಅಗತ್ಯ ತಿದ್ದುಪಡಿಗಳನ್ನು ತರಲು ಇಂದು ಇಲ್ಲಿ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಹಿಂದಿನ ಕಾಂಗ್ರೆಸ್ ನೇತೃತ್ವದ ಸರ್ಕಾರದ ಅವಧಿಯಲ್ಲಿ ರೂಪಿಸಲಾಗಿದ್ದ ಗ್ರಾಮ ಪಂಚಾಯ್ತಿ ವ್ಯವಸ್ಥೆಗೆ ಜನತಾದಳ ನೇತೃತ್ವದ ಸರ್ಕಾರ ತನ್ನ ಆಡಳಿತದ ಕೊನೆಯ ದಿನಗಳಲ್ಲಿ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಅದರ ಸ್ವರೂಪವನ್ನೇ ಬದಲಾಯಿಸಿತ್ತು. ಇದರಿಂದಾಗಿ ಸುಮಾರು 5600ರಷ್ಟಿದ್ದ ಗ್ರಾಮ ಪಂಚಾಯ್ತಿಗಳ ಸಂಖ್ಯೆ 2800ಕ್ಕೆ ಇಳಿದಿತ್ತು.

ಆದರೆ ಹೊಸದಾಗಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ನೇತೃತ್ವದ ಸರ್ಕಾರವು ಹಿಂದೆ ತನ್ನ ಅಧಿಕಾರದ ಅವಧಿಯಲ್ಲಿ ಜಾರಿಯಲ್ಲಿದ್ದ ಗ್ರಾಮ ಪಂಚಾಯ್ತಿ ವ್ಯವಸ್ಥೆಯನ್ನು ಜಾರಿಗೆ ತರುವುದರ ಜತೆಗೆ ಈ ಸಂಸ್ಥೆಗಳಿಗೆ ಸಾಧ್ಯವಾದಷ್ಟು ಬೇಗ ಚುನಾವಣೆ ನಡೆಸಲು ಉದ್ದೇಶಿಸಿದೆ.

50 ವರ್ಷಗಳ ಹಿಂದೆ

ಬುಧವಾರ, 30-10-1974

- **ರಾ.ಶಿ., ಪರಮೇಶ್ವರ ಭಟ್ಟ, ಅಗರಂಗೆ ರಾಜ್ಯೋತ್ಸವ ಪ್ರಶಸ್ತಿ**

ಬೆಂಗಳೂರು, ಅ. 29– ವಿವಿಧ ಕ್ರಿಯಾ ಕ್ಷೇತ್ರಗಳಲ್ಲಿ ಅಪೂರ್ವ ಸೇವೆ ಸಲ್ಲಿಸಿದ ಹತ್ತು ಮಂದಿ ರಾಜ್ಯೋತ್ಸವ ಪ್ರಶಸ್ತಿಗಾಗಿ ಆಯ್ಕೆಗೊಂಡಿದ್ದಾರೆ.

ಅಗರಂ ರಂಗಯ್ಯ (ಪತ್ರಕರ್ತ), ಎಂ.ಆರ್. ಆರ್ಯ (ಎಂಜಿನಿಯರ್), ಕೆ.ಸಿ. ನಾಯಕ್ (ಕೃಷಿ ಕ್ಷೇತ್ರ ವಿಜ್ಞಾನಿ), ಬಿ.ವಿ. ನಾರಾಯಣರೆಡ್ಡಿ (ಅರ್ಥಶಾಸ್ತ್ರಜ್ಞ), ಎನ್. ಪದ್ಮಾವತಿಬಾಯಿ (ಸಮಾಜಸೇವೆ), ಎಸ್.ವಿ. ಪರಮೇಶ್ವರ ಭಟ್ಟ (ಸಾಹಿತ್ಯ, ಶಿಕ್ಷಣ), ರಹಮತ್ ಬೇಗ್ (ಸಮಾಜಸೇವೆ), ಡಾ. ಬಿ.ಪಿ. ರಾಧಾಕೃಷ್ಣ (ಗಣಿ ಹಾಗೂ ಭೂಗರ್ಭಶಾಸ್ತ್ರ), ಎ.ಎನ್. ವರದರಾಜುಲು (ಸಮಾಜಸೇವೆ), ಡಾ. ಎಂ. ಶಿವರಾಮ (ನಗೆಬರಹಗಾರ ಮತ್ತು 'ಕೊರವಂಜಿ'ಯ ರಾ.ಶಿ.).

- **ಸರ್ಕಾರಿ ನೌಕರರಿಗೆ 14ರಿಂದ 54 ರೂ. ಹೆಚ್ಚು ಭತ್ಯೆ**

ಬೆಂಗಳೂರು, ಅ. 29– ಕರ್ನಾಟಕ ಸರ್ಕಾರದ ಮತ್ತು ಸ್ಥಳೀಯ ಸಂಸ್ಥೆಗಳ 3.6 ಲಕ್ಷ ಮಂದಿ ನೌಕರರು ಅಕ್ಟೋಬರ್ ತಿಂಗಳ ವೇತನದಿಂದ ಅನ್ವಯವಾಗುವಂತೆ 14ರಿಂದ 54 ರೂಪಾಯಿಗಳವರೆಗೆ ಹೆಚ್ಚು ತುಟ್ಟಿಭತ್ಯೆ ಪಡೆಯುವರು.

ಆದರೆ ಕೇಂದ್ರ ಸರ್ಕಾರದ ಈಚಿನ ಕಡ್ಡಾಯ ಠೇವಣಿ ಶಾಸನದ ಪ್ರಕಾರ ಏರಿದ ಭತ್ಯೆಯ ಅರ್ಧ ಮಾತ್ರ ನೌಕರರಿಗೆ ಬರುತ್ತದೆ. ಉಳಿದ ಅರ್ಧ ಮೊತ್ತ, ಮುಂದೆ ಪಡೆಯಲು ಅವಕಾಶವಾಗುವಂತೆ ರಿಸರ್ವ್ ಬ್ಯಾಂಕ್‌ಗೆ ಠೇವಣಿ ರೂಪದಲ್ಲಿ ಹೋಗುತ್ತದೆ.

ಗಾಂಧೀಜಿಯನ್ನು ವಾಸ್ತವಿಕ ನೆಲೆಯಲ್ಲಿ ವೈಚಾರಿಕವಾಗಿ ಪರಿಚಯಿಸಬೇಕಾದುದು ಇಂದಿನ ಅಗತ್ಯ

ಗಾಂಧಿ ನಿರೂಪಣೆ: ಬೇಕಿದೆ ಹೊಸ ಮಾರ್ಗ

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ಈ ತಿಂಗಳ ಎರಡರಂದು ಗಾಂಧಿ ಜಯಂತಿಯನ್ನು ಸಾಂಪ್ರದಾಯಿಕವಾಗಿ ಆಚರಿಸಲಾಯಿತು. ಈ ವರ್ಷ ಒಂದು ವಿಶೇಷವಿದೆ. ಮಹಾತ್ಮ ಗಾಂಧಿ ಅಧ್ಯಕ್ಷತೆ ವಹಿಸಿದ್ದ ಏಕೈಕ ಕಾಂಗ್ರೆಸ್ ಅಧಿವೇಶನವು 1924ರಲ್ಲಿ ಬೆಳಗಾವಿಯಲ್ಲಿ ನಡೆಯಿತು. ಆ ಅಧಿವೇಶನಕ್ಕೀಗ ನೂರು ವರ್ಷ. ಆ ಕುರಿತ ಚರ್ಚೆಗಳು ವಿಧ್ಯುಕ್ತವಾಗಿ ಸಾಂಪ್ರದಾಯಿಕವಾಗಿ ನಡೆಯಬಹುದಾದ ಸಾಧ್ಯತೆಗಳಿವೆ.

ಹಾಗೆ ನೋಡಿದರೆ, ಗಾಂಧಿ ಹತ್ಯೆಯ ನಂತರ ನಡೆದ ಗಾಂಧಿ ಕುರಿತಾದ ಆಚರಣೆಗಳು ವಿಧ್ಯುಕ್ತ ಸಾಂಪ್ರದಾಯಿಕ ಆಚರಣೆಗಳಾದವೇ ವಿನಾ ಗಾಂಧೀಜಿಯೊಂದಿಗೆ ಜನಸಮುದಾಯಕ್ಕೆ ಸಂಪರ್ಕ ಕಲ್ಪಿಸುವ ವೈಚಾರಿಕ ವಿಧಾನವೊಂದು ರೂಪುಗೊಳ್ಳಲಿಲ್ಲ. ಅಂತಹ ವಿಧಾನ ರೂಪುಗೊಳ್ಳಬೇಕಾದರೆ ವೈಚಾರಿಕ ಮಾದರಿಗಳ ಅಗತ್ಯವಿರುತ್ತದೆ. ಅಂತಹ ಮಾದರಿಗಳು ಜನರ ನಡುವೆಯೇ ಇರುತ್ತವೆ. ಏಕೆಂದರೆ ಗಾಂಧಿ ಚಿಂತನೆಯು ಎಲ್ಲಿಂದಲೋ ತಂದು ಗುಡ್ಡೆ ಹಾಕಿದ ಜ್ಞಾನವಲ್ಲ. ಜನರು ಬಾಳಿದ ಜೀವನದ ಜ್ಞಾನ. ಆದ್ದರಿಂದ ಮಾದರಿಗಳು ಇರುತ್ತವೆ, ಗುರುತಿಸುವ ಕೆಲಸ ನಡೆಯಬೇಕಷ್ಟೆ. ಸ್ವಾವಲಂಬನೆಯು ಗಾಂಧಿಯವರ ತತ್ವ. ಸರಳತೆಯೂ ಅವರ ತತ್ವವೇ. ಇವೆರಡರ ನಡುವೆ ಸಂಬಂಧವಿದೆ. ಅವಶ್ಯಕತೆ ಜಾಸ್ತಿಯಾದಷ್ಟೂ ಪರಾವಲಂಬನೆಯೂ ಜಾಸ್ತಿಯಾಗುತ್ತದೆ. ಉದಾಹರಣೆಗೆ, ಬರೆಯಲು ಟೇಬಲ್ ಬೇಕು ಅನಿಸಿದಾಗ ಟೇಬಲ್ ಲೇಖಕನ ಅವಶ್ಯಕತೆಯಾಗುತ್ತದೆ. ಆಗ ಲೇಖಕ ಟೇಬಲ್‌ನ ಅವಲಂಬಿಯಾಗುತ್ತಾನೆ. ನೆಲದ ಮೇಲೇ ಕುಳಿತು ಬರೆಯಬಲ್ಲವನಿಗೆ ಟೇಬಲ್ ಅವಶ್ಯಕತೆಯಲ್ಲ. ಅವನು ಟೇಬಲ್‌ನ ಅವಲಂಬಿಯಾಗುವ ಅಗತ್ಯವೂ ಇಲ್ಲ. ಸ್ವಾವಲಂಬನೆ ಮತ್ತು ಸರಳತೆಗೆ ಈ ರೀತಿಯ ಸಂಬಂಧವಿದೆ.

ಆದರೆ ಸರಳತೆ ಎಲ್ಲಿಯತನಕ ಎಂಬುದು ಇಲ್ಲಿರುವ ಪ್ರಶ್ನೆ. ಗ್ರೀಕ್ ಪುರಾಣದಲ್ಲಿ ಬರುವ ಡಯೋಜನಿಸ್, ಒಂದು ಸಲ ಕೊಳದಿಂದ ನಾಯಿಯೊಂದು ನೀರು ಕುಡಿಯುವುದನ್ನು ನೋಡಿ, 'ಈ ನಾಯಿ ಎಂಥಾ ವಿವೇಕಿ, ನೀರು ಕುಡಿಯಲು ಪಾತ್ರೆಯ ಅಗತ್ಯವಿಲ್ಲವೆಂದು ಅದಕ್ಕೆ ಗೊತ್ತಿದೆ' ಎಂದುಕೊಂಡು, ತನ್ನ ಬಳಿ ಇದ್ದ ಏಕೈಕ ವಸ್ತುವಾಗಿದ್ದ ನೀರು ಕುಡಿಯುವ ಪಾತ್ರೆಯನ್ನು ಎಸೆಯುತ್ತಾನೆ. ಇದು ಸರಳತೆ ಮತ್ತು ಸ್ವಾವಲಂಬನೆಯ ತೀರಾ 'ಅತಿ' ಎನಿಸುವಂತಹ ಸ್ಥಿತಿಯಾಗಿದೆ.

ತಿನ್ನುವುದಕ್ಕೂ ರೋಬೊದ ಸಹಾಯ ಬೇಕು ಎನ್ನುವುದು ಅವಲಂಬನೆಯಿಂದ ಉಂಟಾಗುವ ಮತ್ತೊಂದು 'ಅತಿ'ಯನ್ನೇ ಸೂಚಿಸುತ್ತದೆ. ಈ ಅತಿಗಳ ನಡುವೆ ಒಂದು ಸಾಮಾನ್ಯ ಸ್ಥಿತಿಯನ್ನು ಕಾಯ್ದುಕೊಳ್ಳುವುದನ್ನು ಗಾಂಧಿ ತತ್ವಗಳಲ್ಲಿ ಕಾಣಬಹುದು. 'ಹಿಂದ್ ಸ್ವರಾಜ್'ನಲ್ಲಿ ಯಂತ್ರ ನಾಗರಿಕತೆಯನ್ನು ವಿರೋಧಿಸುವ ಗಾಂಧಿ, ಮನುಷ್ಯನ ಉದ್ಯೋಗಕ್ಕೆ ಧಕ್ಕೆಯಾಗದ ಮಟ್ಟಿಗೆ ಯಂತ್ರಗಳ ಬಳಕೆಯನ್ನು ಒಪ್ಪುತ್ತಾರೆ. ಅಂದರೆ ಅಲ್ಲಿನ ಆಶಯವು ಮನುಷ್ಯನ ಉದ್ಯೋಗಗಳು ಹೊರಟು ಹೋಗಬಾರದು ಎಂಬ ಕುರಿತಾಗಿದೆಯೇ ವಿನಾ ಯಂತ್ರಗಳನ್ನೇ ಅಳವಡಿಸಿಕೊಳ್ಳಬಾರದು ಎಂಬುದಲ್ಲ. ಬೇಕೆನಿಸಿದ್ದು ಲಭ್ಯವಾಗದೇ ಇದ್ದರೆ ವಿಚಲಿತಗೊಳ್ಳದೆ ಬದುಕಲು ಸಾಧ್ಯ ಎಂಬ ಒಂದು ಪ್ರಜ್ಞೆಯು ಸ್ವಾವಲಂಬನೆಗೆ ಅಗತ್ಯ. ಗಾಂಧಿ ಚಿಂತನೆಯನ್ನು ಸಮಾಜದಲ್ಲಿ ಬೆಳೆಸುವುದೆಂದರೆ ಈ ಪ್ರಜ್ಞೆಯನ್ನು ಬೆಳೆಸುವುದಾಗಬೇಕು. ಸತ್ಯಾಗ್ರಹದ ಪರಿಕಲ್ಪನೆಗೂ ಮಕ್ಕಳ ಹಟಕ್ಕೂ ಸಂಬಂಧವನ್ನು ಕಾಣಬಹುದು. ತಂದೆ–ತಾಯಿಯಿಂದ ಏನಾದರೂ ಬೇಕಾಗಿದೆ ಎಂದರೆ ಅದು ಸಿಗುವತನಕವೂ ಮಕ್ಕಳು ಬಿಡುವುದಿಲ್ಲ. ಹಿರಿಯರು ಶಿಕ್ಷೆ ಕೊಟ್ಟರೂ ತಮ್ಮ ಬೇಡಿಕೆಯನ್ನು ಕೈಬಿಡುವುದಿಲ್ಲ. ತೀರಾ ಸಾಮಾನ್ಯವೆನಿಸುವ ಈ ಸಂಗತಿಯೇ ಖಚಿತ ಸೈದ್ಧಾಂತಿಕ ರೂಪದಲ್ಲಿ ಮರು ವಿನ್ಯಾಸಗೊಳಿಸಲ್ಪಟ್ಟಾಗ 'ಸತ್ಯಾಗ್ರಹ' ಆಗುತ್ತದೆ. ಸತ್ಯಾಗ್ರಹವು ಮಕ್ಕಳ ಬೇಡಿಕೆಗಳ ಹಟದಷ್ಟೇ ಸರಳವಾದದ್ದು ಎಂಬುದನ್ನು ಮನವರಿಕೆ ಮಾಡಲು ಹೊರಟಾಗ ಗಾಂಧಿಯವರ ವಿಚಾರಗಳು ಜನರ ಸಹಜ ಬದುಕಿನೊಂದಿಗೆ ವೈಚಾರಿಕವಾಗಿ ಸಂಪರ್ಕ ಸ್ಥಾಪಿಸಿಕೊಳ್ಳುತ್ತವೆ.

ಇಂದು ಗಾಂಧಿಯವರನ್ನು ನಾನಾ ಕಾರಣಗಳಿಗಾಗಿ ಮತ್ತು ಕಾರಣ ಇಲ್ಲದೆ ಟೀಕಿಸಲಾಗುತ್ತಿದೆ. ಮುಖ್ಯವಾಗಿ, ಅಹಿಂಸೆಯ ತತ್ವ ಬಹಳಷ್ಟು ಟೀಕೆಗೆ ಒಳಗಾಗಿದೆ. ಆದರೆ ಬ್ರಿಟಿಷ್ ಸೈನ್ಯದಲ್ಲಿದ್ದ ಸೈನಿಕರು, ಪೊಲೀಸ್ ವ್ಯವಸ್ಥೆಯಲ್ಲಿದ್ದ ಪೊಲೀಸರು ಯಾರು? ಎಲ್ಲರೂ ಭಾರತೀಯರೇ. ಆಗ ಸಶಸ್ತ್ರ ಹೋರಾಟ ನಡೆಸಿದ್ದರೆ, ಭಾರತೀಯರು ಭಾರತೀಯರನ್ನೇ ಕೊಂದುಕೊಳ್ಳಬೇಕಾದ ಪರಿಸ್ಥಿತಿಯನ್ನು ತಮ್ಮ 'ಅಹಿಂಸೆ'ಯ ತತ್ವದ ಮೂಲಕ ಗಾಂಧೀಜಿ ಬದಲಾಯಿಸಿದರು. ಇದು ಅಂದಿನ ಜನಜೀವನದ ವಾಸ್ತವಿಕ ಸತ್ಯವಾಗಿತ್ತು. ಜನಜೀವನದ ಸಹಜ ಸತ್ಯಗಳನ್ನು ಹೇಳಿದಾಗ ಜನರಿಗೆ ಗಾಂಧಿ ತತ್ವದೊಂದಿಗೆ ವೈಚಾರಿಕ ಸಂಪರ್ಕ ಸಾಧ್ಯವಾಗುತ್ತದೆ.

ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಗಾಂಧೀಜಿ ಭಾಗವಹಿಸುವುದಕ್ಕಿಂತ ಮೊದಲು ನಡೆದ ಹಿಂಸಾತ್ಮಕ ಹೋರಾಟಗಳೇನೂ ಯಶಸ್ವಿಯಾಗಿರಲಿಲ್ಲ. ಗಾಂಧಿ ಅವರು ಸಮುದಾಯದ್ವೇಷ ವಾದಕ್ಕೆ ವಿರುದ್ಧವಾಗಿ ಇದ್ದರು. ಇಂದು ಸಮುದಾಯದ್ವೇಷ ವಾದವನ್ನು ಪ್ರತಿಪಾದಿಸುವ ಯಾರು ಕೂಡ ಯಾವ ಸಮುದಾಯದೊಂದಿಗೂ ಸಂಪರ್ಕವನ್ನೇ ಕಡಿದು ಕೊಂಡಿಲ್ಲ. ಕೊಡು-ಕೊಳ್ಳುವ ವ್ಯವಹಾರಗಳು, ಸಂಬಂಧಗಳೆಲ್ಲವೂ ಎಲ್ಲ ಸಮುದಾಯಗಳೊಂದಿಗೆ ಎಲ್ಲರಿಗೂ ಇವೆ. ಗಾಂಧಿ ಅವರನ್ನು ವಿರೋಧಿಸಲಿಕ್ಕಾಗಿ ಇರುವ ಹಿಂಸಾವಾದವನ್ನು ಪ್ರತಿಪಾದಿಸುವ ತಂಡಗಳೆಲ್ಲವೂ ಅವು ಪ್ರತಿಭಟಿಸಬೇಕಾಗಿ ಬಂದಾಗ ಧರಣಿ ಸತ್ಯಾಗ್ರಹ, ರ‍್ಯಾಲಿ, ಕಪ್ಪುಪಟ್ಟಿಯಂತಹ ತಂತ್ರಗಳ ಮೊರೆ ಹೋಗುತ್ತವೆಯೇ ವಿನಾ ಬಾಂಬ್ ಹಿಡಿದುಕೊಂಡು ಸಶಸ್ತ್ರ ದಾಳಿ ಮಾಡುವುದಿಲ್ಲ. ಗಾಂಧಿಯವರನ್ನು ಟೀಕಿಸುವವರು ಕೂಡ ಅನುಸರಿಸುತ್ತಿರುವುದು ಅವರ ತತ್ವಗಳನ್ನೇ. ಏಕೆಂದರೆ ಮಾಡಲು ಸಾಧ್ಯವಾಗುವುದು ಅಷ್ಟನ್ನೇ. ವಾಸ್ತವದ ಈ ಸಾಧ್ಯತೆಯನ್ನು ಮನವರಿಕೆ ಮಾಡಿದಾಗ ಗಾಂಧಿ ತತ್ವಗಳು ವೈಚಾರಿಕ ಸಂಪರ್ಕವನ್ನು ಪಡೆಯುತ್ತವೆ.



'ಚರಕದಿಂದ ಸ್ವಾತಂತ್ರ್ಯ ಬಂತಾ?' ಎಂಬ, ಗಾಂಧಿ ವಿರೋಧಿಯಾದ ಜನಪ್ರಿಯ ಪ್ರತಿಪಾದನೆಯೊಂದಿದೆ. ಇವತ್ತು ಇದನ್ನು ಕೇಳುವಾಗ ಎಲ್ಲರಿಗೂ ಒಂದು ಕ್ಷಣಕ್ಕೆ 'ಹೌದಲ್ಲ, ನೂಲು ತೆಗೆದರೆ ಸ್ವಾತಂತ್ರ್ಯ ಸಿಗುತ್ತದೆಯೇ' ಎಂದೇ ಅನಿಸುತ್ತದೆ. ಆದರೆ ಆ ಕಾಲಕ್ಕೆ ಭಾರತದಲ್ಲಿ ಬ್ರಿಟಿಷರ ಬಟ್ಟೆ ವ್ಯಾಪಾರ ಅವರ ವರಮಾನದ ಪ್ರಮುಖ ಮೂಲವಾಗಿತ್ತು. ದುಂಡುಮೇಜಿನ ಪರಿಷತ್ತಿಗೆ ಲಂಡನ್‌ಗೆ ಗಾಂಧಿ ಹೋಗಿದ್ದಾಗ ಮ್ಯಾಂಚೆಸ್ಟರ್‌ನ ಗಿರಣಿ ಕಾರ್ಮಿಕ ವರ್ಗವು ತಮ್ಮ ಉದ್ಯೋಗ ನಾಶವಾಗುವಂತೆ ಮಾಡಿದವರು ಎಂದು ಗಾಂಧಿ ವಿರುದ್ಧ ಪ್ರತಿಭಟನೆಯನ್ನೂ ಮಾಡಿತ್ತು. ಅಂದರೆ ಚರಕ ಚಳವಳಿಯು ಬ್ರಿಟಿಷರನ್ನು ಆರ್ಥಿಕವಾಗಿ ದುರ್ಬಲಗೊಳ್ಳುವಂತೆ ಮಾಡಿದ ಚಳವಳಿಯೂ ಆಗಿತ್ತು.

ವೈಸರಾಯ್ ವವೆಲ್, 'ಭಾರತವನ್ನು ಇನ್ನು ನಿಯಂತ್ರಿಸಬೇಕಾದರೆ ಬ್ರಿಟನ್‌ನಿಂದ ಹಣ ತರಬೇಕಷ್ಟೆ' ಎಂದು ಬ್ರಿಟಿಷ್ ಸರ್ಕಾರಕ್ಕೆ ಪತ್ರ ಬರೆದಿದ್ದರು. ಈ ಇಡೀ ಪ್ರಕ್ರಿಯೆಯಲ್ಲಿ ಚರಕ ಚಳವಳಿಯ ಪಾತ್ರ ಎಷ್ಟಿದೆ ಎಂಬುದು ಅರ್ಥ ಆಗಬೇಕಾದರೆ ವಾಸ್ತವಿಕ ನೆಲೆಯಲ್ಲಿ ಗಾಂಧಿ ತತ್ವಗಳನ್ನು ಮನವರಿಕೆ ಮಾಡಿಕೊಡಬೇಕು. ಅಂದರೆ ಗಾಂಧಿ ತತ್ವಗಳು ನಮ್ಮ ಜೀವನಕ್ಕೆ ಯಾವ ರೀತಿ ಉಪಯುಕ್ತವಾಗುತ್ತವೆ, ಗಾಂಧಿ ಆ ಕಾಲದಲ್ಲಿ ಯಾಕೆ ಆ ರೀತಿ ವರ್ತಿಸಿದರು ಎಂಬುದೆಲ್ಲ ಗೊತ್ತಾಗಬೇಕಾದರೆ ಗಾಂಧಿಯವರನ್ನು ವೈಚಾರಿಕವಾಗಿ ಜನಜೀವನದೊಟ್ಟಿಗೆ ಸಂಪರ್ಕಿಸುವ ಕಾರ್ಯ ಮಾಡಬೇಕು.

ಇತ್ತೀಚೆಗೆ ಗಾಂಧಿ ವಿರೋಧಿಗಳ ಆರ್ಭಟವು ಬಹಳ ಮಂದಿಗೆ ಅಸಂತೋಷವನ್ನು ಉಂಟು ಮಾಡಿರುವುದು ನಿಜ. ಇದಕ್ಕೆ ತಕ್ಕ ಕಾನೂನು ಕ್ರಮಗಳ ಬಗ್ಗೆ ಚರ್ಚೆಯೂ ನಡೆಯುತ್ತಿದೆ. ಮಾತನಾಡುವವರ ಬಾಯಿ ಮುಚ್ಚಿಸಲು ಕಾನೂನು ಸಹಾಯ ಮಾಡಬಹುದು, ಆದರೆ ಅವರ ಅಭಿಪ್ರಾಯವನ್ನೇ ಅದು ಬದಲಿಸುವುದಿಲ್ಲ. ಅಭಿಪ್ರಾಯವೇ ಬದಲಾಗಬೇಕಾದರೆ ಅರಿವು ಹುಟ್ಟಬೇಕು.

ಕುವೆಂಪು, ಬೇಂದ್ರೆ, ಪು.ತಿ.ನ., ಡಿ.ವಿ.ಜಿ., ಅಡಿಗ ಮುಂತಾದವರು ಗಾಂಧಿ ಬಗ್ಗೆ ಬರೆದ ಕವಿತೆಗಳಲ್ಲಿ ಗಾಂಧಿಯವರ ಮೇಲೆ ಇದ್ದ ಅಪಾರ ಗೌರವವನ್ನು ಕಾಣಬಹುದು. ಆದರೆ 1990ರ ಸುಮಾರಿನ ನಂತರ ಬಂದ ಗಾಂಧಿಯವರ ಕುರಿತ ಬಹುತೇಕ ಕವಿತೆಗಳು ಗಾಂಧಿಯವರ ಮುಂದೆ ತಮಗಾಗಬೇಕಾದ್ದು ಆಗುತ್ತಿಲ್ಲ ಎಂದು ದೂರು ಕೊಡುವಂತೆಯೋ ಗಾಂಧಿ ಮಾಡಿದ್ದು ಸರಿಯಾಗಲಿಲ್ಲ ಎಂದು ಗಾಂಧಿಗೆ ಅರ್ಥ ಮಾಡಿಸುವಂತೆಯೋ ಇವೆಯೇ ವಿನಾ ಗಾಂಧಿ ಚಿಂತನೆಗಳ ಬಗೆಗಿನ ಶ್ರದ್ಧೆಯಂತೆ ಕಾಣುವುದಿಲ್ಲ.

ತಮಗಾಗದವರನ್ನು ಎದುರಿಸಲಿಕ್ಕಾಗಿ ಗಾಂಧಿಯ ಬಗ್ಗೆ ಮಾತನಾಡುತ್ತಾ ಹೋದರೆ ಗಾಂಧಿ ಎಂದೂ ಬದುಕಿನ ಭಾಗವಾಗಿ ಜನರಿಗೆ ಗೊತ್ತಾಗುವುದೇ ಇಲ್ಲ. ಆದ್ದರಿಂದ ಗಾಂಧಿಯವರನ್ನು ವೈಚಾರಿಕವಾಗಿ ಜನಜೀವನದ ಜೊತೆ ಸಂಪರ್ಕಿಸುವ ರೀತಿಯಲ್ಲಿ ಹೇಳುವ ಕ್ರಮವೊಂದನ್ನು ರೂಪಿಸಿಕೊಳ್ಳಬೇಕಾದ ಅಗತ್ಯವಿದೆ.

ಚುರುಮುರಿ

ಪರಿಸರಸ್ನೇಹಿ ಪಟಾಕಿ

• ಮಣ್ಣೆ ರಾಜು

ಪಟಾಕಿ ಖರೀದಿಗೆ ಬಂದಿದ್ದ ಶಂಕ್ರಿ, 'ಶಬ್ದಮಾಲಿನ್ಯ, ವಾಯುಮಾಲಿನ್ಯ ಉಂಟು ಮಾಡದ ಪರಿಸರಸ್ನೇಹಿ ಹಸಿರು ಪಟಾಕಿ ಕೊಡಿ' ಅಂದ.

'ಯಾವ ಹಸಿರಿನ ಕಲರ್ ಬೇಕು ಸಾರ್? ಪ್ಯಾರೆಟ್ ಗ್ರೀನ್, ಡಾರ್ಕ್ ಗ್ರೀನ್, ಲೈಟ್ ಗ್ರೀನ್?' ಅಂಗಡಿಯವ ಕೇಳಿದ.

'ಕಲರ್‌ಫುಲ್ ಪಟಾಕಿಗಿಂತ ಕೈ, ಜೇಬು ಸುಡದ ಪಟಾಕಿ ಬೇಕು' ಅಂದಳು ಸುಮಿ.

'ನಮ್ಮಲ್ಲಿ ಇರುವುದೆಲ್ಲಾ ಆರೋಗ್ಯಕರ ಪಟಾಕಿ, 'ಢಂ' ಅನ್ನಲ್ಲ, 'ಘಂ' ಅನ್ನುತ್ತವೆ'.

'ನಿಮ್ಮ ಪಟಾಕಿಗಳನ್ನು ಸುಟ್ಟರೆ ಕೆಟ್ಟ ಹೊಗೆ ಬರಬಾರದು'.

'ನಮ್ಮ ಪಟಾಕಿಗಳು ಆಹ್ಲಾದಕರ ಸುವಾಸನೆ ಬೀರುತ್ತವೆ. ಗುಲಾಬಿ, ಮಲ್ಲಿಗೆ, ಸಂಪಿಗೆ, ಸೇವಂತಿಗೆ ಫ್ಲವರ್‌ಪಾಟ್ ಕೊಂಡುಕೊಳ್ಳಿ, ಹಚ್ಚಿದರೆ ಆಯಾ ಹೂವಿನ ಪರಿಮಳ ಹರಡುತ್ತವೆ'.

'ಮಕ್ಕಳಿಗೆ ನಿರುಪದ್ರವಿ ಚಿನಕುರುಳಿ ಪಟಾಕಿ ಕೊಡಿ' ಶಂಕ್ರಿ ಕೇಳಿದ.

'ಕೊಡ್ತೀನಿ, ಚಿನಕುರುಳಿ, ಈರುಳ್ಳಿ, ಬೆಳ್ಳುಳ್ಳಿ ಪಟಾಕಿಗಳೂ ನಮ್ಮಲ್ಲಿವೆ'.

'ಈರುಳ್ಳಿ, ಬೆಳ್ಳುಳ್ಳಿ ಪಟಾಕಿ ದುಬಾರಿ, ಅವುಗಳ ಬೆಲೆ ಕೇಳಿದರೆ ನನ್ನ ತಲೆ ಸಿಡಿಯುತ್ತದೆ' ಅಂದಳು ಸುಮಿ.

'ಹಾಗೇನಿಲ್ಲ ಮೇಡಂ, ಒಗ್ಗರಣೆ ಸಾಸಿವೆಯಷ್ಟೇ ಸಿಡಿಯುತ್ತವೆ, ಇದರ ಜೊತೆಗೆ ಮೆಣಸಿನಕಾಯಿ, ನಿಂಬೆಹಣ್ಣಿನ ಪಟಾಕಿ ಸೇರಿಸಿ ಹಚ್ಚಿದರೆ ಹಿತಕರವಾದ ಸೌಂಡ್ ಬರುತ್ತೆ'.

'ಬದನೆಕಾಯಿ, ಬೆಂಡೆಕಾಯಿ, ಮೂಲಂಗಿ, ಟೊಮೆಟೊ ಪಟಾಕಿಗಳೂ ಇವೆಯೆ?' ಸುಮಿ ಕೇಳಿದಳು.

'ದೀಪಾವಳಿ ಹಬ್ಬಕ್ಕೆ ಪಟಾಕಿ ಸಾಂಬಾರ್ ಮಾಡ್ತೀರಾ ಮೇಡಂ?!' ಅಂಗಡಿಯವ ನಕ್ಕ.

'ನೀವು ಊಟಕ್ಕೆ ಬರುವುದಾದರೆ ಮಾಡ್ತೀನಿ! ನಮಗೆ ಸೌಂಡು, ಹೊಗೆ ಬಾರದ ಪಟಾಕಿ ಕೊಡಿ'.

'ನಿಮ್ಮ ಪಟಾಕಿ ಸಾಮರ್ಥ್ಯ ಅರ್ಥವಾಯ್ತು. ಹಾರ್ಮ್‌ಲೆಸ್ ಕುಂಬಳಕಾಯಿ ಪಟಾಕಿ ಕೊಂಡುಕೊಳ್ಳಿ. ಸೌಂಡ್‌ಲೆಸ್, ಸ್ಮೋಕ್‌ಲೆಸ್, ಹಚ್ಚಿದರೆ ಇಡೀ ರಾತ್ರಿ ದೀಪದಂತೆ ಉರಿದು ಮನೆ ಬೆಳಗುತ್ತದೆ' ಅಂಗಡಿಯವ ಪಟಾಕಿ ಪ್ಯಾಕ್ ಮಾಡಿದ.

ಸಂಗತ

ಮಾಲಿನ್ಯಕ್ಕೆ ಜನಜಾಗೃತಿಯೇ ಮದ್ದು

ನಾಡಿನ ಪ್ರಮುಖ ಜೀವದಾಯಿನಿಯೊಂದರ ಪಾವಿತ್ರ್ಯ ಕಾಪಾಡುವ ಬೃಹತ್ ಜನಾಂದೋಲನವೊಂದಕ್ಕೆ ದಿನಗಣನೆ ಶುರುವಾಗಿದೆ

• ಡಾ. ಮುರಳೀಧರ ಕಿರಣಕೆರೆ

ಪರಿಸರ ಮತ್ತು ಜೀವಿಗಳ ಸಂರಕ್ಷಣೆಗೆ ಸಂಬಂಧಿಸಿದ ಸ್ವತಂತ್ರ ಸಂಸ್ಥೆ 'ವರ್ಲ್ಡ್ ವೈಲ್ಡ್‌ಲೈಫ್ ಫಂಡ್' ಇತ್ತೀಚೆಗೆ ಬಿಡುಗಡೆ ಮಾಡಿರುವ 'ಲಿವಿಂಗ್ ಪ್ಲ್ಯಾನೆಟ್ ರಿಪೋರ್ಟ್- 2024' ಪರಿಸರದ ನಾಶ ಅಪಾಯಕಾರಿ ಹಂತ ಮುಟ್ಟುತ್ತಿರುವುದನ್ನು ಎತ್ತಿ ತೋರಿದೆ (ಪ್ರ.ವಾ., ಅ. 22). ಕಳೆದ ಅರ್ಧ ಶತಮಾನದಲ್ಲಿ ವನ್ಯಜೀವಿಗಳ ಸರಾಸರಿ ಸಂಖ್ಯೆ ಶೇ 73ರಷ್ಟು ಕ್ಷೀಣಿಸಿದ್ದರೆ, ಸಿಹಿನೀರಿನ ಜಲಚರಗಳ ಸಂಖ್ಯೆ ಶೇ 85ರಷ್ಟು ಕಡಿಮೆಯಾಗಿದೆ. ಈ ಅವಧಿಯಲ್ಲಿ ಶೇ 69ರಷ್ಟು ಭೂಚರಗಳು, ಶೇ 56ರಷ್ಟು ಸಮುದ್ರಜೀವಿಗಳು ಕಣ್ಮರೆಯಾಗಿರುವ ಮಾಹಿತಿ ಗಾಬರಿ ಮೂಡಿಸುವಂತಿದೆ. ಪರಿಸರದ ಸ್ವಾಸ್ಥ್ಯ ವೇಗವಾಗಿ ಬಿಗಡಾಯಿಸುತ್ತಿರುವ ಸೂಚನೆಯಿದು!

ಆತಂಕದ ಕಾರ್ಮೋಡಗಳ ನಡುವೆಯೂ ಅಲ್ಲಲ್ಲಿ ಸಣ್ಣ ಸಣ್ಣ ಹಣತೆಗಳು ಬೆಳಗುತ್ತಾ ಪರಿಸರ ಸಂರಕ್ಷಣೆಯ ಆಶಾವಾದಕ್ಕೆ ಇಂಬು ನೀಡುತ್ತಿವೆ. ಭವಿಷ್ಯದ ದಿನಗಳಿಗೆ ಭರವಸೆ ತುಂಬುವಂತೆ ದೀಪಾವಳಿಯ ಈ ಹೊತ್ತಿನಲ್ಲಿ ನಾಡಿನ ಪ್ರಮುಖ ಜೀವದಾಯಿನಿಯೊಂದರ ಪಾವಿತ್ರ್ಯ ಕಾಪಾಡುವ ಬೃಹತ್ ಜನಾಂದೋಲನವೊಂದಕ್ಕೆ ದಿನಗಣನೆ ಶುರುವಾಗಿದೆ.

ಹೌದು, ಮಾನವನ ಹೊಲಸುಗಳನ್ನೆಲ್ಲಾ ಹೊತ್ತು ಜೀವಂತಿಕೆಯನ್ನೇ ಕಳೆದುಕೊಂಡು ಬರಡಾಗುತ್ತಿರುವ ತಾಯಿ ತುಂಗಭದ್ರೆಯನ್ನು ಮಾಲಿನ್ಯಮುಕ್ತಗೊಳಿಸುವ ದಿಸೆಯಲ್ಲಿ ರಾಷ್ಟ್ರೀಯ ಸ್ವಾಭಿಮಾನ ಆಂದೋಲನ ಮತ್ತು ಪರ್ಯಾವರಣ ಸಂಸ್ಥೆ ನೇತೃತ್ವದಲ್ಲಿ 'ನಿರ್ಮಲ ತುಂಗಭದ್ರಾ ಅಭಿಯಾನ, ಕರ್ನಾಟಕ' ಇದೇ ನವೆಂಬರ್ ಆರರಿಂದ ಆರಂಭವಾಗುತ್ತಿದೆ. ಜನ ಜಾಗೃತಿ, ಜಲಜಾಗೃತಿ, ಜನಾಗ್ರಹದ ಸಂಕಲ್ಪ ಹೊತ್ತ ಈ ಪಾದಯಾತ್ರೆಯು ತುಂಗೆಯ ಉಗಮಸ್ಥಾನದ ಸಮೀಪದ ಶೃಂಗೇರಿಯಿಂದ ಶುರುವಾಗಿ, ನದಿಯ ಹಾದಿಯಲ್ಲಿ ಸಾಗಿ ಕೊಪ್ಪಳದ ಕಿಷ್ಕಿಂಧೆಯಲ್ಲಿ ಕೊನೆಗೊಳ್ಳಲಿದೆ.

ಪಶ್ಚಿಮಘಟ್ಟದ ದತ್ತಾರಣ್ಯದ ಗಂಗಡಿಕಲ್ಲು ಪ್ರದೇಶದಲ್ಲಿ ಹುಟ್ಟುವ ತುಂಗಾ ಮತ್ತು ಭದ್ರಾ ನದಿಗಳು ಸಂಗಮವಾಗುವುದು ಶಿವಮೊಗ್ಗ ಸಮೀಪದ ಕೂಡಲಿಯಲ್ಲಿ. ತನ್ನ ನಾನೂರು ಕಿ.ಮೀ.ಗೂ ಮೀರಿದ ಹರಿವಿನಲ್ಲಿ ನಾಡಿನ ಏಳೆಂಟು ಜಿಲ್ಲೆಗಳ ಜನ, ಜಾನುವಾರು, ಜಲಚರ ಸೇರಿದಂತೆ ಅಸಂಖ್ಯ ಜೀವಸಂಕುಲಗಳನ್ನು ಪೊರೆಯುವುದಲ್ಲದೆ ನೆರೆಯ ರಾಜ್ಯಗಳಿಗೂ ನೀರುಣಿಸುವ ಪ್ರಮುಖ ನದಿ ತುಂಗಭದ್ರೆ.

ಅಪರೂಪದ ಔಷಧೀಯ ಗುಣಗಳನ್ನು ಹೊಂದಿರುವ ಪಶ್ಚಿಮಘಟ್ಟದ ಸಸ್ಯಸಂಕುಲಗಳ ನಡುವೆ ಹರಿದು ಬರುವ ನದಿಯ ನೀರು ಅಮೃತಕ್ಕೆ ಸಮಾನ ಎಂಬ ಮಾತಿತ್ತು. ತುಂಗಾ ಪಾನವೆಂಬುದಂತೂ ಅನುಭವದ ಆಚರಣೆಯಾಗಿತ್ತು. ಆದರೆ ಅಭಿವೃದ್ಧಿ, ಆಧುನೀಕರಣದ ಭರಾಟೆಯ ಜೊತೆಗೆ ಮಾನವನ ದುರಾಸೆಗೆ ಬಲಿಯಾದ ಈ ಪವಿತ್ರ ನದಿ ಕಲುಷಿತಗೊಂಡು ಕುಡಿಯಲೂ ಯೋಗ್ಯವಲ್ಲದ ದುಃಸ್ಥಿತಿಗೆ ತಲುಪುತ್ತಿರುವುದು ಭೀಕರ ಭವಿಷ್ಯದ ಮುನ್ಸೂಚನೆಯೇ ಸರಿ.

ಮಾನವನ ಅನಾಚಾರದಿಂದ ಜೀವಜಲ ಮೂಲಗಳು ಹೊಲಸಾಗಿವೆ. ಪಟ್ಟಣಗಳು, ನಗರಗಳ ತ್ಯಾಜ್ಯ ನೀರು ನದಿ ಸೇರುತ್ತಿದೆ. ಕೈಗಾರಿಕೆಗಳ ಕೊಳಚೆಯನ್ನೂ ಹರಿಯುವ ನೀರಿಗೆ ಬಿಡಲಾಗುತ್ತಿದೆ. ಕೃಷಿಯಲ್ಲಿ ರಸಗೊಬ್ಬರ, ಕೀಟನಾಶಕ, ಕಳೆನಾಶಕಗಳ ಅತಿಬಳಕೆ, ತ್ಯಾಜ್ಯವನ್ನು ಎಲ್ಲೆಂದರಲ್ಲಿ ಎಸೆಯುವುದು, ಅರಣ್ಯನಾಶ, ಗಣಿಗಾರಿಕೆ, ಅಕ್ರಮವಾಗಿ ಮರಳೆತ್ತುವಂತಹ ಕಾರಣಗಳಿಂದ ಜಲಮೂಲಗಳು ಮಲಿನವಾಗಿವೆ. ನೀರು ಕಲುಷಿತವಾಗುತ್ತಿರುವುದರ ಪರಿಣಾಮ ನೇರವಾಗಿ ಪರಿಸರದ ಮೇಲಾಗುತ್ತಿದೆ. ಮಣ್ಣಿನ ಆರೋಗ್ಯ ಹಾಳಾಗುತ್ತಿದೆ. ಬೆಳೆಗಳು ವಿಷಯುಕ್ತವಾಗುತ್ತಿವೆ. ಶುದ್ಧ ಕುಡಿಯುವ ನೀರು ಸಿಗದೆ ಪ್ರಾಣಿ, ಪಕ್ಷಿ, ಜಲಚರಗಳ ಸ್ವಾಸ್ಥ್ಯ ಕೆಡುತ್ತಿದೆ. ಮಾನವನ ದೇಹವೂ ಕಾಯಿಲೆಗಳ ಗೂಡಾಗುತ್ತಿದೆ. ನಮ್ಮ ಪರಿಸರ ಮತ್ತಷ್ಟು ನಾಶವಾಗುವುದನ್ನು ತಪ್ಪಿಸಲು ಜನಜಾಗೃತಿಯೇ ಪ್ರಬಲ ಮದ್ದು. ಸಾರ್ವಜನಿಕರಲ್ಲಿ ಅರಿವು ತುಂಬುತ್ತಾ, ಆಡಳಿತದಿಂದ ಆಗಬೇಕಿರುವ ಕಾರ್ಯಗಳ ಬಗ್ಗೆ ಗಟ್ಟಿ ದನಿಯಲ್ಲಿ ಆಗ್ರಹಿಸದಿದ್ದರೆ ಯಾರಿಗೂ ಉಳಿಗಾಲವಿಲ್ಲ.

ರಾಜ್ಯದಲ್ಲಿ ಈ ಹಿಂದೆ ನಡೆದ ಪರಿಸರ ಚಳವಳಿಗಳು ಜನರಲ್ಲಿ ಎಚ್ಚರದ ಜೊತೆಗೆ ಬದಲಾವಣೆಗೂ ಕಾರಣವಾಗಿವೆ. ಎಂಬತ್ತರ ದಶಕದ 'ಪಶ್ಚಿಮಘಟ್ಟ ಉಳಿಸಿ' ಆಂದೋಲನ, ನಂತರದಲ್ಲಿ ಕುದುರೆಮುಖ ಗಣಿಗಾರಿಕೆಯ ವಿರುದ್ಧ ನಡೆದ 'ತುಂಗಾಮೂಲ ಉಳಿಸಿ' ಚಳವಳಿಯು ಪಶ್ಚಿಮಘಟ್ಟದ ಒಡಲನ್ನು ಬಗೆಯುವ ಕಾರ್ಯಕ್ಕೆ ತಡೆಯೊಡ್ಡಿದ ನಿದರ್ಶನಗಳು ನಮ್ಮ ಎದುರಿಗಿವೆ. ಉತ್ತರ ಭಾರತದಲ್ಲೂ ಗಂಗಾನದಿಯನ್ನು ಮಾಲಿನ್ಯದಿಂದ ಮುಕ್ತಗೊಳಿಸುವ ದೊಡ್ಡ ಅಭಿಯಾನ ನಡೆದಿದ್ದರ ಫಲವಾಗಿ ನದಿ ಶುದ್ಧೀಕರಣದ 'ನಮಾಮಿ ಗಂಗೆ' ಬೃಹತ್ ಯೋಜನೆ ಜಾರಿಯಾಗಿದೆ.

ನಗರ, ಪಟ್ಟಣ, ಗ್ರಾಮಗಳ ತ್ಯಾಜ್ಯ ನೀರು, ಕೈಗಾರಿಕೆಗಳ ಕೊಳಚೆ ನೇರವಾಗಿ ನದಿ ಸೇರದಂತೆ ಶುದ್ಧೀಕರಣ ಘಟಕಗಳ ಸ್ಥಾಪನೆ, ಶೌಚಾಲಯ ವ್ಯವಸ್ಥೆ, ಧಾರ್ಮಿಕ ಆಚರಣೆಗಳ ಹೆಸರಲ್ಲಿ ನದಿಗಳನ್ನು ಹೊಲಸು ಮಾಡದಂತೆ ಅರಿವು ಮೂಡಿಸುವುದು, ಸುರಕ್ಷಿತ ಬೆಳೆ ಪದ್ಧತಿಗಳ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸುವುದು, ಕಸದ ಸಮರ್ಪಕ ವಿಲೇವಾರಿ, ಮರಳು ಗಣಿಗಾರಿಕೆಗೆ ಕಡಿವಾಣದಂತಹ ಕ್ರಮಗಳಿಂದ ನಮ್ಮ ಜಲಮೂಲಗಳಿಗೆ ಪುನರ್ಜೀವ ನೀಡಲು ಸಾಧ್ಯ.

ಜಲಮೂಲಗಳನ್ನು ಸಂರಕ್ಷಿಸುವ ಚಳವಳಿಗಳು ಎಲ್ಲೆಡೆ ನಡೆಯಬೇಕಿದೆ. ಜನ ಎಚ್ಚರಗೊಂಡು ಕೂಗಿದಾಗಲಷ್ಟೇ ಸರ್ಕಾರವೂ ಎದ್ದೇಳುವುದು. ಕೂಸು ಅತ್ತರಷ್ಟೇ ತಾಯಿ ಹಾಲುಣಿಸುವುದು. ಜನಾಂದೋಲನವು ಪ್ರಬಲವಾಗಿ ರೂಪುಗೊಂಡಾಗ ಮಾತ್ರ ಪರಿವರ್ತನೆ ಸಾಧ್ಯ.

ವಾಚಕರ ವಾಣಿ

ನಿರಾಸೆ ಮೂಡಿಸಿದ ನೇಮಕಾತಿ ಪ್ರಕ್ರಿಯೆ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು 2,700ಕ್ಕೂ ಅಧಿಕ ಹುದ್ದೆಗಳಿಗೆ ಇತ್ತೀಚೆಗೆ ನೇಮಕಾತಿ ಅಧಿಸೂಚನೆ ಹೊರಡಿಸಿದೆ. ಆದರೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸದೆ, ಹತ್ತನೇ ತರಗತಿ ಅಂಕಗಳ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಮುಂದಾಗಿರುವುದು ಲಕ್ಷಾಂತರ ಉದ್ಯೋಗಾಕಾಂಕ್ಷಿಗಳ ಕನಸಿಗೆ ಕೊಳ್ಳಿ ಇಟ್ಟಂತಾಗಿದೆ. ಕೊರೊನಾ ಕಾಲದಲ್ಲಿ ಹತ್ತನೇ ತರಗತಿ ಕಲಿತವರಿಗೆ ಸರ್ಕಾರವೇ ಕೃಪಾಂಕಗಳನ್ನು ನೀಡಿ ಪಾಸ್ ಮಾಡಿದ್ದು ಸ್ವತಃ ಸರ್ಕಾರಕ್ಕೆ ಗೊತ್ತಿರದ ವಿಷಯವೇನಲ್ಲ. ಈ ರೀತಿ ನೇಮಕ ಮಾಡಿಕೊಂಡರೆ ಲಕ್ಷಾಂತರ ಉದ್ಯೋಗಾಕಾಂಕ್ಷಿಗಳಿಗೆ ಅನ್ಯಾಯ ಮಾಡಿದಂತಾಗುತ್ತದೆ. ಆದ್ದರಿಂದ ಪರೀಕ್ಷೆ ಮೂಲಕ ನೇಮಕಾತಿ ಮಾಡಲು ಸರ್ಕಾರ ಆದೇಶ ಹೊರಡಿಸಬೇಕು. ಇದು ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿರುವವರ ಒತ್ತಾಯ ಕೂಡಾ ಆಗಿದೆ.

ಬಸವರಾಜ ಕರೇಕಲ್ಲ, ಮಾವಿನ ಇಟಗಿ, ಕುಷ್ಟಗಿ

ಕುರ್ದಿ ನೆನಪಾಗುತ್ತಾನೆ...

ದಿನಪತ್ರಿಕೆಯಲ್ಲಿ ಯುದ್ಧದ ಚಿತ್ರಗಳನ್ನು ನೋಡುವಾಗ, ಸಿರಿಯಾದ ಪುಟ್ಟ ಬಾಲಕ ಅಲನ್ ಕುರ್ದಿ ನೆನಪಾಗುತ್ತಾನೆ. 2015ರಲ್ಲಿ ಯುದ್ಧದಿಂದ ನಿರಾಶ್ರಿತರಾಗಿದ್ದ ಪೋಷಕರೊಂದಿಗೆ ದೋಣಿಯ ಮೂಲಕ ಅಕ್ರಮವಾಗಿ ವಲಸೆ ಹೊರಟಿದ್ದಾಗ, ಕಿಕ್ಕಿರಿದಿದ್ದ ದೋಣಿ ಮುಳುಗಿ ಮೃತಪಟ್ಟು, ಮೆಡಿಟರೇನಿಯನ್ ಕಡಲ ತೀರದಲ್ಲಿ ಬೋರಲು ಬಿದ್ದಿದ್ದ ಕುರ್ದಿಯ ಮೃತದೇಹದ ದೃಶ್ಯ ಕಣ್ಣಿಗೆ ಕಟ್ಟುತ್ತದೆ. ಅದೇ ಕುರ್ದಿ ನನ್ನ ಕಿವಿಯಲ್ಲಿ, ಪಿ.ಶೇಷಾದ್ರಿ ಅವರ 'ಅತಿಥಿ' ಚಿತ್ರದ ಗೀತೆಯ ಸಾಲು 'ಯಾರೂ ಗೆಲ್ಲದ ಯುದ್ಧ ಯಾತಕೋ ಓ ಜೀವವೇ' ಎಂದು ಹಾಡುತ್ತಿರುವಂತೆ ಭಾಸವಾಗುತ್ತದೆ.

ಪ್ರಶಾಂತ್ ಕೆ.ಸಿ., ಚಾಮರಾಜನಗರ

ಟೆಸ್ಟ್ ಪಂದ್ಯಗಳಲ್ಲಿ ಆಡುವ ತಾಳ್ಮೆ ಎಲ್ಲಿದೆ?

ಭಾರತ ಕ್ರಿಕೆಟ್ ತಂಡವು ತವರು ನೆಲದಲ್ಲೇ ಹೀನಾಯವಾಗಿ ಸರಣಿ ಸೋಲು ಕಂಡ ಬಗ್ಗೆ ಆತ್ಮಾವಲೋಕನ ಅಗತ್ಯ ಎಂಬ ಸಂಪಾದಕೀಯ (ಪ್ರ.ವಾ., ಅ. 28) ಸಮಯೋಚಿತವಾಗಿದೆ. ತಂಡದಲ್ಲಿ ದಶಕಗಳಿಂದಲೂ ಆಡುತ್ತಿರುವ ಹಿರಿಯ ಆಟಗಾರರು ನಿವೃತ್ತಿ ಪಡೆದು ಯುವ ಆಟಗಾರರಿಗೆ ಅವಕಾಶ ಕಲ್ಪಿಸಬೇಕು. ಈ ಮೂಲಕ ತಂಡಕ್ಕೆ ಸ್ಥಿರತೆ ತಂದುಕೊಡಬೇಕಾದ ಅಗತ್ಯವನ್ನು ಈ ಸರಣಿ ಸೋಲು ಎತ್ತಿ ತೋರಿಸಿದೆ. ಟಿ20 ಪಂದ್ಯಗಳಲ್ಲಿ ಹರಿಯುವ ಹಣದ ಹೊಳೆಯಲ್ಲಿ ಮಿಂದಿರುವ ಭಾರತೀಯ ಕ್ರಿಕೆಟ್ ಕಲಿಗಳಿಗೆ ಅಲ್ಪಾವಧಿಯಲ್ಲಿ ಭಾರಿ ಹಣ ಗಳಿಸುವುದರೆಡೆಗೆ ಮಾತ್ರ ಗಮನ ಇರುವಂತೆ ಕಾಣುತ್ತದೆ. ಟೆಸ್ಟ್ ಪಂದ್ಯಗಳ ಬಗೆಗೆ ಆಸಕ್ತಿ ಕುಂದುತ್ತಿರುವ ಈ ಕಾಲಘಟ್ಟದಲ್ಲಿ 5 ದಿನ ಆಡುವ ತಾಳ್ಮೆ ಎಲ್ಲಿದೆ? ಅದರ ಫಲವೇ ಈ ಫಲಿತಾಂಶ.

ಮುಳ್ಳೂರು ಪ್ರಕಾಶ್, ಮೈಸೂರು

ಕೃಷಿ ಪದವಿಯಲ್ಲಿತ್ತು ಕನ್ನಡದಲ್ಲಿ ಬೋಧನೆ

ಪ್ರಾದೇಶಿಕ ಭಾಷೆಯಲ್ಲಿ ವಿಜ್ಞಾನ– ತಂತ್ರಜ್ಞಾನದ ಬೋಧನೆ ಕುರಿತ ಎಚ್.ಕೆ.ಶರತ್ ಅವರ ಲೇಖನ (ಸಂಗತ, ಅ. 29) ಈ ಪದ್ಧತಿಯ ಸಾಧಕ ಬಾಧಕಗಳ ಬಗ್ಗೆ ಚರ್ಚಿಸಿದೆ. ಈ ದಿಸೆಯಲ್ಲಿ, ಕೃಷಿ ವಿಶ್ವವಿದ್ಯಾಲಯದ ನಿವೃತ್ತ ಅಧ್ಯಾಪಕನಾದ ನನ್ನ ಕಹಿ ಅನುಭವವೊಂದನ್ನು ಹಂಚಿಕೊಳ್ಳುತ್ತೇನೆ.

ಈ ಹಿಂದೆ, ನಾಲ್ಕು ದಶಕಗಳ ಮೊದಲೇ ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ ಬಿಎಸ್ಸಿ ಕೃಷಿ ಪದವಿ ತರಗತಿಯನ್ನು ಕನ್ನಡ ಮಾಧ್ಯಮದಲ್ಲಿ ಪ್ರಾರಂಭಿಸಲಾಗಿತ್ತು. ಒಂದೆರಡು ಬ್ಯಾಚ್ ಹೊರಬರುವಷ್ಟರಲ್ಲಿ 'ಸುಸ್ತಾಗಿ' ನಿಲ್ಲಿಸಲಾಯಿತು. ಕಾರಣವಿಷ್ಟೇ, ಅಂತರರಾಷ್ಟ್ರೀಯ ಮಟ್ಟದ ಸಂಶೋಧನೆ, ವಿಜ್ಞಾನ ಸಂವಹನಗಳಿಗೆ ಆ ಪಠ್ಯಕ್ರಮ ಮತ್ತು ಸಿದ್ಧತೆ ಅಪಕ್ವವಾಗಿತ್ತು. ಕನ್ನಡ ಕೃಷಿ ಪದವೀಧರರು ತ್ರಿಶಂಕು ಸ್ಥಿತಿಯಲ್ಲಿ ಇದ್ದರು. ನೌಕರಿಯೂ ಇಲ್ಲ, ಸಂಶೋಧನೆ ನಡೆಸಲು ಸಾಧ್ಯವಾಗದಂತಹ ವಾತಾವರಣ ನಿರ್ಮಾಣವಾಗಿತ್ತು. ಈ ವಿಷಯದಲ್ಲಿ ಭಾವನಾತ್ಮಕತೆಗಿಂತ ವಾಸ್ತವವನ್ನು ಅರಿತು, ಸಕಲ ಸಿದ್ಧತೆ ಮಾಡಿಕೊಂಡು ಮುಂದುವರಿಯುವುದು ಸೂಕ್ತ.

ಅನಿಲಕುಮಾರ ಮುಗಳಿ, ಧಾರವಾಡ

ಅದು ಟಾಂಗ್ ಅಲ್ಲ...!

'ನಿನ್ನ ಜಾತಕ ನನ್ನ ಕೈಲಿದೆ, ನಿನ್ನ ನಾಟಕ ಗೊತ್ತಾಗಿದೆ' ಎಂಬ, ನಲವತ್ತು ವರ್ಷಕ್ಕಿಂತಲೂ ಹಿಂದಿನ ಹಳೆಯ ಹಾಡೊಂದು ವಿವಿಧಭಾರತಿಯಲ್ಲಿ ಪ್ರಸಾರವಾಗುತ್ತಿತ್ತು. ಇದು ಏಟಿಗೆ ಎದುರೇಟು ಕೊಡುವ, ಎಲ್ಲವನ್ನೂ ಬಿಚ್ಚಿಡುತ್ತೇನೆಂದು ಆಣಿಮುತ್ತುಗಳನ್ನು ಉದುರಿಸುತ್ತಾ ಟಾಂಗ್ ಕೊಡುವ, ಆಮೇಲೆ ಸುಮ್ಮನಾಗಿಬಿಡುವ ಈಗಿನ ಕೆಲವು ರಾಜಕಾರಣಿಗಳಂತಹವರಿಗೆ ಸಂಬಂಧಿಸಿದ ಹಾಡೆಂದು ನಾನು ಭಾವಿಸಿದೆ. ಆಮೇಲಷ್ಟೇ ಗೊತ್ತಾಗಿದ್ದು, ಇದು ಮರ ಸುತ್ತುತ್ತಾ ಹಾಡುವ ಪ್ರೇಮಿಗಳ ಯುಗಳಗೀತೆ ಎಂದು!

ಬಿ.ಎನ್.ಭರತ್, ಬೆಂಗಳೂರು

ಜನಸಂಖ್ಯೆಯಷ್ಟೇ ಆಧಾರವಾಗದಿರಲಿ

2026ರ ಬಳಿಕ ಜನಸಂಖ್ಯೆಯ ಆಧಾರದಲ್ಲಿ ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ನಡೆದರೆ, ಲೋಕಸಭೆಯಲ್ಲಿ ದಕ್ಷಿಣದ ರಾಜ್ಯಗಳ ಪ್ರಾತಿನಿಧ್ಯ ಕಡಿಮೆಯಾಗಲಿದೆ, ಉತ್ತರದ ರಾಜ್ಯಗಳ ಪ್ರಾತಿನಿಧ್ಯ ಹೆಚ್ಚಾಗಲಿದೆ ಎಂದು ವರದಿಗಳು ಹೇಳಿವೆ. ವಾಸ್ತವವಾಗಿ ಬರೀ ಜನಸಂಖ್ಯೆ ಆಧಾರದಲ್ಲಿ ಲೋಕಸಭಾ ಸ್ಥಾನಗಳ ಸಂಖ್ಯೆಯನ್ನು ನಿಗದಿಪಡಿಸುವುದು ವೈಜ್ಞಾನಿಕ ಆಗಲಾರದು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ಬೇರೆ ಬೇರೆ ಇಲಾಖೆಗಳಿದ್ದು, ಜನಸಂಖ್ಯೆಯನ್ನು ಮಾತ್ರ ಆಧರಿಸದೆ, ಕ್ಷೇತ್ರ ವ್ಯಾಪ್ತಿಯನ್ನೂ ಅವಲಂಬಿಸಿ ಅವು ಕೆಲಸ ಮಾಡುತ್ತಿವೆ.

ದೇಶ ಅಂದರೆ ಜನಸಂಖ್ಯೆ ಮಾತ್ರವೇ ಆಗದೆ, ವಿಸ್ತಾರ, ಅರಣ್ಯ ಸಂಪತ್ತು, ಸಮುದ್ರತೀರ ಪ್ರದೇಶ, ಭೂ ಮತ್ತು ಗಣಿ, ರಸ್ತೆ ಸಾರಿಗೆ, ಕೃಷಿ ಭೂಮಿ, ಆರೋಗ್ಯ, ಶಿಕ್ಷಣ, ವ್ಯಾಪಾರ ವಹಿವಾಟು, ರಾಷ್ಟ್ರ ಸಂಪತ್ತಿಗೆ ನೀಡುತ್ತಿರುವ ಆರ್ಥಿಕ ಕೊಡುಗೆ, ಪ್ರಾಚ್ಯವಸ್ತು ಕ್ಷೇತ್ರ ಇವೆಲ್ಲವೂ ಲೋಕಸಭಾ ಸದಸ್ಯರ ವ್ಯಾಪ್ತಿಗೆ ಬರುತ್ತವೆ. ಹೀಗಾಗಿ, ರಾಜ್ಯಗಳ ಕ್ಷೇತ್ರ ವಿಸ್ತೀರ್ಣ ಮತ್ತು ಆ ವ್ಯಾಪ್ತಿಯಲ್ಲಿ ಬರುವ ಸಂಪನ್ಮೂಲಗಳ ಸಂರಕ್ಷಣೆಯನ್ನು ಗಮನದಲ್ಲಿ ಇಟ್ಟುಕೊಂಡು ಲೋಕಸಭಾ ಸ್ಥಾನಗಳ ಸಂಖ್ಯೆಯನ್ನು ನಿರ್ಧರಿಸುವುದು ಸೂಕ್ತ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದಳಪತಿ ಎಂದೇ ಹೆಸರಾಗಿರುವ ನಟ ಸಿ.ಜೋಸೆಫ್ ವಿಜಯ್ ದ್ರಾವಿಡ ರಾಜಕಾರಣದ ನೆಲದಲ್ಲಿ ಹೊಸ ಇತಿಹಾಸ ಬರೆಯಲು ಹೊರಟಿದ್ದಾರೆ. ಈ ವರ್ಷದ ಫೆಬ್ರುವರಿಯಲ್ಲಿ ತಮಿಳಗ ವೆಟ್ರಿ ಕಳಗಂ ಎಂಬ ಪಕ್ಷ ಘೋಷಣೆ ಮಾಡಿದ್ದ ಅವರು, ಎಂಟು ತಿಂಗಳ ನಂತರ ತಮ್ಮ ಪಕ್ಷದ ಮೊದಲ ಸಾರ್ವಜನಿಕ ಸಭೆ ನಡೆಸುವ ಮೂಲಕ ರಣಕಹಳೆ ಮೊಳಗಿಸಿದ್ದಾರೆ. ತಮಿಳುನಾಡಿನ ಎಂಜಿಆರ್, ಜಯಲಲಿತಾ, ಆಂಧ್ರಪ್రದೇಶದ ಎನ್‌ಟಿಆರ್ ಅವರಂತೆ ರಾಜ್ಯದ ಅಧಿಕಾರದ ಗದ್ದುಗೆಯೇರುವ ಕನಸು ಕಾಣುತ್ತಿದ್ದಾರೆ. ಆದರೆ, ಬದಲಾದ ರಾಜಕೀಯ ಸಂದರ್ಭದಲ್ಲಿ, ದಳಪತಿಯ ಕನಸು ಈಡೇರುವುದು ಸುಲಭವೇನಲ್ಲ

‘ದಳಪತಿ’ ರಾಜಕಾರಣ ಹಾವಿನೊಂದಿಗೆ ಆಟ

ಟಿವಿಕೆ ಮೂಲಕ ನಟ ವಿಜಯ್ ಸಂಚಲನ; ಎನ್‌ಟಿಆರ್, ಎಂಜಿಆರ್, ಜಯಲಲಿತಾ, ವಿಜಯಕಾಂತ್ ಹಾದಿಯಲ್ಲಿ ಹೆಜ್ಜೆ

• ಬಿ.ವಿ.ಶ್ರೀನಾಥ್, ಸೂರ್ಯನಾರಾಯಣ ವಿ.

ತಮಿಳು ಚಿತ್ರ ನಿರ್ದೇಶಕ ಎಸ್.ಎ.ಚಂದ್ರಶೇಖರ್ ಅವರ ಮಗನಾದ ವಿಜಯ್, ಬಾಲನಟನಾಗಿ ಚಿತ್ರರಂಗ ಪ್ರವೇಶಿಸಿದ್ದರು. ತಾಯಿ ನಿರ್ಮಾಣ ಮಾಡಿದ, ತಂದೆ ನಿರ್ದೇಶಿಸಿದ ಚಿತ್ರದ ಮೂಲಕ ತನ್ನ 18ನೇ ವಯಸ್ಸಿಗೇ ಹೀರೊ ಆದ ವಿಜಯ್, ಕೆಲವೇ ವರ್ಷಗಳಲ್ಲಿ ಸ್ಟಾರ್ ಆದರು. ಮೂರು ದಶಕಗಳಲ್ಲಿ 68 ಚಿತ್ರಗಳಲ್ಲಿ ನಟಿಸಿರುವ ಅವರ ಇತ್ತೀಚಿನ ಚಿತ್ರ ‘ಗೋಟ್’ ಬಿಡುಗಡೆಯಾದ ಐದೇ ದಿನಗಳಲ್ಲಿ ₹300 ಕೋಟಿ ಗಳಿಸಿತ್ತು. ಹೀಗೆ ತಮ್ಮ ವೃತ್ತಿಜೀವನದ ಉತ್ತುಂಗದಲ್ಲಿರುವಾಗಲೇ ಬಣ್ಣದ ಲೋಕಕ್ಕೆ ವಿದಾಯ ಹೇಳಿರುವ ದಳಪತಿ, ಹೊಸ ಪಕ್ಷ ಆರಂಭಿಸಿ ಸಿನಿಮಾದಂತೆಯೇ ರಾಜಕಾರಣದಲ್ಲಿಯೂ ಯಕ್ಷಿಣಿ ಮಾಡಲು ಹೊರಟಿದ್ದಾರೆ. ತಂದೆಯ ನೆರಳಿನಲ್ಲಿ ಸಿನಿಮಾ ನಟರಾದ ಬೆಳೆದ ಅವರಿಗೆ ರಾಜಕೀಯ ಪಯಣ ಎನ್ನುವುದು ಕೆಂಪುಹಾಸಿನ ನಡಿಗೆಯೇನಲ್ಲ.

ದ್ರಾವಿಡ ಚಳವಳಿಯ ನೆಲವಾದ ತಮಿಳುನಾಡಿನಲ್ಲಿ ಸಿನಿಮಾ ಬಿಟ್ಟು ರಾಜಕಾರಣ ಇಲ್ಲವೇ ಇಲ್ಲ. ತಮಿಳುನಾಡು ಪ್ರತ್ಯೇಕ ರಾಜ್ಯವಾದ ನಂತರ ಮೊದಲ ಮುಖ್ಯಮಂತ್ರಿಯಾಗಿದ್ದ ಸಿ.ಎನ್.ಅಣ್ಣಾದೊರೆ ಅವರಿಂದ ಆರಂಭವಾದ ಪರಂಪರೆ ಇದು. ಡಿಎಂಕೆ ಸ್ಥಾಪಕರಾದ ಅಣ್ಣಾದೊರೆ ಚಿತ್ರಬರಹಗಾರ ಆಗಿದ್ದವರು. ಇದೇ ರೀತಿ ಸಿನಿಮಾಗಳಿಗೆ ಸಂಭಾಷಣೆ, ಚಿತ್ರಕಥೆ ಬರೆಯುತ್ತಿದ್ದ ಕರುಣಾನಿಧಿ ಕೂಡ ಡಿಎಂಕೆ ಮೂಲಕವೇ ರಾಜಕಾರಣಕ್ಕೆ ಬಂದರು. ತಮ್ಮ ಆರು ದಶಕಗಳ ರಾಜಕೀಯ ಜೀವನದಲ್ಲಿ ಕರುಣಾನಿಧಿ ಐದು ಬಾರಿ ಮುಖ್ಯಮಂತ್ರಿ ಆಗಿದ್ದರು. 13 ಬಾರಿ ಚುನಾವಣೆಗೆ ಸ್ಪರ್ಧಿಸಿದ್ದ ಅವರು, ಪ್ರತಿ ಚುನಾವಣೆಯಲ್ಲೂ ಗೆದ್ದು ದಾಖಲೆ ನಿರ್ಮಿಸಿದ್ದರು.

ಅವರ ಜತೆಗೇ ರಾಜಕಾರಣದಲ್ಲಿ ಇದ್ದು, ನಂತರ ಹೊರಬಂದು ಎಐಎಡಿಎಂಕೆ ಸ್ಥಾಪಿಸಿದವರು ತಮಿಳರ ಆರಾಧ್ಯದೈವ ಎಂದೇ ಹೆಸರಾಗಿದ್ದ ನಟ ಎಂಜಿಆರ್ ಅವರು ಮೂರು ಬಾರಿ ಮುಖ್ಯಮಂತ್ರಿ ಆಗಿದ್ದರು. ಅವರ ಉತ್ತರಾಧಿಕಾರಿಯಾದ ಕರ್ನಾಟಕ ಮೂಲದ ಜೆ.ಜಯಲಲಿತಾ ಕೂಡ ನಟಿಯೇ. ಐದು ಬಾರಿ ತಮಿಳುನಾಡಿನ ಮುಖ್ಯಮಂತ್ರಿ ಆಗಿದ್ದ ಜಯಲಲಿತಾ, 14 ವರ್ಷ ರಾಜ್ಯದ ಚುಕ್ಕಾಣಿ ಹಿಡಿದಿದ್ದರು.

ತಮಿಳು ನಟರು ಮತ್ತು ರಾಜಕಾರಣ

ನಟ, ನಟಿಯರು ಸೇರಿದಂತೆ ಸಿನಿಮಾ ಕ್ಷೇತ್ರದಲ್ಲಿ ತೊಡಗಿಕೊಂಡವರು ರಾಜಕೀಯ ಪಕ್ಷ ಸ್ಥಾಪಿಸುವುದು, ರಾಜಕೀಯವಾಗಿ ಉನ್ನತ ಹುದ್ದೆಗೇರುವುದು ತಮಿಳುನಾಡಿನಲ್ಲಿ ಹೊಸದಲ್ಲ. ಸಾಹಿತಿ, ನಾಟಕಕಾರ ಮತ್ತು ನಟರಾಗಿದ್ದ ಸಿ.ಎನ್.ಅಣ್ಣಾದೊರೆ ಅವರು ಮದ್ರಾಸ್ ರಾಜ್ಯದ ಕೊನೆಯ ಮುಖ್ಯಮಂತ್ರಿ, ತಮಿಳುನಾಡಿನ ಮೊದಲ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆ ಪಡೆದಿದ್ದಾರೆ. ಪೆರಿಯಾರ್ ಅವರ ಶಿಷ್ಯರಾಗಿದ್ದ ಅವರು ಡಿಎಂಕೆ ಸಂಸ್ಥಾಪಕ. ಅವರ ಪರಂಪರೆ ಈಗಿನವರೆಗೂ ಮುಂದುವರಿದಿದೆ.

ಎಂ.ಜಿ.ರಾಮಚಂದ್ರನ್

ಎಂಜಿಆರ್ ಎಂದೇ ಜನಮಾನಸದಲ್ಲಿ ನೆಲೆಸಿರುವ ಎಂ.ಜಿ. ರಾಮಚಂದ್ರನ್ ಅವರು 1977ರಿಂದ 1987ರ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದವರು. ಸಿನಿಮಾ ವರ್ಚಸ್ಸೇ ರಾಜಕೀಯದಲ್ಲೂ ಅವರಿಗೆ ನೆರವಾಯಿತು. ದ್ರಾವಿಡ ಮುನ್ನೇತ್ರ ಕಳಗಂ (ಡಿಎಂಕೆ) ಪಕ್ಷದಲ್ಲಿದ್ದ ಅವರಿಗೆ ಎಂ.ಕರುಣಾನಿಧಿ ಅವರೊಂದಿಗೆ ಭಿನ್ನಾಭಿಪ್ರಾಯ ಬಂದು 1972ರಲ್ಲಿ ಪಕ್ಷ ತೊರೆದು ತಮ್ಮದೇ ಎಐಎಡಿಎಂಕೆ ಪಕ್ಷವನ್ನು ಹುಟ್ಟುಹಾಕಿದರು. ತಮಿಳುನಾಡಿನಲ್ಲಿ ಡಿಎಂಕೆಗೆ ಪರ್ಯಾಯವಾದ ರಾಜಕಾರಣ ಮತ್ತು ಪಕ್ಷವನ್ನು ಬೆಳೆಸಲು ಯಶಸ್ವಿಯಾದ ಅವರು, ಐದೇ ವರ್ಷಗಳಲ್ಲಿ (1977) ಚುನಾವಣೆಯಲ್ಲಿ ಗೆದ್ದು ರಾಜ್ಯದ ಚುಕ್ಕಾಣಿ ಹಿಡಿದರು.

ಜೆ.ಜಯಲಲಿತಾ

ಎಂಜಿಆರ್ ಸಾವಿನ ನಂತರ ಎಐಎಡಿಎಂಕೆ ವಿಭಜನೆಯಾಗಿ ಒಂದು ಬಣದ ಚುಕ್ಕಾಣಿ ಹಿಡಿದು, ತಮ್ಮ ನಾಯಕನ (ಎಂಜಿಆರ್) ಹಾದಿಯಲ್ಲೇ ಸಾಗಿ ರಾಜ್ಯದಲ್ಲಿ ಪಕ್ಷವನ್ನು ಇನ್ನಷ್ಟು ಬಲಪಡಿಸಿದವರು ಚಿತ್ರನಟಿ ಜೆ.ಜಯಲಲಿತಾ. ಐದು ಬಾರಿ ಮುಖ್ಯಮಂತ್ರಿ ಹುದ್ದೆಗೇರಿದ್ದ ಅವರು ಪಕ್ಷದ ಮೇಲೆ ಸಂಪೂರ್ಣ ಹಿಡಿತವನ್ನು ಸಾಧಿಸಿದ್ದರು.

ವಿಜಯಕಾಂತ್

ಸಿನಿಮಾ ನಟನಾಗಿ ಹೆಸರು ಮಾಡಿ, ಡಿಎಂಕೆ, ಎಐಎಡಿಎಂಕೆಗಳಿಗೆ ಪರ್ಯಾಯವಾಗಿ ಸ್ವಂತ ಪಕ್ಷವನ್ನು ಸ್ಥಾಪಿಸಿ ತಮಿಳು ರಾಜಕಾರಣದಲ್ಲಿ ಒಂದಷ್ಟು ಯಶಸ್ಸು ಗಳಿಸಿದ ಮತ್ತೊಬ್ಬ ನಟ ವಿಜಯಕಾಂತ್. 2005ರಲ್ಲಿ ದೇಸೀಯ ಮುರ್ಪೋಕ್ಕು ದ್ರಾವಿಡ ಕಳಗಂ (ಡಿಎಂಡಿಕೆ) ಪಕ್ಷ ಹುಟ್ಟುಹಾಕಿದ್ದರು. ಪಕ್ಷವು 2006ರ ವಿಧಾನಸಭೆ ಚುನಾವಣೆಯಲ್ಲಿ (ಒಂದು ಸ್ಥಾನ ಗೆಲುವು, ಶೇ 8ರಷ್ಟು ಮತಗಳಿಕೆ) ಮತ್ತು (2009ರ) ಲೋಕಸಭಾ ಚುನಾವಣೆಯಲ್ಲಿ ಶೇ 10.3ರಷ್ಟು ಮತಗಳಿಸಿತ್ತು. 2011ರ ವಿಧಾನಸಭಾ ಚುನಾವಣೆಯಲ್ಲಿ ಎಐಎಡಿಎಂಕೆ ಜತೆ ಮೈತ್ರಿ ಮಾಡಿಕೊಂಡು ಸ್ಪರ್ಧಿಸಿದ್ದ 41 ಕ್ಷೇತ್ರಗಳಲ್ಲಿ 29 ಕ್ಷೇತ್ರಗಳಲ್ಲಿ ಡಿಎಂಡಿಕೆ ಗೆಲುವು ಸಾಧಿಸಿದ್ದರಿಂದ ವಿರೋಧ ಪಕ್ಷದ ನಾಯಕನೂ ಆದರು.

ರಜನಿಕಾಂತ್



ಸೂಪರ್‌ಸ್ಟಾರ್ ರಜನಿಕಾಂತ್ ಅವರು ಕೂಡ ರಾಜಕೀಯ ಪ್ರವೇಶಿಸಿ, ತಮ್ಮದೇ ಆದ ಪಕ್ಷವನ್ನು ಸ್ಥಾಪಿಸಲು ಚಿಂತಿಸಿದವರು. ಆದರೆ, ಕೊನೆ ಕ್ಷಣದಲ್ಲಿ ತಮ್ಮ ನಿರ್ಧಾರದಿಂದ ಹಿಂದೆ ಸರಿದು, ತಾವು ರಾಜಕೀಯಕ್ಕೆ ಬರುವುದಿಲ್ಲ ಎಂದು ಘೋಷಿಸಿದವರು.

ಕಮಲ್ ಹಾಸನ್

ತಮಿಳುನಾಡಿನ ರಾಜಕೀಯದಲ್ಲಿ ಅದೃಷ್ಟ ಪರೀಕ್ಷೆಗೆ ಹೊರಟ ಮತ್ತೊಬ್ಬ ನಟ ಕಮಲ್ ಹಾಸನ್; 2018ರ ಫೆಬ್ರುವರಿಯಲ್ಲಿ ಮಕ್ಕಳ್ ನೀದಿ ಮಯ್ಯಂ (ಎಂಎನ್‌ಎಂ) ಪಕ್ಷವನ್ನು ಸ್ಥಾಪಿಸಿದರು. ಆದರೆ, ಇದುವರೆಗೂ ಅವರ ಪಕ್ಷ ಹೇಳಿಕೊಳ್ಳುವಂತಹ ಸಾಧನೆಯನ್ನು ಮಾಡಿಲ್ಲ.

ತಮಿಳುನಾಡಿನ ರಾಜಕಾರಣ ಎಂದರೆ, ಅದು ಎರಡು ದ್ರಾವಿಡ ಪಕ್ಷಗಳಾದ ಡಿಎಂಕೆ ಮತ್ತು ಎಐಎಡಿಎಂಕೆ ನಡುವಿನ ಜಿದ್ದಾಜಿದ್ದಿನ ಹೋರಾಟ. ಚಲಾವಣೆಯಾಗುತ್ತಿರುವ ಮತಗಳ ಪೈಕಿ ಶೇ 70ರಷ್ಟು ಮತಗಳು ಈ ಎರಡು ಪಕ್ಷಗಳ ಪಾಲಾಗುತ್ತಿವೆ. ಇಲ್ಲಿ ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿಗೆ ಸ್ವಂತಬಲದಿಂದ ನೆಲೆ ಕಂಡುಕೊಳ್ಳಲು ಸಾಧ್ಯವಾಗಿಲ್ಲ.

ಇಷ್ಟಾದರೂ ತಮಿಳುನಾಡಿನಲ್ಲಿ ಮೂರನೇ ಪಕ್ಷಕ್ಕೆ ಒಂದು ಜಾಗ ಇದೆ ಎನ್ನುವುದನ್ನು ಸಾಬೀತುಪಡಿಸಿದ್ದು ಡಿಎಂಡಿಕೆ. ಅದನ್ನು ಸ್ಥಾಪಿಸಿದ್ದ ವಿಜಯ್‌ಕಾಂತ್ ಕೂಡ ಸಿನಿಮಾ ನಟರೇ ಎನ್ನುವುದು ವಿಶೇಷ. ವಿಜಯ್‌ಕಾಂತ್ ಪಕ್ಷವು ತನ್ನ ಮೊದಲ ವಿಧಾನಸಭಾ ಚುನಾವಣೆಯಲ್ಲಿ ಶೇ 8.3ರಷ್ಟು ಮತಗಳನ್ನು ಪಡೆದರೆ, ಮೊದಲ ಲೋಕಸಭಾ ಚುನಾವಣೆಯಲ್ಲಿ ಶೇ 10.5ರಷ್ಟು ಮತಗಳನ್ನು ಪಡೆದಿತ್ತು. ಎರಡು ಬಾರಿ ಶಾಸಕರಾಗಿದ್ದ ವಿಜಯ್‌ಕಾಂತ್, ತಮಿಳುನಾಡಿನ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿಯೂ ಕೆಲಸ ಮಾಡಿದ್ದರು. 2011ರಲ್ಲಿ ಎಐಎಡಿಎಂಕೆ ಜತೆಗೆ ಮೈತ್ರಿ ಮಾಡಿಕೊಂಡಿದ್ದು ಅವರಿಗೆ ದುಬಾರಿಯಾಗಿ ಪರಿಣಮಿಸಿತ್ತು.

ವಿಜಯ್‌ಕಾಂತ್ ಹಾದಿಯಲ್ಲಿಯೇ ವಿಜಯ್ ಹೆಜ್ಜೆ ಹಾಕುತ್ತಿದ್ದಾರೆ. ಡಿಎಂಕೆಯ 75 ವರ್ಷದ ರಾಜಕಾರಣ, ಎಐಎಡಿಎಂಕೆಯ 50 ವರ್ಷದ ರಾಜಕಾರಣದ ವಿರುದ್ಧ ತೊಡೆ ತಟ್ಟಿದ್ದಾರೆ. ಜಯಲಲಿತಾ ಅವರ ಸಾವಿನ ನಂತರ ಎಐಎಡಿಎಂಕೆ ಸಮರ್ಥ ನಾಯಕತ್ವ ಇಲ್ಲದೇ ದುರ್ಬಲವಾಗಿದೆ. ಆ ಜಾಗವನ್ನು ತುಂಬುವ ಇರಾದೆ ದಳಪತಿಯದ್ದು. ಹೀಗಾಗಿಯೇ ಅವರು ಮೊನ್ನೆ ನಡೆದ ಸಾರ್ವಜನಿಕ ಸಮಾರಂಭದಲ್ಲಿ ತಮ್ಮ ವಿರೋಧಿ ಡಿಎಂಕೆ ಮತ್ತು ಬಿಜೆಪಿ ಮಾತ್ರ ಎನ್ನುವ ಸೂಚನೆ ನೀಡಿದ್ದು.

ಆದರೆ, ಎಐಎಡಿಎಂಕೆಯ ಶೇ 30ರಷ್ಟಿರುವ ಮತಪ್ರಮಾಣಕ್ಕೆ ಲಗ್ಗೆ ಹಾಕುವುದು ವಿಜಯ್ ಅವರಿಗೆ ಸುಲಭದ ಕೆಲಸವೇನಲ್ಲ. ತಮ್ಮ ತಂದೆಯ ನೆರವಿನಿಂದ ನಟನಾಗಿ, ಸ್ಟಾರ್ ಆಗಿ ಬೆಳೆದ ವಿಜಯ್ ಅವರಿಗೆ ರಾಜಕಾರಣ ಸಂಪೂರ್ಣ ಹೊಸ ಕ್ಷೇತ್ರ. ಕರುಣಾನಿಧಿ ಅವರು ಪೆರಿಯಾರ್, ಅಣ್ಣಾದೊರೆ ಮಾರ್ಗದರ್ಶನದಲ್ಲಿ ರಾಜಕಾರಣ ಆರಂಭಿಸಿದ್ದವರು. ಎಂಜಿಆರ್ ಹೊಸ ಪಕ್ಷ ಸ್ಥಾಪಿಸುವ ಹೊತ್ತಿಗಾಗಲೇ ಡಿಎಂಕೆಯಲ್ಲಿ ರಾಜಕೀಯ ಅನುಭವ ಪಡೆದಿದ್ದರು. ಅವರ ನೆರಳಿನಂತಿದ್ದು ರಾಜಕಾರಣದಲ್ಲಿ ನೆಲೆ ಕಂಡುಕೊಂಡವರು ಜಯಲಲಿತಾ. ಆದರೆ, ವಿಜಯ್ ಅವರಿಗೆ ರಾಜಕಾರಣ ಹೊಸದು. ರಜನಿಕಾಂತ್ ನಂತರ ಅತಿ ಹೆಚ್ಚು ಅಭಿಮಾನಿಗಳನ್ನು ಹೊಂದಿದ್ದರೂ, ಆ ಜನಬೆಂಬಲ ಮತಗಳಾಗಿ ಪರಿವರ್ತನೆ ಆಗುತ್ತವೆಂದು ಹೇಳಲಾಗದು. ಜನಪ್ರಿಯತೆಯ ಉತ್ತುಂಗದಲ್ಲಿದ್ದಾಗಲೇ ಆಂಧ್ರಪ್ರದೇಶದಲ್ಲಿ ಪ್ರಜಾರಾಜ್ಯಂ ಪಕ್ಷ ಸ್ಥಾಪಿಸಿದ್ದ ಮೆಗಾಸ್ಟಾರ್ ಚಿರಂಜೀವಿ, ಚುನಾವಣೆಗಳಲ್ಲಿ ಸೋಲುಂಡು ಕೊನೆಗೆ ರಾಜಕಾರಣದಿಂದಲೇ ನಿರ್ಗಮಿಸಿದ್ದು ಇದಕ್ಕೆ ನಿದರ್ಶನ.

ಬಿಜೆಪಿ ಮತ್ತು ಡಿಎಂಕೆ ತಮ್ಮ ಮುಖ್ಯ ವಿರೋಧಿಗಳೆಂಬ ಸೂಚನೆ ನೀಡಿರುವ ವಿಜಯ್, ಮೈತ್ರಿಗೂ ಸಿದ್ಧ ಎಂಬ ಸಂದೇಶ ಸಾರಿದ್ದಾರೆ. ಎಚ್ಚರಿಕೆಯಿಂದ ಸಮತೋಲನದ ಹೆಜ್ಜೆಗಳನ್ನು ಇಡುತ್ತಿರುವ ಅವರು, ದ್ರಾವಿಡ ತಾತ್ವಿಕತೆಯ ಜತೆಗೆ ರಾಷ್ಟ್ರೀಯತೆಯನ್ನೂ ಬೆಸೆಯುವುದಾಗಿ ಹೇಳಿದ್ದಾರೆ. ಪೆರಿಯಾರ್ ಅವರನ್ನು ಅನುಸರಿಸುವುದಾಗಿ ಹೇಳಿರುವ ವಿಜಯ್, ಅವರ ದೈವವಿರೋಧವನ್ನು ಮಾತ್ರ ಸ್ವೀಕರಿಸುವುದಿಲ್ಲ ಎಂದಿದ್ದಾರೆ. ಪ್ರಜ್ಞಾವಂತರಿಗೆ ವಿರೋಧಾಭಾಸದಂತೆ ಕಂಡರೂ, ರಾಜಕಾರಣದಲ್ಲಿ ಇಂಥ ಸಿನಿಮೀಯ ಮಾತುಗಳು ಕೆಲವೊಮ್ಮೆ ಜನರನ್ನು ಆಕರ್ಷಿಸುತ್ತವೆ. ಆಂಧ್ರದ ಪವನ್ ಕಲ್ಯಾಣ್ ಅವರ ರಾಜಕೀಯ ಮಾದರಿ ಇದಕ್ಕೆ ನಿದರ್ಶನ.

ಡಿಎಂಕೆಯ ಪಾಲಾಗುತ್ತಿರುವ ಬಿಜೆಪಿ ವಿರೋಧಿ ಹಾಗೂ ಅಲ್ಪಸಂಖ್ಯಾತ ಮತಗಳ ಮೇಲೂ ಕಣ್ಣು ನೆಟ್ಟಿರುವ ವಿಜಯ್, ವಿಶೇಷವಾಗಿ ಯುವಜನರನ್ನು ನೆಚ್ಚಿಕೊಂಡಿದ್ದಾರೆ; ಯಶಸ್ಸಿನ ಉತ್ತುಂಗದಲ್ಲಿದ್ದಾಗಲೇ ನಿಮಗಾಗಿ ಸಿನಿಮಾ ರಂಗ ತೊರೆದು ಬಂದಿದ್ದೇನೆ ಎನ್ನುವ ಮಾತುಗಳ ಮೂಲಕ ಭಾವನಾತ್ಮಕ ಬಲೆ ಬೀಸಿದ್ದಾರೆ.

‘ಕೆಲವರು ರಾಜಕಾರಣದಲ್ಲಿ ನಾನು ಇನ್ನೂ ಮಗು ಎಂದಿದ್ದಾರೆ. ಆದರೆ, ಈ ಮಗು ರಾಜಕಾರಣ ಎಂಬ ಹಾವಿನ ಜತೆ ಆತ್ಮವಿಶ್ವಾಸದಿಂದ ಆಟ ಆಡುತ್ತದೆ’ ಎಂದು ಅವರು ಮಾರ್ಮಿಕವಾಗಿ ಹೇಳಿದ್ದಾರೆ. ಹಾವಿನೊಂದಿಗಿನ ಅವರ ಆಟದ ಫಲಶ್ರುತಿ ಏನು ಎನ್ನುವುದು 2026ರ ತಮಿಳುನಾಡಿನ ವಿಧಾನಸಭಾ ಚುನಾವಣೆಯ ನಂತರ ತಿಳಿಯಲಿದೆ.



ಆಂಧ್ರದಲ್ಲೂ ‘ಸಿನಿಮಾ’ ರಾಜಕಾರಣ

ಎನ್‌ಟಿಆರ್

ತೆಲುಗು ಚಿತ್ರರಂಗದಲ್ಲಿ ನಟರಾಗಿ ಅಭೂತಪೂರ್ವ ಯಶಸ್ಸು ಗಳಿಸಿದ್ದ ಎನ್‌ಟಿಆರ್ ಅವರು 1982ರಲ್ಲಿ ತೆಲುಗು ದೇಶಂ ಪಾರ್ಟಿ (ಟಿಡಿಪಿ) ಹುಟ್ಟುಹಾಕಿ ತೆಲುಗು ರಾಜಕಾರಣಕ್ಕೆ ಹೊಸ ದಿಕ್ಕು ತೋರಿದವರು. ಪಕ್ಷ ಕಟ್ಟಿದ ಕೆಲವೇ ತಿಂಗಳಲ್ಲಿ ಸಿ.ಎಂ ಹುದ್ದೆಗೆ ಏರಿದ ದಾಖಲೆ ಅವರದು. 1983ರಿಂದ 95ರ ನಡುವೆ ಮೂರು ಬಾರಿ ಮುಖ್ಯಮಂತ್ರಿಯಾಗಿದ್ದರು.

ಚಿರಂಜೀವಿ



ಮೆಗಾಸ್ಟಾರ್ ಚಿರಂಜೀವಿ ಅವರು 2008ರಲ್ಲಿ ಪ್ರಜಾ ರಾಜ್ಯಂ ಪಕ್ಷ ಸ್ಥಾಪಿಸಿದರು. ಆರಂಭಿಕವಾಗಿ ಸ್ವಲ್ಪ ಯಶಸ್ಸು ಕಂಡರು. ನಂತರ ಪಕ್ಷವನ್ನು ಕಾಂಗ್ರೆಸ್ ಜೊತೆ ವಿಲೀನಗೊಳಿಸಿ ರಾಜ್ಯ ಸಭಾ ಸದಸ್ಯರಾಗಿ ಕೇಂದ್ರ ಸಚಿವರೂ ಆದರು.

ಪವನ್ ಕಲ್ಯಾಣ್



ಆಂಧ್ರಪ್ರದೇಶದ ಹಾಲಿ ಉಪಮುಖ್ಯಮಂತ್ರಿ ಪವನ್ ಕಲ್ಯಾಣ್, ಸಿನಿಮಾ ನಟರಾಗಿ ಗಳಿಸಿದ ವರ್ಚಸ್ಸಿನ ಆಧಾರದಲ್ಲೇ, 2014ರ ಮಾರ್ಚ್‌ನಲ್ಲಿ ಜನ ಸೇನಾ ಪಾರ್ಟಿಯನ್ನು ಸ್ಥಾಪಿಸಿದ್ದರು. ಕೇಂದ್ರದಲ್ಲಿ ಬಿಜೆಪಿ ಮತ್ತು ರಾಜ್ಯದಲ್ಲಿ ಟಿಡಿಪಿಯೊಂದಿಗೆ ಮೈತ್ರಿ ಮಾಡಿಕೊಂಡು ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಗಮನಾರ್ಹ ಪ್ರದರ್ಶನ ನೀಡಿರುವ ಜೆಎಸ್‌ಪಿ ರಾಜ್ಯ ರಾಜಕಾರಣದಲ್ಲಿ ತಾನು ಕೂಡ ನಿರ್ಣಾಯಕ ಎಂಬುದನ್ನು ತೋರಿಸಿದೆ.

ಸಿನಿ ಬಿಟ್ಸ್

‘ಶ್ಯಾನಭೋಗರ ಮಗಳು’ ಶೀಘ್ರದಲ್ಲಿ ತೆರೆಗೆ

ರಾಗಿಣಿ ಪ್ರಜ್ವಲ್ ಪ್ರಮುಖ ಪಾತ್ರದಲ್ಲಿ ನಟಿಸಿರುವ ‘ಶ್ಯಾನಭೋಗರ ಮಗಳು’ ಚಿತ್ರ ತೆರೆಗೆ ಬರಲು ಸಿದ್ಧವಾಗಿದೆ. ಕೋಡ್ಲು ರಾಮಕೃಷ್ಣ ನಿರ್ದೇಶಿಸಿರುವ ಚಿತ್ರದ ಸೆನ್ಸಾರ್ ಇತ್ತೀಚೆಗಷ್ಟೇ ಪೂರ್ಣಗೊಂಡಿದ್ದು ಯು/ಎ ಪ್ರಮಾಣಪತ್ರ ಲಭಿಸಿದೆ.

ನಟ ಪ್ರಜ್ವಲ್ ದೇವರಾಜ್ ಪತ್ನಿ ರಾಗಿಣಿ ಶ್ಯಾನಭೋಗರ ಮಗಳ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಭುವನ್ ಫಿಲ್ಮ್ಸ್ ಲಾಂಛನದಲ್ಲಿ ಸಿ.ಎಂ.ನಾರಾಯಣ್ ನಿರ್ಮಿಸಿದ್ದಾರೆ.

‘ಸ್ವತಂತ್ರ ಪೂರ್ವದ ಕಥೆ. ಶ್ಯಾನಭೋಗರ ಮಗಳ ಬದುಕಿನ ಹೋರಾಟದ ಕಥೆಯನ್ನು ಹೊಂದಿದೆ’ ಎಂದಿದ್ದಾರೆ ನಿರ್ದೇಶಕರು.

ಟಿಪ್ಪುಸುಲ್ತಾನ್ ಪಾತ್ರದಲ್ಲಿ ನಟ ಕಿಶೋರ್ ನಟಿಸಿದ್ದಾರೆ. ನಿರಂಜನ್ ಶೆಟ್ಟಿ, ರಮೇಶ್ ಭಟ್, ಶ್ರೀನಿವಾಸಮೂರ್ತಿ, ಸುಧಾ ಬೆಳವಾಡಿ, ವಾಣಿಶ್ರೀ, ಪದ್ಮಾ ವಾಸಂತಿ ಮುಂತಾದವರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ.

ಜೈ ಆನಂದ್ ಛಾಯಾಚಿತ್ರಗ್ರಹಣ, ರಮೇಶ್ ಕೃಷ್ಣನ್ ಸಂಗೀತವಿದೆ. ಬೆಂಗಳೂರು, ಶ್ರೀರಂಗಪಟ್ಟಣ, ಚನ್ನಪಟ್ಟಣ, ಚಿಕ್ಕಬಳ್ಳಾಪುರ ಮುಂತಾದ ಕಡೆ ಚಿತ್ರೀಕರಣ ನಡೆದಿದೆ.



ರಾಗಿಣಿ ಪ್ರಜ್ವಲ್

‘ವಾರಾಣಸಿ’ಯತ್ತ ಫಾದರ್ ಚಿತ್ರತಂಡ

‘ಆರ್.ಸಿ. ಸ್ಟುಡಿಯೊಸ್’ ಬ್ಯಾನರ್‌ನಲ್ಲಿ ನಿರ್ದೇಶಕ ಆರ್.ಚಂದ್ರು ನಿರ್ಮಾಣ ಮಾಡುತ್ತಿರುವ, ರಾಜ್ ಮೋಹನ್ ನಿರ್ದೇಶನದ ‘ಫಾದರ್’ ಸಿನಿಮಾದ ಚಿತ್ರೀಕರಣ ಅಂತಿಮ ಹಂತ ತಲುಪಿದ್ದು, ಆ್ಯಕ್ಷನ್ ದೃಶ್ಯಗಳ ಚಿತ್ರೀಕರಣಕ್ಕೆ ವಾರಾಣಸಿಯತ್ತ ಚಿತ್ರತಂಡ ಹೊರಡಲಿದೆ.

ಶಿವರಾಜ್‌ಕುಮಾರ್ ನಟನೆಯ ‘ಬೈರಾಗಿ’ ಸಿನಿಮಾದಲ್ಲಿ ಸಹ ನಿರ್ದೇಶಕರಾಗಿ ರಾಜ್ ಮೋಹನ್ ಕಾರ್ಯನಿರ್ವಹಿಸಿದ್ದರು. ತಂದೆ-ಮಗನ ಬಾಂಧವ್ಯ ಸಾರುವ ‘ಫಾದರ್’ ಸಿನಿಮಾದಲ್ಲಿ ‘ಲವ್ ಮಾಕ್ಟೇಲ್’ ಖ್ಯಾತಿಯ ಡಾರ್ಲಿಂಗ್ ಕೃಷ್ಣ ಹಾಗೂ ಬಹುಭಾಷಾ ನಟ ಪ್ರಕಾಶ್ ರಾಜ್ ಮುಖ್ಯಭೂಮಿಕೆಯಲ್ಲಿದ್ದಾರೆ. ಕೃಷ್ಣನಿಗೆ ಅಮೃತಾ ಅಯ್ಯಂಗಾರ್ ಜೋಡಿಯಾಗಿದ್ದಾರೆ. ತೆಲುಗಿನ ಖ್ಯಾತ ನಟ ಸುನೀಲ್ ಸೇರಿದಂತೆ ಅನೇಕ ಪರಭಾಷೆ ನಟ, ನಟಿಯರ ದಂಡೇ ಈ ಚಿತ್ರದಲ್ಲಿದೆ. ಚಿತ್ರದ ಕೊನೆಯ ಹಂತದ ಶೂಟಿಂಗ್ ಬನ್ನೇರುಘಟ್ಟದಲ್ಲಿರುವ ಐತಿಹಾಸಿಕ ದೇವಾಲಯ ಶ್ರೀ ಚಂಪಕಧಾಮಸ್ವಾಮಿ ದೇವಾಲಯದಲ್ಲಿ ನಡೆಯಿತು. ಇಲ್ಲಿ ನೂರಾರು ಜನ ಜೂನಿಯರ್ ಆರ್ಟಿಸ್ಟ್ ಸಮ್ಮುಖದಲ್ಲಿ ಚಿತ್ರದ ಸಾಹಸ ದೃಶ್ಯಗಳನ್ನು ಸೆರೆಹಿಡಿಯಲಾಯಿತು. ವಿನೋದ್ ಮಾಸ್ಟರ್ ಸಾಹಸ ನಿರ್ದೇಶನದಲ್ಲಿ ದೃಶ್ಯಗಳು ಸೆರೆಯಾದವು.

ಡಾರ್ಲಿಂಗ್ ಕೃಷ್ಣ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ಯಾವುದು ಪೂಜೆ?

ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

55

ಜೀವನ ಅಂದರೆ ಮೂರು ಅಂಶಗಳ ನಿರ್ಮಾಣ. ಮೈ, ಮಾತು, ಮನಸ್ಸು ಇವುಗಳ ಸಂಗಮವೇ ಜೀವನ. ಇವುಗಳನ್ನು ಸರಿಯಾಗಿ ಬಳಸಬೇಕು. ಇವುಗಳನ್ನು ಕೆಟ್ಟದ್ದಕ್ಕೆ ಉಪಯೋಗ ಮಾಡಬಾರದು. ನಮಗೆ ಕೈಗಳು ಇದಾವೆ. ಅವುಗಳನ್ನು ಬಳಸುವ ವಿಧಾನವನ್ನು ಗಮನಿಸಿ. ಪ್ರಜ್ಞೆ ಇದ್ದರೆ ಬಳಸುವ ವಿಧಾನವೇ ಬೇರೆ. ಪ್ರಜ್ಞೆ ಇಲ್ಲದಿದ್ದರೆ ನನಗೆ ತೋಳ್ಬಲ ಐತಿ ಅಂತ 10 ಮಂದಿಗೆ ಹೊಡೀತೀವಿ. ನಾನು ಶಕ್ತಿವಂತ ಅಂತ ತಿಳ್ಕೋತೀವಿ. ಅದೇ ಒಂದು ವೇದಿಕೆ ಹತ್ತಿ ಕೈ ಮುಗಿದರೆ 10 ಸಾವಿರ ಮಂದಿಯನ್ನು ಮುಟ್ಟಬಹುದು. ಇದು ಕೈಗಳ ಸಾಮರ್ಥ್ಯ. ಯಾವುದೇ ಅಂಗವನ್ನು ಪ್ರಜ್ಞೆಯಿಂದ ಬಳಸಬೇಕಾಗುತ್ತದೆ.

ಸತ್ಯಕ್ಕ ಅಂತ ಒಬ್ಬಳು ಶರಣೆ 12ನೇ ಶತಮಾನದಲ್ಲಿ ಇದ್ದಳು. ಆಕೆಯ ಕೆಲಸ ಏನು ಅಂದರ ಕಸ ಹೊಡೆಯುವುದು. ಕಲ್ಯಾಣದ ಬೀದಿಬೀದಿಗಳಲ್ಲಿ ಆಕೆ ಕಸ ಗುಡಿಸುತ್ತಿದ್ದಳು. ಆಕೆ ಒಂದು ವಚನ ಬರೀತಾಳೆ. ‘ಅರ್ಚನೆ, ಪೂಜನೆ ನೇಮವಲ್ಲ, ಮಂತ್ರ ತಂತ್ರಗಳು ನೇಮವಲ್ಲ, ಧೂಪ ದೀಪಾರತಿ ನೇಮವಲ್ಲ, ಪರಧನ, ಪರಸ್ತ್ರೀ ಪರದ್ರವ್ಯಂಗಳಿಗೆರಗದಿಪ್ಪುದೇ ನೇಮ ಶಂಭುಜಕ್ಕೇಶ್ವರನಲ್ಲಿ ಕಾಣೆ’ ಅಂತ. ಪೂಜೆ ಅಂದರೆ ಯಾವುದಕ್ಕೆ ಅನ್ನಬೇಕು ಎನ್ನುವುದು ಆಕೆಯ ಜಿಜ್ಞಾಸೆ.

ನಮ್ಮ ಪೂಜೆನೇ ಬೇರೆ. ನಾವು ಪೂಜೆಗೆ ಹೂವು ಬೇಕು ಅಂತ ಗಿಡಗಳನ್ನೇ ಉಳಿಸೋದಿಲ್ಲ. ಕುರಿ, ದನ ಮೇಯ್ದಾಂಗ ಹರಕೊ ಬರ್ತೀವಿ. ಶರಣರ ದೃಷ್ಟಿಕೋನದ ಪೂಜೆಗೂ ನಮ್ಮ ದೃಷ್ಟಿಕೋನದ ಪೂಜೆಗೂ ವ್ಯತ್ಯಾಸ ಇದೆ. ನೀರು ಹಾಕಿ ಮಾಡುವುದು ಪೂಜೆಯಲ್ಲ. ಪತ್ರಗಳಿಂದಲೂ ಪೂಜೆಯಲ್ಲ. ಧೂಪ ದೀಪಗಳಿಂದಲೂ ಪೂಜೆಯಲ್ಲ. ಪೂಜೆ ಅಂದರ ಇನ್ನೊಬ್ಬರ ವಸ್ತುಗಳನ್ನು ಮುಟ್ಟದೇ ಇರುವುದು. ಮನಸ್ಸು ಆಸೆ ಮಾಡದಂಗೆ ಇದ್ದರೆ ಅದೇ ಪೂಜೆ.

ಪಶ್ಚಿಮ ಬಂಗಾಳದಲ್ಲಿ ಈಶ್ವರಚಂದ್ರ ವಿದ್ಯಾಸಾಗರ ಅಂತ ಒಬ್ಬರು ಇದ್ದರು. ಶ್ರೇಷ್ಠ ಶಿಕ್ಷಣ ತಜ್ಞರು, ಸಮಾಜಸುಧಾರಕರೂ ಆಗಿದ್ದರು. ಹೆಣ್ಣು ಮಕ್ಕಳೂ ಓದಬೇಕು ಎನ್ನುವುದು ಅವರ ಬಯಕೆ. ಅಲ್ಲದೆ ವಿಧವಾ ವಿವಾಹವನ್ನೂ ಮಾಡಿಸುತ್ತಿದ್ದರು. ಒಂದು ದಿನ ಅವರು ತಳ್ಳೋ ರಿಕ್ಷಾದಲ್ಲಿ ಹೋಗುತ್ತಿದ್ದರು. ದಾರಿಯಲ್ಲಿ ಒಂದು ಸೇತುವೆ ಬಂತು. ರಿಕ್ಷಾವಾಲನಿಗೆ ಅದನ್ನು ಹತ್ತಿಸಲು ಸಾಧ್ಯವಾಗಲಿಲ್ಲ. ಇವರು ಕೆಳಕ್ಕೆ ಇಳಿದು ರಿಕ್ಷಾವನ್ನು ಸೇತುವೆ ಹತ್ತಿಸಿದರು. ಮನೆ ಸೇರಿದ ಮೇಲೆ ರಿಕ್ಷಾ ವಾಲನಿಗೆ ಎಷ್ಟು ಬಿಲ್ಲಾತು ಎಂದು ಕೇಳಿದರು. ಆತ 50 ರೂಪಾಯಿ ಕೊಡಿ ಎಂದ. ಆಗ ಬಿಸಿಲು ಬಹಳ ಇತ್ತು. ಬಡಕಲು ದೇಹದ ರಿಕ್ಷಾವಾಲ ಬೆವರುತ್ತಿದ್ದ. ಅದನ್ನು ನೋಡಿ ವಿದ್ಯಾಸಾಗರರು ನೂರು ರೂಪಾಯಿ ಕೊಟ್ಟರು. ಆದರೆ ರಿಕ್ಷಾವಾಲ ತನಗೆ 50 ರೂಪಾಯಿ ಸಾಕು ಎಂದ. ‘ಪರವಾಗಿಲ್ಲ. 50 ರೂಪಾಯಿ ಹೆಚ್ಚಿಗೆ ಇಟ್ಟುಕೊ’ ಎಂದರು ವಿದ್ಯಾಸಾಗರರು. ಅದಕ್ಕೆ ರಿಕ್ಷಾವಾಲ ‘ನನ್ನ ರಿಕ್ಷಾದ ಬಾಡಿಗೆ 50 ರೂಪಾಯಿ ಅಷ್ಟೆ. ಅಷ್ಟನ್ನೇ ಕೊಡಿ. ಹೆಚ್ಚಿಗೆ ಬೇಡ. ಯಾಕೆಂದರೆ ನಾನು ರಿಕ್ಷಾವಾಲನೇ ಹೊರತು ಭಿಕ್ಷಾದವನಲ್ಲ’ ಎಂದ.

ಇದನ್ನೇ ಪ್ರಜ್ಞೆಯಿಂದ ಮಾಡುವ ಕೆಲಸ ಅನ್ನೋದು. ಅಂದರ ಕೈಯಿಂದ ಇನ್ನೊಬ್ಬರ ಸಂಪತ್ತು ಮುಟ್ಟೋದಲ್ಲ, ಇನ್ನೊಬ್ಬರಿಗೆ ಹಿಂಸೆ ಕೊಡೋದಲ್ಲ. ಕೈಗಳನ್ನು ಒಳ್ಳೆಯ ಕೆಲಸಕ್ಕೆ ಬಳಸಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಅಕ್ಟೋಬರ್ 30, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಿಜ ಕೃಷ್ಣತ್ರಯೋದಶಿ ಗಂ. 13-16 ನಕ್ಷತ್ರ: ಉತ್ತರಫಲ್ಗುನಿ ಗಂ. 21-44 ಯೋಗ: ವೈಧೃತಿ ಗಂ. 08-51 ಕರಣ: ವಣಿಜ ಗಂ. 13-16, ತುಲಾ ಮಾಸದ 13 ನೇ ದಿನ, ಮಳೆನಕ್ಷತ್ರ: ಸ್ವಾತಿ 3.
ರಾಹುಕಾಲ : ಮಧ್ಯಾಹ್ನ 12-00 – 01-30, ಸೂರ್ಯೋದಯ : 06-28 ಸೂರ್ಯಾಸ್ತ : 06-01 , ಮುಸ್ಲಿಂ ದಿನಾಂಕ : 26 ರಬಿಯುಸ್ಸಾನಿ
ದಿನ ವಿಶೇಷ : ಕಾಳಿ ಚತುರ್ದಶಿ, ಜಲಪೂರಣ ದಿನ
ಅದೃಷ್ಟ ಸಂಖ್ಯೆ : 2, 10

ಮೇಷ: ಎಲೆಕ್ಟ್ರಾನಿಕ್ ಕ್ಷೇತ್ರದಲ್ಲಿರುವವರಿಗೆ ವ್ಯಾಪಾರ ವ್ಯವಹಾರಗಳಲ್ಲಿ ನಿರೀಕ್ಷೆಗೂ ಮೀರಿದ ಆದಾಯವಿದೆ. ಕೋರ್ಟು ಕಚೇರಿಗಳಲ್ಲಿನ ಕೆಲಸಗಳಿಗೆ ಅಲೆದಾಟ ಕಡಿಮೆಯಾಗುವುದು. ಅಪೇಕ್ಷಿತರಿಗೆ ಬ್ಯಾಂಕ್‌ನಿಂದ ಸಾಲ ಸಿಗಲಿದೆ.

ವೃಷಭ: ರಾಜಕೀಯದಲ್ಲಿ ತಮ್ಮವರಿಂದಲೇ ತೋರಿ ಬರುವ ವಿರೋಧಗಳನ್ನು ಜಾಣ್ಮೆಯಿಂದ ನಿವಾರಿಸಿ. ವೈವಾಹಿಕ ಮಾತುಕತೆಗಳ ಭಿನ್ನಾಭಿಪ್ರಾಯಗಳು ದೂರಾಗುವುದು. ಉದರವ್ಯಾಧಿಯಂಥ ಸಮಸ್ಯೆ ಎದುರಾಗಬಹುದು.

ಮಿಥುನ: ಕುಟುಂಬದಲ್ಲಿ ನೆಮ್ಮದಿ ಕಾಪಾಡಿಕೊಳ್ಳಲು ಹೆಂಡತಿಯ ಮಾತುಗಳಿಗೆ ಪ್ರಾಮುಖ್ಯತೆ ನೀಡಿರಿ. ಮನೆಯನ್ನು ಅಲಂಕರಿಸಿ ಬದಲಾವಣೆ ತರಲು ಒಳ್ಳೆಯ ದಿನ. ಪದವೀಧರರಿಗೆ ವಿದೇಶದಲ್ಲಿ ಉದ್ಯೋಗ ದೊರೆಯುವ ಸಂಭವವಿದೆ.

ಕರ್ಕಾಟಕ: ಉನ್ನತ ವ್ಯಾಸಂಗ ಮಾಡುತ್ತಿರುವವರಿಗೆ ಉದ್ಯೋಗದ ಬಗ್ಗೆ ಆಸಕ್ತಿ ಹೆಚ್ಚುವುದು, ಆದರೆ ವಿದ್ಯಾಭ್ಯಾಸ ನಿಲ್ಲಿಸುವುದು ಸರಿಯಲ್ಲ. ಕಾನೂನು ಕಾಯ್ದೆ ವಿಚಾರದಲ್ಲಿ ಹೋರಾಟ ನಡೆಸಿದರೆ ಜಯ ನಿಮ್ಮಪಾಲಿಗಿರುವುದು.

ಸಿಂಹ: ವೃತ್ತಿಯಲ್ಲಿ ಸಮಸ್ಯೆಗಳು ಬಂದರೂ ಧೈರ್ಯದಿಂದ ಎದುರಿಸಲು ಹಿಂಜರಿಕೆ ಬೇಡ. ದ್ವಂದ್ವ ರೀತಿಯ ಆಲೋಚನೆಗಳಿಂದ ನಿರ್ಧಾರ ಕೈಗೊಳ್ಳುವಲ್ಲಿ ವಿಳಂಬ ಮುಂದುವರಿಯುವುದು.

ಕನ್ಯಾ: ಮಿತ್ರರಲ್ಲಿ ಸ್ನೇಹವೂ, ಬಂಧುಗಳಲ್ಲಿ ಸಂಬಂಧವನ್ನು ಉಳಿಸಿಕೊಂಡು ಹೋಗುವುದು ಇಹಕ್ಕೂ ಹಾಗೂ ಪರಕ್ಕೂ ಒಳಿತು ಉಂಟುಮಾಡುತ್ತದೆ. ಹಣದ ವಿಚಾರದಲ್ಲಿ ಮಿತವ್ಯಯಿಗಳಾಗಿರಿ.

ತುಲಾ: ಪಶುಸಂಗೋಪನೆ ಮಾಡುವವರಿಗೆ ಅಥವಾ ಸಾಕು ಪ್ರಾಣಿಗಳಿಂದಲೇ ಸಣ್ಣಪುಟ್ಟ ಹಾನಿ ಉಂಟಾಗಬಹುದು. ಜಾಗ್ರತೆ ಇರಲಿ. ಸೂಕ್ಷ್ಮವಾಗಿ ಯೋಚಿಸಿ ಅಥವಾ ಮಾರ್ಗದರ್ಶನ ಪಡೆದು ಕಾರ್ಯದಲ್ಲಿ ಮುನ್ನುಗ್ಗಿ.

ವೃಶ್ಚಿಕ: ಕೋರ್ಟಿನಲ್ಲಿರುವ ಹಳೆಯ ವ್ಯಾಜ್ಯಗಳು ಮುಕ್ತಾಯಗೊಳ್ಳುವ ಸಂಭವ ಹೆಚ್ಚಾಗಿರುವುದು. ವಿವಾದವಿರುವ ವಿಷಯಗಳು ಇತ್ಯರ್ಥಗೊಂಡು ಮನಸ್ಸಿಗೆ ಹಿತವೆನಿಸುವುದು. ನಿಲುವಿನಿಂದ ಹಿಂದೆ ಸರಿಯಬೇಡಿ.

ಧನು: ತೋಟ ಮತ್ತು ಎಸ್ಟೇಟ್ ಕೆಲಸಗಾರರಿಗೆ ಉದ್ಯೋಗದಲ್ಲಿ ಭಯ ಹುಟ್ಟುವಂಥ ಘಟನೆ ಈ ದಿನ ನಡೆಯಬಹುದು. ಸೇವಕ ವರ್ಗದವರಿಗೆ ಆದಾಯ ಹೆಚ್ಚಿದಂತೆ ಕೆಲಸದ ವಿಸ್ತೀರ್ಣವೂ ಹೆಚ್ಚುವುದು.

ಮಕರ: ಬಹಳ ದಿನದ ಉಳಿತಾಯದ ಹಣವನ್ನು ಸುವ್ಯವಸ್ಥಿತವಾಗಿ ಇರಿಸಲು ಬೇಕಾದ ಮಾರ್ಗವನ್ನು ತಿಳಿದುಕೊಳ್ಳಿ. ದೈವಾನುಗ್ರಹದಿಂದ ಕೆಲಸಗಳೆಲ್ಲವೂ ನಿರಾತಂಕವಾಗಿ, ನಿರಾಳವಾಗಿ ನೆರವೇರುವುದು.

ಕುಂಭ: ವಿದ್ಯಾರ್ಥಿಗಳು ಓದಿನ ವಿಷಯಗಳ ಬಗ್ಗೆ ಸ್ನೇಹಿತರೊಡನೆ ಚರ್ಚೆ ನಡೆಸುವುದರಿಂದ ವಿಚಾರ ಸಂಪೂರ್ಣವಾಗಿ ಅರ್ಥವಾಗಲಿದೆ. ಎಂಜಿನಿಯರಿಂಗ್ ವಿದ್ಯಾರ್ಥಿಗಳು ಸಂದರ್ಶನಕ್ಕೆ ತಯಾರಿ ಮಾಡಿಕೊಳ್ಳಿರಿ.

ಮೀನ: ಲೇವಾದೇವಿ ವ್ಯವಹಾರ ಮಾಡುವವರು ಸಾಲ ಕೊಡುವ ಬಗ್ಗೆ ಯೋಚಿಸಿ ಮುಂದುವರಿಯುವುದು ಉತ್ತಮ. ಹೂಡಿಕೆ ಅಥವಾ ಆಸ್ತಿ ಕೊಳ್ಳುವ ವಿಚಾರದಲ್ಲಿನ ಮಡದಿಯೊಂದಿಗಿನ ಪ್ರಸ್ತಾಪ ಫಲಪ್ರದ.

ಪದಬಂಧ 5847

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಸಿಹಿ ಭಕ್ಷ ಇಲ್ಲಿದೆ (3)
3.ಮುಂದೆ ಬರಲಿರುವ ಕಾಲ (3)
5.ಪುಣ್ಯ ಸ್ಥಳವಿದು (2)
6.ಧಮಕಿ ಹಾಕುತ್ತಿರುವನಲ್ಲಾ ಈ ನೀಚ ವ್ಯಕ್ತಿ! (3)
7.ಮಜದಲ್ಲಿರುವ ಸಾಮ್ರಾಟ! (4)
8.ಹಾವು ಮುಂತಾದ ಹರಿದಾಡುವ ಪ್ರಾಣಿ (4)
10.ಕರಡಿಗಳ ಒಡೆಯನಿಲ್ಲಿ ತಿರುಗಿಹನಲ್ಲಾ? (4)
11.ಚಾವಡಿಯನ್ನೇರಿದ ಪಿಸುಣ! (4)
13.ತವರಲ್ಲಿರುವ ಲೋಹ (3)
14.ವರ್ಣ ಮಾಲೆಯಲ್ಲಿ ಇತರ ಅಕ್ಷರಗಳ ಸಹಾಯವಿಲ್ಲದೆ ಉಚರಿಸುವ ಅಕ್ಷರ (2)
15.ಗಸಗಸೆ ಚಲ್ಲಿದ್ದು ಈ ಹೆಬ್ಬಾಗಿಲ ಬಳಿ! (3)
17.ಗಸ್ತಿನಲ್ಲಿರುವಾಗ ತಾಕಿದ ಕಿರಣ! (3)

ಮೇಲಿಂದ ಕೆಳಕ್ಕೆ
1.ಖರ್ಚು ಕಳೆದು ಉಳಿದುದು (2)
2.ತಾಪತ್ರಯವಿದ್ದಾಗ ಬರೆದ ಓಲೆ (2)
4.ಪ್ರೇಮಿಗಳ ಅಗಲಿಕೆಯ ನೋವುದೀರ್ಘವಾಗಿಬಿಟ್ಟಿದೆ (3)
5.ಸುಖದ ಸುದ್ದಿಯಿದು (6)
6.ಆನೆಗೂ ಆಡಿಗೂ ಇರುವ ವ್ಯತ್ಯಾಸ (6)
7.ಚನ್ನಾಗಿ ಕಡೆಯಲ್ಪಟ್ಟಿದ್ದು (3)
9.ಪರದಲ್ಲಿರುವ ಸ್ತರ (3)
12.ಕೋತಿ ಇಲ್ಲಿಗೆ ಬಂದಿದೆ (3)
14.ಒಳ್ಳೆಯದಾಗಲಿ ಎಂಬುದನ್ನು ಸೂಚಿಸುವ ಮಾತು (2)
16.ನೀರು ಒಸರುವ ಜಾಗ (2)

5846ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ದುಕೂಲ 4.ಕಬ್ಬಿಗ
6.ಲೋಲ 7.ಅಕಳಂಕ
8.ಉಡುತಡಿ 9.ವಜೀರ
11.ಅಜಗರ 13.ದೇವಾಲಯ
14.ಕುಶ 15.ಕೆಸರು
16.ಅಳಿಯ

ಮೇಲಿಂದ ಕೆಳಕ್ಕೆ:
2.ಕೂಲಂಕಷ 3.ಫಲ
4.ಕರಡು 5.ಗರಡಿ
6.ಲೋಕವ್ಯವಹಾರ
8.ಉತ್ತರಪ್ರದೇಶ
10.ಜಲಕೇಳಿ 11.ಅರಿಕೆ
12.ಗದರು 14.ಕುಲ

ಸುಡೊಕು 6232

6		4	9		7	3		8
	1			4				
	7	8	2			4		6
7					8		6	
	8		4			7	3	
		5		7				
4	9		3	8		6		1
	6						8	
8		7			4	2		3

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6231 ಸುಡೊಕು

9	1	7	3	5	8	6	2	4
8	4	6	9	2	7	5	1	3
2	5	3	4	1	6	9	7	8
5	3	8	1	6	2	7	4	9
4	2	9	7	3	5	1	8	6
6	7	1	8	4	9	2	3	5
3	8	5	6	7	1	4	9	2
7	9	2	5	8	4	3	6	1
1	6	4	2	9	3	8	5	7

ಷೇರುಪೇಟೆ ವಹಿವಾಟು ▲363



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,339
ಇಂದಿನ ಅಂತ್ಯ	24,466
▲	127
ದಿನದ ಗರಿಷ್ಠ	24,484

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹580
12 ಕ್ಕೆ	₹75
ಮೈಸೂರು	
100ಕ್ಕೆ	₹583

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹252-628
ದ್ವಿತಳಿ (ಬಿ.ವಿ) ₹300-658

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹177
ಆರ್‌ಎಸ್‌ಎಸ್-5 ₹172
ಗುಡ್ ಲಾಟ್ ₹168
(ಪ್ರತಿ ಕೆ.ಜಿಗೆ)

ಮಾರುಕಟ್ಟೆಯಲ್ಲಿ ದರ ಕುಸಿತ • ಧಾರವಾಡ, ಗದಗ, ಬಾಗಲಕೋಟೆ ರೈತರು ಕಂಗಾಲು

ಮಳೆ ಅವಾಂತರ: ಈರುಳ್ಳಿ ಬೆಳೆ ನಾಶ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಬಾಗಲಕೋಟೆ, ಗದಗ, ಧಾರವಾಡ ಜಿಲ್ಲೆಗಳಲ್ಲಿ ಸಾವಿರಾರು ಹೆಕ್ಟೇರ್‌ನಲ್ಲಿ ಬೆಳೆದಿರುವ ಈರುಳ್ಳಿ ಫಸಲು ಮಳೆಯಿಂದ ಹಾನಿಗೀಡಾಗಿದೆ. ಇದರಿಂದ ಬೆಳೆಗಾರರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಬಾಗಲಕೋಟೆ ಜಿಲ್ಲೆಯಲ್ಲಿ 10,069 ಹೆಕ್ಟೇರ್‌ನಷ್ಟು ಬೆಳೆಗೆ ಹಾನಿ ಆಗಿದೆ. ಕೆಲವೆಡೆ ಈರುಳ್ಳಿ ಕಟಾವು ಮಾಡಿ ಒಣಗಲು ಹಾಕಿದ್ದ ವೇಳೆ ಸುರಿದ ಮಳೆಯಿಂದ ನೀರಿನಲ್ಲಿ ಕೊಚ್ಚಿ ಹೋಗಿದೆ.

ಧಾರವಾಡ ಜಿಲ್ಲೆಯ ಹುಬ್ಬಳ್ಳಿ, ಕುಂದಗೋಳ, ಅಣ್ಣಿಗೇರಿ ತಾಲ್ಲೂಕಿನಲ್ಲೂ ಈರುಳ್ಳಿ ಕೊಳೆತಿದೆ. ಜಿಲ್ಲೆಯಲ್ಲಿ ಒಟ್ಟು 6,234 ಹೆಕ್ಟೇರ್‌ನಲ್ಲಿ ಈರುಳ್ಳಿ ಬಿತ್ತನೆ ಆಗಿತ್ತು. 3,250 ಹೆಕ್ಟೇರ್‌ನಲ್ಲಿ ಬೆಳೆ ನಾಶವಾಗಿದೆ. ನವಲಗುಂದ ತಾಲ್ಲೂಕಿನಲ್ಲಿ ಬಿತ್ತನೆಯಾಗಿದ್ದ 3,700 ಹೆಕ್ಟೇರ್ ಪೈಕಿ, 1,700 ಹೆಕ್ಟೇರ್‌ನಲ್ಲಿ ಬೆಳೆ ನಷ್ಟವಾಗಿದೆ.

‘ನಾಲ್ಕು ಎಕರೆಯಲ್ಲಿ ಈರುಳ್ಳಿ ಬಿತ್ತನೆ ಮಾಡಿದ್ದೆ. ಮಳೆಯಿಂದ ₹4 ಲಕ್ಷ ನಷ್ಟವಾಗಿದೆ. ಮತ್ತೊಮ್ಮೆ ಬಿತ್ತನೆ ಮಾಡಿದ್ದೇನೆ. ತೇವಾಂಶ ಹೆಚ್ಚಳದಿಂದ ಅರ್ಧದಷ್ಟು ಜಮೀನಿನಲ್ಲಿ ಬೀಜ ಮೊಳಕೆಯೊಡೆದಿಲ್ಲ’ ಎಂದು ನವಲಗುಂದ ತಾಲ್ಲೂಕಿನ ತೆಲೆಮಡುಬಾ ಗ್ರಾಮದ ರೈತ ರಮೇಶ ಬಾಳಗಿ ತಿಳಿಸಿದರು.

ಹುಬ್ಬಳ್ಳಿ ನಗರ ಸೇರಿ ತಾಲ್ಲೂಕಿನಲ್ಲಿ ನಿಗದಿತ ಗುರಿಗಿಂತ (373 ಹೆಕ್ಟೇರ್) ಹೆಚ್ಚಿನ (514 ಹೆಕ್ಟೇರ್) ಪ್ರದೇಶದಲ್ಲಿ ಈರುಳ್ಳಿ ಬೆಳೆಯಲಾಗಿದ್ದು, ಬೆಳೆ ಸಮರ್ಪಕವಾಗಿ ರೈತರ ಕೈ ಸೇರಿಲ್ಲ.

ಗದಗ ಜಿಲ್ಲೆಯಲ್ಲಿ ಈ ಬಾರಿ 14 ಸಾವಿರ ಹೆಕ್ಟೇರ್‌ನಲ್ಲಿ ಈರುಳ್ಳಿ ಬಿತ್ತನೆಯಾಗಿತ್ತು. ಮಳೆಯಿಂದ 4 ಸಾವಿರ ಹೆಕ್ಟೇರ್‌ನಲ್ಲಿ ಹಾನಿಯಾಗಿದೆ.

‘ಗದಗ ಜಿಲ್ಲೆಯ ವಿವಿಧೆಡೆ ನಾಲ್ಕು ಸಾವಿರ ಹೆಕ್ಟೇರ್‌ನಲ್ಲಿ ಈರುಳ್ಳಿ ಬೆಳೆ ಹಾನಿಯಾಗಿದೆ. ಕೆಲವೆಡೆ ಜಮೀನಿನಲ್ಲೇ ಕೊಳೆತಿದೆ. ಇನ್ನು ಕೆಲವೆಡೆ ಸ್ವಚ್ಛಗೊಳಿಸುವಾಗ ಹಾನಿಯಾಗಿದೆ. ಬೆಳೆಹಾನಿ ಸಮೀಕ್ಷೆ ಪ್ರಗತಿಯಲ್ಲಿದ್ದು, ಎನ್‌ಡಿಆರ್‌ಎಫ್ ಮಾರ್ಗಸೂಚಿ ಪ್ರಕಾರ ರೈತರಿಗೆ ಪರಿಹಾರ ನೀಡಲಾಗುವುದು’ ಎಂದು ತೋಟಗಾರಿಕೆ ಇಲಾಖೆಯ ಹಿರಿಯ ನಿರ್ದೇಶಕ ಶಶಿಕಾಂತ ಕೋಟಿಮನಿ ತಿಳಿಸಿದರು.

‘ವಿಜಯನಗರ ಜಿಲ್ಲೆಯಲ್ಲಿ ಅಧಿಕ ಮಳೆಯಿಂದ 108.59 ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿದ್ದ ಈರುಳ್ಳಿ ಕೊಳೆತಿದೆ. ಹಗರಿಬೊಮ್ಮನಹಳ್ಳಿ ತಾಲ್ಲೂಕಿನಲ್ಲಿ 60 ಹೆಕ್ಟೇರ್, ಕೊಟ್ಟೂರಿನಲ್ಲಿ 26.73 ಹೆಕ್ಟೇರ್, ಹೂವಿನಹಡಗಲಿಯಲ್ಲಿ 18 ಹೆಕ್ಟೇರ್, ಹೊಸಪೇಟೆಯಲ್ಲಿ 2 ಹೆಕ್ಟೇರ್, ಕೂಡ್ಲಿಗಿಯಲ್ಲಿ 1.86 ಹೆಕ್ಟೇರ್‌ನಲ್ಲಿ ಈರುಳ್ಳಿ ಕೊಳೆತಿದೆ’ ಎಂದು ತೋಟಗಾರಿಕಾ ಇಲಾಖೆಯ ಉಪ ನಿರ್ದೇಶಕ ಚಿದಾನಂದಪ್ಪ ತಿಳಿಸಿದರು.

ವಿಜಯನಗರ ಜಿಲ್ಲೆ ಹೂವಿನಹಡಗಲಿ ತಾಲ್ಲೂಕಿನ ಕೆಂಚಮ್ಮನಹಳ್ಳಿಯ ಹೊಲವೊಂದರಲ್ಲಿ ಈರುಳ್ಳಿ ಫಸಲು ಜಲಾವೃತವಾಗಿದೆ

ಸೂಕ್ತ ಪರಿಹಾರಕ್ಕೆ ಒತ್ತಾಯ

ಹುಬ್ಬಳ್ಳಿಯ ಅಮರಗೋಳದಲ್ಲಿರುವ ಜಗಜ್ಯೋತಿ ಬಸವೇಶ್ವರ ಕೃಷಿ ಉತ್ಪನ್ನ ಮಾರುಕಟ್ಟೆಗೆ ಒಂದು ವಾರಕ್ಕೆ 1.10 ಲಕ್ಷ ಕ್ವಿಂಟಲ್‌ನಷ್ಟು ಈರುಳ್ಳಿ ಆವಕವಾಗುತ್ತಿದೆ. ಪ್ರತಿದಿನ 500 ಕ್ವಿಂಟಲ್ ಈರುಳ್ಳಿಯು ಮುಂಬೈನಿಂದ ಆವಕವಾಗುತ್ತಿದೆ. ಈ ಈರುಳ್ಳಿಗೆ ಕ್ವಿಂಟಲ್‌ಗೆ ₹4,500 ದರವಿದೆ.

> **ಬಾಗಲಕೋಟೆ ಜಿಲ್ಲೆಯಲ್ಲಿ ಬೆಳೆ ನಷ್ಟದ ಸಮೀಕ್ಷೆ ನಡೆದಿದೆ. ಅಂತಿಮ ವರದಿ ಬರಬೇಕಿದೆ. ಇದನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು**
> **ರವೀಂದ್ರ ಹಕಾಟೆ,** ಉಪ ನಿರ್ದೇಶಕ, ತೋಟಗಾರಿಕೆ ಇಲಾಖೆ, ಬಾಗಲಕೋಟೆ

‘ವಾರದ ಹಿಂದೆ ಕ್ವಿಂಟಲ್‌ಗೆ ₹500ರಿಂದ ₹4,000 ಇದ್ದ ಸ್ಥಳೀಯ ಈರುಳ್ಳಿ ದರವು ಈಗ ₹300–₹3,500ಕ್ಕೆ ಕುಸಿದಿದೆ. ಗುಣಮಟ್ಟ ಇಲ್ಲದ ಕಾರಣ ಸಂಗ್ರಹಿಸಲು ಆಗುತ್ತಿಲ್ಲ. ಅಂದು ಆವಕವಾದ ಈರುಳ್ಳಿಯನ್ನು ಅಂದೇ ಮಾರಾಟ ಮಾಡಬೇಕಿದೆ’ ಎಂದು ಹುಬ್ಬಳ್ಳಿ ಎಪಿಎಂಸಿ ಈರುಳ್ಳಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ಸಲೀಂ ಬ್ಯಾಹಟ್ಟಿ ತಿಳಿಸಿದರು.

‘ಮಳೆಯಿಂದಾಗಿ ಎಕರೆಗೆ 150 ಕ್ವಿಂಟಲ್ ಸಿಗಬೇಕಿದ್ದ ಈರುಳ್ಳಿ ಇಳುವರಿಯು 50 ಕ್ವಿಂಟಲ್‌ಗೆ ಕುಸಿದಿದೆ. ಅಧಿಕಾರಿಗಳು ಹೊಲಗಳಿಗೆ ತೆರಳಿ ಸರಿಯಾಗಿ ಸಮೀಕ್ಷೆ ಮಾಡಬೇಕು. ಸರ್ಕಾರವು ಹೆಕ್ಟೇರ್‌ಗೆ ₹60 ಸಾವಿರ ಪರಿಹಾರ ನೀಡಬೇಕು’ ಎಂದು ಕರ್ನಾಟಕ ರಾಜ್ಯ ಈರುಳ್ಳಿ ಬೆಳೆಗಾರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಸಿದ್ಧೇಶ ಎನ್.ಎಂ. ಒತ್ತಾಯಿಸಿದರು.

ನಿತ್ಯ 5,000 ಚೀಲ ಪೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಯಶವಂತಪುರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಪ್ರತಿದಿನ ಗುಣಮಟ್ಟ ಕಳೆದುಕೊಂಡಿರುವ ಈರುಳ್ಳಿ ಆವಕ ಹೆಚ್ಚಾಗುತ್ತಿದೆ. ಸಗಟು ವ್ಯಾಪಾರಿಗಳು ರೈತರಿಂದ 50 ಕೆ.ಜಿ ತೂಕದ ಒಂದು ಚೀಲಕ್ಕೆ ₹50ರಿಂದ ₹100 ನೀಡಿ ಖರೀದಿಸುತ್ತಾರೆ.

ಆದರೆ, ಈ ಸರಕನ್ನು ಚಿಲ್ಲರೆ ವ್ಯಾಪಾರಿಗಳು ಖರೀದಿಸಲು ಮುಂದಾಗದಿರುವುದರಿಂದ ಈರುಳ್ಳಿ ಕೊಳೆತು ಹೋಗುತ್ತಿದೆ. ಇದರಿಂದ ಪ್ರತಿದಿನ 5 ಸಾವಿರ ಚೀಲದಷ್ಟು ಈರುಳ್ಳಿ ವ್ಯರ್ಥವಾಗುತ್ತಿದೆ. ಮಾರುಕಟ್ಟೆಯಲ್ಲಿ ಸಂಗ್ರಹವಾಗುವ ಈ ತ್ಯಾಜ್ಯವನ್ನು ಹೊರಸಾಗಿಸಲು ಬಿಬಿಎಂಪಿ ಸಿಬ್ಬಂದಿ ಹರಸಾಹಸ ಪಡುವಂತಾಗಿದೆ ಎಂದು ಸಗಟುದಾರರು ಹೇಳುತ್ತಾರೆ.

ಸದ್ಯ ಕೊಪ್ಪಳ, ಚಳ್ಳಕೆರೆ, ಹಗರಿ-ಬೊಮ್ಮನಹಳ್ಳಿ, ಕೂಡ್ಲಿಗಿ, ಹೊಸದುರ್ಗ ಭಾಗದಲ್ಲಿ ಬೆಳೆದಿರುವ ಈರುಳ್ಳಿಯು ಪೂರೈಕೆಯಾಗುತ್ತಿದೆ. ಯಶವಂತಪುರದ ಎಪಿಎಂಸಿಗೆ ಮಂಗಳವಾರ 97,857 ಚೀಲ ಮತ್ತು ದಾಸನಪುರ ಎಪಿಎಂಸಿಗೆ 14,811 ಚೀಲ ಈರುಳ್ಳಿ ಆವಕವಾಗಿತ್ತು.

ಮಹಾರಾಷ್ಟ್ರದಿಂದ ಪೂರೈಕೆಯಾಗುವ ‘ಎ’ ಗ್ರೇಡ್ ಈರುಳ್ಳಿಗೆ ಪ್ರತಿ ಕ್ವಿಂಟಲ್‌ಗೆ ₹5,200ರಿಂದ ₹5,400 ದರವಿದೆ. ಸ್ಥಳೀಯವಾಗಿ ಪೂರೈಕೆಯಾಗುವ ‘ಎ’ ಗ್ರೇಡ್ ಈರುಳ್ಳಿಗೆ ಪ್ರತಿ ಕ್ವಿಂಟಲ್‌ಗೆ ₹4,200ರಿಂದ ₹4,500ರ ವರೆಗೆ ದರವಿದೆ.

‘ಒಂದು ಎಕರೆಯಲ್ಲಿ ಈರುಳ್ಳಿ ಬೆಳೆಯಲು ₹50 ಸಾವಿರದಿಂದ ₹60 ಸಾವಿರ ಖರ್ಚಾಗುತ್ತದೆ. ಒಳ್ಳೆಯ ಇಳುವರಿ ಬಂದರೆ 120ರಿಂದ 150 ಕ್ವಿಂಟಲ್ ಸಿಗುತ್ತದೆ. ಉತ್ತಮ ದರ ಸಿಕ್ಕಿದರೆ ರೈತರಿಗೆ ಲಾಭ ದೊರೆಯಲಿದೆ. ಮಳೆಯಿಂದ ಬೆಳೆ ನಷ್ಟ ಅನುಭವಿಸಿ, ಅಳಿದುಳಿದ ಸರಕನ್ನು ಮಾರುಕಟ್ಟೆಗೆ ತರುವ ರೈತರಿಗೆ ಉತ್ತಮ ಬೆಲೆ ಕೂಡ ಸಿಗುತ್ತಿಲ್ಲ’ ಎಂದು ವರ್ತಕ ಲೋಕೇಶ್ ಜೀ ಹೇಳಿದರು.

ಹೊಲದಲ್ಲೇ ಕೊಳೆತ ಫಸಲು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಜಿಲ್ಲೆಯ ಚಳ್ಳಕೆರೆ, ಮೊಳಕಾಲ್ಮುರು ಹಾಗೂ ಚಿತ್ರದುರ್ಗ ತಾಲ್ಲೂಕಿನ ರೈತರಿಗೆ ಆರ್ಥಿಕ ಶಕ್ತಿ ತಂದುಕೊಡುವ ಈರುಳ್ಳಿ ಈ ಬಾರಿ ಕಣ್ಣೀರು ತರಿಸಿದೆ. ಈಚೆಗೆ ಸುರಿದ ನಿರಂತರ ಮಳೆಯಿಂದಾಗಿ ಕಟಾವು ಹಂತದಲ್ಲಿದ್ದ ಅಪಾರ ಪ್ರಮಾಣದ ಫಸಲು ಕೊಳೆತು ಹೋಗಿದ್ದು, ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾಗಿದೆ.

ಜಿಲ್ಲೆಯಾದ್ಯಂತ ಅಂದಾಜು 30,000 ಹೆಕ್ಟೇರ್ ಪ್ರದೇಶದಲ್ಲಿ ಈರುಳ್ಳಿ ಬಿತ್ತನೆಯಾಗಿತ್ತು. ಉತ್ತಮ ಮಳೆಯಿಂದಾಗಿ ಫಸಲು ಚೆನ್ನಾಗಿಯೇ ಇತ್ತು. ರೈತರು ಉತ್ತಮ ಲಾಭದ ನಿರೀಕ್ಷೆಯಲ್ಲಿದ್ದರು.

ಆದರೆ, ಕಟಾವು ಹಂತದಲ್ಲಿ ಏಕಾಏಕಿ ಆರಂಭವಾದ ನಿರಂತರ ಮಳೆಯಿಂದಾಗಿ ಈರುಳ್ಳಿ ಕಟಾವು ಸಾಧ್ಯವಾಗದೆ ಹೊಲದಲ್ಲೇ ಕೊಳೆತು ಹೋಗಿದೆ. ಮಳೆಯಿಂದಾಗಿ ಹೊಲದಲ್ಲಿ ನೀರು ನಿಂತಿದ್ದರಿಂದ ರೈತರಿಗೆ ತೀವ್ರ ನಷ್ಟ ಉಂಟಾಗಿದೆ. ಇನ್ನು ಕೆಲವು ರೈತರಿಗೆ ಕಟಾವು ಮಾಡಿಟ್ಟ ಈರುಳ್ಳಿಯನ್ನು ಒಣಗಿಸಿ ಸಂಸ್ಕರಿಸಲು ಅವಕಾಶ ಸಿಗದೆ ಕೊಳೆತಿದೆ.

ಇನ್ನೊಂದೆಡೆ ಈರುಳ್ಳಿಯನ್ನು ಮಾರುಕಟ್ಟೆಗೆ ಸಾಗಿಸುವಾಗಲೂ ನಷ್ಟವನ್ನೇ ಕಾಣುವಂತಾಗಿದೆ ಎಂದು ರೈತರು ತಿಳಿಸಿದರು.

ಚಳ್ಳಕೆರೆ ತಾಲ್ಲೂಕಿನ ವಿಡಪನಕುಂಟೆ ಗ್ರಾಮದ ರೈತ ರಾಜಣ್ಣ ಬೆಳೆದ ಈರುಳ್ಳಿ ಕೊಳೆತು ಹೋಗಿದೆ

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಇಂದುಮತಿ, ಮಲ್ಲೇಶ್ವರಂ, ಬೆಂಗಳೂರು.

- **ಪ್ರಶ್ನೆ: ನಾನು ಕಳೆದ ಇಪ್ಪತ್ತು ವರ್ಷದಿಂದ ಬೆಂಗಳೂರಿನಲ್ಲಿ ಶಾಲಾ ಮಕ್ಕಳಿಗೆ ಮನೆ ಪಾಠ ನಡೆಸಿ ಬದುಕು ಸಾಗಿಸುತ್ತಿದ್ದೇನೆ. ಮನೆ ಸಮೀಪವೇ ನನ್ನ ಹೆಸರಿನಲ್ಲಿ ನನ್ನ ಪತಿ, ಒಂದು ಸಣ್ಣ ರಿಟೇಲ್ ಅಂಗಡಿ ಇರಿಸಿಕೊಂಡು ವ್ಯವಹರಿಸುತ್ತಿದ್ದಾರೆ. ದಿನವಹಿ ಸುಮಾರು ₹25 ಸಾವಿರದಿಂದ ₹30 ಸಾವಿರ ವ್ಯಾಪಾರವಾಗುತ್ತಿದೆ. ಇದರಲ್ಲಿ ಅರ್ಧ ಭಾಗ ನಗದು ವ್ಯವಹಾರ ಆಗುತ್ತಿದೆ.**
  ಅದೇ ರೀತಿ ನನ್ನ ಪಾಠದಿಂದಲೂ ನನಗೆ ಪ್ರತಿ ತಿಂಗಳು ನಗದು ರೂಪದಲ್ಲಿ ಸುಮಾರು ₹25 ಸಾವಿರ ಆದಾಯ ಬರುತ್ತಿದೆ. ಅಲ್ಲದೆ, ಆನ್‌ಲೈನ್ ಮೂಲಕ ಪಾವತಿಸುವ ವಿದ್ಯಾರ್ಥಿಗಳೂ ಇದ್ದಾರೆ. ಅವರ ಪಾವತಿಯೂ ಹೆಚ್ಚು ಕಮ್ಮಿ ಅಷ್ಟೇ ಮೊತ್ತವಿದೆ. ನನ್ನ ಸಂದೇಹವೇನೆಂದರೆ ನಾನು ಮನೆ ಪಾಠದಿಂದ ಗಳಿಸುವ ಆದಾಯ ಹಾಗೂ ನನ್ನ ಹೆಸರಲ್ಲಿರುವ ವ್ಯವಹಾರಕ್ಕೆ ತೆರಿಗೆ ಹೇಗೆ ಅನ್ವಯವಾಗುತ್ತದೆಯೇ? ನಾನು ಈ ತನಕ ರಿಟರ್ನ್ಸ್ ಸಲ್ಲಿಸಿಲ್ಲ. ಈ ಬಗ್ಗೆ ಯೋಜನೆಯ ಅಗತ್ಯವಿದೆಯೇ? ತೆರಿಗೆ ಉಳಿಸಬೇಕಾದರೆ ಏನು ಮಾಡಬೇಕು.

ಉತ್ತರ: ನೀವು ನೀಡಿರುವ ಮಾಹಿತಿ ಪ್ರಕಾರ ನೀವು ಎರಡು ಮೂಲಗಳಿಂದ ಆದಾಯ ಗಳಿಸುತ್ತಿದ್ದೀರಿ. ಒಂದು ನಿಮ್ಮ ಶಿಕ್ಷಣ ವೃತ್ತಿ ಹಾಗೂ ಎರಡನೆಯದು ನಿಮ್ಮ ವ್ಯಾಪಾರ. ಪ್ರಶ್ನೆಯಲ್ಲಿ ಉಲ್ಲೇಖಿಸಿರುವಂತೆ ವಾರ್ಷಿಕವಾಗಿ ನಿಮ್ಮ ಶಿಕ್ಷಣ ವೃತ್ತಿಯ ಆದಾಯ ₹6 ಲಕ್ಷ ಹಾಗೂ ವ್ಯಾಪಾರದಿಂದ ಬರುವ ವಹಿವಾಟು ಆದಾಯ ಸುಮಾರು ₹1 ಕೋಟಿ ಎಂದು ಊಹಿಸಲಾಗಿದೆ.

ನಿಮಗೆ ಆದಾಯ ತೆರಿಗೆಯ ಸೆಕ್ಷನ್ 44 ಎಡಿ ಪ್ರಕಾರ ರಿಟರ್ನ್ಸ್ ಸಲ್ಲಿಸುವುದಕ್ಕೆ ಸರಳ ಅವಕಾಶವಿದೆ. ನಿಮ್ಮ ಆದಾಯ ಅರ್ಧಕ್ಕರ್ಧ ನಗದು ರೂಪದಲ್ಲೂ ಇರುವ ಕಾರಣ ಹಾಗೂ ₹2 ಕೋಟಿ ವ್ಯವಹಾರ ಮೀರಿರದ ಕಾರಣ ನಿಮಗೆ ನಿಮ್ಮ ವ್ಯವಹಾರದ ಮೇಲೆ ಶೇ 8ರ ದರದಲ್ಲಿ ಲಾಭ ಇದೆ ಎಂದು ಘೋಷಿಸುವುದಕ್ಕೆ ಅವಕಾಶವಿದೆ. ಡಿಜಿಟಲ್ ಪಾವತಿ ಆಗಿದ್ದರೆ ಅಷ್ಟು ವಹಿವಾಟಿಗೆ ಶೇ 6ರ ಲಾಭ ಬಂದಿದೆ ಎಂದು ಊಹಿಸಿ ಒಟ್ಟು ಆದಾಯಕ್ಕೆ ತೆರಿಗೆ ಕಟ್ಟಬೇಕು. ನಿಮ್ಮ ವಿಚಾರದಲ್ಲಿ ಗರಿಷ್ಠವೆಂದರೆ ₹8 ಲಕ್ಷ ವ್ಯಾಪಾರದಿಂದಲೂ, ₹6 ಲಕ್ಷ ನಿಮ್ಮ ಶಿಕ್ಷಣ ವೃತ್ತಿಯಿಂದಲೂ ಗಳಿಕೆ ಇದೆ ಎಂದು ಊಹಿಸಬಹುದು. ಶಿಕ್ಷಣ ಆದಾಯಕ್ಕೆ ಸಂಬಂಧಿತ ವೆಚ್ಚವನ್ನು ಕಳೆದುಕೊಳ್ಳಬಹುದು.

ನೀವು ಆದಾಯ ಗಳಿಸುತ್ತಿರುವ ಕಾರಣ ನೀವು ರಿಟರ್ನ್ಸ್ ಸಲ್ಲಿಸಿ. ನಿಮ್ಮ ವ್ಯಾಪಾರಕ್ಕೆ ಸಂಬಂಧಿಸಿ ಜಿಎಸ್‌ಟಿ ನೋಂದಣಿಯೂ ನಿಮ್ಮಲ್ಲಿರಬಹುದು. ಹೀಗಾಗಿ, ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಕೆ ಆಗದಿದ್ದರೆ ಸರ್ಕಾರಕ್ಕೆ ಈ ಬಗ್ಗೆ ಮಾಹಿತಿ ಸಂಗ್ರಹಿಸುವುದು ಕಷ್ಟದ ಕೆಲಸವಲ್ಲ. ಅಲ್ಲದೆ, ಯಾವುದೇ ಬ್ಯಾಂಕಿನ ವ್ಯಾಪಾರ ಸಾಲಗಳಿಗೂ ರಿಟರ್ನ್ಸ್ ಅತ್ಯಗತ್ಯ ಎಂಬುದು ಗಮನದಲ್ಲಿ ಇರಲಿ.

ಈ ಬಗ್ಗೆ ತೆರಿಗೆ ಸಲಹೆಗಾರರ ನೆರವು ಪಡೆದು ರಿಟರ್ನ್ಸ್ ಸಲ್ಲಿಸಿ. ಕಳೆದ ವರ್ಷದ ಆದಾಯಕ್ಕೆ (2023-24) ಸಂಬಂಧಿಸಿ ಹೆಚ್ಚುವರಿ ಶುಲ್ಕ ಪಾವತಿಸಿ. ಇನ್ನೂ ರಿಟರ್ನ್ಸ್ ಸಲ್ಲಿಕೆಗೆ ಡಿಸೆಂಬರ್ 31ರ ತನಕ ಅವಕಾಶ ಇದೆ. ತೆರಿಗೆ ಉಳಿಸಲು ನಿಮ್ಮ ಪತಿಯವರ ಹೆಸರಲ್ಲಿ ಈ ವ್ಯವಹಾರವನ್ನು ವರ್ಗಾಯಿಸಿ ಹಾಗೂ ಅಗತ್ಯ ಪರವಾನಗಿ ಪಡೆದು ಮುನ್ನಡೆಸಬಹುದು. ಆಗ ಅದೇ ಆದಾಯಕ್ಕೆ ನೀವಿಬ್ಬರೂ ವೈಯಕ್ತಿಕವಾಗಿ ತೆರಿಗೆ ಅನ್ವಯವಾದರಷ್ಟೇ ಪಾವತಿಸಬೇಕಾಗುತ್ತದೆ.

ಅನನ್ಯಾ ಭಟ್, ಆರ್.ಟಿ. ನಗರ, ಬೆಂಗಳೂರು.

- **ಪ್ರಶ್ನೆ: ನಾನು ಕಾಲೇಜು ಉಪನ್ಯಾಸಕಿ. ಚಿನ್ನದಲ್ಲಿ ಹೂಡಿಕೆ ಮಾಡುವ ಆಸಕ್ತಿ ಹೊಂದಿದ್ದೇನೆ. ಪ್ರಸ್ತುತ ಮಾರುಕಟ್ಟೆ ಪರಿಸ್ಥಿತಿಯಲ್ಲಿ ಚಿನ್ನ, ಚಿನ್ನದ ಇಟಿಎಫ್, ಚಿನ್ನದ ಮ್ಯೂಚುವಲ್ ಫಂಡ್ ಮತ್ತು ಸ್ವರ್ಣ ಬಾಂಡ್ ಸರಣಿಗಳಲ್ಲಿ ಹೂಡಿಕೆ ಮಾಡುವುದು ಲಾಭದಾಯಕವೇ? ಈ ವರ್ಗದಲ್ಲಿ ಹೂಡಿಕೆ ಮಾಡಲು ಆಸಕ್ತಿ ಹೊಂದಿರುವುದರಿಂದ ಇವುಗಳಲ್ಲಿ ಯಾವುದು ಉತ್ತಮ. ಇವು ಈಕ್ವಿಟಿ ಫಂಡ್‌ಗಳಂತೆ ಅಲ್ಲ ಎಂಬುದನ್ನು ತಿಳಿದಿದ್ದೇನೆ. ಈ ಬಗ್ಗೆ ಮಾಹಿತಿ ಕೊಡಿ.**

ಉತ್ತರ: ಹೂಡಿಕೆ ವಿಚಾರಕ್ಕೆ ಬಂದಾಗ ಯಾವುದೇ ಹೂಡಿಕೆ ಉತ್ಪನ್ನವಾಗಿರಲಿ, ಉದಾಹರಣೆಗೆ ಷೇರು, ಮ್ಯೂಚುವಲ್ ಫಂಡ್, ಚಿನ್ನ ಅಥವಾ ಬಾಂಡ್, ಇಟಿಎಫ್ ಅಥವಾ ಸ್ಥಿರ ಆಸ್ತಿ ಇತ್ಯಾದಿ ಏನೇ ಇರಲಿ ಇವೆಲ್ಲ ಪ್ರತ್ಯೇಕವಾದ ಹೂಡಿಕೆ ಉತ್ಪನ್ನಗಳಾಗಿವೆ. ತಮ್ಮ ತಮ್ಮ ರಿಸ್ಕ್ ಸಾಮರ್ಥ್ಯಕ್ಕೆ ತಕ್ಕ ಹಾಗೆ ಹಾಗೂ ಹೂಡಿಕೆ ಅವಧಿಗೆ ಸರಿ ಹೋಗುವ ಹೂಡಿಕೆಗಳನ್ನು ಆಯ್ಕೆ ಮಾಡಿ ತಮ್ಮ ಹೆಚ್ಚುವರಿ ಮೊತ್ತವನ್ನು ನಿರ್ದಿಷ್ಟ ಲಾಭವನ್ನು ಗುರಿಯಾಗಿಸಿ ಹೂಡಿಕೆ ಮಾಡಲಾಗುತ್ತದೆ.

ಎಲ್ಲ ಹೂಡಿಕೆಗಳು ಎಲ್ಲ ಕಾಲದಲ್ಲೂ ಉತ್ತಮ ಲಾಭ ಅಥವಾ ಸದಾ ಕಾಲ ನಷ್ಟದ ಸ್ಥಿತಿಯನ್ನು ಹೊಂದಿರುವುದಿಲ್ಲ ಎಂಬುದು ಹೂಡಿಕೆ ಪ್ರಪಂಚದಲ್ಲಿ ಗಮನಿಸಬೇಕಾದ ಅಂಶ. ಅದೊಂದು ಲಾಭ-ನಷ್ಟದ ತಿರುಗುವ ಚಕ್ರ. ಹೀಗಾಗಿ, ಈ ಚಕ್ರದ ಏರುಗತಿ ಅರಿತು ಹೂಡಿಕೆ ಮಾಡುವವರಿಗೆ ಲಾಭವೂ, ತದ್ವಿರುದ್ಧವಾಗಿ ವ್ಯವಹರಿಸುವವರಿಗೆ ನಷ್ಟವಾಗುವುದು ಸಹಜ.

ಸಾಮಾನ್ಯ ನಿಯಮದಂತೆ ಮೇಲೆ ಹೇಳಿರುವ ವಿವಿಧ ವರ್ಗದ ಉತ್ಪನ್ನಗಳಲ್ಲಿ ಹಂಚಿಕೆ ಮಾಡಿ ಹೂಡಿಕೆ ಮಾಡುವುದು ಸೂಕ್ತ. ಆದರೆ, ಕೇವಲ ಚಿನ್ನದ ಮೌಲ್ಯ ಆಧರಿಸಿ ನಿರ್ಧರಿಸಲ್ಪಡುವ ಒಂದೇ ವರ್ಗದ ಬೇರೆ ಬೇರೆ ಉತ್ಪನ್ನಗಳಲ್ಲಿ ಹೂಡಿಕೆಗೆ ಆಸಕ್ತಿ ಇರುವ ಬಗ್ಗೆ ತಿಳಿಸಿದ್ದೀರಿ. ಬಹುತೇಕವಾಗಿ ಈ ಎಲ್ಲಾ ಉತ್ಪನ್ನಗಳು ಚಿನ್ನದ ಮೂಲ ಬೆಲೆಗೆ ಅನುಗುಣವಾಗಿ ಮೌಲ್ಯ ಪಡೆಯುತ್ತವೆ. ಆದರೆ, ಹೂಡಿಕೆ ಅವಧಿ, ರಿಸ್ಕ್, ತೆರಿಗೆಯಲ್ಲಿ ಬದಲಾವಣೆ ಇರುತ್ತದೆ.

ಚಿನ್ನದ ಬಾಂಡ್ 8 ವರ್ಷಗಳ ಬಂಡವಾಳ ಹೂಡಿಕೆಯ ಉತ್ಪನ್ನವಾಗಿದೆ. ಕೊನೆಯ ತನಕ ಹೊಂದಿದ್ದಲ್ಲಿ ಲಾಭದ ಮೇಲೆ ತೆರಿಗೆ ಸಂಪೂರ್ಣ ವಿನಾಯಿತಿ ಇದೆ. ಇದಕ್ಕೆ ವಾರ್ಷಿಕವಾಗಿ ಶೇ 2.5ರಷ್ಟು ಬಡ್ಡಿ ಸಿಗುತ್ತದೆ.

ಇನ್ನು ವಸ್ತು ರೂಪದಲ್ಲಿರುವ ಹೂಡಿಕೆಯ ಚಿನ್ನವನ್ನು ಮನೆಯಲ್ಲಿ ಇಟ್ಟುಕೊಳ್ಳುವುದು ಯಾವತ್ತೂ ಅಪಾಯಕಾರಿ. ಇದನ್ನು ಬ್ಯಾಂಕ್ ಲಾಕರ್ ಇತ್ಯಾದಿಯಲ್ಲಿ ಇಡಲು ಪ್ರತ್ಯೇಕ ವೆಚ್ಚ ಪಾವತಿಸಬೇಕಿದೆ. ಖರೀದಿಯ ವೇಳೆ ಶೇ 3ರಷ್ಟು ಜಿಎಸ್‌ಟಿ ಅನ್ವಯಿಸುತ್ತದೆ.

ಇನ್ನು ಚಿನ್ನದ ಇಟಿಎಫ್‌ಗಳು ಷೇರು ಖರೀದಿಸಿದಂತೆ. ಮಾರುಕಟ್ಟೆ ಅವಧಿಯಲ್ಲಿ ಪ್ರತಿ ಕ್ಷಣ ಬೆಲೆ ಬದಲಾಗುತ್ತಿರುತ್ತದೆ. ಹೀಗಾಗಿ, ಇದು ಚಿನ್ನದ ಮ್ಯೂಚುವಲ್ ಫಂಡ್‌ಗಳಿಗೆ ಅನ್ವಯಿಸುವ ದಿನಕ್ಕೊಂದು ಬೆಲೆಯಂತೆ ಕಾರ್ಯ ನಿರ್ವಹಿಸುವುದಿಲ್ಲ. ಇದಕ್ಕೆ ಡಿಮ್ಯಾಟ್ ಖಾತೆ ಅಗತ್ಯ. ಚಿನ್ನದ ಮ್ಯೂಚುವಲ್ ಫಂಡ್ ಯಾವುದೇ ಫಂಡ್ ಹೌಸ್‌ಗಳಲ್ಲಿ ನಿಮ್ಮ ಕೆವೈಸಿ ಸ್ವತಃ ಆನ್‌ಲೈನ್ ಮೂಲಕ ದಾಖಲಿಸಿ ತೆರೆಯಬಹುದು. ಏಕ ಕಂತು ಅಥವಾ ಮಾಸಿಕ ಕಂತುಗಳಲ್ಲಿ ಪಾವತಿಗೆ ಇದು ಉತ್ತಮ ಅವಕಾಶ ನೀಡುತ್ತದೆ.

ನೀವು ಉಲ್ಲೇಖಿಸಿರುವ ಈ ಎಲ್ಲ ಉತ್ಪನ್ನಗಳೂ ಪ್ರತ್ಯೇಕ ರೀತಿಯಲ್ಲಿ ತೆರಿಗೆಗೊಳಪಡುತ್ತವೆ. ಇದು ಹೂಡಿಕೆಯ ಅವಧಿ ಹಾಗೂ ಅವುಗಳಿಗೆ ಅನ್ವಯಿಸುವ ತೆರಿಗೆ ದರವನ್ನು ಆಧರಿಸಿದೆ. ಹೀಗಾಗಿ, ಈ ಬಗ್ಗೆ ಪ್ರತ್ಯೇಕವಾದ ತೆರಿಗೆ ಸಲಹೆ ಪಡೆದುಕೊಳ್ಳಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ನಿಧನ

ಕೆ. ಗುಣರತ್ನ
W/o ಟಿ. ಮಾರ್ಕಾಂಡಾನಂದ
ಜನನ: 17.09.1950 – ನಿಧನ: 29.10.2024
ನಂ. 509, 7ನೇ ಕ್ರಾಸ್, 10ನೇ ಮೈನ್, HAL 3ನೇ ಹಂತ, ಇಂದಿರಾನಗರ, ಬೆಂಗಳೂರು.
ಇವರು ದಿನಾಂಕ: 29.10.2024 ದೈವಾದೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಇವರ ಅಂತ್ಯಕ್ರಿಯೆಯನ್ನು ದಿನಾಂಕ: 30.10.2024 ಬುಧವಾರ ಮಧ್ಯಾಹ್ನ 3.00 ಗಂಟೆಗೆ ಕಲ್ಲಪಲ್ಲಿ ಚಿತಾಗಾರದಲ್ಲಿ ನೇರವೇರಿಸಲಾಗುವುದು.
ಇಂತಿ ದುಃಖತಪ್ತರು
ಪತಿ, ಮಕ್ಕಳು & ಮೊಮ್ಮಕ್ಕಳು
9449404515, 9886270173

LOOKING TO BUILD, BUY OR SELL A PROPERTY
Please refer Classifieds on Sunday

॥ ಕುರುಗೋಡು ದೊಡ್ಡ ಬಸವೇಶ್ವರ ಪ್ರಸನ್ನ ॥
ಶ್ರದ್ಧಾಂಜಲಿ

ಎಸ್. ಶಿವಗಂಗಮ್ಮ
(ಲೇಟ್. ಶ್ರೀ. ಶಿವ ಶಾಂತಪ್ಪರವರ ಧರ್ಮಪತ್ನಿ)
ಜನನ: 22.10.1927 – ನಿಧನ: 27.10.2024
ಇವರು ದಿನಾಂಕ 27 ಅಕ್ಟೋಬರ್ 2024 ರಂದು ತಮ್ಮ ಅಗಾಧ ವಾತ್ಸಲ್ಯ ಮತ್ತು ಕ್ಷಮಾಗುಣದ ಪರಂಪರೆ ಹಾಗೂ ಸವಿ ನೆನಪುಗಳನ್ನು ನಮ್ಮೊಂದಿಗೆ ಬಿಟ್ಟು, ಇಹಲೋಕ ತ್ಯಜಿಸಿದರೆಂದು ಭಾರವಾದ ಹೃದಯದಿಂದ ತಿಳಿಸಬಯಸುತ್ತೇವೆ. ಇವರ ಆತ್ಮಕ್ಕೆ ಚಿರಶಾಂತಿ ಲಭಿಸಲೆಂದು ಪ್ರಾರ್ಥಿಸುತ್ತೇವೆ.
ಇಂತಿ ದುಃಖತಪ್ತರು:
ಎಸ್. ಬಸವರಾಜ್ ಮತ್ತು ಶೋಭಾ ಬಸವರಾಜ್,
ಗಿರಿಜಾ ಬಸವರಾಜ್ ಮತ್ತು ಒ.ವಿ. ಬಸವರಾಜ್,
ಉಮಾ ಕಾಯಿ ಮತ್ತು ಮಲ್ಲನಾಥ್ ಕಾಯಿ, ನಾಗಲಾಂಬಿಕೆ ಇಟ್ಟಿನ,
9 ಮೊಮ್ಮಕ್ಕಳು ಹಾಗೂ 8 ಮರಿ ಮೊಮ್ಮಕ್ಕಳು
ಶಾಂತಪ್ಪ ಅಂಡ್ ಕೋ. ಚಾರ್ಟರ್ಡ್ ಅಕೌಂಟಂಟ್ಸ್

8ನೇ ವರ್ಷದ ಪುಣ್ಯಸ್ಮರಣೆ

ಶ್ರೀ ನಂಜಪ್ಪರೆಡ್ಡಿ
ಮಾರತ್ತಹಳ್ಳಿ
ನೀವು ನಮ್ಮನ್ನಗಲಿ 8 ವರ್ಷ ಕಳೆದರೂ ನಿಮ್ಮ ಸವಿನೆನಪು ನಮ್ಮ ಹೃದಯಗಳಲ್ಲಿ ಹಚ್ಚ ಹಸಿರಾಗಿ ಉಳಿದಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿ ಕರುಣಿಸಲೆಂದು ಭಗವಂತನಲ್ಲಿ ಸದಾ ಪ್ರಾರ್ಥಿಸುವ
ಪತ್ನಿ ಪಾಪಮ್ಮ ಮತ್ತು ಮಕ್ಕಳು

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook

ಆನೇಕಲ್ ತಿಮ್ಮಯ್ಯ ಬಲಿಜ ಹಾಸ್ಟಲ್, ಚಾಮರಾಜಪೇಟೆ, ಬೆಂಗಳೂರು- 560018, ಅಡುಗೆಯವರು ಬೇಕಾಗಿದ್ದಾರೆ, ಸೂಕ್ತ ಸಂಬಳ ಮತ್ತು ಮನೆಯನ್ನು ಕೊಡಲಾಗುವುದು. ವಿವರಗಳಿಗಾಗಿ ಸಂಪರ್ಕಿಸಿ: 9060241370, 9448024699

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಭವಿಷ್ಯ

Astrology

ಕೆಲಸಆದ ನಂತರ ಕಾಣಿಕೆ ನೀವು ಇಷ್ಟಪಟ್ಟವರು ನಿಮ್ಮಂತಾಗಲು, ಧನವಶ, ಜನವಶ, ಭೂಮಿ ವಶ, ಶತ್ರುನಾಶ, ಇನ್ನೂ ನಿಮ್ಮ ಸಮಸ್ಯೆ ಏನೇಯಿದ್ದರೂ ಕಾಮಾಕ್ಯಕ್ಷೇತ್ರದ ಅಥರ್ವಣ ಆಳಂದಿಭೈರವಿ ತಾಂತ್ರಿಕವಿದ್ಯೆಯಿಂದ ಕೇವಲ 11ಗಂಟೆಯಲ್ಲಿ ಪೋನಿನ ಮೂಲಕ 100%ಶಾಶ್ವತ ಪರಿಹಾರ. ಕರೆಮಾಡಿ: 9686168466.

ಒಂದೇಗಂಟೆಯಲ್ಲಿ 100%ಗ್ಯಾರಂಟಿ ಶಾಶ್ವತಪರಿಹಾರ,ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್. ಪಂಡಿತ್. ಕೃಷ್ಣಪ್ರಸಾದ್. ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಪ್ರವಾಸ

Travel

18.11.2024 ರಿಂದ 7 ದಿನಗಳ ಉತ್ತರಭಾರತ ಪ್ರವಾಸ ಲಕ್ನೋ,ನೈಮಿಶಾರಣ್ಯ ಅಯೋಧ್ಯ,ಪ್ರಯಾಗ್‌ರಾಜ್ ಚಿತ್ರಕೂಟ ಕಾಶಿ. ವಿದೇಶ ಪ್ರವಾಸ ದುಬೈ ಶಾಪಿಂಗ್ ಫೆಸ್ಟಿವಲ್ 2025, 5 ರಾತ್ರಿ 6 ಹಗಲು 09.01.2025 15.01.2025 ಮತ್ತು 24.01.2025. ಸಂಪರ್ಕಿಸಿ: ಅನಿತಾ ಟ್ರಾವೆಲ್ಸ್ ಶೇಷಾದ್ರಿಪುರ ಬೆಂಗಳೂರು-20. 9448602641 7760884305.

ಶ್ರೀರಾಜರಾಜೇಶ್ವರಿ ಟೂರ್ಸ್ 8.11.2024, 5.12.24 3ದಿನ ಅಹೋಬಿಲಂ ನವನಾರಸಿಂಹ. 23.11.2024 5ದಿನ ಕಾಶಿ, ಅಯೋಧ್ಯ, ಪ್ರಯಾಗ್ ರಾಜ್. ಸಂಪರ್ಕಿಸಿ: 9739618243.

ಸುಸಜ್ಜಿತ ವ್ಯವಸ್ಥೆಗಳೊಂದಿಗೆ: 04.12.2024 13.12.2024 ರಿಂದ 8/11/17 ದಿನಗಳ ಗುಜರಾತ್ ರಾಜಸ್ಥಾನ್. 12.12.2024 28.02.2025 ರಿಂದ 8 ದಿನಗಳ ಕಾಶಿ,ಗಯಾ,ಅಯೋಧ್ಯಾ. 22.12.2024 ರಿಂದ 7 ದಿನಗಳ ತಮಿಳುನಾಡು ಕೇರಳ. 23.12.2024 ರಿಂದ 7 ದಿನಗಳ ಹೈದ್ರಾಬಾದ್ ಮಂತ್ರಾಲಯ ಶ್ರೀಶೈಲ. 12.12.2024 17.02.2025 ರಿಂದ 7/11 ದಿನಗಳ ಸಿಂಗಾಪುರ ಮಲೇಶಿಯಾ ಥೈಲ್ಯಾಂಡ್. 17.01.2025 25.01.2025 ರಿಂದ 6 ದಿನಗಳ ದುಬೈ,ಅಬುದಾಬಿ,ಶಾರ್ಜಾ. 17.01.2025 ರಿಂದ 10 ದಿನಗಳ ಕಾಂಬೋಡಿಯ, ವಿಯೆಟ್ನಂ ಪ್ರವಾಸಗಳು. ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

04.01.2025 12.03.2025 ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 13.01.2025 ದುಬೈ,ಅಬುದಾಬಿ 5 ದಿನಗಳು. 23.11.2024 ಭೂತಾನ್ 8 ದಿನಗಳು. 14.12.2024 11.01.2025 ಶ್ರೀಲಂಕಾ 6 ದಿನಗಳು. 30.11.2024 ಅಸ್ಸಾಂ,ಮೇಘಾಲಯ 9 ದಿನಗಳು. 26.11.2024 10.12.2024 ಗುಜರಾತ್/ ಉಜ್ಜಯಿನಿ 8/11 ದಿನಗಳು. 18.12.2024 ಕಾಶಿ,ಗಯಾ ಅಯೋಧ್ಯ 7 ದಿನಗಳು. ಸಂಪರ್ಕಿಸಿ. ಜೈನ್ ಟ್ರಾವೆಲ್ಸ್ ಬೆಂಗಳೂರು03. 9448402248 7022547922

ತತ್ವಮಸಿ ಟೂರ್ಸ್ ದೀಪಾವಳಿ ಪ್ರಯುಕ್ತ ವಿಶೇಷ ರಿಯಾಯಿತಿ ಪಡೆದುಕೊಳ್ಳಿ ಕೆಲವೇ ಸೀಟುಗಳು ಲಭ್ಯ 08.11.2024 ರಿಂದ 11 ದಿನಗಳ ಸಂಪೂರ್ಣ ಮಧ್ಯಪ್ರದೇಶ ಹಾಗು ಜ್ಯೋತಿರ್ಲಿಂಗದರ್ಶನ 09.11.2024 ರಿಂದ 6 ದಿನಗಳ ಅಯೋಧ್ಯ,ಕಾಶಿ ಪ್ರಯಾಗ್‌ರಾಜ್ ಗಯಾ. ಸಂಪರ್ಕಿಸಿ 7349228006 7795787484

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
@500/-* PER SQCM
www.dhclassifieds.com
BOOK NOW
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9731810277
+91 9901641752 | 9845114560
*Conditions apply

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ಅರಸೀಕೆರೆ ₹13500-14444
ತಿಪಟೂರು ₹13000-14000

ನವೋದ್ಯಮ: ಅನುದಾನಕ್ಕೆ ಅರ್ಜಿ ಸ್ವೀಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾವೀನ್ಯ, ಆವಿಷ್ಕಾರಗಳಿಗೆ ಉತ್ತೇಜನ ನೀಡಲು ನವೋದ್ಯಮಗಳಿಗೆ ಗರಿಷ್ಠ ₹50 ಲಕ್ಷದವರೆಗೆ ಅನುದಾನ ನೀಡುವ ‘ಎಲಿವೇಟ್-2024’ರ ಅಡಿ ಅರ್ಜಿ ಸ್ವೀಕಾರ ಆರಂಭವಾಗಿದೆ’ ಎಂದು ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ‘ನ. 29ರ ಸಂಜೆ 5ರವರೆಗೆ ಅರ್ಜಿ ಸಲ್ಲಿಸಬಹುದು’ ಎಂದರು.

‘2016ರಲ್ಲಿ ಆರಂಭಿಸಿದ ಎಲಿವೇಟ್ ಉತ್ತೇಜಕ ಕಾರ್ಯಕ್ರಮದಡಿ ಈವರೆಗೆ 983 ಸ್ಟಾರ್ಟ್‌ಅಪ್‌ಗಳಿಗೆ ₹224.06 ಕೋಟಿ ಅನುದಾನ ನೀಡಲಾಗಿದೆ. ಆ ಪೈಕಿ, ದ್ವಿತೀಯ ಮತ್ತು ತೃತೀಯ ಹಂತದ ನಗರಗಳ ನವೋದ್ಯಮಗಳ ಪಾಲು ಶೇ 32ರಷ್ಟಿದ್ದರೆ, ಮಹಿಳೆಯರೇ ನೇತೃತ್ವವಹಿಸಿರುವ ಇಲ್ಲವೇ ಪಾಲುದಾರಿಕೆಯ ನವೋದ್ಯಮಗಳ ಪ್ರಮಾಣ ಶೇ 28ರಷ್ಟಿದೆ’ ಎಂದರು.

ಸರಾಸರಿ ₹28 ಲಕ್ಷ ನೆರವು: ‘ಎ.ಐ, ರೋಬೋಟಿಕ್ಸ್, ಡೀಪ್ ಸ್ಪೇಸ್, ಬ್ಲಾಕ್ ಚೈನ್, ಸ್ಪೇಸ್ ಟೆಕ್ ಸೇರಿ ವಿವಿಧ ಕ್ಷೇತ್ರಗಳಲ್ಲಿ ಹೊಸ ಪ್ರಯೋಗ, ಪರಿಕಲ್ಪನೆಗೆ ಆರ್ಥಿಕ ಉತ್ತೇಜನ ನೀಡಲಾಗುತ್ತದೆ. ನೆರವು ಪಡೆಯಲಿಚ್ಛಿಸುವ ನವೋದ್ಯಮಗಳು ಕರ್ನಾಟಕದಲ್ಲಿ ನೋಂದಣಿ ಆಗಿರಬೇಕು’ ಎಂದರು.

ಕುಡಿಯುವ ನೀರು, ಘನ ತ್ಯಾಜ್ಯ ನಿರ್ವಹಣೆ, ಕೊಳಚೆ ನೀರು ಸಂಸ್ಕರಣೆಯಂತಹ ಸಮುದಾಯ ಅಭಿವೃದ್ಧಿಗೆ ಪೂರಕ ಚಿಂತನೆಯ ಪರಿಹಾರ, ಸುಧಾರಿತ ಸೇವೆ ಕೇಂದ್ರಿತ ನವೋದ್ಯಮಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುವುದು. ನವೋದ್ಯಮಗಳಿಗೆ ಸರಾಸರಿ ₹28 ಲಕ್ಷ ನೆರವು ಸಿಗಲಿದೆ ಎಂದರು.

ಬಿಟಿಎಸ್‌ಗೆ ಆ್ಯಪ್: ನ. 19ರಿಂದ 21ರ ವರೆಗೆ ನಡೆಯಲಿರುವ ‘ಬೆಂಗಳೂರು ಟೆಕ್ ಸಮ್ಮಿಟ್’ (ಬಿಟಿಎಸ್) ಕುರಿತಂತೆ ಸಮಗ್ರ ಮಾಹಿತಿಯ ಆ್ಯಪ್‌ಗೆ ಪ್ರಿಯಾಂಕ್ ಖರ್ಗೆ ಚಾಲನೆ ನೀಡಿದರು.

ಧನ್‌ತೇರಸ್: ₹10 ಸಾವಿರ ಕೋಟಿ ವಹಿವಾಟು ನಿರೀಕ್ಷೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ದೀಪಾವಳಿ ಹಬ್ಬಕ್ಕೂ ಮೊದಲೇ ಚಿನ್ನದ ಬೆಲೆ ಏರಿಕೆಯಾಗಿದೆ. ಹಾಗಾಗಿ, ಈ ಬಾರಿಯ ಧನ್‌ತೇರಸ್‌ನಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ರಾಜ್ಯದಲ್ಲಿ ಚಿನ್ನದ ವಹಿವಾಟಿನಲ್ಲಿ ಶೇ 5ರಷ್ಟು ಇಳಿಕೆಯಾಗಲಿದೆ ಎಂದು ಚಿನ್ನಾಭರಣ ವರ್ತಕರು ತಿಳಿಸಿದ್ದಾರೆ.

ಚಿನ್ನಾಭರಣಗಳ ಖರೀದಿಗೆ ಶುಭ ದಿನ ಎಂದು ಪರಿಗಣಿತವಾಗಿರುವ ಧನ್‌ತೇರಸ್ ಮಂಗಳವಾರ ಮಧ್ಯಾಹ್ನ 12ಕ್ಕೆ ಆರಂಭವಾಗಿದ್ದು, ಬುಧವಾರ ಮಧ್ಯಾಹ್ನ 12ಗಂಟೆವರೆಗೂ ಇರಲಿದೆ.

‘ರಾಜ್ಯದಲ್ಲಿ ಈ ಬಾರಿ 10 ರಿಂದ 12 ಟನ್ ಚಿನ್ನ ಮಾರಾಟ ಆಗಬಹುದು. ಒಟ್ಟಾರೆ ₹9 ಸಾವಿರ ಕೋಟಿಯಿಂದ ₹10 ಸಾವಿರ ಕೋಟಿ ವಹಿವಾಟು ನಡೆಯುವ ನಿರೀಕ್ಷೆಯಿದೆ’ ಎಂದು ಬೆಂಗಳೂರಿನ ಜ್ಯುವೆಲರ್ಸ್ ಅಸೋಸಿಯೇಷನ್ ಅಧ್ಯಕ್ಷ ಚೇತನ್ ಕುಮಾರ್ ಮೆಹ್ತಾ ‘ಪ್ರಜಾವಾಣಿ’ಗೆ ತಿಳಿಸಿದರು.

‘ದೇಶದಾದ್ಯಂತ ಚಿನ್ನದ ವಹಿವಾಟು ₹80 ಸಾವಿರ ಕೋಟಿ ದಾಟುವ ನಿರೀಕ್ಷೆಯಿದೆ ಎಂದರು.

ಚಿನ್ನ, ಬೆಳ್ಳಿ ದರ ಏರಿಕೆ

ನವದೆಹಲಿ (ಪಿಟಿಐ): ಧನ್‌ತೇರಸ್ ಅಂಗವಾಗಿ ಆಭರಣ ತಯಾರಕರು ಮತ್ತು ಗ್ರಾಹಕರಿಂದ ಹೆಚ್ಚಿದ ಬೇಡಿಕೆಯಿಂದಾಗಿ ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ಚಿನ್ನ ಮತ್ತು ಬೆಳ್ಳಿ ಧಾರಣೆಯಲ್ಲಿ ಏರಿಕೆಯಾಗಿದೆ.

ಚಿನ್ನದ ದರವು 10 ಗ್ರಾಂಗೆ ₹300 ಏರಿಕೆಯಾಗಿ, ₹81,400ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆಯು ಕೆ.ಜಿಗೆ ₹200 ಹೆಚ್ಚಳವಾಗಿ ₹99,700ಕ್ಕೆ ಮುಟ್ಟಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹಳತು	40000-49500
ಕಾರ್ಕಳ	
ಹೊಸತು	25000-33000
ಹಳತು	25000-49500
ಪುತ್ತೂರು	
ಹೊಸತು	28000-33000
ಹಳತು	34000-49500
ಸಾಗರ	
ಬಿಳಿಗೋಟು	19709-23829
ಚಾಲಿ	29509-31689
ಕೋಕ	14688-20699
ಕೆಂಪುಗೋಟು	30399-30399
ರಾಶಿ	34155-47529
ಸಿಪ್ಪೆಗೋಟು	14719-15432
ಶಿವಮೊಗ್ಗ	
ಬೆಟ್ಟೆ	40000-56349
ಗೊರಬಲು	18050-34669
ಹೊಸತು	30299-49579
ರಾಶಿ	33669-50579
ಸರಕು	51030-90640
ಸಿದ್ದಾಪುರ	
ಬಿಳಿಗೋಟು	23799-27199
ಚಾಲಿ	30009-34199
ಕೋಕ	20119-24699
ಕೆಂಪುಗೋಟು	18699-18699
ರಾಶಿ	40099-45199
ತಟ್ಟಿಬೆಟ್ಟೆ	26099-36289
ಶಿರಸಿ	
ಬೆಟ್ಟೆ	28599-39899
ಬಿಳಿಗೋಟು	21699-29218
ಚಾಲಿ	32266-35466
ರಾಶಿ	40698-44919
ಯಲ್ಲಾಪುರ	
ಅಪಿ	56179-58899
ಬಿಳಿಗೋಟು	14899-28369
ಚಾಲಿ	29131-35490
ಕೋಕ	4299-17109
ಕೆಂಪುಗೋಟು	16899-25099
ರಾಶಿ	38009-55099
ತಟ್ಟಿಬೆಟ್ಟೆ	26899-35895

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹18000
ಎಸಿ	₹11390
ಆರ್‌ಪಿ	₹19000
ಆರ್‌ಸಿ	₹10140

ಸಂಕ್ಷಿಪ್ತ ಸುದ್ದಿ

ಕೆನರಾ ಬ್ಯಾಂಕ್‌ಗೆ ₹4,015 ಕೋಟಿ ಲಾಭ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್ 2024–25ನೇ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹4,015 ಕೋಟಿ ನಿವ್ವಳ ಲಾಭ ಗಳಿಸಿದೆ.

2023–24ನೇ ಹಣಕಾಸು ವರ್ಷದ ಇದೇ ತ್ರೈಮಾಸಿಕದಲ್ಲಿ ₹3,606 ಕೋಟಿ ಲಾಭ ಗಳಿಸಿತ್ತು. ಈ ಲಾಭಕ್ಕೆ ಹೋಲಿಸಿದರೆ ಶೇ 11ರಷ್ಟು ಏರಿಕೆಯಾಗಿದೆ ಎಂದು ಬ್ಯಾಂಕ್ ಮಂಗಳವಾರ ಷೇರುಪೇಟೆಗೆ ತಿಳಿಸಿದೆ.

ಕಳೆದ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಒಟ್ಟು ₹31,472 ಕೋಟಿ ವರಮಾನ ಗಳಿಸಿತ್ತು. ಈ ಬಾರಿ ₹34,721 ಕೋಟಿ ಗಳಿಸಿದೆ. ಬಡ್ಡಿ ವರಮಾನವು ₹29,740 ಕೋಟಿ ಆಗಿದೆ.

ಸಕ್ಕರೆ ಮಾರಾಟ ದರ ಏರಿಕೆಗೆ ಒತ್ತಾಯ

ನವದೆಹಲಿ (ಪಿಟಿಐ): ಪ್ರಸ್ತುತ ಕೆ.ಜಿ ಸಕ್ಕರೆಗೆ ₹31 ಕನಿಷ್ಠ ಮಾರಾಟ ದರವಿದ್ದು, ಇದನ್ನು ₹39.14ಕ್ಕೆ ಹೆಚ್ಚಿಸಬೇಕಿದೆ ಎಂದು ಭಾರತೀಯ ಸಕ್ಕರೆ ಕಾರ್ಖಾನೆಗಳ ಸಂಘ (ಐಎಸ್‌ಎಂಎ) ಒತ್ತಾಯಿಸಿದೆ. 2019ರ ಫೆಬ್ರುವರಿಯಿಂದಲೂ ಮಾರಾಟ ದರವನ್ನು ಪರಿಷ್ಕರಿಸಿಲ್ಲ. ಉತ್ಪಾದನಾ ವೆಚ್ಚದ ಏರಿಕೆಯಿಂದಾಗಿ ಕಾರ್ಖಾನೆಗಳ ಮಾಲೀಕರು ನಷ್ಟ ಅನುಭವಿಸುತ್ತಿದ್ದಾರೆ. ಹಾಗಾಗಿ, ದರ ಏರಿಕೆ ಮಾಡಬೇಕು ಎಂದು ಕೇಂದ್ರ ಸರ್ಕಾರಕ್ಕೆ ಆಗ್ರಹಿಸಿದೆ.

‘ಕಚ್ಚಾ ತೈಲ ಅಭಾವ ಇಲ್ಲ’

ಚಂಡೀಗಢ (ಪಿಟಿಐ): ‘ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ನಡುವೆಯೂ ಜಾಗತಿಕ ಮಟ್ಟದಲ್ಲಿ ಕಚ್ಚಾ ತೈಲದ ಅಭಾವ ತಲೆದೋರಿಲ್ಲ. ದೇಶೀಯ ಬೇಡಿಕೆಗೆ ಅಗತ್ಯವಿರುವಷ್ಟು ತೈಲ ದಾಸ್ತಾನಿದೆ’ ಎಂದು ಕೇಂದ್ರ ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ತಿಳಿಸಿದ್ದಾರೆ.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರತಿದಿನ ಅಂತರರಾಷ್ಟ್ರೀಯ ಮಟ್ಟದಲ್ಲಿ 105 ದಶಲಕ್ಷ ಬ್ಯಾರೆಲ್‌ನಷ್ಟು ಕಚ್ಚಾ ತೈಲ ಉತ್ಪಾದನೆಯಾಗುತ್ತದೆ. ಪೆಟ್ರೋಲಿಯಂ ಉತ್ಪನ್ನಗಳನ್ನು ರಫ್ತು ಮಾಡುವ ದೇಶಗಳ ಸಂಘಟನೆಯು (ಒಪೆಕ್) 5 ದಶಲಕ್ಷ ಬ್ಯಾರೆಲ್‌ನಷ್ಟು (ದಿನವೊಂದಕ್ಕೆ) ಉತ್ಪಾದನೆಯನ್ನು ಕಡಿತಗೊಳಿಸಿದೆ ಎಂದು ವಿವರಿಸಿದರು.

ಐದು ಮಹಡಿ ಕಟ್ಟಡ ಧ್ವಂಸ: ಸಾವಿಗೀಡಾದವರಲ್ಲಿ ಮಹಿಳೆಯರು, ಮಕ್ಕಳೇ ಹೆಚ್ಚು

ಉತ್ತರ ಗಾಜಾ ಮೇಲೆ ದಾಳಿ: 93 ಸಾವು

ಪ್ಯಾಲೆಸ್ಟಿನ್‌ನ ಗಾಜಾ ಪಟ್ಟಿಯ ಉತ್ತರ ಭಾಗದಲ್ಲಿ ಮಂಗಳವಾರ ನಡೆಸಿದ ವಾಯುದಾಳಿ ಬಳಿಕ ವಸ್ತುಗಳನ್ನು ಹುಡುಕಾಡಿದ ಬಾಲಕಿ–ಎಎಫ್‌ಪಿ ಚಿತ್ರ

ಡೇರ್ ಅಲ್ ಬಾಲಾ, ಗಾಜಾ ಪಟ್ಟಿ, (ಎಪಿ): ಗಾಜಾ ಪಟ್ಟಿಯ ಉತ್ತರ ಭಾಗದಲ್ಲಿ ಪ್ಯಾಲೆಸ್ಟಿನ್‌ನ ನಿರಾಶ್ರಿತರು ನೆಲಸಿದ್ದ ಐದು ಮಹಡಿ ಕಟ್ಟಡದ ಮೇಲೆ ಇಸ್ರೇಲ್ ಸೇನೆಯು ಮಂಗಳವಾರ ವಾಯುದಾಳಿ ನಡೆಸಿದ್ದು, 93 ಮಂದಿ ಮೃತಪಟ್ಟಿದ್ದಾರೆ.

ಮೃತರಲ್ಲಿ ಮಹಿಳೆಯರು, ಮಕ್ಕಳೇ ಅರ್ಧಕ್ಕಿಂತಲೂ ಹೆಚ್ಚಿದ್ದಾರೆ ಎಂದು ಗಾಜಾದ ಆರೋಗ್ಯ ಇಲಾಖೆ ತಿಳಿಸಿದೆ.

ಕ್ಷಿಪಣಿ ಕೇಂದ್ರಗಳಿಗೆ ಹಾನಿ: ಇಸ್ರೇಲ್ ಇತ್ತೀಚಿಗೆ ಇರಾನ್ ಮೇಲೆ ನಡೆಸಿದ ವಾಯುದಾಳಿಯಲ್ಲಿ ಇರಾನ್‌ನ ಪ್ಯಾರಾಮಿಲಿಟರಿ ರೆವಲ್ಯೂಷನರಿ ಗಾರ್ಡ್‌ಗೆ ಸೇರಿದ ಖಂಡಾಂತರ ಕ್ಷಿಪಣಿ ಹಾಗೂ ಬಾಹ್ಯಾಕಾಶ ಯೋಜನೆಗಳಿಗೆ ಬಳಸಲು ಉದ್ದೇಶಿಸಿದ್ದ ರಾಕೆಟ್‌ಗಳಿಗೆ ತೀವ್ರ ಹಾನಿಯಾಗಿದೆ. ಸೆಮ್ನಾನ್ ಪ್ರಾಂತ್ಯದ ಶಹರುಡ್‌ನಲ್ಲಿದ್ದ ಬಾಹ್ಯಾಕಾಶ ಕೇಂದ್ರದ ಕಟ್ಟಡಗಳು ಸಂಪೂರ್ಣವಾಗಿ ಹಾನಿಯಾಗಿದೆ ಎಂದು ಸ್ಯಾಟಲೈಟ್ ಚಿತ್ರಗಳಿಂದ ಕಂಡುಬಂದಿದೆ.

ಹಮಾಸ್ ಬಂಡುಕೋರರ ವಿರುದ್ಧ ಇಸ್ರೇಲ್ ಯುದ್ಧ ಆರಂಭಿಸಿದ ದಿನದಿಂದ ನಡೆದ ಸೇನಾ ದಾಳಿಯಲ್ಲಿ 43 ಸಾವಿರ ಪ್ಯಾಲೆಸ್ಟೀನಿಯರು ಮೃತಪಟ್ಟಿದ್ದಾರೆ ಎಂದು ಸ್ಥಳೀಯ ಆರೋಗ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ. 23 ಲಕ್ಷ ಜನಸಂಖ್ಯೆಯ ಪೈಕಿ ಶೇ 90ರಷ್ಟು ಮಂದಿ ನಿರ್ವಸತಿಗರಾಗಿದ್ದಾರೆ ಎಂದು ತಿಳಿಸಿದೆ.

ನೆರವಿಗೆ ನಿರ್ಬಂಧ: 'ವಿಶ್ವಸಂಸ್ಥೆಯ ಪ್ಯಾಲೆಸ್ಟೀನ್ ನಿರಾಶ್ರಿತರಿಗಾಗಿ ನಿರ್ಮಾಣ ಹಾಗೂ ಪುನರ್‌ವಸತಿ ಸಂಸ್ಥೆ' (ಯುಎನ್‌ಆರ್‌ಡಬ್ಲ್ಯುಎ) ತನ್ನ ದೇಶದ ಒಳಗೆ ಕಾರ್ಯನಿರ್ವಹಿಸದಂತೆ ನಿರ್ಬಂಧಿಸಿ ಇಸ್ರೇಲ್ ಸರ್ಕಾರವು ಎರಡು ಕಾನೂನುಗಳನ್ನು ಅಂಗೀಕರಿಸಿದೆ.

ಗಾಜಾದ ನಿರಾಶ್ರಿತರಿಗೆ ನೆರವು ನೀಡುತ್ತಿರುವ ಅತ್ಯಂತ ಪ್ರಮುಖ ಸೇವಾ ಸಂಸ್ಥೆ ಇದಾಗಿದೆ. ಸ್ವಯಂಸೇವಾ ಸಂಸ್ಥೆಗಳ ಮೇಲೆ ಇಸ್ರೇಲ್ ಸರ್ಕಾರ ಕಠಿಣ ನಿರ್ಬಂಧ ವಿಧಿಸಿರುವುದಕ್ಕೆ ತೀವ್ರ ಖಂಡನೆ ವ್ಯಕ್ತವಾಗಿದೆ.

ಹೊಸ ಕಾನೂನಿನಿಂದ ಯುಎನ್‌ಆರ್‌ಡಬ್ಲ್ಯುಎ ಸಂಸ್ಥೆಯ ಜತೆಗೆ ಇಸ್ರೇಲ್ ಸರ್ಕಾರದ ಜತೆಗೆ ಎಲ್ಲ ಸಂಬಂಧಗಳನ್ನು ಕಡಿದುಕೊಳ್ಳಲಿದೆ. 2023ರ ಅ.7ರಂದು ಇಸ್ರೇಲ್ ಮೇಲೆ ನಡೆದ ದಾಳಿ ವೇಳೆ ಸಂಸ್ಥೆಯ ಕೆಲವು ಸಿಬ್ಬಂದಿ ಭಾಗಿಯಾಗಿದ್ದರು ಎಂದು ಇಸ್ರೇಲ್‌ನ ಅಧಿಕಾರಿಗಳು ತಿಳಿಸಿದ್ದಾರೆ.

ಸರ್ಕಾರದ ನಿರ್ಧಾರಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಫಿಲಿಪ್ಪೆ ಲಜ್ಜಾರಿನಿ, 'ಅನಿರೀಕ್ಷಿತ' ಎಂದು ತಿಳಿಸಿದ್ದಾರೆ.

'ಕಳೆದೊಂದು ವರ್ಷದಿಂದ ಪ್ಯಾಲೆಸ್ಟಿನ್‌ನಲ್ಲಿ ಪರಿತಪಿಸುತ್ತಿರುವ ನಿರಾಶ್ರಿತರು ಇನ್ನಷ್ಟು ಸಂಕಷ್ಟಕ್ಕೆ ಸಿಲುಕಿದ್ದಾರೆ' ಎಂದಿದ್ದಾರೆ.

ಖಾಸೀಂ ಹಿಜ್ಬುಲ್ಲಾದ ಹೊಸ ನಾಯಕ

ಶೇಕ್ ನಯೀಮ್ ಖಾಸೀಂ

ಲೆಬನಾನ್‌ನ ಹಿಜ್ಬುಲ್ಲಾ ಸಂಘಟನೆಯು ಶೇಕ್ ನಯೀಮ್ ಖಾಸೀಂ ಅವರನ್ನು ಹೊಸ ನಾಯಕನನ್ನಾಗಿ ಮಂಗಳವಾರ ಆಯ್ಕೆ ಮಾಡಲಾಗಿದೆ ಎಂದು ಘೋಷಿಸಿದೆ. ಕಳೆದ ತಿಂಗಳು ಇಸ್ರೇಲ್ ನಡೆಸಿದ ವಾಯುದಾಳಿಗೆ ಹಿಜ್ಬುಲ್ಲಾದ ನಾಯಕ ಹಸನ್ ನಸ್ರಲ್ಲಾ ಹತ್ಯೆಯಾಗಿದ್ದ.

ಮಂಗಳವಾರ ನಡೆದ 'ಶುರಾ ಕೌನ್ಸಿಲ್' ಸಭೆ ಬಳಿಕ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ತಿಳಿಸಿದೆ. ಕಳೆದ ಮೂರು ದಶಕದಿಂದ ಖಾಸೀಂ ಸಂಘಟನೆ ಯಲ್ಲಿ ಉಪನಾಯಕರಾಗಿ ಗುರುತಿಸಿಕೊಂಡಿದ್ದರು. ನಸ್ರಲ್ಲಾ ನೀತಿಯಂತೆ 'ಗೆಲುವು ಪಡೆಯುವ ತನಕ' ಹೋರಾಟ ಮುಂದುವರಿಯಲಿದೆ ಎಂದು ಖಾಸೀಂ ಘೋಷಿಸಿದ್ದಾರೆ.

71 ವರ್ಷದ ಖಾಸೀಂ ಹಿಜ್ಬುಲ್ಲಾ ಸಂಘಟನೆಯ ಸ್ಥಾಪಕ ಸದಸ್ಯರಲ್ಲಿಯೂ ಒಬ್ಬರಾಗಿದ್ದಾರೆ. ಇಸ್ರೇಲ್ ದಾಳಿಯಿಂದ ಹಿನ್ನಡೆ ಉಂಟಾಗಿದ್ದರೂ, ಹೋರಾಟ ಮುಂದುವರಿಸಲಾಗುವುದು ಎಂದು ಮಾಧ್ಯಮಗಳ ಮುಂದೆ ತಿಳಿಸಿದ್ದಾರೆ.

ಜಾಸ್ತಿ ದಿನ ಉಳಿಯಲ್ಲ: ಖಾಸೀಂ ನೇಮಕಾತಿಗೆ ಇಸ್ರೇಲ್ ಸೇನೆ ಕಟುವಾಗಿ ಪ್ರತಿಕ್ರಿಯಿಸಿದೆ. 'ಇದು ತಾತ್ಕಾಲಿಕ ನೇಮಕಾತಿ, ದೀರ್ಘ ಅವಧಿಗಲ್ಲ' ಎಂದು ಇಸ್ರೇಲ್‌ನ ರಕ್ಷಣಾ ಸಚಿವ ಯೊಯಾವ್ ಗಲಾಂಟ್ ಅವರು ಖಾಸೀಂ ಭಾವಚಿತ್ರವನ್ನು 'ಎಕ್ಸ್'ನಲ್ಲಿ ಹಾಕಿ ಸಂದೇಶ ಹಾಕಿದ್ದಾರೆ. ಆ ಮೂಲಕ ಖಾಸೀಂಗೂ ಎಚ್ಚರಿಕೆ ಸಂದೇಶ ರವಾನಿಸಿದ್ದಾರೆ.

ದರ್ಶನ್ ಜಾಮೀನು ಅರ್ಜಿ: ಇಂದು ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಎರಡನೇ ಆರೋಪಿ ನಟ ದರ್ಶನ್, 'ಬೆನ್ನುಹುರಿ ನೋವಿಗೆ ಪರಿಹಾರ ಪಡೆಯಲು ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಿದ್ದು ಅದಕ್ಕಾಗಿ ಅವಕಾಶ ಕಲ್ಪಿಸಿಕೊಡಬೇಕು' ಎಂದು ಕೋರಿ ವೈದ್ಯಕೀಯ ನೆರವಿನ ತಳಹದಿಯಲ್ಲಿ ಸಲ್ಲಿಸಿರುವ ಮಧ್ಯಂತರ ಜಾಮೀನು ಅರ್ಜಿಯ ಮೇಲಿನ ಆದೇಶವನ್ನು ಹೈಕೋರ್ಟ್ ಕಾಯ್ದಿರಿಸಿದ್ದು ನಾಳೆ (ಅ.30) ಪ್ರಕಟಿಸಲಿದೆ.

ಸದ್ಯ ಬಳ್ಳಾರಿ ಜೈಲಿನಲ್ಲಿ ನ್ಯಾಯಾಂಗ ಬಂಧನದಲ್ಲಿರುವ ದರ್ಶನ್ ಸಲ್ಲಿಸಿರುವ ಮಧ್ಯಂತರ ಜಾಮೀನು ಅರ್ಜಿಯನ್ನು ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ದರ್ಶನ್ ಪರ ಹಿರಿಯ ವಕೀಲ ಸಿ.ವಿ. ನಾಗೇಶ್, 'ದರ್ಶನ್‌ಗೆ ತುರ್ತಾಗಿ ಶಸ್ತ್ರಚಿಕಿತ್ಸೆ ನಡೆಸದೇ ಹೋದರೆ ಕಿಡ್ನಿ ತೊಂದರೆ ಅಥವಾ (ಲಕ್ವ) ತುತ್ತಾಗುವ ಅಪಾಯವಿರುತ್ತದೆ. ಹಾಗಾಗಿ, ಅವರು ಈ ಮೊದಲು ಚಿಕಿತ್ಸೆ ಪಡೆದಿದ್ದ ಮೈಸೂರಿನ ಅಪೊಲೊ ಆಸ್ಪತ್ರೆಯಲ್ಲೇ ಚಿಕಿತ್ಸೆ ಪಡೆಯಲು ಮಧ್ಯಂತರ ಜಾಮೀನು ಮಂಜೂರು ಮಾಡಬೇಕು. ನ್ಯಾಯಾಲಯ ಯಾವುದೇ ಷರತ್ತು ವಿಧಿಸಿದರೂ ಅರ್ಜಿದಾರರು ಅದಕ್ಕೆ ಬದ್ಧವಾಗಿರುತ್ತಾರೆ. ಮೂರು ತಿಂಗಳು ಮಧ್ಯಂತರ ಜಾಮೀನು ಮಂಜೂರು ಮಾಡಬೇಕು' ಎಂದು ಕೋರಿದರು.

'ಸರ್ಕಾರಿ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಪಡೆಯಲು ಆಗುವುದಿಲ್ಲ. ಏನಾದರೂ ಎಡವಟ್ಟು ಆದರೆ ಏನು ಮಾಡುವುದು, ಅವರ ಈ ಸಮಸ್ಯೆ 2022ರಿಂದಲೂ ಮುಂದುವರಿದಿದೆ. ಅವರು ದೈಹಿಕವಾಗಿ ಮತ್ತು ಮಾನಸಿಕವಾಗಿ ಗಟ್ಟಿಯಾಗಿದ್ದರೆ ಮಾತ್ರವೇ ಪ್ರಕರಣದ ವಿಚಾರಣೆಯನ್ನು ಸಮರ್ಪಕವಾಗಿ ಎದುರಿಸಲು ಸಾಧ್ಯ' ಎಂದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನಕುಮಾರ್, 'ನ್ಯಾಯಾಲಯವು ತಜ್ಞ ವೈದ್ಯರನ್ನು ಒಳಗೊಂಡ ವೈದ್ಯಕೀಯ ಮಂಡಳಿ ರಚಿಸಿ, ಅವರು ನೀಡುವ ವರದಿ ಆಧರಿಸಿ ವೈದ್ಯಕೀಯ ಜಾಮೀನು ಮಂಜೂರು ಮಾಡಬೇಕು' ಎಂದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ ಆದೇಶವನ್ನು ಬುಧವಾರ (ಅ.30) ಪ್ರಕಟಿಸಲಾಗುವುದು ಎಂದು ತಿಳಿಸಿತು.

ಮುಡಾ ಪ್ರಕರಣ: ಶಾಸಕ ಶ್ರೀವತ್ಸ ಆರೋಪ

'ಇ.ಡಿ ದಾಳಿಗೆ ಮುನ್ನವೇ ದಾಖಲೆ ಸ್ಥಳಾಂತರ'

ಪ್ರಜಾವಾಣಿ ವಾರ್ತೆ

ಮೈಸೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತ, ಕಾಂಗ್ರೆಸ್ ಮುಖಂಡ ರಾಕೇಶ್ ಪಾಪಣ್ಣ ಅವರ ಮನೆ ಮೇಲೆ ಸೋಮವಾರ ಇ.ಡಿ. ದಾಳಿ ನಡೆಸುವ ಮೂರು ದಿನ ಮುನ್ನವೇ, ಆ ಮನೆಯಲ್ಲಿದ್ದ ದಾಖಲೆಗಳನ್ನೆಲ್ಲ ಅದೇ ಊರಿನ ಇನ್ನೊಂದು ಮನೆಗೆ ಸಾಗಿಸಲಾಗಿದೆ. ಅವರ ಆಪ್ತರು, ಸ್ನೇಹಿತರ ಮನೆಗಳ ಮೇಲೆ ದಾಳಿ ನಡೆಸಿದರೆ ಎಲ್ಲವೂ ಸಿಗಲಿವೆ' ಎಂದು ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, 'ರಿಯಲ್ ಎಸ್ಟೇಟ್ ಉದ್ಯಮಿ ಮಂಜುನಾಥ್ ಸಮರ್ಪಕ ದಾಖಲೆ ನೀಡದೇ, ಜೆಪಿಎ ಹೆಸರಿನಲ್ಲಿ ಮುಡಾದಿಂದ ಒಂದೇ ದಿನ 25 ಬದಲಿ ನಿವೇಶನ ಪಡೆದಿದ್ದರು. ನಂತರ ಸೆಟ್ಲ್‌ಮೆಂಟ್ ಡೀಡ್ ಹೆಸರಿನಲ್ಲಿ ಅದನ್ನು ಬೇಕಾದವರಿಗೆ ಹಂಚಿದ್ದರು. ಬೆಂಗಳೂರಿನ ಅವರ ನಿವಾಸದ ಮೇಲೂ ಇ.ಡಿ. ಅಧಿಕಾರಿಗಳು ದಾಳಿ ನಡೆಸಿ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ. ಶೀಘ್ರದಲ್ಲೇ ಮುಡಾ ಪ್ರಕರಣ ತಾರ್ಕಿಕ ಅಂತ್ಯ ಕಾಣಲಿದೆ' ಎಂದರು.

ನ.7ರಂದು ಮುಡಾ ಸಾಮಾನ್ಯ ಸಭೆ

ಮೈಸೂರು: ನಿವೇಶನಗಳ ಅಕ್ರಮ ಹಂಚಿಕೆ ವಿವಾದದ ಬೆನ್ನಲ್ಲೇ, ಇಲ್ಲಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಾಮಾನ್ಯ ಸಭೆಯು ನವೆಂಬರ್ 7ರಂದು ನಡೆಯಲಿದೆ.

ಮುಡಾ ಅಧ್ಯಕ್ಷ ಕೆ. ಮರೀಗೌಡ ರಾಜೀನಾಮೆ ನೀಡಿದ್ದರಿಂದ, ಮೈಸೂರು ಜಿಲ್ಲಾಧಿಕಾರಿ ಕೆ. ಲಕ್ಷ್ಮೀಕಾಂತ ರೆಡ್ಡಿ ಪ್ರಭಾರ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದು, ಅವರ ಅಧ್ಯಕ್ಷತೆಯಲ್ಲೇ ಸಭೆ ನಡೆಯಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಮೈಸೂರು ಹಾಗೂ ಮಂಡ್ಯ ಜಿಲ್ಲೆಯ 13 ಶಾಸಕರು, ವಿಧಾನ ಪರಿಷತ್ ಸದಸ್ಯರ ಜೊತೆಗೆ ಮುಡಾ, ಮಹಾನಗರ ಪಾಲಿಕೆ ಆಯುಕ್ತರು ಸೇರಿದಂತೆ ಹಿರಿಯ ಅಧಿಕಾರಿಗಳನ್ನು ಸಭೆಗೆ ಆಹ್ವಾನಿಸಲಾಗಿದೆ.

ಸಿದ್ದರಾಮಯ್ಯ ಆಪ್ತಗೆ ಇ.ಡಿ ಈಟಿ

ಒಂದನೇ ಪುಟದಿಂದ...

'ಶೋಧ ಕಾರ್ಯದ ವೇಳೆ 50:50 ಅನುಪಾತದಲ್ಲಿ ಪರಿಹಾರ ನಿವೇಶನ ಹಂಚಿಕೆಯಾದವರ ಮಾಹಿತಿಗಳು ದೊರೆತಿವೆ' ಎಂದು ಮೂಲಗಳು ತಿಳಿಸಿವೆ.

ಮಂಡ್ಯದ ಪಾಂಡವಪುರದಲ್ಲಿನ ಹೇರೋಹಳ್ಳಿಯಲ್ಲಿ ಜಯರಾಮ್ ಸಂಬಂಧಿಕರು ಮತ್ತು ಆಪ್ತರಿಗೆ ಸೇರಿದ ಮೂರು ಮನೆಗಳಲ್ಲಿ ಇ.ಡಿ ಅಧಿಕಾರಿಗಳು ಪರಿಶೀಲನೆ ನಡೆಸಿ, ಹಲವು ದಾಖಲೆಗಳನ್ನು ವಶಕ್ಕೆ ಪಡೆದಿದ್ದಾರೆ. ಮೈಸೂರಿನಲ್ಲಿ ನಡೆಸಿದ ವಿಚಾರಣೆ ವೇಳೆ ಜಯರಾಮ್ ನೀಡಿದ ಮಾಹಿತಿ ಮೇರೆಗೆ ಮಂಡ್ಯದಲ್ಲಿ ಕಾರ್ಯಾಚರಣೆ ನಡೆಸಲಾಗಿದೆ ಎಂದು ಗೊತ್ತಾಗಿದೆ. ವಿಚಾರಣೆ ಮುಂದುವರಿದಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇ.ಡಿ ಅಧಿಕಾರಿಗಳು ಸೋಮವಾರ ಎಂಟು ಕಡೆ ಶೋಧಕಾರ್ಯ ನಡೆಸಿದ್ದರು. ಬೆಂಗಳೂರಿನಲ್ಲಿ ರಿಯಲ್ ಎಸ್ಟೇಟ್ ಉದ್ಯಮಿ ಎನ್.ಮಂಜುನಾಥ್, ಮೈಸೂರಿನಲ್ಲಿ ಮುಡಾದ ಕೆಲ ನಿವೃತ್ತ ಅಧಿಕಾರಿಗಳ ಮನೆ ಮತ್ತು ಕಚೇರಿಗಳಲ್ಲಿ ಶೋಧ ನಡೆದಿತ್ತು.

ಅಮೆರಿಕ ಅಧ್ಯಕ್ಷೀಯ ಚುನಾವಣೆ: ವಾಕ್ಸಮರ

ಅಟ್ಲಾಂಟಾ (ಪಿಟಿಐ): ಅಮೆರಿಕ ಅಧ್ಯಕ್ಷೀಯ ಚುನಾವಣೆಯು ಕೊನೇ ಹಂತಕ್ಕೆ ತಲುಪಿದ್ದು, ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿ ಕಮಲಾ ಹ್ಯಾರಿಸ್ ಹಾಗೂ ರಿಪಬ್ಲಿಕ್ ಪಕ್ಷದ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ನಡುವಿನ ವಾಕ್ಸಮರ ಬಿರುಸು ಪಡೆದುಕೊಂಡಿದೆ.

ಇಬ್ಬರ ನಡುವೆ ತೀವ್ರ ಜಿದ್ದಾಜಿದ್ದಿನ ಸ್ಪರ್ಧೆ ಏರ್ಪಟ್ಟಿದೆ. ಮತದಾರರನ್ನು ಸೆಳೆಯುವ ಕೊನೇ ಪ್ರಯತ್ನವನ್ನು ಇಬ್ಬರೂ ನಡೆಸುತ್ತಿದ್ದಾರೆ.

ತಮ್ಮ ತಮ್ಮ ಪ್ರಚಾರ ಸಭೆಗಳಲ್ಲಿ ಪರಸ್ಪರರ ಮೇಲೆ ಆರೋಪ, ಪ್ರತ್ಯಾರೋಪದಲ್ಲಿ ತೊಡಗಿದ್ದಾರೆ.

ಟ್ರಂಪ್ ಅವರನ್ನು ಇತ್ತೀಚೆಗೆ ಡೆಮಾಕ್ರಟಿಕ್ ಪಕ್ಷವು ನಾಜಿಗಳಿಗೆ ಹೋಲಿಸಿತ್ತು. ಜಾರ್ಜಿಯಾದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಟ್ರಂಪ್ ಅವರು ಈ ಆರೋಪಕ್ಕೆ ಪ್ರಕ್ರಿಯೆ ನೀಡಿದ್ದಾರೆ. ಜಿದ್ದಾಜಿದ್ದಿನ ಕ್ಷೇತ್ರಗಳಲ್ಲಿ ಜಾರ್ಜಿಯಾ ಕೂಡ ಒಂದಾಗಿದೆ.

'ಕಮಲಾ ಅವರು ನನ್ನ ಮೇಲೆ ಹೊಸದೊಂದು ಆರೋಪ ಮಾಡಿದ್ದಾರೆ. ಅವರ ಪ್ರಕಾರ, ಯಾರೆಲ್ಲಾ ಅವರಿಗೆ (ಕಮಲಾ) ಮತ ನೀಡುವುದಿಲ್ಲವೊ ಅವರೆಲ್ಲೂ ನಾಜಿಗಳಂತೆ. ನಾನು ನಾಜಿ ಅಲ್ಲ. ನಾನು ನಾಜಿಗಳನ್ನು ವಿರೋಧಿಸುವವನು' ಎಂದಿದ್ದಾರೆ.

ತಮ್ಮನ್ನು ಫ್ಯಾಸಿಸ್ಟ್ ಎಂದು ಕರೆದ ಬಗ್ಗೆಯೂ ಡೊನಾಲ್ಡ್ ಟ್ರಂಪ್ ವಿರೋಧ ವ್ಯಕ್ತಪಡಿಸಿದ್ದಾರೆ.

ನ್ಯೂಯಾರ್ಕ್‌ನ ಮ್ಯಾಡಿಸನ್ ನಗರದಲ್ಲಿ ನಡೆದ ಟ್ರಂಪ್ ಅವರ ಪ್ರಚಾರ ಸಭೆಯನ್ನು ಕಮಲಾ ಹ್ಯಾರಿಸ್ ಅವರು 1939ರ ನಾಜಿಗಳ ಸಭೆಗೆ ಹೋಲಿಸಿದ್ದಾರೆ.

ತೀವ್ರ ಹಣಾಹಣಿ: ಸಮೀಕ್ಷೆಗಳ ಅಂದಾಜು

ಕಮಲಾ ಹ್ಯಾರಿಸ್ ಹಾಗೂ ಡೊನಾಲ್ಡ್ ಟ್ರಂಪ್ ಅವರಿಗೆ ದೇಶದಾದ್ಯಂತ ಎಷ್ಟು ಶೇಕಡಾವಾರು ಮತಗಳು ಲಭಿಸಲಿವೆ ಎನ್ನುವ ಕುರಿತು ವಿವಿಧ ಮಾಧ್ಯಮಗಳು ಸಮೀಕ್ಷೆ ನಡೆಸಿವೆ. 'ಫೈವ್‌ಥರ್ಟಿಏಟ್' ಸಂಸ್ಥೆಯೊಂದು ನಡೆಸಿದ ಸಮೀಕ್ಷೆಯ ಪ್ರಕಾರ, ಕಮಲಾ ಅವರು ಟ್ರಂಪ್ ಅವರಿಗಿಂತ ಶೇ 1.7ರಷ್ಟು ಮುನ್ನಡೆ ಪಡೆದುಕೊಂಡಿದ್ದಾರೆ.





ಟ್ರಂಪ್ ಪರ ಇರುವ ಮತಗಳ ಪ್ರಮಾಣ	ಸಮೀಕ್ಷೆ	ಕಮಲಾ ಪರ ಇರುವ ಮತಗಳ ಪ್ರಮಾಣ
47%	ಸಿಎನ್‌ಎನ್	47%
48%	ನ್ಯೂಯಾರ್ಕ್ ಟೈಮ್ಸ್/ಸಿಯಾನ ಕಾಲೇಜು	48%
44%	ಫೈನಾನ್‌ಷಿಯಲ್ ಟೈಮ್ಸ್/ಮೆಶಿಗನ್ ರಾಸ್ ಸ್ಕೂಲ್ ಆಫ್ ಬ್ಯುಸಿನೆಸ್ (ಆರ್ಥಿಕ ವಿಷಯಗಳ ನಿರ್ವಹಣೆ ಕುರಿತ ಸಮೀಕ್ಷೆ)	43%

4% ಯಾರಿಗೆ ಮತ ನೀಡಬೇಕು ಎಂದು ನಿರ್ಧರಿಸದ ಜನರ ಪ್ರಮಾಣ (ನ್ಯೂಯಾರ್ಕ್ ಟೈಮ್ಸ್/ಸಿಯಾನ ಕಾಲೇಜು)

ವಾಷಿಂಗ್ಟನ್ ಪೋಸ್ಟ್ ಚಂದಾದಾರಿಕೆ ಕೈಬಿಟ್ಟ 2 ಲಕ್ಷ ಮಂದಿ

ನ್ಯೂಯಾರ್ಕ್ (ಎಪಿ): ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಯಾವುದೇ ಅಭ್ಯರ್ಥಿಯನ್ನು ಬೆಂಬಲಿಸದ ಕುರಿತು ಪತ್ರಿಕೆಯು ಕಳೆದ ವಾರ ನಿರ್ಧಾರ ತೆಗೆದುಕೊಂಡ ಬೆನ್ನಲ್ಲೇ, ಸುಮಾರು 2 ಲಕ್ಷ ಮಂದಿ 'ವಾಷಿಂಗ್ಟನ್ ಪೋಸ್ಟ್' ಪತ್ರಿಕೆಯ ಚಂದಾದಾರಿಕೆಯನ್ನು ರದ್ದುಗೊಳಿಸಿದ್ದಾರೆ.

ಪತ್ರಿಕೆಯು ಈಗಾಗಲೇ ಆರ್ಥಿಕ ಹೊಡೆತಕ್ಕೆ ಸಿಲುಕಿದ್ದು, ಇದರ ಮಧ್ಯದಲ್ಲೇ ದೊಡ್ಡ ಸಂಖ್ಯೆಯಲ್ಲಿ ಚಂದಾದಾರಿಕೆ ಹಿಂದೆ ಸರಿದಿರುವುದು ಮತ್ತಷ್ಟು ಸಂಕಷ್ಟಕ್ಕೆ ಸಿಲುಕಿಸಿದೆ.

ಕಳೆದ ವರ್ಷದ ಅಂಕಿಅಂಶದ ಪ್ರಕಾರ, ವಾಷಿಂಗ್ಟನ್ ಪೋಸ್ಟ್ ಪತ್ರಿಕೆಯು 25 ಲಕ್ಷ ಚಂದಾದಾರಿಕೆ ಹೊಂದಿದ್ದು, ಇದರಲ್ಲಿ ದೊಡ್ಡ ಸಂಖ್ಯೆಯಲ್ಲಿ ಡಿಜಿಟಲ್ ಆವೃತ್ತಿಯ ಚಂದಾದಾರಾಗಿದ್ದರು. ಪ್ರಸರಣ ಸಂಖ್ಯೆಯಲ್ಲಿ 'ನ್ಯೂಯಾರ್ಕ್ ಟೈಮ್ಸ್', 'ವಾಲ್ ಸ್ಟ್ರೀಟ್ ಜರ್ನಲ್', ಪತ್ರಿಕೆಯು ಮೊದಲ ಎರಡು ಸ್ಥಾನಗಳಲ್ಲಿದೆ. ಈ ಕುರಿತು ಯಾವುದೇ ಪ್ರತಿಕ್ರಿಯೆ ನೀಡಲು ಪತ್ರಿಕೆಯ ವಕ್ತಾರೆ ಒಲಿವಿಯಾ ಪೀಟರ್‌ಸನ್ ನಿರಾಕರಿಸಿದರು.

ಶ್ವೇತಭವನದಲ್ಲಿ ದೀಪಾವಳಿ: ಬೈಡನ್‌ಗೆ ಸುನಿತಾ ಧನ್ಯವಾದ

ವಾಷಿಂಗ್ಟನ್ (ಪಿಟಿಐ): ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಶ್ವೇತಭವನದಲ್ಲಿ ದೀಪಾವಳಿ ಕಾರ್ಯಕ್ರಮ ಆಯೋಜಿಸಿದ್ದರು. ಈ ವೇಳೆ, ಭಾರತ ಮೂಲದ ಅಮೆರಿಕನ್ ಗಗನಯಾತ್ರಿ ಸುನಿತಾ ವಿಲಿಯಮ್ಸ್ ಅವರು ಅಂತರ ರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಿಂದ(ಐಎಸ್‌ಎಸ್) ಕಳುಹಿಸಿದ್ದ ವಿಡಿಯೊ ಸಂದೇಶವನ್ನು ಪ್ರಸಾರ ಮಾಡಲಾಗಿದೆ. ವಿಡಿಯೊದಲ್ಲಿ ಬೈಡನ್ ಅವರಿಗೆ ಸುನಿತಾ ಅವರು ಧನ್ಯವಾದ ಅರ್ಪಿಸಿದ್ದು, ದೀಪಾವಳಿ ಹಬ್ಬದ ಶುಭಾಶಯವನ್ನೂ ಕೋರಿದ್ದಾರೆ.

'ಬೈಡನ್ ಅವರು ಭಾರತೀಯರೊಂದಿಗೆ ದೀಪಾವಳಿ ಆಚರಿಸಿದ್ದಾರೆ. ಈ ಮೂಲಕ, ಭಾರತೀಯರ ಕೊಡುಗೆಗಳನ್ನು ಗುರುತಿಸಿ, ಗೌರವಿಸುವ ಕೆಲಸ ಮಾಡಿದ್ದಾರೆ. ಅವರಿಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ' ಎಂದು ಸುನಿತಾ ವಿಡಿಯೊದಲ್ಲಿ ಹೇಳಿದ್ದಾರೆ.

'ಭೂಮಿಯಿಂದ 260 ಮೈಲುಗಳಷ್ಟು ದೂರದಲ್ಲಿ ಬಾಹ್ಯಾಕಾಶದಲ್ಲೇ ದೀಪಾವಳಿ ಆಚರಿಸುವ ಸುವರ್ಣಾವಕಾಶ ನನಗೆ ಈ ಬಾರಿ ಸಿಕ್ಕಿದೆ. ಭಾರತದಿಂದ ಅಮೆರಿಕಕ್ಕೆ ವಲಸೆ ಬಂದಿದ್ದ ನನ್ನ ತಂದೆಯವರನ್ನು ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ. ಅವರು ದೀಪಾವಳಿ ಸೇರಿ ಹಿಂದೂಗಳ ಹಬ್ಬದ ಬಗ್ಗೆ ತಿಳಿ ಹೇಳುವ ಮೂಲಕ, ನಮ್ಮಲ್ಲಿ ಭಾರತೀಯ ಸಂಸ್ಕೃತಿ ಬೇರೂರುವಂತೆ ಮಾಡಿದ್ದಾರೆ' ಎಂದು ಹೇಳಿದ್ದಾರೆ.

ಹೆಚ್ಚಿನ ಮಕ್ಕಳನ್ನು ಹೆರಲು ಚೀನಾ ಪ್ರೋತ್ಸಾಹ

ಬೀಜಿಂಗ್ (ಪಿಟಿಐ): ಚೀನಾದಲ್ಲಿ ಕುಸಿಯುತ್ತಿರುವ ಜನನ ಪ್ರಮಾಣ ದರ ತಡೆಗಟ್ಟಲು ದಂಪತಿಗಳಿಗೆ ಹೆಚ್ಚಿನ ಮಕ್ಕಳನ್ನು ಹೆರುವಂತೆ ಪ್ರೇರೇಪಿಸಲು 'ಹೆರಿಗೆ ಸಹಾಯಧನ' ಮತ್ತು ಪೋಷಕರಿಗೆ ತೆರಿಗೆ ಕಡಿತ ಸೇರಿ ಹಲವು ಉತ್ತೇಜನಾಕಾರಿ ನೀತಿಗಳನ್ನು ಸರ್ಕಾರ ಘೋಷಿಸಿದೆ.

ದೇಶದಲ್ಲಿ ಉದ್ಭವಿಸಿರುವ ಜನಸಂಖ್ಯಾ ಬಿಕ್ಕಟ್ಟು ಪರಿಹರಿಸುವ ಸಲುವಾಗಿ, ಕಮ್ಯುನಿಸ್ಟ್ ದೇಶದ ಕೇಂದ್ರ ಸಂಪುಟವು ಮಕ್ಕಳ ಜನನ ಉತ್ತೇಜಿಸುವ ಸೇವೆಗಳನ್ನು ವಿಸ್ತರಿಸಲು ರೂಪಿಸಲಾದ 13 ಉದ್ದೇಶಿತ ಕ್ರಮಗಳ ಕುರಿತು ಸೋಮವಾರ ನಿರ್ದೇಶನ ಹೊರಡಿಸಿದೆ.

ಈ ಉದ್ದೇಶಿತ ಕ್ರಮಗಳಲ್ಲಿ ಶಿಶು ಪಾಲನಾ ವ್ಯವಸ್ಥೆಗಳ ವಿಸ್ತರಣೆ; ಶಿಕ್ಷಣ, ವಸತಿ ಮತ್ತು ಉದ್ಯೋಗದಲ್ಲಿ ಬೆಂಬಲ ಹೆಚ್ಚಿಸುವುದು, ಹೆರಿಗೆಗೆ ಪೂರಕವಾದ ವಾತಾವರಣ ನಿರ್ಮಿಸುವುದು ಸೇರಿವೆ. ಈ ಉತ್ತೇಜನಕಾರಿ ಕ್ರಮಗಳು, ಹೆರಿಗೆ ಸಹಾಯಧನ ಮತ್ತು ಹೆರಿಗೆಗೆ ಸಂಬಂಧಿಸಿದ ಆದಾಯ ತೆರಿಗೆ ವಿನಾಯಿತಿ ಸುಧಾರಣೆಗಳನ್ನು ಒಳಗೊಂಡಿವೆ ಎಂದು ಅಧಿಕೃತ ಮಾಧ್ಯಮ ವರದಿ ಮಾಡಿದೆ.

ನೌಕರರು ಮತ್ತು ಗ್ರಾಮೀಣ ವಲಸೆ ಕಾರ್ಮಿಕರಿಗೂ ಹೆಚ್ಚು ಮಕ್ಕಳನ್ನು ಹೆರುವಂತೆ ಉತ್ತೇಜನಕಾರಿ ಸವಲತ್ತುಗಳನ್ನು ಸರ್ಕಾರ ಘೋಷಿಸಿದೆ. ಮಾತೃತ್ವ, ಪಿತೃತ್ವ ಮತ್ತು ಶಿಶುಪಾಲನಾ ರಜೆಗೆ ಸಂಬಂಧಿಸಿದ ನೀತಿಗಳನ್ನು ಜಾರಿಗೊಳಿಸುವಂತೆ ಅಧಿಕಾರಿಗಳಿಗೂ ಸೂಚಿಸಲಾಗಿದೆ.

ಹೊಸ ಪೋಷಕರು, ಮಕ್ಕಳನ್ನು ಹೆರಲು, ಲಾಲನೆ–ಪಾಲನೆಗೆ ಉದ್ಯೋಗದ ವೇಳೆ ರಜೆ ತೆಗೆದುಕೊಳ್ಳುವುದು ಸುರಕ್ಷಿತವೆಂದು ಖಾತ್ರಿಪಡಿಸುವ ಗುರಿಯನ್ನು ಈ ಹೊಸ ಕ್ರಮಗಳು ಹೊಂದಿವೆ ಎಂದು ಅಧಿಕೃತ ಸರ್ಕಾರಿ ಮಾಧ್ಯಮ 'ಸಿಜಿಟಿಎನ್' ವರದಿ ಮಾಡಿದೆ.

ಚೀನಾದ ಗಂಭೀರ ಜನಸಂಖ್ಯಾ ಬಿಕ್ಕಟ್ಟಿಗೆ ಆಡಳಿತಾರೂಢ ಕಮ್ಯುನಿಸ್ಟ್ ಪಕ್ಷವು ಅನುಸರಿಸುತ್ತಿರುವ ದಶಕಗಳಷ್ಟು ಹಳೆಯದಾದ 'ಒಂದು ಮಗು' ನೀತಿಯೇ ಕಾರಣವೆಂದು ದೂಷಿಸಲಾಗಿದೆ.

2021ರಲ್ಲಿ ಜನಸಂಖ್ಯಾ ನೀತಿ ಪರಿಷ್ಕರಿಸಿರುವ ಚೀನಾ ದಂಪತಿಗೆ ಮೂರು ಮಕ್ಕಳನ್ನು ಹೊಂದಲು ಅವಕಾಶ ನೀಡಿದೆ.

ಯಾಕಾಗಿ ಈ ಹೆಜ್ಜೆ

- ಕುಸಿದ ಜನನ ದರದಿಂದಾಗಿ ಚೀನಾವು ವಿಶ್ವದ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ರಾಷ್ಟ್ರ ಎನ್ನುವ ಹಣೆಪಟ್ಟಿಯನ್ನು ಕಳೆದ ವರ್ಷ ಕಳೆದುಕೊಂಡಿದ್ದು, ಈಗ ಅದು ಭಾರತದ ಪಾಲಾಗಿದೆ
- ಚೀನಾದ 140 ಕೋಟಿ ಜನರಲ್ಲಿ ವಯಸ್ಸಾದವರ ಸಂಖ್ಯೆ ಏರಿಕೆಯಾಗುತ್ತಿದೆ. 65 ವರ್ಷಕ್ಕಿಂತ ಮೇಲ್ಪಟ್ಟವರ ಸಂಖ್ಯೆ ಶೇ 14ಕ್ಕಿಂತಲೂ ಹೆಚ್ಚಿದೆ
- ಚೀನಾದಲ್ಲಿ 60 ವರ್ಷ ಮೇಲ್ಪಟ್ಟವರ ಸಂಖ್ಯೆ 2035ರ ವೇಳೆಗೆ 40 ಕೋಟಿಗೆ, 2050ರ ವೇಳೆಗೆ 50 ಕೋಟಿಗೆ ತಲುಪುವ ಅಂದಾಜಿದೆ
- ಇತ್ತೀಚಿನ ವರದಿಗಳ ಪ್ರಕಾರ, ಮಕ್ಕಳ ಸಂಖ್ಯೆ ಶೀಘ್ರಗತಿಯಲ್ಲಿ ಕ್ಷೀಣಿಸುತ್ತಿರುವುದರಿಂದ ಚೀನಾದಾದ್ಯಂತ ಸಾವಿರಾರು ಶಿಶುವಿಹಾರ, ಶಾಲೆ ಮುಚ್ಚಲಾಗಿದೆ
- ಶಾಲೆಗಳನ್ನು ಈಗ ಚೀನಾದಲ್ಲಿ ವೃದ್ಧಾಶ್ರಮಗಳನ್ನಾಗಿ ಪರಿವರ್ತಿಸುತ್ತಿರುವುದು ಸಾಮಾನ್ಯವಾಗುತ್ತಿದೆ

'ಪಂಚ ಪರಿವರ್ತನೆ: ರಾಜಕೀಯ ಕಾರ್ಯಕ್ರಮವಲ್ಲ'

ನವದೆಹಲಿ (ಪಿಟಿಐ): ಸಮಾಜ ಪರಿವರ್ತನೆಗೆ ಆರ್‌ಎಸ್‌ಎಸ್ ಪ್ರಸ್ತಾಪಿಸಿರುವ 'ಪಂಚ ಪರಿವರ್ತನೆ' ಕಾರ್ಯಕ್ರಮ ರಾಜಕೀಯ ಕಾರ್ಯಕ್ರಮವಲ್ಲ. ದೇಶವನ್ನು ಪ್ರಗತಿ ಪಥದಲ್ಲಿ ಮುನ್ನಡೆಸುವ ಗುರಿ ಹೊಂದಿದೆ' ಎಂದು ಆರ್‌ಎಸ್‌ಎಸ್ ಮುಖಂಡ ಸುನಿಲ್ ಅಂಬೇಕರ್ ಮಂಗಳವಾರ ತಿಳಿಸಿದ್ದಾರೆ.

ಪಂಚ ಪರಿವರ್ತನೆ ಪಕ್ಷದ ಅತ್ಯುನ್ನತ ಅಜೆಂಡಾ. ಇದನ್ನು ಕಾರ್ಯಕರ್ತರೇ ಸಮಾಜದಲ್ಲಿ ದೊಡ್ಡ ಪ್ರಮಾಣದಲ್ಲಿ ಅಭಿಯಾನ ನಡೆಸುವ ಮೂಲಕ ಮುನ್ನಡೆಸುವರು ಎಂದು ತಿಳಿಸಿದ್ದಾರೆ.

ಪ್ರಜಾ ಮತ

ಸಂಸದ ಬಸವರಾಜ ಬೊಮ್ಮಾಯಿ ಶಿಗ್ಗಾವಿ ತಾಲ್ಲೂಕಿನ ಹೋತನಹಳ್ಳಿಯಲ್ಲಿ ಪ್ರಚಾರ ನಡೆಸಿದರು (ಎಡಚಿತ್ರ) ಸಚಿವ ಸತೀಶ ಜಾರಕಿಹೊಳಿ, ಶಾಸಕ ರುದ್ರಪ್ಪ ಲಮಾಣಿ ಅವರು ಕಾಂಗ್ರೆಸ್ ಅಭ್ಯರ್ಥಿ ಯಾಸೀರ ಅಹ್ಮದ್ ಖಾನ್ ಅವರ ಪರ ಮಂಗಳವಾರ ಪ್ರಚಾರ ನಡೆಸಿದರು

ಶಿಗ್ಗಾವಿ: ಬಿರುಸು ಪಡೆದ ಪ್ರಚಾರ

ಯಾಸೀರ್ ಪರ ಸಚಿವರು, ಶಾಸಕರು • ಭರತ್ ಪರ ಪೋಷಕರಿಂದ ಪ್ರಚಾರ

• ಸಂತೋಷ ಜಿಗಳಿಕೊಪ್ಪ

ಹಾವೇರಿ: ಶಿಗ್ಗಾವಿ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಕಾವು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಕಾಂಗ್ರೆಸ್ ಅಭ್ಯರ್ಥಿ ಯಾಸೀರ್ ಅಹ್ಮದ್ ಖಾನ್ ಪಠಾಣ ಪರ ಸಚಿವರು, ಶಾಸಕರು ಸೇರಿ ಇಡೀ ಸರ್ಕಾರವೇ ಪ್ರಚಾರದ ಕಣಕ್ಕೆ ಇಳಿದಿದೆ. ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ ಪರ ತಂದೆ, ಸಂಸದ ಬಸವರಾಜ ಬೊಮ್ಮಾಯಿ ಮತ್ತು ತಾಯಿ ಚನ್ನಮ್ಮ ಮಾತ್ರ ಪ್ರಚಾರ ನಡೆಸಿದ್ದಾರೆ.

ಸಚಿವರಾದ ಸತೀಶ ಜಾರಕಿಹೊಳಿ, ಶಿವಾನಂದ ಪಾಟೀಲ ಅವರು ಕ್ಷೇತ್ರದಲ್ಲೇ ಮೊಕ್ಕಾಂ ಹೂಡಿದ್ದಾರೆ. ಹಾವೇರಿ ಜಿಲ್ಲೆಯಲ್ಲಿ ಶಿಗ್ಗಾವಿ ವಿಧಾನಸಭಾ ಕ್ಷೇತ್ರ ಹೊರತುಪಡಿಸಿ ಉಳಿದೆಲ್ಲ ಕ್ಷೇತ್ರದಲ್ಲಿ ಕಾಂಗ್ರೆಸ್ ಶಾಸಕರಿದ್ದಾರೆ. ಅವರೆಲ್ಲರೂ ಶಿಗ್ಗಾವಿ ಕ್ಷೇತ್ರದಲ್ಲಿ ಸುತ್ತಾಡುತ್ತಿದ್ದಾರೆ.

ಸಚಿವರಾದ ಎಚ್.ಕೆ. ಪಾಟೀಲ, ಜಮೀರ್ ಅಹ್ಮದ್ ಖಾನ್, ಆರ್.ಬಿ. ತಿಮ್ಮಾಪುರ, ಎಸ್.ಎಸ್. ಮಲ್ಲಿಕಾರ್ಜುನ, ಲಕ್ಷ್ಮಿ ಹೆಬ್ಬಾಳ್ಕರ್, ಮಧು ಬಂಗಾರಪ್ಪ, ಭೈರತಿ ಸುರೇಶ್, ಶಿವರಾಜ ತಂಗಡಗಿ, ಮಂಕಾಳ ವೈದ್ಯ, ರಹೀಂಖಾನ್, ಡಿ. ಸುಧಾಕರ್, ಶರಣಪ್ರಕಾಶ ಪಾಟೀಲ, ದಿನೇಶ ಗುಂಡೂರಾವ್ ಅವರು ಚುನಾವಣೆ ಹಾಗೂ ಪ್ರಚಾರದ ಉಸ್ತುವಾರಿ ವಹಿಸಿಕೊಂಡಿದ್ದಾರೆ. ಇದರ ಜೊತೆಯಲ್ಲಿ ಶಾಸಕರು, ಮಾಜಿ ಶಾಸಕರು, ಮಾಜಿ ಸಚಿವರ ದಂಡೇ ಶಿಗ್ಗಾವಿ ಕಣದಲ್ಲಿ ಪ್ರಚಾರಕ್ಕೆ ಇಳಿಯುವ ಬಗ್ಗೆ ಕಾಂಗ್ರೆಸ್ ಪಟ್ಟಿಯನ್ನೂ ಬಿಡುಗಡೆ ಮಾಡಿದೆ.

ಜಿಲ್ಲೆಯ ಶಿಗ್ಗಾವಿ ಕ್ಷೇತ್ರದಲ್ಲಿ ಮಾತ್ರ ಕಮಲ ಅರಳಿಸಿದ್ದ ಬಸವರಾಜ ಬೊಮ್ಮಾಯಿ, ಕ್ಷೇತ್ರದಲ್ಲಿ ತಮ್ಮದೇ ಛಾಪು ಮೂಡಿಸಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ಪರ ಇಡೀ ಸರ್ಕಾರವೇ ಪ್ರಚಾರಕ್ಕೆ ಇಳಿದರೆ, ಬಸವರಾಜ ಬೊಮ್ಮಾಯಿ ಅವರು ಮಾತ್ರ ತಮ್ಮದೇ ಕಾರ್ಯತಂತ್ರದ ಮೂಲಕ ಮಿಂಚಿನ ಸಂಚಾರ ನಡೆಸಿದ್ದಾರೆ.

ಕ್ಷೇತ್ರದಲ್ಲಿರುವ ಪ್ರತಿಯೊಬ್ಬ ಸಮುದಾಯದ ಮುಖಂಡರ ಮನೆಗೆ ಹಾಗೂ ಗ್ರಾಮಗಳಿಗೆ ಭೇಟಿ ನೀಡುತ್ತಿರುವ ಬಸವರಾಜ ಬೊಮ್ಮಾಯಿ, ಪ್ರತಿಯೊಬ್ಬರ ಮಾತುಗಳನ್ನು ಆಲಿಸುತ್ತಿದ್ದಾರೆ. ಸಮುದಾಯಕ್ಕೆ ನೀಡಿರುವ ಕೊಡುಗೆಗಳು ಹಾಗೂ ಅಭಿವೃದ್ಧಿ ಕೆಲಸಗಳನ್ನು ಮುಂದಿಟ್ಟುಕೊಂಡು ಮತ ಕೇಳುತ್ತಿದ್ದಾರೆ.

'ಭರತ್ ಬೊಮ್ಮಾಯಿ ಅವರು ನಾಮಪತ್ರ ಸಲ್ಲಿಕೆ ಸಂದರ್ಭದಲ್ಲಿ ನಡೆಸಿದ್ದ ರೋಡ್ ಶೋನಲ್ಲಿ ಬಿಜೆಪಿ ರಾಜ್ಯ ನಾಯಕರು ಹಾಗೂ ಅಕ್ಕಪಕ್ಕದ ಜಿಲ್ಲೆಗಳ ಶಾಸಕರು ಭಾಗವಹಿಸಿದ್ದರು. ಇದಾದ ನಂತರ, ಕ್ಷೇತ್ರದ ಗ್ರಾಮಗಳಲ್ಲಿ ಅವರು ಯಾರೊಬ್ಬರೂ ಪ್ರಚಾರ ನಡೆಸಿಲ್ಲ. ಬೊಮ್ಮಾಯಿ ಕುಟುಂಬ ಮಾತ್ರ ಪ್ರಚಾರದ ಕಣಕ್ಕೆ ಇಳಿದಿದೆ. ರಾಜ್ಯ ನಾಯಕರನ್ನು ಗ್ರಾಮಗಳಲ್ಲಿ ನಾವು ನೋಡಿಲ್ಲ' ಎಂದು ಮತದಾರರು ಹೇಳುತ್ತಾರೆ.

ನಾಮಪತ್ರ ಹಿಂಪಡೆಯುವೆ: ಖಾದ್ರಿ

ಹುಬ್ಬಳ್ಳಿ: 'ಸಚಿವ ಜಮೀರ್ ಅಹ್ಮದ್ ಖಾನ್ ಜತೆ ಕ್ಷೇತ್ರಕ್ಕೆ ತೆರಳಿ ಬುಧವಾರ ನಾಮಪತ್ರ ಹಿಂಪಡೆಯುವೆ'' ಎಂದು ಶಿಗ್ಗಾವಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಬಂಡಾಯ ಅಭ್ಯರ್ಥಿ ಸೈಯದ್ ಅಜ್ಜಂಪೀರ ಖಾದ್ರಿ ಹೇಳಿದರು.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಟಿಕೆಟ್ ಸಿಗದಿದ್ದಕ್ಕೆ ಅಸಮಾಧಾನವಾಗಿತ್ತು. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಮತ್ತು ಇತರ ನಾಯಕರು ನನ್ನ ಜತೆ ಮಾತನಾಡಿದ್ದಾರೆ. ಅಭಿಮಾನಿಗಳ ಒತ್ತಾಯಕ್ಕೆ ನಾಮಪತ್ರ ಸಲ್ಲಿಸಿದ್ದೆ' ಎಂದರು.

'ನಾನು ಸ್ಪರ್ಧಿಸಿದರೆ ಶಿಗ್ಗಾವಿ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಹಿನ್ನಡೆಯಾಗಬಹುದು. ಹೀಗಾಗಿ ನಾಮಪತ್ರ ವಾಪಸ್ ಪಡೆದು ಕಾಂಗ್ರೆಸ್ ಅಭ್ಯರ್ಥಿ ಪರ ಪ್ರಚಾರ ಮಾಡುವೆ' ಎಂದರು.

ಸಚಿವ ಜಮೀರ್ ಅಹ್ಮದ್ ಖಾನ್ ಮಾತನಾಡಿ, 'ಶಿಗ್ಗಾವಿ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷ ಗೆಲ್ಲಿಸಲು ಪಣ ತೊಟ್ಟಿದ್ದೇವೆ. ಖಾದ್ರಿ ಅವರು ಸ್ವ-ಇಚ್ಛೆಯಿಂದ ನಾಮಪತ್ರ ಹಿಂಪಡೆಯುವರು' ಎಂದರು.

ನಾಮಪತ್ರ ಹಿಂಪಡೆಯಲು ಬುಧವಾರ ಕೊನೆಯ ದಿನವಾಗಿದ್ದು, ಖಾದ್ರಿ ಅವರು ನಾಮಪತ್ರ ವಾಪಸ್ ಪಡೆಯುವರೇ ಅಥವಾ ಇಲ್ಲವೇ ಎಂಬ ಬಗ್ಗೆ ಕ್ಷೇತ್ರದಲ್ಲಿ ಚರ್ಚೆ ನಡೆದಿತ್ತು.

> ದೀಪಾವಳಿ ಬಳಿಕ ರಾಜ್ಯ ನಾಯಕರು, ಪಕ್ಷದ ಶಾಸಕರು ಪ್ರಚಾರ ಮಾಡುವರು. ಸದ್ಯ ಭರತ್ ಪರ ಕ್ಷೇತ್ರದ ಜನರೇ ಪ್ರಚಾರ ಮಾಡುತ್ತಿದ್ದಾರೆ
> **ಬಸವರಾಜ ಬೊಮ್ಮಾಯಿ,** ಸಂಸದ

> ಕ್ಷೇತ್ರದಲ್ಲಿ ಕಾಂಗ್ರೆಸ್ ಅಲೆ ಇದೆ. ನಮ್ಮ ನಾಯಕರ ದಂಡೇ ಬಂದಿದೆ. ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ
> **ಸಂಜೀವಕುಮಾರ ನೀರಲಗಿ,** ಅಧ್ಯಕ್ಷ, ಕಾಂಗ್ರೆಸ್ ಜಿಲ್ಲಾ ಘಟಕ, ಹಾವೇರಿ

ವಯನಾಡ್‌ನಲ್ಲಿ ಪ್ರಿಯಾಂಕಾ ಗಾಂಧಿ ಸ್ಪರ್ಧೆ ವಲಸೆಯಲ್ಲವೆ: ಎಚ್‌ಡಿಕೆ ಪ್ರಶ್ನೆ

'ನಾನು, ನಿಖಿಲ್ ವಲಸಿಗರಲ್ಲ'

• ಓದೇಶ ಸಕಲೇಶಪುರ

ಚನ್ನಪಟ್ಟಣ (ರಾಮನಗರ): 'ಕಾಂಗ್ರೆಸ್‌ನವರು ಇಟಲಿ ಮೂಲದ ಸೋನಿಯಾ ಗಾಂಧಿ ಅವರ ಪುತ್ರಿ ಪ್ರಿಯಾಂಕಾ ಗಾಂಧಿ ಅವರನ್ನು ಕೇರಳದ ವಯನಾಡ್‌ಗೆ ಕರೆತಂದು ಲೋಕಸಭಾ ಉಪ ಚುನಾವಣೆಗೆ ನಿಲ್ಲಿಸುವುದು ವಲಸೆಯಾಗುವುದಿಲ್ಲವೇ...?' ತಮ್ಮನ್ನು ವಲಸಿಗರು ಎನ್ನುತ್ತಿರುವ ಕಾಂಗ್ರೆಸ್ ನಾಯಕರಿಗೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ನೀಡಿದ ತಿರುಗೇಟು ಇದು.

ತಾಲ್ಲೂಕಿನ ಸಿದ್ದೇಗೌಡನ ದೊಡ್ಡಿಯಲ್ಲಿ ಮಂಗಳವಾರ ಮಧ್ಯಾಹ್ನ ಪುತ್ರ ನಿಖಿಲ್‌ಕುಮಾರಸ್ವಾಮಿ ಪರ ಮತಯಾಚಿಸಿದ ಬಳಿಕ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ರಾಮನಗರ ಜಿಲ್ಲೆಯಲ್ಲಿ ರಾಜಕೀಯ ಬದುಕು ಕಟ್ಟಿಕೊಂಡಿರುವ ಕನ್ನಡಿಗನಾದ ನಾನು ಹಾಗೂ ಉಪ ಚುನಾವಣೆಗೆ ಸ್ಪರ್ಧಿಸಿರುವ ನನ್ನ ಪುತ್ರ ಅದ್ಹೇಗೆ ವಲಸಿಗರಾಗುತ್ತೇವೆ ಎಂಬುದಕ್ಕೆ ಕಾಂಗ್ರೆಸ್‌ನವರು ಉತ್ತರಿಸಬೇಕು' ಎಂದು ಸವಾಲು ಹಾಕಿದರು.

'ನಾನು ಹುಟ್ಟಿದ್ದು ಹಾಸನ ಜಿಲ್ಲೆಯಲ್ಲಾದರೂ ಸಂಪೂರ್ಣವಾದ ಬದುಕು ರಾಮನಗರ ಜಿಲ್ಲೆಯಲ್ಲಿದೆ. ಕೇತಗಾನಹಳ್ಳಿಯಲ್ಲೇ ನಾನು ಮಣ್ಣಾಗುತ್ತೇನೆ. ಇಂತಹ ಟೀಕೆಗಳಿಗೆ ನಾನು ಕುಗ್ಗುವುದಿಲ್ಲ. ಕಾಂಗ್ರೆಸ್‌ನವರು ಏನೇ ಕುತಂತ್ರ ಮಾಡಿದರೂ ಜನ ಮೈತ್ರಿಕೂಟದ ಅಭ್ಯರ್ಥಿ ನಿಖಿಲ್‌ಗೆ ಮತ ಹಾಕುತ್ತಾರೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಚುನಾವಣೆಗೆ ಕುಮಾರಸ್ವಾಮಿ ಹಣ ತಂದು ಸುರಿಯುತ್ತಿದ್ದಾರೆ' ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, 'ವಾಲ್ಮೀಕಿ ನಿಗಮದಲ್ಲಿ ಪರಿಶಿಷ್ಟರ ಹಣ ಲೂಟಿ ಹೊಡೆದು ಚುನಾವಣೆಗೆ ಬಳಸಿದ್ದು ಯಾರು? ಉಕ್ಕು ಸಚಿವನಾಗಿ ನಾನು ಹಣ ಪ್ರಿಂಟ್ ಮಾಡ್ತೀನಾ? ಯಾವ ನೈತಿಕತೆ ಇಟ್ಟುಕೊಂಡು ಹಣದ ಬಗ್ಗೆ ಮಾತನಾಡುತ್ತಾರೆ? ಕಾಂಗ್ರೆಸ್‌ನವರು ಇಂತಹ ಅಪಪ್ರಚಾರದಲ್ಲಿ ನಿಸ್ಸೀಮರು' ಎಂದು ತರಾಟೆಗೆ ತೆಗೆದುಕೊಂಡರು.

ಸ್ಥಳೀಯ ಮುಖಂಡರೊಂದಿಗೆ ಕ್ಷೇತ್ರದ 10ಕ್ಕೂ ಹೆಚ್ಚು ಗ್ರಾಮಗಳಲ್ಲಿ ಎಚ್‌ಡಿಕೆ ಪ್ರಚಾರ ನಡೆಸಿದರು.

ಎರಡು ಸಲ ಪೆಟ್ಟು ತಿಂದಿದ್ದೇನೆ: 'ಚಿಕ್ಕ ವಯಸ್ಸಿನಲ್ಲಿ ಎರಡು ಚುನಾವಣೆ ಎದುರಿಸಿ ಪೆಟ್ಟು ತಿಂದಿದ್ದೇನೆ. ಕ್ಷೇತ್ರದಲ್ಲಿ ಎಚ್.ಡಿ.ದೇವೇಗೌಡರು ಮತ್ತು ಕುಮಾರಸ್ವಾಮಿ ಅವರಿಗೆ ಶಕ್ತಿ ತುಂಬಿದ್ದೀರಿ. ಎಲ್ಲರಿಗೂ ಕೈ ಮುಗಿದು ಕೇಳಿಕೊಳ್ಳುತ್ತೇನೆ. ಕಾರ್ಯಕರ್ತರ ಒತ್ತಡದ ಮೇರೆಗೆ ನಿಮ್ಮನ್ನು ನಂಬಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದೇನೆ. ಇದು ಎನ್‌ಡಿಎ ಕುಟುಂಬದ ಅಗ್ನಿಪರೀಕ್ಷೆ. ನನಗೆ ಮತ ಹಾಕಿ ನಿಮ್ಮ ಸೇವೆ ಮಾಡಲು ಅವಕಾಶ ಕೊಡಿ' ಎಂದು ನಿಖಿಲ್ ಕುಮಾರಸ್ವಾಮಿ ವಳಗೆರೆದೊಡ್ಡಿಯಲ್ಲಿ ಮನವಿ ಮಾಡಿದರು. ಗ್ರಾಮಕ್ಕೆ ಬಂದ ನಿಖಿಲ್ ಅವರನ್ನು ಕಾರ್ಯಕರ್ತರು ಬೈಕ್ ರ್‍ಯಾಲಿಯಲ್ಲಿ ಕರೆದೊಯ್ದರು.

ಚನ್ನಪಟ್ಟಣ ತಾಲ್ಲೂಕಿನ ವಳಗೆರೆದೊಡ್ಡಿಗೆ ಮಂಗಳವಾರ ಪ್ರಚಾರಕ್ಕೆ ಬಂದ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಅವರು ಕಾರ್ಯಕರ್ತರ ಬೈಕ್‌ನಲ್ಲಿ ಸುತ್ತಾಡಿ ಮತ ಯಾಚಿಸಿದರು

> ರಾಮನಗರದಲ್ಲಿ ಪುತ್ರನ ಸೋಲಿನ ಬಳಿಕ ಅಲ್ಪಸಂಖ್ಯಾತರ ಮತಗಳೇ ಬೇಡ ಎಂದಿದ್ದವರು, ಈಗ ಅದ್ಯಾವ ಮುಖವಿಟ್ಟುಕೊಂಡು ಅವರ ಬಳಿ ಮತ ಕೇಳುತ್ತಾರೆ?
> **ಎಚ್.ಎ. ಇಕ್ಬಾಲ್ ಹುಸೇನ್,** ಶಾಸಕ

> ಮುಂದೆ ಜೆಡಿಎಸ್– ಬಿಜೆಪಿ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬಂದೇ ಬರುತ್ತದೆ. ಆಗ ರಾಮನಗರ ನಗರಸಭೆಯನ್ನು ಮಹಾನಗರ ಪಾಲಿಕೆಯನ್ನಾಗಿ ಮಾಡಲಾಗುವುದು
> **ಎಚ್.ಡಿ. ಕುಮಾರಸ್ವಾಮಿ**
> ಕೇಂದ್ರ ಸಚಿವ

'ಪಕ್ಷಾಂತರಿ ಆಗಿರುವುದಕ್ಕೆ ಮುಜುಗರವಿಲ್ಲ'

'ನಾನು ಪಕ್ಷಾಂತರಿ ಎಂಬುದು ಜಗಜ್ಜಾಹೀರು. ಅದಕ್ಕೆ ನನಗೆ ಮುಜುಗರವಿಲ್ಲ. ಅಭಿವೃದ್ಧಿಗಾಗಿ ಪಕ್ಷಾಂತರ ಮಾಡಿದ ನನ್ನನ್ನು ಜನರು ಪಕ್ಷದ ಮುಖ ನೋಡದೆ ಗೆಲ್ಲಿಸಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇರುವುದರಿಂದ, ಅಭಿವೃದ್ಧಿಗಾಗಿ ಮತ್ತೆ ಕಾಂಗ್ರೆಸ್ ಸೇರಿದ್ದೇನೆ. ಎರಡು ಬಾರಿ ಸೋತಿರುವ ನನ್ನನ್ನು ಮತ್ತೆ ಗೆಲ್ಲಿಸಿದರೆ ಮತ್ತಷ್ಟು ಕೆರೆಗಳಿಗೆ ನೀರು ತುಂಬಿಸಿ, ಕ್ಷೇತ್ರವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯುವೆ' ಎಂದು ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಭರವಸೆ ನೀಡಿದರು.

ತಾಲ್ಲೂಕಿನ ಮಾಕಳಿಯಲ್ಲಿ ದಿನದ ಪ್ರಚಾರ ಶುರು ಮಾಡಿ ಮಾತನಾಡಿದ ಅವರು, 'ಎರಡು ಸಲ ಗೆದ್ದಿರುವ ಕುಮಾರಸ್ವಾಮಿ ಅವರು ಏನೂ ಕೆಲಸ ಮಾಡಿಲ್ಲ. ಹಿಂದೆ ನಾನು ತಂದಿದ್ದ ಅನುದಾನವನ್ನೇ ಸರಿಯಾಗಿ ಬಳಸದ ಅವರು, ಕ್ಷೇತ್ರ ಬಿಟ್ಟು ಮಂಡ್ಯಕ್ಕೆ ಹೋಗಿ ಉಪ ಚುನಾವಣೆಗೆ ಮಗನನ್ನು ತಂದು ನಿಲ್ಲಿಸಿದ್ದಾರೆ' ಎಂದು ವಾಗ್ದಾಳಿ ನಡೆಸಿದರು. ಬೆಳಗ್ಗೆಯಿಂದ ಸಂಜೆವರೆಗೆ 15ಕ್ಕೂ ಹೆಚ್ಚು ಗ್ರಾಮಗಳಲ್ಲಿ ಮತಯಾಚಿಸಿದರು.

ಚನ್ನಪಟ್ಟಣ ತಾಲ್ಲೂಕಿನ ಮಾಕಳಿಯಲ್ಲಿ ಮಂಗಳವಾರ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ಅವರು ಮಹಿಳೆಯರ ಬಳಿ ಮತ ಯಾಚಿಸಿದರು

ಶಾಸಕ ಡಾ.ರಂಗನಾಥ್, ಮಾಜಿ ಸಂಸದ ಡಿ.ಕೆ.ಸುರೇಶ್, ಮಾಜಿ ಶಾಸಕ ಎಂ.ಸಿ.ಅಶ್ವಥ್, ಬಿಎಂಐಸಿಎಪಿಎ ಅಧ್ಯಕ್ಷ ರಘುನಂದನ್ ರಾಮಣ್ಣ ಹಾಗೂ ಸ್ಥಳೀಯ ಮುಖಂಡರು ಸಾಥ್ ನೀಡಿದರು.

ಕೈ 'ಪ್ರಚಾರ ಉಸ್ತುವಾರಿ'ಗಳ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಡೂರು, ಶಿಗ್ಗಾವಿ, ಚನ್ನಪಟ್ಟಣ ಕ್ಷೇತ್ರಗಳಿಗೆ ನಡೆಯಲಿರುವ ಉಪ ಚುನಾವಣೆಯಲ್ಲಿ ಚುನಾವಣಾ ಕಾರ್ಯತಂತ್ರಗಳ ಜಾರಿಗೆ ಕಾಂಗ್ರೆಸ್ ಪಕ್ಷ ವಿವಿಧ ಮುಖಂಡರನ್ನು 'ಪ್ರಚಾರ ಉಸ್ತುವಾರಿ'ಗಳಾಗಿ ನೇಮಿಸಿದೆ.

'ಈ ಕ್ಷೇತ್ರಗಳಲ್ಲಿ 'ಕೆಪಿಸಿಸಿ ಕ್ಯಾಂಪ್ ಆಫೀಸ್' ತೆರೆಯಲಾಗುವುದು. ಪ್ರಚಾರ ಉಸ್ತುವಾರಿ ನೀಡಿದವರು ನಿತ್ಯ ಈ ಕಚೇರಿಗೆ ಮತ್ತು ಕೆಪಿಸಿಸಿಗೆ ವರದಿ ನೀಡಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಶಿಗ್ಗಾವಿ ಕ್ಷೇತ್ರಕ್ಕೆ ಈಶ್ವರ ಖಂಡ್ರೆ, ಎಚ್.ಕೆ. ಪಾಟೀಲ, ಜಮೀರ್ ಅಹಮದ್ ಖಾನ್, ಸತೀಶ ಜಾರಕಿಹೊಳಿ, ಮಧು ಬಂಗಾರಪ್ಪ, ಲಕ್ಷ್ಮಿ ಹೆಬ್ಬಾಳ್ಕರ್, ಆರ್.ಬಿ. ತಿಮ್ಮಾಪೂರ, ಎಸ್.ಎಸ್. ಮಲ್ಲಿಕಾರ್ಜುನ್, ಬೈರತಿ ಸುರೇಶ್, ಶಿವರಾಜ್ ತಂಗಡಗಿ ಸೇರಿದಂತೆ 20 ಸದಸ್ಯರ ತಂಡ ರಚಿಸಲಾಗಿದೆ. ಅಲ್ಲದೆ, ಜಿಲ್ಲಾ ಪಂಚಾಯಿತಿ ಮತ್ತು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಗೆ ಶಾಸಕರು, ಮುಖಂಡರನ್ನು ವೀಕ್ಷಕರನ್ನಾಗಿ ನೇಮಿಸಲಾಗಿದೆ.

ಸಂಡೂರು ಕ್ಷೇತ್ರಕ್ಕೆ ಸಚಿವರಾದ ಕೆ.ಎಚ್. ಮುನಿಯಪ್ಪ, ಕೆ.ಜೆ. ಜಾರ್ಜ್, ಜಮೀರ್ ಅಹಮದ್ ಖಾನ್, ಸಂತೋಷ್ ಲಾಡ್, ಪ್ರಿಯಾಂಕ್ ಖರ್ಗೆ ಮುಂತಾದವರನ್ನು ಒಳಗೊಂಡ ತಂಡ ರಚಿಸಲಾಗಿದೆ. ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಮಟ್ಟದಲ್ಲಿ ಕೆಲಸ ಮಾಡುವ ಹೊಣೆಯನ್ನು ಶಾಸಕರ ಪ್ರತ್ಯೇಕ ತಂಡಕ್ಕೆ ನೀಡಲಾಗಿದೆ.

ಇನ್ನು ಚನ್ನಪಟ್ಟಣ ಕ್ಷೇತದ ಹೊಣೆಯನ್ನು ಸಚಿವರಾದ ರಾಮಲಿಂಗಾರೆಡ್ಡಿ, ಎನ್. ಚಲುವರಾಯಸ್ವಾಮಿ, ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್, ಎಐಸಿಸಿ ಕಾರ್ಯದರ್ಶಿ ಅಭಿಷೇಕ್ ದತ್ತ, ಶಾಸಕ ತನ್ವೀರ್ ಸೇಠ್, ಮಾಜಿ ಸಂಸದ ಡಿ.ಕೆ. ಸುರೇಶ್ ನೇತೃತ್ವದ ತಂಡಕ್ಕೆ ನೀಡಲಾಗಿದೆ. ಜಿಲ್ಲಾ ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿವಾರು ಹೊಣೆಯನ್ನು ಶಾಸಕರಿಗೆ, ಮುಖಂಡರಿಗೆ ವಹಿಸಲಾಗಿದೆ.

ಬಂಗಾರುಗೆ 'ಬೆಳ್ಳಿ ಸಿಂಹಾಸನ' ಕಂಟಕ!

ಮಠಾಧೀಶರಿಗೆ ನೀಡಿದ್ದ ಕೊಡುಗೆ ಅಫಿಡವಿಟ್‌ನಲ್ಲಿ ಉಲ್ಲೇಖಿಸಿಲ್ಲ– ಆಯೋಗಕ್ಕೆ ದೂರು

• ಹರಿಶಂಕರ್ ಆರ್.

ಬಳ್ಳಾರಿ: 'ಸಂಡೂರು ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಂಗಾರು ಹನುಮಂತ ಅವರು ಮಠಾಧೀಶರಿಗೆ ನೀಡಿದ್ದ ಬೆಳ್ಳಿ ಸಿಂಹಾಸನಗಳನ್ನು ತಮ್ಮ ಚುನಾವಣಾ ಪ್ರಮಾಣಪತ್ರದಲ್ಲಿ (ಅಫಿಡವಿಟ್) ಉಲ್ಲೇಖಿಸಿಲ್ಲ' ಎಂದು ಆರೋಪಿಸಿ ಚುನಾವಣಾ ಆಯೋಗಕ್ಕೆ ದೂರು ದಾಖಲಾಗಿದೆ. ಸಂಡೂರು ಕ್ಷೇತ್ರದ ಚುನಾವಣಾಧಿಕಾರಿಗೆ ಪತ್ರ ಬರೆದಿರುವ ರಾಜ್ಯ ಚುನಾವಣಾ ಆಯೋಗದ ಜಂಟಿ ಮುಖ್ಯ ಚುನಾವಣಾಧಿಕಾರಿ ಎಸ್. ಯೋಗೇಶ್ವರ್ ಅವರು, 'ದೂರನ್ನು ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳಿ' ಎಂದಿದ್ದಾರೆ.

ಬಂಗಾರು ಹನುಮಂತ

'ವಾಲ್ಮೀಕಿ ಮಠ ಮತ್ತು ಪಂಚಮ ಸಾಲಿ ಮಠಕ್ಕೆ ನೀಡಿದ ₹30 ಲಕ್ಷ ಮೌಲ್ಯದ ಬೆಳ್ಳಿ ವಸ್ತುಗಳನ್ನು ತಮ್ಮ ಚುನಾವಣಾ ಪ್ರಮಾಣಪತ್ರದಲ್ಲಿ ಬಂಗಾರು ಹನುಮಂತ ಉಲ್ಲೇಖಿಸಿಲ್ಲ. ಅವರ ನಾಮಪತ್ರ ಅಸಿಂಧುಗೊಳಿಸಿ' ಎಂದು ರಾಘವೇಂದ್ರ ಪೂಜಾರಿ ಎಂಬುವರು ಈ ಕುರಿತು ಚುನಾವಣಾ ಆಯೋಗಕ್ಕೆ ಸೋಮವಾರ ದೂರು ನೀಡಿದ್ದರು.

'2022/23/24ರಲ್ಲಿ ಅವರು ಹೊಂದಿದ್ದ ಆದಾಯಕ್ಕೂ ಮತ್ತು ಅವರು ಖರೀದಿಸಿದ ಜಮೀನುಗಳ ಮೌಲ್ಯಕ್ಕೂ ವ್ಯತ್ಯಾಸ ಕಾಣುತ್ತಿದೆ. 2022ರಲ್ಲಿ ₹26 ಲಕ್ಷದಷ್ಟು ಆದಾಯ ತೋರಿಸಿದ್ದ ಹನುಮಂತ, ಅದೇ ವರ್ಷ 23 ಎಕರೆ ಭೂಮಿ ಖರೀದಿಸಿದ್ದಾರೆ. ಅವರು ₹2 ಕೋಟಿ ಮೌಲ್ಯದ ಚಿನ್ನ, 25 ಕೆಜಿ ಬೆಳ್ಳಿ ಹೊಂದಿರುವುದಾಗಿ ಹೇಳಿದ್ದಾರೆ. ಆದರೆ, ಅವರ 5 ವರ್ಷಗಳ ಆದಾಯಕ್ಕೂ ಇದಕ್ಕೂ ತಾಳೆಯೇ ಆಗುತ್ತಿಲ್ಲ. ಇದು ಸುಳ್ಳು ಮಾಹಿತಿ' ಎಂದು ದೂರಿನಲ್ಲಿ ತಿಳಿಸಿದ್ದಾರೆ.

2023ರ ಜನವರಿ 17ರಂದು ನಡೆದ ಹರ ಜಾತ್ರೆಯಲ್ಲಿ ಹರಿಹರದ ವೀರಶೈವ ಲಿಂಗಾಯತ ಪಂಚಸಾಲಿ ಜಗದ್ಗುರು ಪೀಠಕ್ಕೆ ಬಂಗಾರು ಹನುಮಂತು 24 ಕೆಜಿ ತೂಕದ ಬೆಳ್ಳಿ ಸಿಂಹಾಸನ ಮತ್ತು 2023ರ ಫೆಬ್ರುವರಿ 8 ಮತ್ತು 9ರಂದು ರಾಜನಹಳ್ಳಿ ಗುರುಪೀಠದಲ್ಲಿ ಜರುಗಿದ್ದ ವಾಲ್ಮೀಕಿ ವಾಲ್ಮೀಕಿ ಜಾತ್ರಾ ಮಹೋತ್ಸವದಲ್ಲಿ ಮಠಕ್ಕೆ ಬೆಳ್ಳಿಯ ಸಿಂಹಾಸನ ನೀಡಿದ್ದರ ಬಗ್ಗೆ ಪತ್ರಿಕಾ ವರದಿಗಳಿವೆ. ಫೇಸ್‌ಬುಕ್‌ನಲ್ಲಿ ಅಭಿಮಾನಿಗಳು ಹಂಚಿಕೊಂಡ ವಿಡಿಯೊಗಳಿವೆ ಎಂದು ರಾಘವೇಂದ್ರ ತಿಳಿಸಿದ್ದಾರೆ.

> ಬೆಳ್ಳಿ ಕೊಟ್ಟಿದ್ದು ನಾನಲ್ಲ, ಅಭಿಮಾನಿಗಳು. ಆ ಕಾರ್ಯಕ್ರಮಗಳಲ್ಲಿ ನಾನೂ ಭಾಗವಹಿಸಿದ್ದೆ ಅಷ್ಟೇ
> **ಬಂಗಾರು ಹನುಮಂತ,**
> ಬಿಜೆಪಿ ಅಭ್ಯರ್ಥಿ, ಸಂಡೂರು

> ಅಫಿಡವಿಟ್‌ನ ಮಾಹಿತಿ ಪರಿಶೀಲಿಸುವ ಅಧಿಕಾರ ಚುನಾವಣಾಧಿಕಾರಿಗೆ ಇಲ್ಲ. ದೂರುದಾರರು ಕೋರ್ಟ್‌ಗೆ ಹೋಗಬಹುದು
> **ರಾಜೇಶ್ ಎಚ್.ಡಿ,**
> ಚುನಾವಣಾಧಿಕಾರಿ

> ಬಂಗಾರು ಹನುಮಂತ ಅವರು ಬೆಳ್ಳಿಯನ್ನು ದೇಣಿಗೆಯಾಗಿ ಕೊಡಲಿ. ಅದನ್ನು ಘೋಷಿಸಿ, ಅದರ ಮೂಲ ತಿಳಿಸಬೇಕಲ್ಲವೇ?
> **ರಾಘವೇಂದ್ರ ಪೂಜಾರಿ**
> ದೂರುದಾರ

'ವಿಜಯ್ ಪಕ್ಷ ನಮ್ಮ ಮತ ಕಸಿಯದು'

ಪ್ರಜಾವಾಣಿ ವಾರ್ತೆ

ಚೆನ್ನೈ: 'ನಟ ವಿಜಯ್ ಅವರ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷವು ನಮ್ಮ ಪಕ್ಷದ ಮತಗಳನ್ನು ಕಸಿಯದು' ಎಂದು ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಹೇಳಿದ್ದಾರೆ.

'ರಾಜಕೀಯ ಪರಿಸ್ಥಿತಿ ಆಧರಿಸಿ 2026ರ ವಿಧಾನಸಭಾ ಚುನಾವಣೆಯ ಪೂರ್ವದಲ್ಲಿ ಮೈತ್ರಿಗೆ ನಾವು ಕರೆ ನೀಡಲಿದ್ದೇವೆ' ಎಂದೂ ಅವರು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ್ದಾರೆ.

'ಅವರು (ವಿಜಯ್) ಎಐಎಡಿಎಂಕೆ ಮತಗಳನ್ನು ಕಸಿದುಕೊಳ್ಳುವುದಿಲ್ಲ. ನಾವು ಯಾವತ್ತೂ ನಮ್ಮ ಸಿದ್ಧಾಂತವನ್ನು ಬಿಟ್ಟುಕೊಟ್ಟಿಲ್ಲ. ವಿಧಾನಸಭಾ ಚುನಾವಣೆಗೆ ಇನ್ನೂ ಒಂದೂವರೆ ವರ್ಷ ಬಾಕಿ ಇದೆ. ಮೈತ್ರಿ ಬಗ್ಗೆ ಮಾತನಾಡಲು ಕಾಲ ಪಕ್ವವಾಗಿಲ್ಲ. ರಾಜಕೀಯ ಸಂದರ್ಭಗಳಿಗೆ ಅನುಗುಣವಾಗಿ ಚುನಾವಣೆಗೂ ಮುನ್ನ ಮೈತ್ರಿ ನಡೆಯುತ್ತವೆ' ಎಂದು ಅವರು ಹೇಳಿದರು.

ಹಾಲಿಗಳಿಗೆ ಟಿಕೆಟ್ ಇಲ್ಲ

ಮುಂಬೈ (ಪಿಟಿಐ): ಮಹಾರಾಷ್ಟ್ರ ವಿಧಾನಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸುವ ಅಂತಿಮ ದಿನಾಂಕವು ಮಂಗಳವಾರ (ಅ. 29) ಮುಗಿದಿದ್ದು, ಬಿಜೆಪಿ ಹಾಗೂ ಕಾಂಗ್ರೆಸ್ ಅನೇಕ ಹಾಲಿ ಶಾಸಕರನ್ನು ಉಮೇದುವಾರಿಕೆಯಿಂದ ಕೈಬಿಟ್ಟಿವೆ.

ಬಿಜೆಪಿಯು 8 ಹಾಗೂ ಕಾಂಗ್ರೆಸ್ 5 ಹಾಲಿ ಶಾಸಕರನ್ನು ಅಭ್ಯರ್ಥಿಗಳ ಪಟ್ಟಿಯಿಂದ ಕೈಬಿಟ್ಟಿವೆ. ನವೆಂಬರ್ 20ರಂದು ಮಹಾರಾಷ್ಟ್ರದ 288 ವಿಧಾನಸಭಾ ಕ್ಷೇತ್ರಗಳಿಗೆ ಚುನಾವಣೆ ನಡೆಯಲಿದೆ.

'ವಯನಾಡ್ ಪುನರ್‌ವಸತಿ ಮೋದಿ ಸರ್ಕಾರ ನಿರ್ಲಕ್ಷ್ಯ'

ವಯನಾಡ್‌ನ ತೆರಟ್ಟಮ್ಮಲ್‌ನಲ್ಲಿ ಪ್ರಿಯಾಂಕಾ ಗಾಂಧಿ ರೋಡ್‌ಶೋ ನಡೆಸಿದರು

ವಯನಾಡ್, ಕೇರಳ (ಪಿಟಿಐ): ಇಲ್ಲಿನ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಮಂಗಳವಾರವೂ ಅಬ್ಬರದ ಪ್ರಚಾರ ನಡೆಸಿದರು.

ಈಂಗಾಪುಳದಲ್ಲಿ ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡಿದ ಅವರು, 'ಜಿಲ್ಲೆಯಲ್ಲಿ ಭೂಕುಸಿತದಿಂದಾಗಿ ಸಂತ್ರಸ್ತರಾದವರ ಪುನರ್‌ವಸತಿ ವಿಚಾರದಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಸಂಪೂರ್ಣ ನಿರ್ಲಕ್ಷ್ಯ ವಹಿಸಿದ್ದು, ಜಿಲ್ಲೆಗೆ ಯಾವುದೇ ಅನುದಾನ ನೀಡಿಲ್ಲ. ಕಳೆದ 10 ವರ್ಷಗಳಲ್ಲಿ ಸರ್ಕಾರದ ತೆಗೆದುಕೊಂಡ ನಿರ್ಧಾರಗಳನ್ನು ಗಮನಿಸಿದರೆ, ಜನರಿಗೆ ಒಳಿತು ಮಾಡಲು ಸರ್ಕಾರಕ್ಕೆ ಯಾವುದೇ ಆಸಕ್ತಿಯಿಲ್ಲ. ನೋಟು ರದ್ದತಿ ಸೇರಿದಂತೆ ಹಲವು ವಿಚಾರಗಳಲ್ಲಿ ತಪ್ಪು ನಿರ್ಧಾರಗಳನ್ನು ತೆಗೆದುಕೊಂಡಿದೆ. ದೇಶದಲ್ಲಿರುವ ಐದು ಅಥವಾ ಆರು ಮಂದಿ ಉದ್ಯಮಿಗಳಿಗೆ ಅನುಕೂಲವಾಗುವ ನೀತಿಗಳನ್ನು ರೂಪಿಸಿದೆ' ಎಂದು ಆರೋಪಿಸಿದರು.

ಮೋದಿ ವಿರುದ್ಧ ಟೀಕೆ: 'ವಯನಾಡ್‌ನಲ್ಲಿ ಭೂಕುಸಿತ ಸಂಭವಿಸಿದ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ಜಿಲ್ಲೆಗೆ ಭೇಟಿ ನೀಡಿ, ಅಗತ್ಯ ನೆರವು ನೀಡುವ ಭರವಸೆ ನೀಡಿದ್ದರು. ದುರಂತ ನಡೆದು ತಿಂಗಳು ಕಳೆದರೂ ಪುನರ್ ನಿರ್ಮಾಣಕ್ಕೆ ಯಾವುದೇ ಅನುದಾನ ನೀಡಿಲ್ಲ. ದೇಶದ ರೈತರ ಬಗ್ಗೆಯೂ ಯಾವುದೇ ಕಾಳಜಿ ಹೊಂದಿಲ್ಲ. ಬುಡಕಟ್ಟು ಸಮುದಾಯಗಳು ಎದುರಿಸುತ್ತಿರುವ ಯಾವುದೇ ಸಮಸ್ಯೆಗಳಿಗೂ ಸ್ಪಂದಿಸುತ್ತಿಲ್ಲ. ಸಾರ್ವಜನಿಕರ ಅಗತ್ಯಕ್ಕೆ ಬಳಕೆಯಾಗಬೇಕಿದ್ದ ಭೂಮಿಯನ್ನು ಕಾರ್ಪೊರೇಟ್ ಉದ್ಯಮಿಗಳಿಗೆ ನೀಡುತ್ತಿದ್ದಾರೆ' ಎಂದು ದೂರಿದರು.

'ಶಿಕ್ಷಣ, ಆರೋಗ್ಯ, ಉದ್ಯೋಗ ಸೇರಿದಂತೆ ಅಗತ್ಯ ಕ್ಷೇತ್ರಗಳನ್ನು ಮೋದಿ ಸರ್ಕಾರವು ಸಂಪೂರ್ಣವಾಗಿ ನಿರ್ಲಕ್ಷಿಸಿದೆ' ಎಂದರು.

'ಮಣಿಪುರದಲ್ಲಿ ವರ್ಷದಿಂದ ಈಚೆಗೆ ಹಿಂಸಾಚಾರ ನಡೆಯುತ್ತಿದೆ. ಆದರೂ ಅಧಿಕಾರದಲ್ಲಿ ಉಳಿಯಲು 'ಸಣ್ಣತನದ ರಾಜಕೀಯ' ಮಾಡುತ್ತಿದ್ದಾರೆ' ಎಂದು ಪ್ರಿಯಾಂಕಾ ದೂರಿದರು.

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ. ಎಂ.ಹೆಚ್. ಮರೀಗೌಡ ರಸ್ತೆ, ಬೆಂಗಳೂರು–560 029,

IFT No: KMF/ENGG/NHPP_CRP/ETP_O&M_WORKS/2024-25 Date: 28-10-2024

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಅಡಿಯಲ್ಲಿ ಟೆಂಡರ್ ಪ್ರಕಟಣೆ

ಕರ್ನಾಟಕ ಹಾಲು ಮಹಾಮಂಡಳಿ, ಬೆಂಗಳೂರು, ವತಿಯಿಂದ ಹಾಸನದ ಚನ್ನರಾಯಪಟ್ಟಣದಲ್ಲಿರುವ ನಂದಿನಿ ಹೈ–ಟೆಕ್ ಉತ್ಪನ್ನ ಘಟಕದ Effluent Treatment Plant ನಿರ್ವಹಣೆ ಕೆಲಸಗಳನ್ನು ನಿರ್ವಹಿಸುವ ಸಂಬಂಧ ಇದೇ ಮಾದರಿಯ ಕೆಲಸಗಳನ್ನು ನಿರ್ವಹಿಸಿ ಅನುಭವವಿರುವ ಅರ್ಹ ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖೇನ ದ್ವಿಲಕೋಟೆ ಪದ್ಧತಿಯ (Technical & Financial) ಟೆಂಡರನ್ನು ಅಹ್ವಾನಿಸಲಾಗಿದೆ. ಆಸಕ್ತರು ವೆಬ್‌ಸೈಟ್ https://kppp.karnataka.gov.in ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ. [Help desk E-mail: support@eproc helpdesk.com and helpline no. +91-8046010000, +91-8068948777, 080-22230960, 080-22234115

ಕ್ರ. ಸಂ.	ಕೆಲಸದ ವಿವರ	ಇ.ಎಂ.ಡಿ. ರೂ. ಪೈ.	ಗುತ್ತಿಗೆ ನಿರ್ವಹಣೆ ಅವಧಿ
1	ಹಾಸನದ ಚನ್ನರಾಯಪಟ್ಟಣದಲ್ಲಿರುವ ನಂದಿನಿ ಹೈಟೆಕ್ ಉತ್ಪನ್ನ ಘಟಕದ ದಿನವಹಿ 600 + 600 ಸಾವಿರ ಲೀಟರ್ ಸಾಮರ್ಥ್ಯದ Effluent Treatment Plant ನಿರ್ವಹಣೆ ಮತ್ತು ಮಾನವ ಸಂಪನ್ಮೂಲ ಒದಗಿಸುವ ಕೆಲಸಗಳು (ದ್ವೈವಾರ್ಷಿಕ ಅವಧಿಗೆ)	1,00,000/–	ಎರಡು ವರ್ಷ

1) ಟೆಂಡರ್ ಷೆಡ್ಯೂಲ್ ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ 30–10–2024 ರಿಂದ 21–11–2024 ರ ಸಾಯಂಕಾಲ 4.00 ಗಂಟೆಯವರೆಗೆ. 2) ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ 21–11–2024 ರ ಸಾಯಂಕಾಲ 4.00 ಗಂಟೆಯವರೆಗೆ. 3) ಟೆಂಡರುಗಳನ್ನು (Cover-1) ತೆರೆಯುವ ದಿನಾಂಕ 22–11–2024 ರಂದು ರ ಸಾಯಂಕಾಲ 4.30 ಗಂಟೆಗೆ. ಇನ್ನಿತ್ತರೆ ನಿಬಂಧನೆಗಳು, ಷರತ್ತುಗಳು ಹಾಗೂ ಟೆಂಡರ್‌ನ ತಿದ್ದುಪಡಿ / ಬದಲಾವಣೆಗಳನ್ನು ಇ–ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಅಭಿ–1)

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in

ನಂ. ಐಎಡಿಬಿ/ಇಎನ್‌ಜಿಜೆ/ಇಟಿಎನ್‌ಡಿ–ಇಪಿ–27/486/2024–25 ದಿನಾಂಕ: 29.10.2024

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ

ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಡಿಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಆಧುನಿಕ ತಂತ್ರಜ್ಞಾನ ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ವಿದ್ಯುತ್ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು : ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ಸಾಮಾನ್ಯ ಕೈಗಾರಿಕಾ ಪ್ರದೇಶಕ್ಕೆ ಹಾಲಿ ಇರುವ ಕೊಳವೆ ಬಾವಿಯಿಂದ ಜಿ.ಎಲ್.ಎಸ್.ಆರ್ ವರೆಗೆ ನೀರು ಸರಬರಾಜು ಕಲ್ಪಿಸುವ ಕಾಮಗಾರಿ. (2ನೇ ಕರೆ)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 14.11.2024 ಸಂಜೆ 4.30 ಗಂಟೆಯವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

DIPR/CP/2826/Zen/2024-25

ಇಲಾಖೆಯ ಜಂಟಿ ಆಯುಕ್ತರಿಗೆ ಮುಖ್ಯಮಂತ್ರಿ ಎಚ್ಚರಿಕೆ

ತೆರಿಗೆ ಸಂಗ್ರಹ: ಹಿಂದೆಬಿದ್ದರೆ 'ವರ್ಗ' ದಂಡ

ಪ್ರಜಾವಾಣಿ ವಾರ್ತೆ

2024-25ನೇ ಸಾಲಿಗೆ ಗುರಿ | ಅಕ್ಟೋಬರ್ ಅಂತ್ಯದವರೆಗೆ ಸಂಗ್ರಹ | ಸೆಪ್ಟೆಂಬರ್‌ವರೆಗೆ ಸಂಗ್ರಹ

ಇಲಾಖೆ	2024-25ನೇ ಸಾಲಿಗೆ ಗುರಿ	ಸಂಗ್ರಹ
ವಾಣಿಜ್ಯ ತೆರಿಗೆ	₹1.10 ಲಕ್ಷ ಕೋಟಿ	₹58,773 ಕೋಟಿ (ಶೇ 53.5)
ಅಬಕಾರಿ ತೆರಿಗೆ	₹38,525 ಕೋಟಿ	₹20,237 ಕೋಟಿ (ಶೇ 52.53)
ನೋಂದಣಿ ಮತ್ತು ಮುದ್ರಾಂಕ	₹26,000 ಕೋಟಿ	₹13,724 ಕೋಟಿ
ಸಾರಿಗೆ ಇಲಾಖೆ	₹13,000 ಕೋಟಿ	₹5,569 ಕೋಟಿ

ಬೆಂಗಳೂರು: 'ಇನ್ನು ಮುಂದೆ ಪ್ರತಿ ತಿಂಗಳ ಕೊನೆಯಲ್ಲಿ ಪ್ರತಿಯೊಬ್ಬರಿಂದ ಮಾಹಿತಿ ಪಡೆದು ಕರ್ತವ್ಯ ದಕ್ಷತೆಯನ್ನು ಪರಿಶೀಲಿಸುತ್ತೇನೆ. ತೆರಿಗೆ ಸಂಗ್ರಹದಲ್ಲಿ ಸುಧಾರಣೆ ಕಾಣದೇ ಇದ್ದರೆ ಯಾವುದೇ ಮುಲಾಜಿಲ್ಲದೆ ವರ್ಗಾವಣೆ ಮಾಡುತ್ತೇನೆ' ಎಂದು ವಾಣಿಜ್ಯ ಇಲಾಖೆಯ ಜಂಟಿ ಆಯುಕ್ತರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ನೀಡಿದರು.

ವಾಣಿಜ್ಯ ತೆರಿಗೆ ಸಂಗ್ರಹ ಕುರಿತು ಮಂಗಳವಾರ ಅವರು ಪ್ರಗತಿ ಪರಿಶೀಲನೆ ನಡೆಸಿದರು.

'ಪ್ರಸಕ್ತ ಸಾಲಿನಲ್ಲಿ ಈವರೆಗೆ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ₹ 44,783 ಕೋಟಿ, ಕರ್ನಾಟಕ ಮಾರಾಟ ತೆರಿಗೆ (ಕೆಎಸ್‌ಟಿ) ₹ 13,193 ಕೋಟಿ, ವೃತ್ತಿ ತೆರಿಗೆ ₹ 797 ಕೋಟಿ ಸೇರಿ ಒಟ್ಟು ₹ ₹ 58,773 ಕೋಟಿ ವಾಣಿಜ್ಯ ತೆರಿಗೆ ಸಂಗ್ರಹವಾಗಿದೆ. 2023-24ನೇ ಸಾಲಿನ ಈ ಅವಧಿಗೆ ಹೋಲಿಸಿದರೆ ₹ 5,957 ಕೋಟಿ ಹೆಚ್ಚುವರಿ ಸಂಗ್ರಹವಾಗಿದೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

'ಮುಂದಿನ ಐದು ತಿಂಗಳ ಅವಧಿಯಲ್ಲಿ ಪ್ರತಿ ತಿಂಗಳು ₹ 10,200 ಕೋಟಿ ಸಂಗ್ರಹ ಗುರಿ ಇರಿಸಿ ಮಾರ್ಚ್ ಒಳಗೆ ಒಟ್ಟು ಗುರಿ ಸಾಧಿಸಬೇಕು. ಕರ ಸಮನ್ವಯದಿಂದ ಕಾರ್ಯನಿರ್ವಹಿಸಿದರೆ ಮಾತ್ರ ಗುರಿ ಸಾಧನೆ ಸಾಧ್ಯ. ರಾಜ್ಯದ ಅಭಿವೃದ್ಧಿಗೆ ತೆರಿಗೆ ಸಂಗ್ರಹದಲ್ಲಿ ಗುರಿ ಸಾಧಿಸಲೇ ಬೇಕಿದೆ' ಎಂದರು.

'ಪರಿಶೀಲನೆ ವೇಳೆಗೆ ನಿಗದಿತ ಗುರಿ ಸಾಧಿಸದ ಅಧಿಕಾರಿಗಳನ್ನು ಹೊಣೆಗಾರರಾಗಿ ಮಾಡಲಾಗುವುದು. ವಾಣಿಜ್ಯ ತೆರಿಗೆ ಸಂಗ್ರಹ ಯಾವುದೇ ಕಾರಣಕ್ಕೂ ಗುರಿಗಿಂತ ಕಡಿಮೆ ಆಗಲೇಬಾರದು. ಕರ ಸಮಾಧಾನ ಯೋಜನೆ ಅಡಿ ₹2 ಸಾವಿರ ಕೋಟಿ ಹೆಚ್ಚುವರಿ ಸಂಗ್ರಹದ ನಿರೀಕ್ಷೆಯಿದೆ' ಎಂದರು.

ಪ್ರತಿ ತಿಂಗಳು ₹2,400 ಕೋಟಿ ಸಂಗ್ರಹಿಸಿ: 'ಮುಂದಿನ ಮಾರ್ಚ್‌ವರೆಗೆ ಪ್ರತಿ ತಿಂಗಳು ₹2,400 ಕೋಟಿ ರಾಜಸ್ವ ಸಂಗ್ರಹ ಗುರಿ ಸಾಧಿಸಲೇಬೇಕು' ಎಂದು ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚನೆ ನೀಡಿದರು.

ಇಲಾಖೆ 2024-25ರ ಸಾಲಿನ ರಾಜಸ್ವ ಸಂಗ್ರಹಣೆ ಪರಿಶೀಲನೆ ನಡೆಸಿದ ಮುಖ್ಯಮಂತ್ರಿ, 'ನೋಂದಣಿಯೇತರ ದಸ್ತಾವೇಜುಗಳಿಗೆ ಸರಿಯಾದ ಮುದ್ರಾಂಕ ಶುಲ್ಕ ಪಾವತಿಸಿಕೊಂಡು ಹೆಚ್ಚಿನ ರಾಜಸ್ವ ಸಂಗ್ರಹಿಸಬೇಕು' ಎಂದು ಸೂಚಿಸಿದರು.

ಮಾರ್ಚ್ ಅಂತ್ಯಕ್ಕೆ ಗುರಿ ಸಾಧಿಸಿ: 'ಮಾಸಿಕ ಗುರಿ ನಿಗದಿಪಡಿಸಿಕೊಂಡು ಮಾರ್ಚ್ ಅಂತ್ಯದ ಒಳಗೆ ವಾರ್ಷಿಕ ರಾಜಸ್ವ ಸಂಗ್ರಹ ಗುರಿ ಸಾಧಿಸಬೇಕು' ಎಂದು ಸಾರಿಗೆ ಇಲಾಖೆಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚನೆ ನೀಡಿದರು. 'ಹಿಂದಿನ ಸಾಲಿಗೆ ಹೋಲಿಸಿದರೆ ಪ್ರಸಕ್ತ ಅವಧಿಯಲ್ಲಿ ₹ 308.98 ಕೋಟಿ ಹೆಚ್ಚುವರಿ ರಾಜಸ್ವ ಸಂಗ್ರಹ ಆಗಿದೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಆಯಾ ಇಲಾಖೆ ಸಚಿವರು ಮತ್ತು ಅಧಿಕಾರಿಗಳು ಸಭೆಯಲ್ಲಿ ಇದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಾಣಿಜ್ಯ ತೆರಿಗೆ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ಮಂಗಳವಾರ ನಡೆಸಿದರು. ಹಣಕಾಸು ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ಇದ್ದರು

ಮದ್ಯ ಅಕ್ರಮ ಸಾಗಣೆ– ಕಠಿಣ ಕ್ರಮಕ್ಕೆ ಸೂಚನೆ

'ಗೋವಾದಿಂದ ಮದ್ಯ ಅಕ್ರಮ ಸಾಗಣೆ ಸಂಪೂರ್ಣ ತಡೆಯಲು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು. ಭ್ರಷ್ಟಾಚಾರದ ದೂರುಗಳು ಬಂದರೆ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕು' ಎಂದು ಅಬಕಾರಿ ಇಲಾಖೆಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ನಿರ್ದೇಶನ ನೀಡಿದರು.

ಅಬಕಾರಿ ಇಲಾಖೆಯ ಪ್ರಗತಿಯ ಪರಿಶೀಲನೆಯ ವೇಳೆಯಲ್ಲಿ ಅವರು ಈ ಸೂಚನೆ ನೀಡಿದರು.

'ಪ್ರಸಕ್ತ ಸಾಲಿನಲ್ಲಿ ಈವರೆಗೆ ₹ 20,237 ಕೋಟಿ (ಶೇ 52.53) ಅಬಕಾರಿ ತೆರಿಗೆ ಸಂಗ್ರಹವಾಗಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ₹ 1,301.15 ಕೋಟಿ ಹೆಚ್ಚುವರಿ ಸಂಗ್ರಹ ಆಗಿದೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಆಗ ಮುಖ್ಯಮಂತ್ರಿ, 'ಮಾರ್ಚ್ ಒಳಗೆ ನಿಗದಿತ ಗುರಿ ಸಾಧಿಸಲು ಕ್ರಮ ಕೈಗೊಳ್ಳಬೇಕು' ಎಂದು ಸೂಚನೆ ನೀಡಿದರು.

ವಿಮಾನಯಾನ ಸಂಸ್ಥೆಗಳಿಗೆ ಹುಸಿ ಬಾಂಬ್ ಬೆದರಿಕೆ ● ಆರೋಪಿಯ ಬಂಧನಕ್ಕೆ ವಿಶೇಷ ತಂಡ ರಚನೆ

ನಾಗ್ಪುರದ ವ್ಯಕ್ತಿಯ ಮೇಲೆ ಪೊಲೀಸರಿಗೆ ಅನುಮಾನ

ನಾಗ್ಪುರ (ಪಿಟಿಐ): ವಿಮಾನಯಾನ ಸಂಸ್ಥೆಗಳಿಗೆ ಹುಸಿ ಬಾಂಬ್ ಬೆದರಿಕೆ ಸಂದೇಶ ಕಳುಹಿಸಿದ್ದ ಪ್ರಕರಣಗಳ ಹಿಂದೆ, ಮಹಾರಾಷ್ಟ್ರದ ಗೊಂದಿಯಾ ಜಿಲ್ಲೆಯ 35 ವರ್ಷದ ಜಗದೀಶ್ ಉಯಿಕೆ ಇರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಉಯಿಕೆ ಭಯೋತ್ಪಾದನೆ ಕುರಿತ ಪುಸ್ತಕಗಳ ಲೇಖಕ. ಪ್ರಕರಣವೊಂದರಲ್ಲಿ 2021ರಲ್ಲಿ ಈತನನ್ನು ಬಂಧಿಸಲಾಗಿತ್ತು ಎಂದು ಹೇಳಿದರು.

ಉಪ ಪೊಲೀಸ್ ಆಯುಕ್ತ ಶ್ವೇತಾ ಖೇಡ್ಕರ್ ಅವರ ನೇತೃತ್ವದ ತನಿಖೆಯಲ್ಲಿ ಬೆದರಿಕೆ ಇ-ಮೇಲ್‌ಗಳ ಹಿಂದೆ ಉಯಿಕೆ ಇರುವುದು ಗೊತ್ತಾಗಿದೆ. ಈತ ಪ್ರಧಾನಮಂತ್ರಿಗಳ ಕಾರ್ಯಾಲಯ, ರೈಲ್ವೆ ಸಚಿವರು, ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ, ವಿಮಾನಯಾನ ಕಚೇರಿಗಳು ಸೇರಿದಂತೆ ಹಲವು ಸರ್ಕಾರಿ ಸಂಸ್ಥೆಗಳಿಗೆ ಇ-ಮೇಲ್ ಕಳುಹಿಸಿದ್ದ ಎಂದು ತಿಳಿಸಿದ್ದಾರೆ.

ಉಯಿಕೆ ಸದ್ಯ ಪರಾರಿಯಾಗಿದ್ದು, ಬಂಧನಕ್ಕಾಗಿ ವಿಶೇಷ ತಂಡ ರಚನೆ ಆಗಿದೆ ಎಂದು ಮಾಹಿತಿ ನೀಡಿದರು.

ಕಳೆದ 13 ದಿನಗಳಿಂದ 300ಕ್ಕೂ ಹೆಚ್ಚು ಭಾರತೀಯ ವಿಮಾನಯಾನ ಸಂಸ್ಥೆಗಳಿಗೆ ಹುಸಿ ಬಾಂಬ್ ಬೆದರಿಕೆ ಬಂದಿದೆ. ಈ ಪೈಕಿ ಬಹುತೇಕ ಬೆದರಿಕೆಗಳು ಸಾಮಾಜಿಕ ಜಾಲತಾಣಗಳ ಮೂಲಕ ಬಂದಿವೆ.

ಬಾಂಬ್ ಬೆದರಿಕೆ: ಅಪರಿಚಿತ ವ್ಯಕ್ತಿ ವಿರುದ್ಧ ಎಫ್‌ಐಆರ್ ದಾಖಲು

ಮುಂಬೈ (ಪಿಟಿಐ): ಮೂರು ವಿಮಾನಯಾನ ಸಂಸ್ಥೆಗಳ ಸಾಮಾಜಿಕ ಜಾಲತಾಣ 'ಎಕ್ಸ್' ಖಾತೆಗಳಿಗೆ ಬಾಂಬ್ ಬೆದರಿಕೆ ಸಂದೇಶ ಕಳುಹಿಸಿರುವ ಬಗ್ಗೆ ಮುಂಬೈ ಪೊಲೀಸರು ಅಪರಿಚಿತ ವ್ಯಕ್ತಿಯ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ಮಂಗಳವಾರ ತಿಳಿಸಿದ್ದಾರೆ.

ಇಂಡಿಗೊ ಏರ್‌ಲೈನ್ಸ್, ಏರ್ ಇಂಡಿಯಾ ಮತ್ತು ವಿಸ್ತಾರಾ ಸಂಸ್ಥೆಗಳಿಗೆ ಸೋಮವಾರ ಬೆದರಿಕೆ ಸಂದೇಶ ಬಂದಿದ್ದವು. ಪರಿಶೀಲನೆ ನಡೆಸಿದ ನಂತರ ಅವು ಹುಸಿ ಎಂಬುದು ತಿಳಿದುಬಂದಿದೆ ಎಂದು ಸಹಾರ್ ಪೊಲೀಸ್ ಠಾಣೆಯ ಅಧಿಕಾರಿ ತಿಳಿಸಿದ್ದಾರೆ.

ವಿಮಾನಯಾನ ಸಂಸ್ಥೆಗಳಿಗೆ ಬಾಂಬ್ ಬೆದರಿಕೆ ಹಾಕಿರುವ ಸಂಬಂಧ ನಗರ ಪೊಲೀಸರು ಈ ತಿಂಗಳಲ್ಲಿ 14 ಎಫ್‌ಐಆರ್‌ಗಳನ್ನು ದಾಖಲಿಸಿದ್ದಾರೆ. ಛತ್ತೀಸಗಢದ 17 ವರ್ಷದ ವಿದ್ಯಾರ್ಥಿಯನ್ನು ಬಂಧಿಸುವ ಮೂಲಕ ಪೊಲೀಸರು 14 ಪ್ರಕರಣಗಳ ಪೈಕಿ ಒಂದು ಪ್ರಕರಣದ ಮೂಲವನ್ನು ಪತ್ತೆಹಚ್ಚಿದ್ದಾರೆ.

ಯುಎನ್‌ಎಫ್(ಪಿ)ಯ 8 ಸದಸ್ಯರ ಬಂಧನ

ಇಂಫಾಲ್ (ಪಿಟಿಐ): ಮಣಿಪುರದ ಥೌಬಲ್ ಜಿಲ್ಲೆಯಲ್ಲಿ ಭೂಮಿಯ ಗಡಿ ಗುರುತಿಸುವ ವಿಚಾರದಲ್ಲಿ ಸ್ಥಳೀಯರಿಗೆ ಬೆದರಿಕೆ ಒಡ್ಡಿದ ಆರೋಪದ ಮೇಲೆ ನಿಷೇಧಿತ ಯುನೈಟೆಡ್ ನ್ಯಾಷನಲ್ ಲಿಬರೇಷನ್ ಫ್ರಂಟ್ ಆಫ್ ಮಣಿಪುರದ (ಯುಎನ್‌ಎಲ್‌ಎಫ್) 8 ಮಂದಿ ಸದಸ್ಯರನ್ನು ಮಂಗಳವಾರ ಬಂಧಿಸಲಾಗಿದೆ.

ಬಂಧಿತರಿಂದ ಐದು ಎ.ಕೆ.-47 ಬಂದೂಕು, ತಲಾ ಒಂದು ಎಂ-16 ರೈಫಲ್, 9 ಎಂ.ಎಂ ಪಿಸ್ತೂಲ್, ಮದ್ದುಗುಂಡು, 16 ಮೊಬೈಲ್ ಫೋನ್, ವಾಹನಗಳನ್ನು ವಶಪಡಿಸಿ ಕೊಳ್ಳಲಾಗಿದೆ ಎಂದು ಮಣಿಪುರ ಪೊಲೀಸರು ತಿಳಿಸಿದ್ದಾರೆ.

ಸಂಘಟನೆಯ ಸದಸ್ಯರು ಶಸ್ತ್ರಾಸ್ತ್ರಗಳನ್ನು [illegible] ಬಳಸಿಕೊಂಡು, [illegible] ಚಟುವಟಿಕೆಯಲ್ಲಿ ಭಾಗಿಯಾಗಿದ್ದರು ಎಂದು ಪೊಲೀಸರು ಹೇಳಿದ್ದಾರೆ.

ಮಣಿಪುರದಲ್ಲಿ ಹಿಂಸಾಚಾರ ಕೊನೆಗೊಳಿಸುವ ನಿಟ್ಟಿನಲ್ಲಿ ಕಳೆದ ವರ್ಷ ನವೆಂಬರ್ ತಿಂಗಳಲ್ಲಿ ಕೇಂದ್ರ ಸರ್ಕಾರ ಹಾಗೂ ಯುಎನ್‌ಎಲ್‌ಎಫ್ ಸಂಘಟನೆ ನಡುವೆ ಕದನವಿರಾಮ ಒಪ್ಪಂದ ನಡೆದಿತ್ತು. ಇದಾದ ಬಳಿಕವೂ ಸಂಘಟನೆಯ ಸದಸ್ಯರು ಅನೇಕ ಜನರಿಗೆ ಬೆದರಿಕೆ ಒಡ್ಡಿರುವುದು ಆತಂಕ ಸೃಷ್ಟಿಸಿದೆ.

ಕರ್ನಾಟಕ ಸರ್ಕಾರ
ತಾಲೂಕ ಪಂಚಾಯತ ಮುದ್ದೇಬಿಹಾಳ, ವಿಜಯಪುರ ಜಿಲ್ಲೆ

ಅಲ್ಪಾವಧಿ ಟೆಂಡರ ಪ್ರಕಟಣೆ

2024–25 ನೇ ಸಾಲಿಗೆ ತಾಲೂಕ ಪಂಚಾಯತ ಮುದ್ದೇಬಿಹಾಳ ಕಾರ್ಯಾಲಯದಲ್ಲಿ ಖಾಲಿ ಇರುವ 03 ಕಂಪ್ಯೂಟರ ಆಪರೇಟರ್/ಬೆರಳಚ್ಚುಗಾರರು, 03 ಗ್ರೂಪ್ ಡಿ ಸಿಬ್ಬಂದಿಗಳ ಸೇವೆಯನ್ನು ಹೊರಸಂಪನ್ಮೂಲದ ಏಜೆನ್ಸಿ ಮುಖಾಂತರ ಪಡೆಯುವ ಬಗ್ಗೆ ಒಂದು ವರ್ಷದ ಇ-ಟೆಂಡರ್ ಪ್ರಕಟಣೆ.
1. ಟೆಂಡರ್ ಪ್ರಕಟಣೆ: RDPR/2024-25/SE1823 ದಿನಾಂಕ:29.10.2024
2. ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ ರೂ. 5,13,360/– ಗಳು ಮತ್ತು ಇ.ಎಂ.ಡಿ ಮೊತ್ತ ರೂ. 12,900/–.
3) ಟೆಂಡರ್ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ: 08.11.2024 ಸಮಯ ಸಂಜೆ 5.30 ಗಂಟೆಗೆ.
4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 11.11.2024 ಸಮಯ ಬೆಳಿಗ್ಗೆ 11.00 ಗಂಟೆಗೆ.
5) ಆರ್ಥಿಕ ಬಿಡ್ ತೆರೆಯುವ ದಿನಾಂಕ: 13.11.2024 ಬೆಳಿಗ್ಗೆ 11.00 ಗಂಟೆಗೆ. (ಬದಲಾವಣೆಗೆ ಒಳಪಟ್ಟಿರುತ್ತದೆ).
6) ಪ್ರೀ-ಬಿಡ್ ಸಭೆ ನಡೆಯುವ ತಾಂತ್ರಿಕ ಹಾಗೂ ಆರ್ಥಿಕ ಬಿಡ್ ತೆರೆಯುವ ಹಾಗೂ ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ಸ್ಥಳ: ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ, ಮುದ್ದೇಬಿಹಾಳ.. ದೂರವಾಣಿ ಸಂಖ್ಯೆ: 08356–200606,
ಜಿ–ಮೇಲ್: eotpmbl@gmail.com
ಆಸಕ್ತಿ ಹೊಂದಿರುವ ಬಿಡ್‌ದಾರರು ಮಾಹಿತಿಯನ್ನು https://kppps.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ.
ಸಹಿ/– ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ, ಮುದ್ದೇಬಿಹಾಳ
ವಾಸಾಸಂಇ/ವಿಜಯಪುರ/366/ಕೆಎಸ್‌ಎಂಸಿಎ/2024–25

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಮಂಡ್ಯ.
ಜಿಲ್ಲಾ ಅಧಿಕಾರಿಗಳ ಕಛೇರಿ
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ. ಮಂಡ್ಯ ಜಿಲ್ಲೆ.
ಮೌಲಾನಾ ಆಜಾದ್ ಭವನ, ಕೆರೆಯಂಗಳ, ಮಂಡ್ಯ
ದೂರವಾಣಿ: 08232–297240
E-Mail:-dommandya@gmail.com
ಸಂಖ್ಯೆ:ಅಸಂಕಇ(3)/ಟೆಂಡರ್–ಹೊರಸಂಪನ್ಮೂಲ/ಸಿ.ಆರ್–23/2024–25
ದಿನಾಂಕ: 23.10.2024

ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ)

2024–25ನೇ ಸಾಲಿನಲ್ಲಿ ಮಂಡ್ಯ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳು/ವಸತಿ ಶಾಲೆಗಳು/ತಾಲ್ಲೂಕು ಮಾಹಿತಿ ಕೇಂದ್ರಗಳು ಹಾಗೂ ಜಿಲ್ಲಾ ಕಛೇರಿಗೆ ಅವಶ್ಯವಿರುವ ಒಟ್ಟು 73 ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸಲು ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ಅನ್ನು ದ್ವಿ–ಲಕೋಟೆ ಪದ್ಧತಿಯಂತೆ ಆಹ್ವಾನಿಸಲಾಗಿದೆ. (ಪ್ರಕಟಣೆ ಸಂಖ್ಯೆ: MWD/2024-25/SE0059) ಆಸಕ್ತಿಯುಳ್ಳ ಅರ್ಹ ಹೊರಸಂಪನ್ಮೂಲ ಸಂಸ್ಥೆಯವರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ www.kppp.karnataka.gov.in ನಿಂದ ಟೆಂಡರ್ ದಾಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್ ಅನ್ನು ಸಲ್ಲಿಸಬಹುದಾಗಿದೆ. ಟೆಂಡರ್ ಸಲ್ಲಿಸಲು ದಿ: 25.11.2024 ಸಮಯ ಸಂಜೆ 5.00 ಗಂಟೆ ಅಂತಿಮ ದಿನವಾಗಿದ್ದು, ಹೆಚ್ಚಿನ ಮಾಹಿತಿಗಾಗಿ Website:www.kppp.karnataka.gov.in ಅಥವಾ ಜಿಲ್ಲಾಧಿಕಾರಿಗಳ ಕಛೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮಂಡ್ಯ ಜಿಲ್ಲೆ, ಮೌಲಾನಾ ಆಜಾದ್ ಭವನ, ಬೀಡಿ ಕಾಲೋನಿ, ಮಂಡ್ಯ ಜಿಲ್ಲೆ ದೂರವಾಣಿ ಸಂ: 08232–297240 ಅನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.
ಸಹಿ/– ಜಿಲ್ಲಾ ಅಧಿಕಾಕಾರಿ
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮಂಡ್ಯ ಜಿಲ್ಲೆ.
DIPR/ADMDY-398/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಬೆಂಗಳೂರು ದಕ್ಷಿಣ ವಿಭಾಗ, ಅಮೃತನಗರ, ಕೋಣನಕುಂಟೆ ಮುಖ್ಯರಸ್ತೆ, ಸೌದಾಮಿನಿ ಬಡಾವಣೆ, ಬೆಂಗಳೂರು – 560 073.
ಸಂ: ಬಿಬಿಎಂಪಿ/ಕಾಪಾಅ/ಬೆಂದವಿ/ಟೆಂಡ್/06/2024–25 ದಿನಾಂಕ:29.10.2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) (ಏಕ-ಲಕೋಟೆ & ದ್ವಿ-ಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ದಕ್ಷಿಣ ವಿಭಾಗ, ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ವಿವಿಧ ಕಾಮಗಾರಿಗಳಿಗೆ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಬೆಂಗಳೂರು ದಕ್ಷಿಣ ವಿಭಾಗದ ವಿವಿಧ ವಾರ್ಡ್‌ಗಳಲ್ಲಿ ವಿವಿಧ ಸಿವಿಲ್ ಕಾಮಗಾರಿಗಳು.

ಕ್ರ. ಸಂ.	ವಾರ್ಡ್ ನಂ.	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂಗಳಲ್ಲಿ)	ಕಾಮಗಾರಿಗಳ ಸಂಖ್ಯೆ
	ಸಾಮಾನ್ಯ ಪ್ರವರ್ಗಕ್ಕೆ :			
1	ವಾರ್ಡ್ ಸಂಖ್ಯೆ 197–ವಸಂತಪುರ	9.65	24,125	01
2	ವಾರ್ಡ್ ಸಂಖ್ಯೆ 202–ಉತ್ತರಹಳ್ಳಿ	10.00 ರಿಂದ 38.70	25,000 ರಿಂದ 77,400	04
3	ವಾರ್ಡ್ ಸಂಖ್ಯೆ 203–ಸುಬ್ರಮಣ್ಯಪುರ	28.70 & 45.00	57,400 & 90,000	02
4	ವಾರ್ಡ್ ಸಂಖ್ಯೆ 204–ವಸಂತಪುರ	8.70 ರಿಂದ 50.00	21,750 ರಿಂದ1,00,000	04
5	ವಾರ್ಡ್ ಸಂಖ್ಯೆ 206–ಕೋಣನಕುಂಟೆ	15.00 ರಿಂದ 40.70	37,500 ರಿಂದ81,400	04
6	ವಾರ್ಡ್ ಸಂಖ್ಯೆ 208–ಅಂಜನಾಪುರ	23.00 ರಿಂದ 40.70	46,000 ರಿಂದ 81,400	03
7	ವಾರ್ಡ್ ಸಂಖ್ಯೆ 209–ಗೊಟ್ಟಿಗೆರೆ	25.00 ರಿಂದ 40.70	50,000 ರಿಂದ 81,400	03
8	ವಾರ್ಡ್ ಸಂಖ್ಯೆ 210– ಕಾಳೇನ ಅಗ್ರಹಾರ	5.00 ರಿಂದ 58.70	12,500 ರಿಂದ 1,17,400	06
9	ವಾರ್ಡ್ ಸಂಖ್ಯೆ 211– ಬೇಗೂರು	10.00 ರಿಂದ 58.70	25,000 ರಿಂದ1,17,400	03
10	ವಾರ್ಡ್ ಸಂಖ್ಯೆ 212– ನಾಗನಾಥಪುರ	20.00 ರಿಂದ 44.70	50,000 ರಿಂದ 89400	04
11	ವಾರ್ಡ್ ಸಂಖ್ಯೆ 225– ಕೂಡ್ಲು	10.00 ರಿಂದ200.00	25,000 ರಿಂದ 3,00,000	05
	ಪರಿಶಿಷ್ಟ ಜಾತಿ ಪ್ರವರ್ಗಕ್ಕೆ :			
12	ವಾರ್ಡ್ ಸಂಖ್ಯೆ 202–ಉತ್ತರಹಳ್ಳಿ	40.00	40,000	01
13	ವಾರ್ಡ್ ಸಂಖ್ಯೆ 204–ವಸಂತಪುರ	50.00	50,000	01
14	ವಾರ್ಡ್ ಸಂಖ್ಯೆ 206–ಕೋಣನಕುಂಟೆ	25.00	25,000	01
15	ವಾರ್ಡ್ ಸಂಖ್ಯೆ 208–ಅಂಜನಾಪುರ	30.00	30,000	01
16	ವಾರ್ಡ್ ಸಂಖ್ಯೆ 209–ಗೊಟ್ಟಿಗೆರೆ	23.00	23,000	01
17	ವಾರ್ಡ್ ಸಂಖ್ಯೆ 211– ಬೇಗೂರು	10.00	10,000	01
18	ವಾರ್ಡ್ ಸಂಖ್ಯೆ 212– ನಾಗನಾಥಪುರ	10.00	10,000	01
19	ವಾರ್ಡ್ ಸಂಖ್ಯೆ 225– ಕೂಡ್ಲು	20.00 & 38.70	25,000 & 38,7000	02
	ಪರಿಶಿಷ್ಟ ಪಂಗಡ ಪ್ರವರ್ಗಕ್ಕೆ :			
20	ವಾರ್ಡ್ ಸಂಖ್ಯೆ 203–ಸುಬ್ರಮಣ್ಯಪುರ	10.00 & 35.00	12,500 & 35,000	02
21	ವಾರ್ಡ್ ಸಂಖ್ಯೆ 212– ನಾಗನಾಥಪುರ	10.00 & 20.00	12,500 & 25,000	02
	ಒಟ್ಟು ಕಾಮಗಾರಿಗಳ ಸಂಖ್ಯೆ			52

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜಿಓಕೆ ಕೆಪಿಪಿ ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿ ಕೊಳ್ಳಬಹುದು. 2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 21.11.2024 ರ ಸಂಜೆ 4.00 ಗಂಟೆಯವರೆಗೆ 3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 22.11.2024ರ ಸಂಜೆ 4.30 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯಲ್ಲಿ ಕಛೇರಿಯ ಸಮಯದಲ್ಲಿ ಹಾಗೂ ವೆಬ್‌ಸೈಟ್:www.kppp.karnataka.gov.inನಲ್ಲಿ ಲಾಗಿನ್ ಮಾಡಿ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ದಕ್ಷಿಣ ವಿಭಾಗ.

Employees' State Insurance Corporation
(Ministry of Labour & Employment, Govt. of India)
MEDICAL COLLEGE, PGIMSR & HOSPITAL
Sedam Road, Kalaburagi, Karnataka - 585106
Phone: 08472-265546/47/48, E-mail: deanmc-gb.kar@esic.nic.in
No. 532/GLBMC/A/12/12/Contractual Appointment/2024 Dated: 29.10.2024

NOTICE

WALK-IN-INTERVIEW FOR ENGAGEMENT OF ADJUNCT FACULTY

Walk-in Interview for engagement on contract basis for the post of Adjunct Faculty **(One Year/Two Year) (Document Verification & Interview on 05.11.2024)** will be conducted at ESIC Medical College & Hospital, Kalaburagi, For further details please visit our website: www.esic.nic.in/recruitment.
Sd/-
Dean

ಕರ್ನಾಟಕ ಸರ್ಕಾರ – ಕರ್ನಾಟಕ ಅರಣ್ಯ ಇಲಾಖೆ
ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಕಾರ್ಯಯೋಜನೆ ಮತ್ತು ಮೋಜಣಿ, ಶಿವಮೊಗ್ಗ.
ಇ–ಟೆಂಡರ್ ಪ್ರಕಟಣೆ ಸಂಖ್ಯೆ: ಕಾಯೋಮೋಶಿ /ಎ2/RCCP/ಇ–ಟೆಂಡರ್/ಸಿಆರ್–17/2024–25 E-1517441 ದಿನಾಂಕ: 28.10.2024

ಇ–ಪ್ರೊಕ್ಯೂರ್ ಮೆಂಟ್ ಮುಖಾಂತರ ಮರು ಇ–ಟೆಂಡರ್ ಪ್ರಕಟಣೆ

2024–25 ನೇ ಸಾಲಿನಲ್ಲಿ ಶಿವಮೊಗ್ಗ, ಸಾಗರ, ಭದ್ರಾವತಿ, ಶಿವಮೊಗ್ಗ ವನ್ಯಜೀವಿ ವಿಭಾಗ, ಮಂಗಳೂರು, ಕುಂದಾಪುರ ಮತ್ತು ಕುದುರೆಮುಖ ವನ್ಯಜೀವಿ ವಿಭಾಗಗಳಲ್ಲಿನ ವಿವಿಧ ವಲಯಗಳ ಅಧಿಸೂಚಿತ ಅರಣ್ಯ ಪ್ರದೇಶಗಳ "Demarcation of Notified Forests by Construction of RCC Pillars of Specified Dimension at the Given Locations Along the Re-Surveyed Boundaries of Notified Forests' ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಒಟ್ಟು ಅಂದಾಜು ರೂ.108.34 ಲಕ್ಷಗಳ ಒಟ್ಟು 37 ಕಾಮಗಾರಿಗಳಿಗೆ ಮೂರನೇ ಇ–ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕರ್ನಾಟಕ ಲೋಕೋಪಯೋಗಿ ಇಲಾಖೆಯ ಸಕ್ಷಮ ಪ್ರಾಧಿಕಾರದಿಂದ 4ನೇ ದರ್ಜೆಯ / ಮೇಲ್ಪಟ್ಟ ದರ್ಜೆಯ ಪರವಾನಗಿ ಹೊಂದಿರುವ ಆಸಕ್ತ ಅರ್ಹ ಲೋಕೋಪಯೋಗಿ ಗುತ್ತಿಗೆದಾರರು ದಿನಾಂಕ: 12.11.2024 ರ ಸಂಜೆ 04.00 ಗಂಟೆರೊಳಗಾಗಿ ಮರು ಇ–ಟೆಂಡರನ್ನು ಸಲ್ಲಿಸಬಹುದಾಗಿದೆ. ಇ–ಆಡಳಿತ ಕೇಂದ್ರ ಅಥವಾ ವೆಬ್ ಸೈಟ್ (https://kppp.karnataka.gov.in) ನಲ್ಲಿ ಪ್ರಕಟಿಸಿದಂತೆ ವಿವರಗಳನ್ನು ಖಚಿತಪಡಿಸಿಕೊಂಡು ಮರು ಇ–ಟೆಂಡರ್ ನಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ: 08182–250785 ಅಥವಾ ಮೊಬೈಲ್ ಸಂಖ್ಯೆ: 9481990223 ಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.
ಸಹಿ/– (ಜ್ಞಾನಾನಂದ.ಎಸ್) ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಕಾರ್ಯಯೋಜನೆ ಮತ್ತು ಮೋಜಣಿ, ಶಿವಮೊಗ್ಗ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/24–25/158/10/936

ಬೆಂಗಳೂರು ನಗರ ವಿಶ್ವವಿದ್ಯಾನಿಲಯ | BENGALURU CITY UNIVERSITY
ಆಗು ನೀ ಅನಿಕೇತನ
BE BOUNDLESS
ಜ್ಞಾನ ಜ್ಯೋತಿ ಸೆಂಟ್ರಲ್ ಕಾಲೇಜು ಆವರಣ, ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು– 560 001.
Ph.No. 080-22961016 / 22131385 E-Mail ID: registrar@bcu.ac.in
ಸಂಖ್ಯೆ: ಬೆಂ.ನ.ವಿ/ಎ.ಸಿ.ಎ/ಸಂಯೋಜನೆ/2025–26 ದಿನಾಂಕ: 28.10.2024

ಅಧಿಸೂಚನೆ

ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ, 2025–26ನೇ ಶೈಕ್ಷಣಿಕ ಸಾಲಿಗೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ, ಅಂದರೆ ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ (ತಿದ್ದುಪಡಿ) 2015ರಲ್ಲಿ ನಿಗದಿಪಡಿಸಿರುವಂತೆ ಬೆಂಗಳೂರು ನಗರ ಜಿಲ್ಲೆಯ ವಿಧಾನ ಸಭಾ ಕ್ಷೇತ್ರಗಳಾದ ಬಸವನಗುಡಿ, ಬಿ.ಟಿ.ಎಮ್ ಲೇಔಟ್, ಬ್ಯಾಟರಾಯನಪುರ, ಚಿಕ್ಕಪೇಟೆ, ಗಾಂಧಿನಗರ, ಚಾಮರಾಜಪೇಟೆ, ಹೆಬ್ಬಾಳ, ಜಯನಗರ, ಮಲ್ಲೇಶ್ವರಂ, ರಾಜಾಜಿನಗರ, ಶಾಂತಿನಗರ, ಶಿವಾಜಿನಗರ ಮತ್ತು ಯಲಹಂಕ ವ್ಯಾಪ್ತಿಯಲ್ಲಿರುವ ಕಾಲೇಜುಗಳಿಂದ ಮತ್ತು ಶಿಕ್ಷಣ ಸಂಸ್ಥೆಗಳಿಂದ ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 59 ಮತ್ತು 62ರ ಅಡಿಯಲ್ಲಿ ಸಂಖ್ಯೆ: ಬೆಂ.ನ.ವಿ/ಎ.ಸಿ.ಎ/ಸಂಯೋಜನೆ/2025–26 ದಿನಾಂಕ: 28.10.2024 ವಿವಿಧ ರೀತಿಯ ಸಂಯೋಜನೆಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.bcu.ac.in ನೋಡಬಹುದು.

ಕಾಲೇಜುಗಳು ಮತ್ತು ಆಡಳಿತ ಮಂಡಳಿಗಳೂ ಸರ್ಕಾರದ UUCMS ತಂತ್ರಾಂಶದ ವೆಬ್‌ಸೈಟ್ 'https://uucms.karnataka.gov.in' ಆನ್‌ಲೈನ್ ಮುಖಾಂತರ ಮಾತ್ರವೇ ಸಂಯೋಜನಾ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

ಅರ್ಜಿಗಳನ್ನು ದಂಡ ಶುಲ್ಕ ರಹಿತವಾಗಿ ದಿನಾಂಕ : 21–11–2024 ಮತ್ತು ದಿನಾಂಕ : 26–11–2024 ರವರೆಗೆ ರೂ.12,500/– ದಂಡ ಶುಲ್ಕದೊಂದಿಗೆ ಸಲ್ಲಿಸಬಹುದಾಗಿದೆ.
ವಾಸಾಸಂಇ/ಬೆಂ.ನಗರ/2828/ಆಕಾರ್/2024–25 ಕುಲಸಚಿವರು

ಕರ್ನಾಟಕ ಸರಕಾರ
ಕರ್ನಾಟಕ ಅರಣ್ಯ ಇಲಾಖೆ
ಯಲ್ಲಾಪುರ ವಿಭಾಗ, ಯಲ್ಲಾಪುರ
ಕ್ರ.ಸಂ.ಎ4:ಡಿಟಿಎಸ್:ಅಕ್ಟೋಬರ್–24:ಸೇಲ್–1:ಸಿಆರ್–5:2024–25 ದಿನಾಂಕ: 21.10.2024
ಮುಂಡಗೋಡ ಮತ್ತು ಕಿರವತ್ತಿ ಡಿಪೋದಲ್ಲಿ ಮರಮಟ್ಟುಗಳ ಇ–ಟೆಂಡರ್ ಹಾಗೂ ಹರಾಜಿನ ವಿವರವಾದ ಪ್ರಕಟಣೆ
ಕರ್ನಾಟಕ ಅರಣ್ಯ ಕೋಡ್, 1976
ಅನುಬಂಧ XVIII A (ನಿಯಮ 64)

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು(ಅರಣ್ಯ ಸಂಪನ್ಮೂಲ ನಿರ್ವಹಣೆ) ಬೆಂಗಳೂರು ರವರ ಕಛೇರಿ ಪತ್ರ ಸಂಖ್ಯೆ ಅಪ್ರಮುಅಸಂ(ಅಸಂ.ನಿ)ಬಿ3:ಸೇಲ್ಸ್:ಸಿಆರ್–06:2022–23 ದಿನಾಂಕ:–08.10.2024 ಮತ್ತು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ FEE 168 FDP 2017 ದಿನಾಂಕ:14–11–2017 ಮತ್ತು 27–02–2018, ಸರ್ಕಾರದ ಆದೇಶ ಸಂಖ್ಯೆ FEE 25 FDP 2020 ದಿನಾಂಕ:16.08.2022
ಸಮಸ್ತ ಸಾರ್ವಜನಿಕರ ಮಾಹಿತಿಗಾಗಿ ಈ ಮೂಲಕ ಪ್ರಕಟಪಡಿಸುವುದೇನೆಂದರೆ, ಯಲ್ಲಾಪುರದ ಯಲ್ಲಾಪುರ ವಿಭಾಗದ ಮುಂಡಗೋಡ ಮತ್ತು ಕಿರವತ್ತಿ ಸರ್ಕಾರಿ ಮರಮಟ್ಟು ಡಿಪೋದಲ್ಲಿ ದಾಸ್ತಾನು ಮಾಡಿರುವ ಮತ್ತು ಲಾಟ್ ಮಾಡಿರುವ ಮರಮಟ್ಟು ಮತ್ತು ಇತರೆ ಅರಣ್ಯ ಉತ್ಪನ್ನಗಳನ್ನು ಒಂದು ಅಥವಾ ಹೆಚ್ಚು ಸೆಷನ್‌ಗಳಲ್ಲಿ ಎಂಎಸ್‌ಟಿಸಿ ಪೋರ್ಟಲ್ ಮೂಲಕ ಬಹಿರಂಗ ಇ–ಟೆಂಡರ್ ಹಾಗೂ ಹರಾಜು ವಿಧಾನದಲ್ಲಿ ಮಾರಾಟ ಮಾಡಲಾಗುವುದು. ಮರಮಟ್ಟು ಬಹಿರಂಗ ಇ–ಟೆಂಡರ್ ಹಾಗೂ ಹರಾಜನ್ನು ಮುಂಡಗೋಡ ಸರ್ಕಾರಿ ಮರಮಟ್ಟು ಡಿಪೋನಲ್ಲಿ 15.11.2024 ರಿಂದ 16.11.2024, 19.11.2024 (ಎಲ್ಲಾ ನಾಲ್ಕು ಸೆಷನ್‌ಗಳು), 20.11.2024 (1 & 2 ಸೆಷನ್‌ಗಳು) ಮತ್ತು ಕಿರವತ್ತಿ ಸರ್ಕಾರಿ ಮರಮಟ್ಟು ಡಿಪೋನಲ್ಲಿ 21.11.2024, 22.11.2024, 25.11.2024 (ಎಲ್ಲಾ ನಾಲ್ಕು ಸೆಷನ್‌ಗಳು), 26.11.2024 (1 ಸೆಷನ್) ಬೆಳಿಗ್ಗೆ 10.00 ಗಂಟೆಯಿಂದ ಎಲ್ಲಾ ಲಾಟುಗಳ ಬಿಡ್ಡಿಂಗ್ ಪೂರ್ಣಗೊಳ್ಳುವವರೆಗೆ ನಡೆಸಲಾಗುವುದು. ಉಪ ಅರಣ್ಯ ಸಂರಕ್ಷಣಾಧಿಕಾರಿ, ಯಲ್ಲಾಪುರ ವಿಭಾಗ ಯಲ್ಲಾಪುರ ಇವರು ಮಾರಾಟ ನಡೆಸುವ ಅಧಿಕಾರಿಯಾಗಿರುವರು.
ಯಾವುದೇ ಸ್ಪಷ್ಟನೆಗಳಿಗಾಗಿ ಇವರನ್ನು ಸಂಪರ್ಕಿಸಬಹುದು:
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸರ್ಕಾರಿ ಮರಮಟ್ಟು ಡಿಪೋ, ಕಿರವತ್ತಿ:–
acfgtdkwt@gmail.com ದೂರವಾಣಿ: 08419–238534
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸರ್ಕಾರಿ ಮರಮಟ್ಟು ಡಿಪೋ, ಮುಂಡಗೋಡ :–
acfgtdmundgod@gmail.com ದೂರವಾಣಿ: 08301–222152
ಉಪ ಅರಣ್ಯ ಸಂರಕ್ಷಣಾಧಿಕಾರಿ, ಯಲ್ಲಾಪುರ ವಿಭಾಗ, ಯಲ್ಲಾಪುರ:–
yellapurdcf5@yahoo.com, dcfyellapur@gmail.com ದೂರವಾಣಿ: 08419–261273
ಶ್ರೀ ದಾಮೋದರ್, ವ್ಯವಸ್ಥಾಪಕರು, ಎಂಎಸ್‌ಟಿಸಿ ಲಿಮಿಟೆಡ್, ಬೆಂಗಳೂರು. ಮೊಬೈಲ್: 98410022252/ 9535347426/ 9980147110
ಸಹಿ/– ಹರ್ಷ ಭಾನು ಜಿ.ಪಿ. ಭಾ.ಅ.ಸೇ.
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಯಲ್ಲಾಪುರ ವಿಭಾಗ, ಯಲ್ಲಾಪುರ
DIPR/KWR/KSMCA/454/24-25 Dt.28.10.2024

MSIL ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
ಗ್ರಾಹಕರ ಮತ್ತು ಕೈಗಾರಿಕಾ ಉತ್ಪನ್ನಗಳ ವಿಭಾಗ,
ಎಂಎಸ್‌ಐಎಲ್ ಹೌಸ್, ನಂ.36, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು–560 052,
ದೂ.: 22264021/25
ಸಂ: ಎಂಎಸ್‌ಐಎಲ್/ಸಿಐಪಿಡಿ/ಇಓಐ/001/2024–25 ದಿನಾಂಕ: 30.10.2024

ಆಸಕ್ತಿ ವ್ಯಕ್ತಪಡಿಸುವಿಕೆ (ಇಓಐ)

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಇದು ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆಯಾಗಿದ್ದು, ಬಹುವಿಧದ ಸರಕುಗಳ ಮಾರ್ಕೆಟಿಂಗ್ ಮತ್ತು ಸೇವೆಗಳನ್ನು ಒದಗಿಸುವಲ್ಲಿ ತೊಡಗಿಸಿಕೊಂಡಿದೆ. ಕಂಪನಿಯು **"ಕ್ರೀಡಾ ಸಾಮಗ್ರಿಗಳು ಹಾಗೂ ಪರಿಕರಗಳನ್ನು ಸರಬರಾಜು ಮಾಡುವಲ್ಲಿ ತೊಡಗಿಸಿಕೊಂಡಿರುವ ಸರಬರಾಜುದಾರರು/ಉತ್ಪಾದಕರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಸಕ್ತಿ ವ್ಯಕ್ತಪಡಿಸುವಿಕೆಗೆ (ಇಓಐ)ಅರ್ಜಿಗಳನ್ನು"** ಆಹ್ವಾನಿಸಿದೆ. ಇಓಐ ದಸ್ತಾವೇಜುಗಳು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.in ನಲ್ಲಿ ದಿನಾಂಕ: 30.10.2024 ರಿಂದ 15.11.2024 ಮಧ್ಯಾಹ್ನ 3.00 ಗಂಟೆಯವರೆಗೆ ಲಭ್ಯವಿದೆ.
ಸಹಿ/– ಪ್ರಧಾನ ವ್ಯವಸ್ಥಾಪಕರು (ಸಿಐಪಿಡಿ)

ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಆಸ್ತಿ ವಿಭಾಗ, ಕೃಷಿ ನಗರ,
ಧಾರವಾಡ – 580 005. ದೂರವಾಣಿ : 91–836–2214214,
ಇ–ಮೇಲ್ : estateofficer@rediffmail.com
ಸಂಖ್ಯೆ : ಆ.ಅ./ಇ–ಪ್ರೋ.ಎ.ಐ.ಟಿ./2024–25 ದಿನಾಂಕ : 28–10–2024

ಇ-ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ

ಕೃಷಿ ವಿಶ್ವವಿದ್ಯಾಲಯ ಧಾರವಾಡದ ವಿವಿಧ ಆವರಣಗಳ ವಿದ್ಯಾರ್ಥಿಗಳಿಗೆ ಅಖಿಲ ಭಾರತ ಶೈಕ್ಷಣಿಕ ಪ್ರವಾಸಕ್ಕಾಗಿ ಬಾಡಿಗೆ ಆಧಾರದ ಮೇಲೆ (ಲೋಕಲ್ ಟ್ರಾನ್ಸ್‌ಪೋರ್ಟ್) ಲಕ್ಸುರಿ ಬಸ್‌ಗಳನ್ನು (10 ತಂಡಗಳಿಗೆ) ಪೂರೈಕೆ ಮಾಡಲು ಹಾಗೂ ವಸತಿ ವ್ಯವಸ್ಥೆಗಾಗಿ ಅರ್ಹ ಏಜೆನ್ಸಿ / ಸೇವೆಗಳನ್ನು ಒದಗಿಸುವವರಿಂದ ಟೆಂಡರುಗಳನ್ನು ಅಹ್ವಾನಿಸಲಾಗಿದೆ.

ಟೆಂಡರ್ ವೇಳಾ ಪಟ್ಟಿ

1) ವಿಚಾರಣೆಗಳಿಗಾಗಿ ಕೊನೆಯ ದಿನಾಂಕ ಹಾಗೂ ವೇಳೆ : 22–11–2024 ರ ಸಂಜೆ 4.00 ಗಂಟೆ, 2) ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಹಾಗೂ ವೇಳೆ : 27–11–2024 ರ ಸಂಜೆ 4.00 ಗಂಟೆ, 3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ವೇಳೆ : 28–11–2024 ರ ಸಂಜೆ 4.15 ಗಂಟೆಗೆ, 4) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ವೇಳೆ : 29–11–2024 ರ ಸಂಜೆ 4.00 ಗಂಟೆಗೆ.

ಸದರಿ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಂತೆ http://kppp.karnataka.gov.in ಆನ್‌ಲೈನ್ ಮುಖಾಂತರ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳಿಗಾಗಿ ಕಚೇರಿ ಕೆಲಸದ ಸಮಯದಲ್ಲಿ ದೂರವಾಣಿ ಸಂಖ್ಯೆ : 0836 – 221 4214 / 332 ಸಂಪರ್ಕಿಸಬಹುದು. ಇ–ಪ್ರೊಕ್ಯೂರ್‌ಮೆಂಟ್ ನೋಂದಣಿಗಾಗಿ : 080 – 2301 0900 ಸಂಪರ್ಕಿಸುವುದು.
ಸೂಚನೆ : ಟೆಂಡರ್‌ಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ ಪ್ರವಹಿಸುವ ತಿದ್ದುಪಡಿಗಳು / ಮಾರ್ಪಾಡುಗಳನ್ನು ಗುತ್ತಿಗೆದಾರರು ಗಮನಿಸಬೇಕು.
ಸಹಿ/– ಆಸ್ತಿ ಅಧಿಕಾರಿಗಳು,
ಕೃ.ವಿ.ವಿ., ಧಾರವಾಡ.
ಡಿಐಪಿಆರ್/ಧಾರವಾಡ/561/ಮಣಿಪಾಲ್/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆ ದಕ್ಷಿಣ, ದಕ್ಷಿಣ ವಲಯ ಕಚೇರಿ ಸಂಕೀರ್ಣ, 9ನೇ ಮೇನ್, 9ನೇ ಅಡ್ಡರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು–560 011.
ದೂರವಾಣಿ: 080–22975713 ಇ–ಮೇಲ್: eeprojectsouth@gmail.com
ಸಂ: ಕಾಪಾಅಯೋ(ದ)/ಕೆಪಿಪಿ/ಇ–ಪೋರ್ಟಲ್/08/2024–25/2ನೇ ಕರೆ ದಿನಾಂಕ: 29.10.2024

ಟೆಂಡರ್‌ಗಾಗಿ ಆಹ್ವಾನ ಪ್ರಕಟಣೆ (ಐಎಫ್‌ಟಿ)
(ಕರ್ನಾಟಕ ಸರ್ಕಾರದ ಇ–ಪೋರ್ಟಲ್ ಮೂಲಕ ಮಾತ್ರ) (2ನೇ ಕರೆ)

ಕಾರ್ಯಪಾಲಕ ಅಭಿಯಂತರರು, ಯೋಜನೆ–ದಕ್ಷಿಣ, ಬೃಬೆಂಮಪಾ, ಬೆಂಗಳೂರು, ಇವರು ಅರ್ಹ ಟೆಂಡರ್‌ದಾರರಿಂದ ಈ ಕೆಳಕಂಡ ಕಾಮಗಾರಿಗೆ ಕರ್ನಾಟಕ ಸರ್ಕಾರದ ಇ–ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
	ದ್ವಿ ಲಕೋಟೆ ಪದ್ಧತಿ
2	ಬೃಬೆಂಮ ಪಾಲಿಕೆಯ ದಕ್ಷಿಣ ವಿಭಾಗದ ಕ್ಲಿನಿಕಲ್ ವಿಂಗ್‌ನ ರೆಫರಲ್ ಆಸ್ಪತ್ರೆಗಳು ಹಾಗೂ ಹೆರಿಗೆ ಹೋಂಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಅರೆವೈದ್ಯಕೀಯ ಸಿಬ್ಬಂದಿಗಳನ್ನು ಒದಗಿಸುವುದು. **ಟೆಂಡರ್‌ಗಿಟ್ಟ ಅಂದಾಜು ಮೊತ್ತ:** ರೂ. 92,19,432/–. **ಇಎಂಡಿ:** ರೂ. 1,84,400/–. **ಟೆಂಡರ್ ಫಾರಂ ವೆಚ್ಚ ರೂ.** (ಹಿಂತಿರುಗಿಸಲಾಗದ್ದು ಎಲ್ಲಾ ತೆರಿಗೆಗಳು ಸೇರಿದಂತೆ): ಇ–ಪೋರ್ಟಲ್ ಪ್ರಕಾರ. **ಪೂರ್ಣಗೊಳಿಸಬೇಕಾದ ಅವಧಿ** (ಮಳೆಗಾಲ ಸೇರಿದಂತೆ) : 11 ತಿಂಗಳು.

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **14–11–2024ರ ಸಂಜೆ 4:00 ಗಂಟೆಯವರೆಗೆ.** 3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **16–11–2024ರ ಸಂಜೆ 4.30 ಗಂಟೆಗೆ.** 4) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **19–11–2024ರ ಸಂಜೆ 4.30 ಗಂಟೆಗೆ** ಅಥವಾ **ತಾಂತ್ರಿಕ ಬಿಡ್ ಅನುಮೋದನೆ ನಂತರ.**
ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಎಲ್ಲಾ ಕೆಲಸದ ದಿವಸಗಳಂದು ಅಥವಾ ಕೆಪಿಪಿ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ಸಂಪರ್ಕಿಸಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನೆ ದಕ್ಷಿಣ, ಬೃಬೆಂಮಪಾ

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರರು
ಕ.ನೀ.ನಿ.ನಿ ಕಾರ್ಯಾಗಾರ ಮತ್ತು ಯಾಂತ್ರಿಕ ವಿಭಾಗ ನವಿಲುತೀರ್ಥ–591116
ತಾಲ್ಲೂಕ: ಸವದತ್ತಿ ಜಿಲ್ಲಾ: ಬೆಳಗಾವಿ ರಾಜ್ಯ: ಕರ್ನಾಟಕ
Division Mail : eewandmdivision@gmail.com
ಸಂಖ್ಯೆ: ಕಾ&ಯಾಂ/ಪಿ.ಬಿ–1/ಇ–ಟೆಂಡರ್/2024–25/557 ದಿನಾಂಕ: 28/10/2024

ಟೆಂಡರ್ ಪ್ರಕಟಣೆ (ದ್ವಿ ಲಕೋಟೆ ಪದ್ಧತಿಯಲ್ಲಿ)

(ಇಂಡೆಂಟ್ ನಂ. KNNL/2024-25/LI/WORK INDENT 1958)
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್, ಕ.ನೀ.ನಿ.ನಿ ಕಾರ್ಯಾಗಾರ ಮತ್ತು ಯಾಂತ್ರಿಕ ವಿಭಾಗದಡಿಯಲ್ಲಿ 4701 ಲೆಕ್ಕಶೀರ್ಷಿಕೆಯಡಿ (ಇಂಡೆಂಟ್ ನಂ. KNNL/2024-25/LI/WORK INDENT 1958) ಕಾಮಗಾರಿಗೆ ಶೇಕಡವಾರು ಟೆಂಡರನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.
ಟೆಂಡರಗಿಟ್ಟ ಮೊತ್ತ: ರೂ. 107.26 ಕೋಟಿಗಳು.
ಇ.ಎಂ.ಡಿ ಮೊತ್ತ: ರೂ. 1.0726 ಕೋಟಿಗಳು

1) ಟೆಂಡರ್‌ಗೆ ಸಂಬಂಧಿಸಿದ ಪ್ರಶ್ನೆಗಳು / ಸ್ಪಷ್ಟೀಕರಣಗಳಿಗೆ ಕೊನೆಯ ದಿನಾಂಕ: 02/12/2024 ಸಂಜೆ: 5.30 ಘಂಟೆ 2) ಇ–ಪೋರ್ಟಲ್ ಮೂಲಕ ಟೆಂಡರನ್ನು ದಿನಾಂಕ: 07/12/2024 ರಂದು ಸಂಜೆ 4.00 ಘಂಟೆಯವರೆಗೆ ಸಲ್ಲಿಸಬಹುದಾಗಿದೆ. 3) ಪ್ರಿ ಬಿಡ್ ಮೀಟಿಂಗ್ ದಿನಾಂಕ: 21/11/2024 ರಂದು ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ, ಕೇಂದ್ರ ಕಛೇರಿ, 4ನೇ ಮಹಡಿ ಕಾಫಿಬೋರ್ಡ ಬಿಲ್ಡಿಂಗ್, ಬೆಂಗಳೂರು ಇಲ್ಲಿ ಬೆಳಿಗ್ಗೆ 11.30 ಘಂಟೆಗೆ ನಡೆಸಲಾಗುವುದು, 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 09/12/2024.ರಂದು ಬೆಳಿಗ್ಗೆ 11.00 ಘಂಟೆ. 5) ತಾಂತ್ರಿಕ ಬಿಡ್ ಅನುಮೋದನೆ ನಂತರ ಆರ್ಥಿಕ ಬಿಡ್ ತೆರೆಯಲಾಗುವುದು.

ಹಾಗೂ ಕಾಮಗಾರಿಗೆ ಸಂಬಂಧಿಸಿದ ಇತರೆ ವಿವರಗಳನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ https://kppp.karnataka.gov.in ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/–
ಕಾರ್ಯನಿರ್ವಾಹಕ ಇಂಜಿನೀಯರ,
ಕನೀನಿನಿ.ಕಾರ್ಯಾಗಾರ ಮತ್ತು ಯಾಂತ್ರಿಕ ವಿಭಾಗ ನವಿಲುತೀರ್ಥ
ವಾ.ಸಾ.ಇ./ಬೆಳಗಾವಿ/1057/ಮಣಿಪಾಲ್/2024–25

ಕರ್ನಾಟಕ ಸರ್ಕಾರ
(ಆರ್ಥಿಕ ಇಲಾಖೆ)
ವಿತ್ತೀಯ ಕಾರ್ಯನೀತಿ ಸಂಸ್ಥೆ (ವಿಕಾಸಂ)
ಬೆಂಗಳೂರು–ಮೈಸೂರು ರಸ್ತೆ, ಕೆಂಗೇರಿ, ಬೆಂಗಳೂರು – 560060
ದೂ: 080–26971000, ಫ್ಯಾಕ್ಸ್: 080–26971010, ಇ–ಮೇಲ್: director@fpibangalore.gov.in
ಸಂಖ್ಯೆ: FPI/PROC0QUOT(MISC)/3/2024-ADMN ದಿನಾಂಕ: 29.10.2024

ಭಾಷಾಂತರಕಾರರು ಹಾಗೂ ಲಿಪಿ ಪರಿಷ್ಕರಣಾಕಾರರ ಎಂಪ್ಯಾನೆಲ್‌ಮೆಂಟ್‌ಗೆ ಆಸಕ್ತಿ ಅಭಿವ್ಯಕ್ತದ [Expression of Interest (EoI)] ಆಹ್ವಾನ

ಭಾಷಾಂತರಕಾರರು ಹಾಗೂ ಪರಿಷ್ಕರಣಾಕಾರರ ಸೇವೆಗಾಗಿ ಎಂಪ್ಯಾನೆಲ್‌ಮೆಂಟ್‌ಗಾಗಿ ಆಸಕ್ತಿ ಅಭಿವ್ಯಕ್ತವನ್ನು [Expression of Interest (EoI]) ಆಹ್ವಾನಿಸಲಾಗಿದೆ. ಆಸಕ್ತ ಸಂಸ್ಥೆ / ವ್ಯಕ್ತಿಗಳು https://fpibengaluru.karnataka.gov.in ಜಾಲತಾಣದಲ್ಲಿ ಲಭ್ಯವಿರುವ ನಿಗದಿತ ನಮೂನೆಯಲ್ಲಿ ವಿವರಗಳನ್ನು ಸಲ್ಲಿಸಬಹುದಾಗಿದೆ.
ಆಸಕ್ತಿ ಅಭಿವ್ಯಕ್ತವನ್ನು ಅಂಚೆ ಅಥವಾ ಇ–ಮೇಲ್ ಮುಖಾಂತರ ಸಲ್ಲಿಸಲು ಅಂತಿಮ ದಿನಾಂಕ: 20.11.2024 ಆಗಿರುತ್ತದೆ.
ಸಹಿ/– ನಿರ್ದೇಶಕರು
ವಿತ್ತೀಯ ಕಾರ್ಯನೀತಿ ಸಂಸ್ಥೆ
DIPR/CP/YC/2832/2024-25

ನವೋದಯ ವಿದ್ಯಾಲಯ ಸಮಿತಿ
ಶಿಕ್ಷಣ ಸಚಿವಾಲಯದ ಅಡಿಯಲ್ಲಿ ಸ್ವಾಯತ್ತ ಸಂಸ್ಥೆ
ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ, ಭಾರತ ಸರ್ಕಾರ.

2025 ರ ಲ್ಯಾಟರಲ್ ಎಂಟ್ರಿ ಆಯ್ಕೆ ಪರೀಕ್ಷೆಯ ಮೂಲಕ IX ಮತ್ತು XI ನೇ ತರಗತಿಗಳಿಗೆ ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕದ ವಿಸ್ತರಣೆಯ ಅಧಿಸೂಚನೆ

ಆಯ್ಕೆ ಪರೀಕ್ಷೆಯ ಮೂಲಕ ಜವಾಹರ ನವೋದಯ ವಿದ್ಯಾಲಯಗಳಲ್ಲಿ 9 ಮತ್ತು 11 ನೇ ತರಗತಿಯ (2025–26 ನೇ ಸಾಲಿಗೆ) ದಾಖಲಾತಿಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿದೆ. ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು 09 ನೇ ನವೆಂಬರ್ 2024 ರವರೆಗೆ ವಿಸ್ತರಿಸಲಾಗಿದೆ. ಅಭ್ಯರ್ಥಿಗಳು ಕೆಳಗೆ ನೀಡಿರುವ ಲಿಂಕ್‌ಗೆ ಭೇಟಿ ನೀಡುವ ಮೂಲಕ ಉಚಿತವಾಗಿ ಅರ್ಜಿ ಸಲ್ಲಿಸಬಹುದಾಗಿದೆ.
IX ತರಗತಿಗಾಗಿ LEST 2025: https://cbseitms.nic.in/2024/nvsix/
XI ತರಗತಿಗಾಗಿ LEST 2025 : https://cbseitms.nic.in/2024/nvsxi_11/
ನವೋದಯ ವಿದ್ಯಾಲಯ ಸಮಿತಿಯ ಪ್ರಕಟಣೆ

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ
ನಂ. 333/1, 1ನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110.

ಅಲ್ಪಾವಧಿ ಇ-ಹರಾಜು ಪ್ರಕಟಣೆ

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದಲ್ಲಿ ಲಭ್ಯವಿರುವ ಹೆಚ್ಚುವರಿ ನಿಧಿ ರೂ. 501.96 ಕೋಟಿಗಳನ್ನು ಒಂದು ವರ್ಷದ ಅವಧಿಗೆ ಮೀರದಂತೆ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡುವ ಸಲುವಾಗಿ ಅರ್ಹ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ TPA/2024-25/AUCTION28 ರಲ್ಲಿ ಇ–ಹರಾಜು ಪ್ರಕ್ರಿಯೆ ಕೈಗೊಳ್ಳಲಾಗಿದ್ದು, ಆಸಕ್ತಿಯುಳ್ಳ ರಾಷ್ಟ್ರೀಕೃತ ಬ್ಯಾಂಕ್‌ನವರು ದಿನಾಂಕ: 28/10/2024 ರಿಂದ ದಿನಾಂಕ: 11/11/2024 ರ ಸಮಯ ಸಂಜೆ 4.00 ಗಂಟೆ ಒಳಗೆ ಇ–ಹರಾಜು ಪೋರ್ಟಲ್‌ನಲ್ಲಿ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡಬಹುದು ಹಾಗೂ ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ ವಿಳಾಸ: https://kppp.karnataka.gov.in ನಲ್ಲಿ ಪರಿಶೀಲಿಸಿಕೊಳ್ಳಬಹುದು.
ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ
ವಾಸಾಸಂಇ/ವಾಪ್ರ/2830/ಆಕಾರ್/2024–25

ಅಭಿಯಾನ ನಿರ್ದೇಶಕರ ಕಚೇರಿ, ರಾಷ್ಟ್ರೀಯ ಜೀವನೋಪಾಯ ಅಭಿಯಾನ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತ ಮತ್ತು ಜೀವನೋಪಾಯ ಇಲಾಖೆ.
4, ಮೈಸೂರು ಕಟ್ಟಡ, ಜೆ.ಸಿ. ರಸ್ತೆ, ಟೌನ್ ಹಾಲ್ ಹತ್ತಿರ, ಬೆಂಗಳೂರು–560002.
ಇ–ಮೇಲ್: nrlmkarnataka@gmail.com
ಸಂಖ್ಯೆ: KSRLPS/PROC/GEN/23/2024-PRCT-KSRLPS ದಿನಾಂಕ: 29–10–2024

ಟೆಂಡರ್ ಪ್ರಕಟಣೆ

ರಾಷ್ಟ್ರೀಯ ಜೀವನೋಪಾಯ ಅಭಿಯಾನದಡಿ (ರಾಜೀಅ) ಬೆಳಗಾವಿ ಸರಸ್ ಮೇಳ/ಟ್ರೇಡ್ ಫೇರ್ ಅನ್ನು ಬೆಳಗಾವಿಯಲ್ಲಿ ಆಯೋಜಿಸುವ ಸಂಬಂಧ ಇವೆಂಟ್ ಮ್ಯಾನೇಜ್‌ಮೆಂಟ್ ಸೇವೆಗಳಿಗಾಗಿ ಅರ್ಹ ಆಸಕ್ತ ಸಂಸ್ಥೆಗಳಿಂದ ಪ್ರಸ್ತಾವನೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಮೂಲಕ ದಿನಾಂಕ: 28.10.2024 ರಂದು ಆಹ್ವಾನಿಸಿದ್ದು, ಆಸಕ್ತ ಸಂಸ್ಥೆಗಳು/ಬಿಡ್ಡದಾರರು http://www.kppp.karnataka.gov.in ವೆಬ್‌ಸೈಟ್ ಮೂಲಕ ಟೆಂಡರ್‌ಗಳನ್ನು ದಿನಾಂಕ: 27.11.2024 ರ ಸಂಜೆ 5.00 ರೊಳಗಾಗಿ ಸಲ್ಲಿಸಲು ತಿಳಿಸಲಾಗಿದೆ. ಟೆಂಡರ್ ವೇಳಾಪಟ್ಟಿ ಹಾಗೂ ಹೆಚ್ಚಿನ ವಿವರಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ನೀಡಲಾಗಿದೆ. Tender Reference No: KSRLPS/2024-25/SE0029 ಇಲ್ಲಿಂದ ಪಡೆಯಬಹುದಾಗಿದೆ.
ಸಹಿ/–
ಅಪರ ಅಭಿಯಾನ ನಿರ್ದೇಶಕರು
ಸಂಜೀವಿನಿ–ಕೆಎಸ್‌ಆರ್‌ಎಲ್‌ಪಿಎಸ್, ಬೆಂಗಳೂರು.
ವಾ.ಸಾ.ಸಂ.ಇ/ವಾಪ್ರ/2825/ಆಕಾರ್/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರು ಕಚೇರಿ, ರಸ್ತೆ ಮೂಲ ಸೌಕರ್ಯ– ಟ್ರಾಫಿಕ್ ಇಂಜಿನಿಯರಿಂಗ್ ಸೆಲ್, ಎನ್.ಆರ್. ಚೌಕ, ಬೆಂಗಳೂರು–560002
ಸಂ. ಕಾಅ/ಆರ್‌ಐ/ಟೆಕ್/ಟೆಂಡರ್/08/2024–2025 ದಿನಾಂಕ : 28.10.2024

ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಟಿ)
ಅಲ್ಪಾವಧಿ ಟೆಂಡರ್ ಪ್ರಕಟಣೆ (ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲ ಸೌಕರ್ಯ, ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ವಿಭಾಗ ಇವರು ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಟೆಂಡರ್‌ಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ (viz https://kppp.karnataka.gov.in) ಮೂಲಕ ಟೆಂಡರ್‌ಗಳನ್ನು ಸಲ್ಲಿಸಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು
1.	ಟೌನ್ ಹಾಲ್ ನಿಂದ ಸಿರ್ಸಿ ಸರ್ಕಲ್ ವರೆಗೆ ಬಿಜಿಎಸ್ ಮೇಲ್ಸೇತುವೆ ನಿರ್ವಹಣೆ, ಟೆಂಡರ್‌ನ ಅಂದಾಜು ವೆಚ್ಚ ರೂ. **322.00 ಲಕ್ಷಗಳು,** (ಜಿಎಸ್‌ಟಿ ಹೊರತುಪಡಿಸಿ) **ಇಎಂಡಿ ಮೊತ್ತ ರೂ. 4,83,000.00,** (ಇ–ಪಾವತಿ ಮೂಲಕ ರೂ. ಒಂದು ಲಕ್ಷ ಮತ್ತು ಉಳಿದ ಮೊತ್ತ ಬಿಡ್ ಡಾಕ್ಯುಮೆಂಟ್‌ನಲ್ಲಿ ನಿರ್ದಿಷ್ಟಪಡಿಸಿದಂತೆ)
2.	ನಾಯಂಡಹಳ್ಳಿ ಜಂಕ್ಷನ್‌ನಿಂದ ಕೆಆರ್ ಪುರಂ ವರೆಗೆ ಹೊರ ವರ್ತುಲ ರಸ್ತೆಯ ಎಂಇಐ ಮೇಲ್ಸೇತುವೆ ಮತ್ತು ಇತರ ಮೇಲ್ಸೇತುವೆಗಳಿಗೆ ಮೈಕ್ರೋ ಸರ್ಫೇಸಿಂಗ್, ಟೆಂಡರ್‌ನ ಅಂದಾಜು ವೆಚ್ಚ ರೂ. **436.70 ಲಕ್ಷಗಳು,** (ಜಿಎಸ್‌ಟಿ ಹೊರತುಪಡಿಸಿ) **ಇಎಂಡಿ ಮೊತ್ತ ರೂ. 6,55,000.00,** (ಇ–ಪಾವತಿ ಮೂಲಕ ರೂ. ಒಂದು ಲಕ್ಷ ಮತ್ತು ಉಳಿದ ಮೊತ್ತ ಬಿಡ್ ಡಾಕ್ಯುಮೆಂಟ್‌ನಲ್ಲಿ ನಿರ್ದಿಷ್ಟಪಡಿಸಿದಂತೆ)
3.	ಪಾದಚಾರಿ ಸುರಂಗಮಾರ್ಗಗಳ ನಿರ್ವಹಣೆ, ಟೆಂಡರ್‌ನ ಅಂದಾಜು ವೆಚ್ಚ ರೂ. **41.00 ಲಕ್ಷಗಳು,** (ಜಿಎಸ್‌ಟಿ ಹೊರತುಪಡಿಸಿ) **ಇಎಂಡಿ ಮೊತ್ತ ರೂ. 82,000.00** (ಇ–ಪಾವತಿ ಮೂಲಕ).
4.	ಕಾಂಕ್ರೀಟ್ ಪೆಡೆಸ್ಟಲ್ ನಿರ್ಮಾಣ, ಕಾಂಕ್ರೀಟ್ ಗೋಡೆ, ಕಾಂಪೌಂಡ್ ಗೋಡೆ, ಭದ್ರತಾ ಕೊಠಡಿ, ಕೋಲ್ಡ್ ಮಿಕ್ಸ್ ಅಳವಡಿಕೆಗಾಗಿ ಕನ್ವೇಯರ್ ಬೆಲ್ಟ್ ಮತ್ತು ಯಂತ್ರೋಪಕರಣಗಳ ನವೀಕರಣ, ಟೆಂಡರ್‌ನ ಅಂದಾಜು ವೆಚ್ಚ ರೂ. **73.1 ಲಕ್ಷಗಳು,** (ಜಿಎಸ್‌ಟಿ ಹೊರತುಪಡಿಸಿ) **ಇಎಂಡಿ ಮೊತ್ತ ರೂ. 1,47,000.00,** (ಇ–ಪಾವತಿ ಮೂಲಕ ರೂ. ಒಂದು ಲಕ್ಷ ಮತ್ತು ಉಳಿದ ಮೊತ್ತ ಬಿಡ್ ಡಾಕ್ಯುಮೆಂಟ್‌ನಲ್ಲಿ ನಿರ್ದಿಷ್ಟಪಡಿಸಿದಂತೆ)
5.	2023–24ನೇ ಸಾಲಿನಲ್ಲಿ ಆರ್‌ಐ–ಬೊಮ್ಮನಹಳ್ಳಿ ವಿಭಾಗದಲ್ಲಿ ಹೊಸ ಶೋಲ್ಡರ್ ಡ್ರೈನ್‌ಗಳು, ಲೀಡ್ ಆಫ್ ಡ್ರೈನ್‌ಗಳು, ಮೋರಿಗಳು ಮತ್ತು ಇತರ ತುರ್ತು ಕಾಮಗಾರಿಗಳ ನಿರ್ಮಾಣ, ಟೆಂಡರ್‌ನ ಅಂದಾಜು ವೆಚ್ಚ ರೂ. **50.85 ಲಕ್ಷಗಳು,** (ಜಿಎಸ್‌ಟಿ ಹೊರತುಪಡಿಸಿ) **ಇಎಂಡಿ ಮೊತ್ತ ರೂ. 1,02,000.00,** (ಇ–ಪಾವತಿ ಮೂಲಕ ರೂ. ಒಂದು ಲಕ್ಷ ಮತ್ತು ಉಳಿದ ಮೊತ್ತ ಬಿಡ್ ಡಾಕ್ಯುಮೆಂಟ್‌ನಲ್ಲಿ ನಿರ್ದಿಷ್ಟಪಡಿಸಿದಂತೆ)

ಟೆಂಡರ್‌ನ ಕಾರ್ಯಸೂಚಿ: (1) ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಯ ಲಭ್ಯತೆ **ದಿನಾಂಕ: 05.11.2024 ನಂತರ** (2) ಬಿಡ್ ಪೂರ್ವ ಪ್ರಸ್ತಾವನೆ ಸಲ್ಲಿಸಲು ಕೊನೆಯ ದಿನಾಂಕ: **11.11.2024 ರ 15.00 ಗಂಟೆಗಳು,** (3) ಬಿಡ್ ಪೂರ್ವ ಸಭೆ ದಿನಾಂಕ: **11.11.2024, 16.30 ಗಂಟೆಗಳು** (4) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **20.11.2024 ರ 16.00 ಗಂಟೆಗಳು** (5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **21.11.2024 ರ 16.30 ಗಂಟೆಗಳು** (6) ಆರ್ಥಿಕ ಬಿಡ್ ತೆರೆಯುವ ದಿನಾಂಕ : ಟೆಂಡರ್‌ದಾರರಿಗೆ ತಿಳಿಸಲಾಗುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲ ಸೌಕರ್ಯ, ಟ್ರಾಫಿಕ್ ಇಂಜಿನಿಯರಿಂಗ್ ಸೆಲ್, ಬಿಬಿಎಂಪಿ

₹12,850 ಕೋಟಿ ವೆಚ್ಚದ ಯೋಜನೆಗಳಿಗೆ ಶಂಕುಸ್ಥಾಪನೆ: 70 ದಾಟಿದವರಿಗೆ ಆರೋಗ್ಯ ವಿಮೆ

‘ಆಯುಷ್ಮಾನ್’ ವಿಸ್ತರಣೆಗೆ ಮೋದಿ ಚಾಲನೆ

ನವದೆಹಲಿ (ಪಿಟಿಐ): 70 ವರ್ಷ ಮೀರಿದ ಎಲ್ಲರಿಗೂ ಆಯುಷ್ಮಾನ್ ಭಾರತ್ ಯೋಜನೆ ಸೌಲಭ್ಯ ವಿಸ್ತರಣೆಯನ್ನು ಪ್ರಕಟಿಸಿದ ಪ್ರಧಾನಿ ನರೇಂದ್ರ ಮೋದಿ, ₹12,850 ಕೋಟಿ ಮೊತ್ತದ ವಿವಿಧ ಅಭಿವೃದ್ಧಿ ಯೋಜನೆಗಳಿಗೂ ಮಂಗಳವಾರ ಇಲ್ಲಿ ಚಾಲನೆ ನೀಡಿದರು.

ಆಯುರ್ವೇದ ದಿನ ಮತ್ತು ಆಯುರ್ವೇದ ಚಿಕಿತ್ಸೆಯ ಹರಿಕಾರ ಧನ್ವಂತರಿ ಜನ್ಮ ವಾರ್ಷಿಕೋತ್ಸವ ದಿನದಂದೇ, ಈ ಯೋಜನೆಯ ವ್ಯಾಪ್ತಿಯನ್ನು ವಿಸ್ತರಿಸಲಾಗಿದೆ.

ಅಖಿಲ ಭಾರತ ಆಯುರ್ವೇದ ಸಂಸ್ಥೆಯ 2ನೇ ಹಂತವನ್ನು ಪ್ರಧಾನಿ ಉದ್ಘಾಟಿಸಿದರು. ಪಂಚಕರ್ಮ ಆಸ್ಪತ್ರೆ, ಆಯುರ್ವೇದ ಫಾರ್ಮಸಿ, ಕ್ರೀಡಾ ವೈದ್ಯಕೀಯ ಘಟಕ, ಗ್ರಂಥಾಲಯ, ಐಟಿ ಮತ್ತು ನವೋದ್ಯಮ ಚಿಂತನಾ ಘಟಕ, 500 ಆಸನ ಸಾಮರ್ಥ್ಯದ ಸಭಾಂಗಣವನ್ನು ಇದು ಒಳಗೊಂಡಿದೆ.

ಇದೇವೇಳೆ, ಕರ್ನಾಟಕದ ಬೊಮ್ಮಸಂದ್ರ, ನರಸಾಪುರ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಹೊಂದಿರುವ ಇಎಸ್ಐ ಆಸ್ಪತ್ರೆಯನ್ನು ನಿರ್ಮಿಸಲು ಶಂಕುಸ್ಥಾಪನೆ ನೆರವೇರಿಸಿದರು.

ಕರ್ನಾಟಕ ಸೇರಿ ವಿವಿಧ ರಾಜ್ಯಗಳಲ್ಲಿ 21 ತಾಯಿ ಹಾಗೂ ಮಗು ಘಟಕಗಳ ಸ್ಥಾಪನೆ, ಮಧ್ಯಪ್ರದೇಶದಲ್ಲಿ ಐದು ನರ್ಸಿಂಗ್ ಕಾಲೇಜುಗಳ ಸ್ಥಾಪನೆ ಸೇರಿ ವಿವಿಧ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು.

ಆರೋಗ್ಯ ಸೇವೆ ಒದಗಿಸಲು ಡ್ರೋನ್ ತಂತ್ರಜ್ಞಾನ ಬಳಸುವ ಯೋಜನೆಯನ್ನು ದಕ್ಷಿಣ ಭಾರತದ ಆಂಧ್ರಪ್ರದೇಶ, ತೆಲಂಗಾಣ ಸೇರಿ 11 ಏಮ್ಸ್‌ಗಳಲ್ಲಿ ಆರಂಭಿಸಲು ಚಾಲನೆ ನೀಡಲಾಯಿತು. ಮಧ್ಯಪ್ರದೇಶದಲ್ಲಿ ಮೂರು ವೈದ್ಯಕೀಯ ಕಾಲೇಜು ಸ್ಥಾಪನೆ, ಹಿಮಾಚಲ ಪ್ರದೇಶ, ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ಮಧ್ಯಪ್ರದೇಶ, ಅಸ್ಸಾಂ, ನವದೆಹಲಿಯಲ್ಲಿ ಏಮ್ಸ್ ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ‘ಆಯುಷ್ಮಾನ್ ವಯ ವಂದನ ಕಾರ್ಡ್’ ಅನ್ನು ಹಿರಿಯರೊಬ್ಬರಿಗೆ ಹಸ್ತಾಂತರಿಸಿದರು. ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ, ಜಾಧವ್ ಪ್ರತಾಪ್‌ರಾವ್ ಗಣಪತರಾವ್ ಮತ್ತು ಜೆ.ಪಿ.ನಡ್ಡಾ ಭಾಗವಹಿಸಿದ್ದರು –ಪಿಟಿಐ ಚಿತ್ರ

‘ದೆಹಲಿ, ಬಂಗಾಳದಲ್ಲಿ ಯೋಜನೆಗೆ ರಾಜಕೀಯ ಗೋಡೆ’

“ಆಯುಷ್ಮಾನ್ ಭಾರತ್’ ಯೋಜನೆಯನ್ನು ದೆಹಲಿ, ಪಶ್ಚಿಮ ಬಂಗಾಳ ಸರ್ಕಾರಗಳು ರಾಜಕೀಯ ಹಿತಾಸಕ್ತಿಗಾಗಿ ಜಾರಿಗೊಳಿಸಿಲ್ಲ’ ಎಂದು ಪ್ರಧಾನಿ ಟೀಕಿಸಿದರು.

‘ಈ ರಾಜ್ಯಗಳ, 70 ವರ್ಷ ಮೀರಿದ ಎಲ್ಲ ಹಿರಿಯರಲ್ಲಿ ನಾನು ಕ್ಷಮೆ ಕೋರುತ್ತೇನೆ. ನಿಮ್ಮ ನೋವು ಅರ್ಥವಾಗುತ್ತದೆ. ನೆರವಾಗಲು ನನಗೆ ಆಗುತ್ತಿಲ್ಲ’ ಎಂದು ಹೇಳಿದರು.

‘ರಾಜಕೀಯ ಹಿತಾಸಕ್ತಿ ಕಾರಣಕ್ಕೆ ಈ ರಾಜ್ಯಗಳು ತಡೆಯೊಡ್ಡಿವೆ. ಯೋಜನೆಗೆ ಈ ರಾಜ್ಯಗಳಲ್ಲಿ ರಾಜಕೀಯ ಗೋಡೆ ಅಡ್ಡಿಯಾಗಿದೆ. ಹಿರಿಯ ನಾಗರಿಕರಿಗೆ ಸೌಲಭ್ಯವನ್ನು ತಡೆಯುವ ಈ ನಡೆ ಅಮಾನವೀಯವಾದುದು’ ಎಂದು ಮೋದಿ ಟೀಕಿಸಿದರು.

2025ರಲ್ಲಿ ದೆಹಲಿ ಹಾಗೂ 2026ರಲ್ಲಿ ಪಶ್ಚಿಮ ಬಂಗಾಳದಲ್ಲಿ ವಿಧಾನಸಭೆ ಚುನಾವಣೆ ನಡೆಯಬೇಕಾಗಿದೆ.

ಈ ಯೋಜನೆ ಅಪ್ರಾಯೋಗಿಕ ವಾದುದು. ಅರ್ಹತೆ ಮಾನದಂಡಗಳ ಕಾರಣ ದೆಹಲಿಯಲ್ಲಿ ಒಬ್ಬರಿಗೂ ಅನುಕೂಲವಾಗದು. ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಇದು ಅತಿದೊಡ್ಡ ಹಗರಣ
ಸಂಜಯ್ ಸಿಂಗ್, ಎಎಪಿ ರಾಜ್ಯಸಭೆ ಸದಸ್ಯ

‘ಯುವಜನರಿಗೆ ಉದ್ಯೋಗ- ಬದ್ಧ’

ನವದೆಹಲಿ (ಪಿಟಿಐ): ‘ಗರಿಷ್ಠ ಯುವಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಲು ಸರ್ಕಾರ ಬದ್ಧವಾಗಿದ್ದು, ಎಲ್ಲರಿಗೂ ತಮ್ಮ ಕನಸುಗಳನ್ನು ನನಸಾಗಿಸಿಕೊಳ್ಳಲು ಅವಕಾಶ ಕಲ್ಪಿಸುವ ವಾತಾವರಣವನ್ನು ಸೃಷ್ಟಿಸಲಾಗುವುದು’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಇಲ್ಲಿ ನಡೆದ ‘ಉದ್ಯೋಗ ಮೇಳ’ದಲ್ಲಿ 51 ಸಾವಿರಕ್ಕೂ ಅಧಿಕ ಮಂದಿಗೆ ಸರ್ಕಾರಿ ನೌಕರಿಯ ನೇಮಕಾತಿ ಪತ್ರ ವಿತರಿಸಿದ ಅವರು, ‘ಹೊಸ ಉದ್ಯೋಗಗಳನ್ನು ಸೃಷ್ಟಿಸಲು ಅಂತರಿಕ್ಷ, ಸೆಮಿಕಂಡಕ್ಟರ್ ಸೇರಿ ಆಧುನಿಕ ತಂತ್ರಜ್ಞಾನ ಕ್ಷೇತ್ರಗಳಿಗೆ ಸರ್ಕಾರ ಒತ್ತು ನೀಡಲಿದೆ’ ಎಂದರು.

ವಿಡಿಯೊ ಭಾಷಣದಲ್ಲಿ ಅವರು, ‘ಹಿಂದಿನ ಸರ್ಕಾರಗಳಲ್ಲಿ ಸ್ಪಷ್ಟ ನೀತಿ, ಉದ್ದೇಶದ ಕೊರತೆ ಇತ್ತು. ಇದರ ಪರಿಣಾಮ, ಪ್ರವರ್ಧಮಾನಕ್ಕೆ ಬರುತ್ತಿರುವ ಹಲವು ಕ್ಷೇತ್ರಗಳಲ್ಲಿ ದೇಶ ಹಿಂದುಳಿಯಿತು. ತಳಿಯ, ಅಪ್ರಸ್ತುತ ತಂತ್ರಜ್ಞಾನಗಳನ್ನೇ ಇಲ್ಲಿಗೆ ತರಲಾಯಿತು’ ಎಂದು ಹೇಳಿದರು.

‘ಹೊಸ ತಂತ್ರಜ್ಞಾನಗಳಿಂದ ದೇಶ ಪ್ರಗತಿಯಾಗದು ಎಂದು ಮನಸ್ಥಿತಿ ಇತ್ತು. ಈ ಮನಸ್ಥಿತಿಯನ್ನು ದೊಡ್ಡ ಪೆಟ್ಟು ನೀಡಿತು. ಆಧುನಿಕ ತಂತ್ರಜ್ಞಾನ ಆಧಾರಿತ ಉದ್ಯಮಗಳು ಸ್ಥಾಪನೆಯಾಗದೇ ಹೊಸ ಉದ್ಯೋಗಾವಕಾಶ ಸೃಷ್ಟಿಸುವುದು ಕಷ್ಟಸಾಧ್ಯವಾಗಲಿದೆ’ ಎಂದು ಪ್ರತಿಪಾದಿಸಿದರು.

‘ಹಿಂದಿನ ಸರ್ಕಾರಗಳ ಹಳೆಯ ಮನಸ್ಥಿತಿಯಿಂದ ದೇಶವನ್ನು ಹೊರತರಲು ನಾವು ಶ್ರಮವಹಿಸಿದೆವು. ಸರ್ಕಾರದ ನೀತಿ ಮತ್ತು ನಿರ್ಧಾರಗಳು ಈಗ ನೇರವಾಗಿ ಉದ್ಯೋಗಾವಕಾಶ ಸೃಷ್ಟಿಸುವುದಕ್ಕೆ ಪೂರಕವಾಗಿವೆ’ ಎಂದು ಹೇಳಿದರು.

ಎಕ್ಸ್‌ಪ್ರೆಸ್ ವೇಗಳು, ಹೆದ್ದಾರಿ, ಬಂದರು, ರೈಲು ಸಂಪರ್ಕ ಜಾಲ, ವಿಮಾನನಿಲ್ದಾಣಗಳ ನಿರ್ಮಾಣ ಚಟುವಟಿಕೆ ದೇಶದಲ್ಲಿ ಚಾಲ್ತಿಯಲ್ಲಿವೆ ಎಂದ ಅವರು, ‘ಗರಿಷ್ಠ ಸಂಖ್ಯೆಯ ಯುವಜನರಿಗೆ ಉದ್ಯೋಗ ಕಲ್ಪಿಸುವುದು ಈ ಸರ್ಕಾರದ ಬದ್ಧತೆ’ ಎಂದು ಭರವಸೆ ನೀಡಿದರು.

ಅನಿಲ, ನೀರು ಸಂಪರ್ಕ ಕೊಳವೆ ಮಾರ್ಗಗಳನ್ನು ಅಳವಡಿಸುವ ಕಾರ್ಯ ನಡೆದಿದೆ. ಶಾಲೆ, ವಿಶ್ವವಿದ್ಯಾಲಯಗಳ ಆರಂಭವಾಗುತ್ತಿವೆ. ಅಭಿವೃದ್ಧಿ ಕಾರ್ಯಗಳು ಜನರಿಗೆ ಮೂಲಸೌಲಭ್ಯವನ್ನಷ್ಟೇ ಒದಗಿಸುವುದಿಲ್ಲ, ಉದ್ಯೋಗಾವಕಾಶಗಳನ್ನೂ ಸೃಷ್ಟಿಸಲಿವೆ ಎಂದು ಪ್ರತಿಪಾದಿಸಿದರು.

ಕೇಂದ್ರದ ಕ್ರಮಗಳು..

- ಉತ್ಪಾದನೆ ಆಧಾರಿತ ಉತ್ತೇಜನ (ಪಿಎಲ್ಐ) ಯೋಜನೆ ಜಾರಿ
- ಈ ಕ್ರಮದಿಂದ ಬಂಡವಾಳ ಹೂಡಿಕೆ ವೃದ್ಧಿಸಿದ್ದು, ದಾಖಲೆ ಸಂಖ್ಯೆಯಲ್ಲಿ ಅವಕಾಶಗಳ ಸೃಷ್ಟಿ
- 1.5 ಲಕ್ಷ ಸ್ಟಾರ್ಟ್‌ಅಪ್‌ಗಳು ಆರಂಭ. ಯುವಜನರಿಗಾಗಿ ‘ಪಾವತಿಯುಕ್ತ ಇಂಟರ್ನ್‌ಶಿಪ್’ ಯೋಜನೆ ಜಾರಿ
- ಈ ಯೋಜನೆಯ ಮುಂದಿನ ಐದು ವರ್ಷಗಳಲ್ಲಿ ಒಂದು ಕೋಟಿ ಯುವಜನರಿಗೆ ಅವಕಾಶ
- ಭಾರತೀಯ ಯುವಜನರ ವಲಸೆ ಮತ್ತು ಉದ್ಯೋಗಾವಕಾಶ ಬೆಂಬಲಿಸಲು 21 ದೇಶಗಳ ಜೊತೆಗೆ ಒಡಂಬಡಿಕೆ

ನನ್ನ ಸಂಕಲ್ಪದಿಂದ ಲಕ್ಷಾಂತರ ಯುವಜನರಿಗೆ ಸರ್ಕಾರಿ ನೌಕರಿ ದೊರೆತಿದೆ. ಬಿಜೆಪಿ ಆಡಳಿತವುಳ್ಳ ರಾಜ್ಯಗಳಲ್ಲೂ ದೊಡ್ಡ ಸಂಖ್ಯೆಯಲ್ಲಿ ನೇಮಕಾತಿ ಆದೇಶ ನೀಡಲಾಗಿದೆ
ನರೇಂದ್ರ ಮೋದಿ, ಪ್ರಧಾನಿ

ಸುದ್ದಿ 2 ನಿಮಿಷ

ಸೇನಾ ಶ್ವಾನ ‘ಫ್ಯಾಂಟಮ್’ ಸಾವು

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಅಖನೂರ್ ವಲಯದಲ್ಲಿ ಉಗ್ರರ ವಿರುದ್ಧ ಕಾರ್ಯಾಚರಣೆಯಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿದ್ದ ಸೇನೆಯ ನಾಲ್ಕು ವರ್ಷದ ಶ್ವಾನ ‘ಫ್ಯಾಂಟಮ್’ ಗುಂಡಿನ ದಾಳಿಯಿಂದ ಮೃತಪಟ್ಟಿದೆ.

ಸೋಮವಾರ ಭಯೋತ್ಪಾದಕರು ನಡೆಸಿದ ದಾಳಿ ವೇಳೆ ಭಾರತೀಯ ಸೈನಿಕರನ್ನು ರಕ್ಷಿಸುವ ಸಂದರ್ಭದಲ್ಲಿ ಉಗ್ರರು ನಡೆಸಿದ ಗುಂಡಿನ ದಾಳಿಯಿಂದಾಗಿ ತೀವ್ರವಾಗಿ ಗಾಯಗೊಂಡಿತ್ತು. 2020ರ ಮೇ ತಿಂಗಳಲ್ಲಿ ಜನಿಸಿದ ಫ್ಯಾಂಟಮ್ ಶ್ವಾನವು ಬೆಲ್ಜಿಯಂನ ಮಾಲಿನಾಯ್ಸ್ ತಳಿಯಾಗಿದೆ. 2022ರ ಆಗಸ್ಟ್ ತಿಂಗಳಲ್ಲಿ ಸೇನೆಗೆ ಸೇರಿತ್ತು.

‘ಅತ್ಯುನ್ನತ ಮಟ್ಟದ ತರಬೇತಿ ಪಡೆದಿದ್ದ ಫ್ಯಾಂಟಮ್, ದಟ್ಟವಾದ ಕಾಡಿನಲ್ಲಿ ಉಗ್ರರನ್ನು ಪತ್ತೆಹಚ್ಚಿ ಸೈನಿಕರಿಗೆ ನೆರವಾಗುವ ಮೂಲಕ ಕಾರ್ಯಾಚರಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿತ್ತು. ಸೋಮವಾರ ಸೇನೆಯ ಕಾರ್ಯಾಚರಣೆ ಆರಂಭಿಸಿದ ವೇಳೆ ಸ್ಫೋಟಕಗಳನ್ನು ಪತ್ತೆಹಚ್ಚಿ, ಉಗ್ರರು ಅಡಗಿದ್ದ ಮಾರ್ಗವನ್ನು ಪತ್ತೆಹಚ್ಚಿತು, ತಕ್ಷಣವೇ ಸೈನಿಕರು ಸ್ಥಳವನ್ನು ಸುತ್ತುವರಿದರು. ಕಾರ್ಯಾಚರಣೆ ನಡೆಸುವ ವೇಳೆ ಉಗ್ರರ ಗುಂಡಿನ ದಾಳಿಯಿಂದ ಗಾಯಗೊಂಡು, ಪ್ರಾಣ ಕಳೆದುಕೊಂಡಿದೆ. ಸೈನಿಕರ ಉಳಿಸಿ, ಬಲಿದಾನ ಮಾಡಿದೆ’ ಎಂದು ಸೇನೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪೂರ್ವ ಲಡಾಖ್: ಅಂತಿಮ ಹಂತಕ್ಕೆ ಸೇನಾ ವಾಪಸಾತಿ ಪ್ರಕ್ರಿಯೆ

ನವದೆಹಲಿ (ಪಿಟಿಐ): ಪೂರ್ವ ಲಡಾಖ್‌ನ ಡೆಮ್‌ಚೋಕ್, ಡೆಪ್ಸಾಂಗ್ ಠಾಣಗಳಿಂದ ಸೇನೆಗಳನ್ನು ವಾಪಸು ಕರೆಯಿಸಿಕೊಳ್ಳುವ ಪ್ರಕ್ರಿಯೆ ‘ಅಂತಿಮ ಹಂತದಲ್ಲಿದೆ’ ಎಂದು ಮೂಲಗಳು ತಿಳಿಸಿವೆ.

ಈ ಪ್ರಕ್ರಿಯೆ ಅಕ್ಟೋಬರ್ 28–29ರ ವೇಳೆಗೆ ಪೂರ್ಣಗೊಳ್ಳಲಿದೆ ಎಂದು ಇತ್ತೀಚೆಗೆ ಸೇನೆಯ ಮೂಲಗಳು ತಿಳಿಸಿದ್ದವು.

ಮೊದಲು ರಾಜತಾಂತ್ರಿಕ ಹಂತದಲ್ಲಿ ನಂತರ ಸೇನಾ ಹಂತದಲ್ಲಿ ಮಾತುಕತೆಗಳು ನಡೆದಿದ್ದವು. ಅಂತಿಮವಾಗಿ ಸೇನೆಯ ಕಮಾಂಡರ್ ಹಂತದ ಮಾತುಕತೆ ಬಳಿಕ ಒಡಂಬಡಿಕೆಗೆ ಸಹಿ ಹಾಕಲಾಗಿತ್ತು.

ಪೂರ್ವ ಲಡಾಖ್‌ನಲ್ಲಿ 2020ರ ಏಪ್ರಿಲ್ ಅವಧಿಯಲ್ಲಿದ್ದ ಸ್ಥಿತಿಯ ಮರುಸ್ಥಾಪನೆ ಒಪ್ಪಂದದ ಗುರಿ. ಗಾಲ್ವಾನ್ ಕಣಿವೆಯಲ್ಲಿ ಜೂನ್ 2020ನಲ್ಲಿ ಘರ್ಷಣೆಯಾದ ಬಳಿಕ ಅಲ್ಲಿ ಅನಿಶ್ಚಿತ ಸ್ಥಿತಿ ಮೂಡಿತ್ತು.

ನ್ಯಾಯಾಧೀಶರ ಜೊತೆ ‘ಅನುಚಿತ’ ವರ್ತನೆ

ಘರ್ಷಣೆಗೆ ಸಂಬಂಧಿಸಿದ ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೆಯಾಗಿವೆ. ಕಾನ್‌ಸ್ಟೆಬಲ್ ಒಬ್ಬರು ಕುರ್ಚಿಯನ್ನು ಎತ್ತಿಹಿಡಿದಿರುವ ದೃಶ್ಯವೂ ಇದೆ. ನ್ಯಾಯಾಲಯದ ಆವರಣದಲ್ಲಿ ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿದೆ.

ವಕೀಲರ ಚದುರಿಸಲು ಲಾಠಿ ಪ್ರಹಾರ

ಗಾಜಿಯಾಬಾದ್: ಇಲ್ಲಿನ ಜಿಲ್ಲಾ ಮತ್ತು ಸೆಷನ್ಸ್ ಕೋರ್ಟ್‌ನಲ್ಲಿ ಮಂಗಳವಾರ ನ್ಯಾಯಾಧೀಶರ ಜೊತೆಗೆ ‘ಅನುಚಿತವಾಗಿ ವರ್ತಿಸಿದ’ ವಕೀಲರನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿದರು.

ನಿರೀಕ್ಷಣಾ ಜಾಮೀನು ಅರ್ಜಿಯ ವಿಚಾರಣೆಗೆ ಸಂಬಂಧಿಸಿದಂತೆ ಕೆಲವು ವಕೀಲರು ಮತ್ತು ನ್ಯಾಯಾಧೀಶರ ನಡುವೆ ಆರಂಭವಾದ ವಾಗ್ವಾದ ಈ ಘಟನೆಗೆ ಕಾರಣವಾಗಿದೆ.

ಮೂಲಗಳ ಪ್ರಕಾರ, ಪೊಲೀಸರು ಲಾಠಿ ಪ್ರಹಾರ ಮಾಡಿದ್ದಕ್ಕೆ ಆಕ್ರೋಶಗೊಂಡ ವಕೀಲರು, ಕೋರ್ಟ್ ಆವರಣದ ಬಳಿಯೇ ಇದ್ದ ಪೊಲೀಸ್ ಉಪಠಾಣೆಗೆ ಬೆಂಕಿ ಹಚ್ಚಿದ್ದಾರೆ.

‘ವಕೀಲ ನಹರ್ ಸಿಂಗ್ ಯಾದವ್ ನೇತೃತ್ವದ ವಕೀಲರು, ಜಿಲ್ಲಾ ನ್ಯಾಯಾಧೀಶ ಅನಿಲ್ ಕುಮಾರ್ ಅವರ ಜೊತೆಗೆ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಆದ್ಯತೆ ಮೇರೆಗೆ ಪರಿಗಣಿಸಬೇಕು ಅಥವಾ ಇತರೆ ಪೀಠಕ್ಕೆ ವರ್ಗಾಹಿಸಬೇಕು ಎಂದು ಆಗ್ರಹಪಡಿಸಿದ್ದರು’ ಎಂದು ಮೂಲಗಳು ತಿಳಿಸಿವೆ.

ತಕ್ಷಣ ವಿಚಾರಣೆ ನಡೆಸಲು ನಿರಾಕರಿಸಿದ ನ್ಯಾಯಾಧೀಶರು, ‘ಪಟ್ಟಿ ಮಾಡಿರುವ ಕ್ರಮದಲ್ಲಿಯೇ ಅರ್ಜಿಗಳ ವಿಚಾರಣೆ ನಡೆಸಲಾಗುವುದು ಎಂದು ತಿಳಿಸಿದರು. ಇದು ವಾಗ್ವಾದಕ್ಕೆ ಕಾರಣವಾಯಿತು. ಪರಿಸ್ಥಿತಿಯು ಕೈಮೀರುತ್ತಿದೆ ಎನಿಸಿದಾಗ ನ್ಯಾಯಾಧೀಶರೇ ಪೊಲೀಸರನ್ನು ಕರೆಸಿದ್ದಾರೆ.

ಕೋರ್ಟ್ ಆವರಣವನ್ನು ಪ್ರವೇಶಿಸಿದ ಪೊಲೀಸರು, ವಾಗ್ವಾದ ನಡೆಸುತ್ತಿದ್ದ ವಕೀಲರನ್ನು ಚದುರಿಸಲು ಮುಂದಾದರು. ಆದರೆ, ‘ಪೊಲೀಸರು ನಮ್ಮ ಮೇಲೆಯೇ ಹಲ್ಲೆ ನಡೆಸಿದರು’ ಎಂದು ವಕೀಲರು ದೂರಿದ್ದಾರೆ.

ಲಾಠಿ ಪ್ರಹಾರ ಮಾಡಿದ್ದನ್ನು ಖಂಡಿಸಿದ್ದು, ಪೊಲೀಸರ ವಿರುದ್ಧ ಕ್ರಮಕ್ಕೆ ವಕೀಲರ ಸಂಘವು ಒತ್ತಾಯಿಸಿದೆ. ಜಿಲ್ಲಾ ನ್ಯಾಯಾಧೀಶರ ಕಲಾಪವನ್ನು ಬಹಿಷ್ಕರಿಸುವುದಾಗಿಯೂ ತಿಳಿಸಿದೆ.

ಸರಯೂ ನದಿ ದಡದಲ್ಲಿ ಬೆಳಗಲಿವೆ 28 ಲಕ್ಷ ದೀಪ, 1.5 ಲಕ್ಷ ‘ಗೋ ದೀಪ’

ಅಯೋಧ್ಯೆಯಲ್ಲಿ ದೀಪ ಸಂಭ್ರಮ

ಲಖನೌ/ಅಯೋಧ್ಯೆ (ಪಿಟಿಐ): ಅಯೋಧ್ಯೆಯ ರಾಮಮಂದಿರದಲ್ಲಿ ರಾಮನ ಮೂರ್ತಿ ಪ್ರತಿಷ್ಠಾಪನೆ ಬಳಿಕ ನಡೆಯುತ್ತಿರುವ ಮೊದಲ ದೀಪಾವಳಿಯ ಆಚರಣೆಯನ್ನು ಅದ್ದೂರಿಯಾಗಿ ಹಮ್ಮಿಕೊಳ್ಳಲಾಗಿದ್ದು, ಹಬ್ಬದಂದು ನಗರದಲ್ಲಿ 28 ಲಕ್ಷ ದೀಪಗಳನ್ನು ಬೆಳಗಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಯೋಧ್ಯೆಯಲ್ಲಿ ಎಂಟನೇ ದೀಪೋತ್ಸವಕ್ಕೆ ಅಂತಿಮ ಹಂತದ ಸಿದ್ಧತೆಗಳು ನಡೆಯುತ್ತಿವೆ. ಪೊಲೀಸ್ ಮತ್ತು ಪೌರಾಡಳಿತವು ಪೊಲೀಸ್ ಮಹಾ ನಿರ್ದೇಶಕ ಪ್ರಶಾಂತ್ ಕುಮಾರ್ ನೇತೃತ್ವದಲ್ಲಿ ಭದ್ರತಾ ಕ್ರಮಗಳನ್ನು ಕೈಗೊಂಡಿವೆ.

‘ದೀಪೋತ್ಸವದ ಅಂತಿಮ ಸಿದ್ಧತೆಗಳು ನಡೆಯುತ್ತಿವೆ. ದೀಪಗಳನ್ನು ಇಡುವ ಕಾರ್ಯ ನಡೆಯುತ್ತಿದೆ. ಲೇಸರ್, ಧ್ವನಿ ಮತ್ತು ಡ್ರೋನ್ ಪ್ರದರ್ಶನದ ತಾಲೀಮು ನಡೆಯುತ್ತಿದೆ,’ ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಕಚೇರಿ ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದೆ.

ದೀಪೋತ್ಸವದಲ್ಲಿ ಪವಿತ್ರ ನಗರಿಯ ಧಾರ್ಮಿಕ, ಸಾಂಪ್ರದಾಯಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ ಪ್ರದರ್ಶಿಸುವ ಉದ್ದೇಶವಿದೆ. ಇದಕ್ಕಾಗಿ ಮ್ಯಾನ್ಮಾರ್, ನೇಪಾಳ, ಥಾಯ್ಲೆಂಡ್, ಮಲೇಷ್ಯಾ, ಕಾಂಬೋಡಿಯಾ ಕಲಾವಿದರ ಕಲಾ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಉತ್ತರಾಖಂಡದ ರಾಮಲೀಲಾ ಪ್ರದರ್ಶನ, ವಿವಿಧ ರಾಜ್ಯಗಳ ಕಲಾವಿದರ ಕಲಾಪ್ರದರ್ಶನವೂ ಇರಲಿದೆ. ಹಬ್ಬದ ವೇಳೆ ಪಶು ಸಂಗೋಪನಾ ಇಲಾಖೆಯು 1.5 ಲಕ್ಷ ‘ಗೋ ದೀಪಗಳನ್ನು’ ಹಚ್ಚುವುದಾಗಿ ಹೇಳಿದೆ.

ಪರಿಸರ ಕಾಪಾಡುವ ದೃಷ್ಟಿಯಿಂದ ಹಾಗೂ ಕಲೆ ಉಂಟಾಗುವುದನ್ನು ತಪ್ಪಿಸಲು ವಿಶೇಷ ದೀಪಗಳನ್ನು ಬೆಳಗಲಾಗುತ್ತಿದೆ. ಅ.30ರಂದು 30,000ಕ್ಕೂ ಹೆಚ್ಚಿನ ಸ್ವಯಂಸೇವಕರು ಅಲಂಕಾರ ಕೆಲಸಕ್ಕೆ ನೆರವಾಗಲಿದ್ದಾರೆ. ಪೂರ್ಣ ಕಾರ್ಯಕ್ರಮದ ನೇರ ಪ್ರಸಾರಕ್ಕೆ ಸರ್ಕಾರ ವ್ಯವಸ್ಥೆ ಮಾಡಿದೆ. ಅಯೋಧ್ಯೆಯ ಹಲವು ಕಡೆ ಕಾರ್ಯಕ್ರಮ ವೀಕ್ಷಣೆಗೆ ಎಲ್‌ಇಡಿ ಪರದೆಗಳನ್ನು ಅಳವಡಿಸಲಾಗುತ್ತಿದೆ. ಇಡೀ ನಗರವನ್ನು ಹೂ ಹಾಗೂ ವಿದ್ಯುತ್ ದೀಪಗಳಿಂದ ಕಂಗೊಳಿಸುವಂತೆ ಮಾಡಲಾಗುವುದು.

ದೀಪಾವಳಿ ಹಬ್ಬದ ಸಂದರ್ಭ ಅಯೋಧ್ಯೆಯ ‘ರಾಮ್ ಕಿ ಪೈಡಿ’ಗೆ ದೀಪಾಲಂಕಾರ ಮಾಡಲಾಗಿದೆ

ಬಾಲರಾಮ ಟೆಂಟ್‌ನಲ್ಲಿ ಇರುವುದನ್ನು ಕಂಡು ಬೇಸರವಾಗುತ್ತಿತ್ತು. ಆದರೆ, ಈಗ ಮಂದಿರದಿಂದಲೇ ರಾಮ ಪಾಲ್ಗೊಳ್ಳುತ್ತಿರುವುದು ಹರ್ಷ ತಂದಿದೆ
ಮಹಂತ್ ರಾಜು ದಾಸ್
ಹನುಮಾನ್‌ಗರಿ ದೇವಸ್ಥಾನದ ಅರ್ಚಕ

‘ದೀಪಾವಳಿ ಐತಿಹಾಸಿಕವಾಗಲಿ’

ನವದೆಹಲಿ (ಪಿಟಿಐ): ಈ ಬಾರಿಯ ದೀಪಾವಳಿ ಐತಿಹಾಸಿಕ ಎನಿಸಿಕೊಳ್ಳಲಿದೆ. 500 ವರ್ಷಗಳ ಕಾಯುವಿಕೆ ನಂತರ ಬಾಲರಾಮನ ಜನ್ಮಸ್ಥಳ ಅಯೋಧ್ಯೆಯಲ್ಲಿ ಹಬ್ಬದ ದಿನ ಅಸಂಖ್ಯ ದೀಪಗಳು ಬೆಳಗಲಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

‘ರಾಮ ಮನೆಗೆ ಮರಳಿದ ದಿನವೇ ದೀಪಾವಳಿ. ಆದರೆ, ರಾಮನ ಬರುವಿಕೆಯ ನಿರೀಕ್ಷೆ 14 ವರ್ಷಗಳಲ್ಲಿ ಈಡೇರಲಿಲ್ಲ, ಬದಲಿಗೆ 500 ವರ್ಷ ಕಾಯಬೇಕಾಯಿತು’ ಎಂದಿದ್ದಾರೆ.

ಸಲ್ಮಾನ್‌ಗೆ ಬೆದರಿಕೆ: ಬಂಧನ

ನೋಯ್ಡಾ (ಪಿಟಿಐ): ಲಾರೆನ್ಸ್ ಬಿಷ್ಣೋಯಿ ಸೋದರ ಎಂದು ಹೇಳಿಕೊಂಡು ಬಾಲಿವುಡ್ ನಟ ಸಲ್ಮಾನ್ ಖಾನ್‌ಗೆ ಬೆದರಿಕೆ ಹಾಕಿ, ₹10 ಕೋಟಿ ಹಣಕ್ಕೆ ಬೇಡಿಕೆಯಿಟ್ಟಿದ್ದ ಆರೋಪದ ಮೇಲೆ ವ್ಯಕ್ತಿಯೊಬ್ಬನನ್ನು ಪೊಲೀಸರು ಬಂಧಿಸಿದ್ದಾರೆ.

ಕಾರ್ಪೆಂಟರ್ ಆಗಿರುವ ಉತ್ತರ ಪ್ರದೇಶದ ಬರೇಲಿ ಜಿಲ್ಲೆಯ ತೈಯಬ್ ಅನ್ಸಾರಿ ಎಂಬಾತನನ್ನು ಆತ ಕೆಲಸ ಮಾಡುತ್ತಿದ್ದ ನಿರ್ಮಾಣ ಹಂತದ ಮನೆಯಿಂದ ಸೋಮವಾರ ರಾತ್ರಿ ಬಂಧಿಸಲಾಗಿದೆ. ಸೆಕ್ಟರ್ 39 ಪೊಲೀಸ್ ಠಾಣೆಯ ಉಸ್ತುವಾರಿ ಇನ್‌ಸ್ಪೆಕ್ಟರ್ ಜಿತೇಂದ್ರ ಕುಮಾರ್ ಸಿಂಗ್ ಈ ಬಗ್ಗೆ ಮಾಹಿತಿ ನೀಡಿದ್ದಾರೆ.


ಸಲ್ಮಾನ್ ಖಾನ್

ನೋಯ್ಡಾ, ಮುಂಬೈ ಪೊಲೀಸರ ಜಂಟಿ ತಂಡವು ಸೆಕ್ಟರ್ 92ರಲ್ಲಿ ನಿರ್ಮಾಣ ಹಂತದಲ್ಲಿದ್ದ ಮನೆಯಿಂದ ಅನ್ಸಾರಿಯನ್ನು ಬಂಧಿಸಿದರು. ಕೃತ್ಯಕ್ಕೆ ಬಳಸಿದ್ದ ಮೊಬೈಲ್ ಅನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಸಿಂಗ್ ತಿಳಿಸಿದ್ದಾರೆ.

ಸಿಕ್ಕಿಬಿದ್ದಿದ್ದು ಹೇಗೆ?

ಮುಂಬೈ ಪೊಲೀಸರ ‘ಸಹಾಯವಾಣಿ’ ಸಂಖ್ಯೆಯನ್ನು ಇಂಟರ್‌ನೆಟ್‌ನಿಂದ ಪಡೆದು ಆ ಸಂಖ್ಯೆಗೆ ಬೆದರಿಕೆ ಕರೆ ಮಾಡಿದ್ದಾಗಿ ತೈಯಬ್ ತಪ್ಪೊಪ್ಪಿಕೊಂಡಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ.

ಕಳೆದ ಸೋಮವಾರ ರಾತ್ರಿ ಮುಂಬೈನ ಬಾಂದ್ರಾ ಪೊಲೀಸರು ನೋಯ್ಡಾ ಪೊಲೀಸರನ್ನು ಸಂಪರ್ಕಿಸಿ ಲಾರೆನ್ಸ್ ಬಿಷ್ಣೋಯಿ ಸೋದರ ಅನ್ಮೋಲ್ ಬಿಷ್ಣೋಯಿ ಸಲ್ಮಾನ್ ಖಾನ್‌ಗೆ ಬೆದರಿಕೆ ಹಾಕಿರುವ ಬಗ್ಗೆ ತಿಳಿಸಿದ್ದರು. ಅಲ್ಲದೇ, ಫೋನ್‌ನ ಲೊಕೇಷನ್ ನೋಯ್ಡಾ ಎಂದು ತೋರಿಸುತ್ತಿದೆ. ಬಾಂದ್ರಾದ ಸಹಾಯಕ ಸಬ್ ಇನ್‌ಸ್ಪೆಕ್ಟರ್ ತಮ್ಮ ತಂಡದೊಂದಿಗೆ ನೋಯ್ಡಾಗೆ ಬಂದಿರುವುದಾಗಿ ನೋಯ್ಡಾ ಪೊಲೀಸರಿಗೆ ಮುಂಬೈ ಪೊಲೀಸರು ತಿಳಿಸಿದ್ದರು.

ಒಕ್ಕೂಟ ರಾಷ್ಟ್ರ ನಿರ್ಮಾತೃರ್ಯ ಕೊಡುಗೆ ಅಳಿಸಲು ಯತ್ನ

‘ಪಟೇಲರಿಗೆ ‘ಭಾರತ ರತ್ನ’ ದೊರಕದಂತೆ ಪಿತೂರಿ’

ನವದೆಹಲಿ (ಪಿಟಿಐ): ಭಾರತವನ್ನು ಒಕ್ಕೂಟ ರಾಷ್ಟ್ರವನ್ನಾಗಿ ಮಾಡಿದ ಸರ್ದಾರ್ ವಲ್ಲಭಭಾಯ್ ಪಟೇಲ್ ಅವರ ಕೊಡುಗೆಯನ್ನು ಅಳಿಸಿಹಾಕುವ ಯತ್ನಗಳು ನಡೆದಿದ್ದವು. ಅಲ್ಲದೆ, ದೀರ್ಘಕಾಲದವರೆಗೆ ಅವರಿಗೆ ಭಾರತ ರತ್ನ ಪ್ರಶಸ್ತಿ ದೊರಕದಂತೆ ಪಿತೂರಿ ಮಾಡಲಾಗಿತ್ತು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಂಗಳವಾರ ಆರೋಪ ಮಾಡಿದ್ದಾರೆ.


ಅಮಿತ್ ಶಾ

ಸರ್ದಾರ್ ಪಟೇಲರ ಜಯಂತಿ ಪ್ರಯುಕ್ತ ಇಲ್ಲಿನ ಮೇಜರ್ ಧ್ಯಾನ್‌ಚಂದ್ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ‘ಏಕತೆಗಾಗಿ ಓಟ’ (ರನ್ ಫಾರ್ ಯುನಿಟಿ) ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಹರಿದು ಹಂಚಿಹೋಗಿದ್ದ 550 ಸಂಸ್ಥಾನಗಳನ್ನು ದೂರದೃಷ್ಟಿ ಹಾಗೂ ಚತುರತೆಯಿಂದ ಒಗ್ಗೂಡಿಸಿ ಏಕೀಕೃತ ಭಾರತವನ್ನು ಸರ್ದಾರರು ನಿರ್ಮಾಣ ಮಾಡಿದ್ದರು ಎಂದರು.

‘ಲಕ್ಷದ್ವೀಪ ದ್ವೀಪ ಸಮೂಹಗಳಾಗಲೀ, ಜುನಾಗಢವಾಗಲೀ ಅಥವಾ ಹೈದರಾಬಾದ್ ಆಗಲೀ ಇಂದು ಭಾರತದ ಅವಿಭಾಜ್ಯ ಅಂಗಗಳಾಗಿವೆ ಎಂದರೆ ಅದಕ್ಕೆ ಸರ್ದಾರ್ ಪಟೇಲರೇ ಕಾರಣ. ಅಷ್ಟಾಗಿಯೂ, ಕೆಲವು ಶಕ್ತಿಗಳು ಸರ್ದಾರರ ಕೊಡುಗೆಗಳನ್ನು ಅಳಿಸಿಹಾಕುವ ಯತ್ನ ನಡೆಸಿದ್ದವು. ಭಾರತರತ್ನ ಗೌರವವನ್ನು ಉದ್ದೇಶಪೂರ್ವಕವಾಗಿಯೇ ಬಹುವರ್ಷಗಳವರೆಗೆ ನೀಡದೆ ತಡೆಹಿಡಿಯಲಾಗಿತ್ತು’ ಎಂದು ಶಾ ಅವರು ಆರೋಪಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಸರ್ದಾರ್ ಪಟೇಲರ ಧ್ಯೇಯ, ಆಲೋಚನೆ ಹಾಗೂ ಸಂದೇಶಗಳಿಗೆ ಅನುಗುಣವಾಗಿ ನಡೆದುಕೊಳ್ಳುತ್ತಿದ್ದಾರೆ. ಪಟೇಲರ ಅಗಾಧ ಕೊಡುಗೆಗಳ ಸ್ಮರಣಾರ್ಥವಾಗಿ ‘ಏಕತಾ ಪ್ರತಿಮೆ’ ನಿರ್ಮಾಣ ಮಾಡಿದ್ದಾರೆ. ಪಟೇಲರು ಹಾಕಿಕೊಟ್ಟಿದ್ದ ತಳಹದಿಯ ಮೇಲೆ ಭವ್ಯ ಭಾರತ ನಿರ್ಮಾಣಕ್ಕಾಗಿ ಪಣ ತೊಟ್ಟಿದ್ದು, 2047ರ ವೇಳೆಗೆ ದೇಶವನ್ನು ಸಂಪೂರ್ಣ ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡಲು ಶ್ರಮಿಸುತ್ತಿದ್ದಾರೆ ಎಂದು ಹೇಳಿದರು.

ಜನನ– ಮರಣ ನೋಂದಣಿಗೆ ನೂತನ ಆ್ಯಪ್

ಜನನ ಮತ್ತು ಮರಣ ನೋಂದಣಿ ಪ್ರಕ್ರಿಯೆಯನ್ನು ಮತ್ತಷ್ಟು ಸುಲಭ ಹಾಗೂ ವೇಗಗೊಳಿಸಲು ಕೇಂದ್ರ ಗೃಹ ಸಚಿವಾಲಯವು ಮೊಬೈಲ್ ಆ್ಯಪ್ ಬಿಡುಗಡೆ ಮಾಡಿದೆ.

ಜನಗಣನ ಭವನದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಈ ನೂತನ ಆ್ಯಪ್ ಬಿಡುಗಡೆಗೊಳಿಸಿದರು. ರಿಜಿಸ್ಟ್ರಾರ್ ಜನರಲ್ ಮತ್ತು ಜನಗಣತಿ ಆಯುಕ್ತಾಲಯವು ಈ ಆ್ಯಪ್ ಅನ್ನು ಅಭಿವೃದ್ಧಿಪಡಿಸಿದ್ದು, ಇದಕ್ಕೆ ‘ನಾಗರಿಕ ನೋಂದಣಿ ವ್ಯವಸ್ಥೆ’ (ದ ಸಿವಿಲ್ ರಿಜಿಸ್ಟ್ರೇಶನ್ ಸಿಸ್ಟಮ್– ಸಿಆರ್‌ಎಸ್) ಎಂದು ಹೆಸರಿಡಲಾಗಿದೆ.

ಮಗನ ಶವದೊಂದಿಗೆ ನಾಲ್ಕು ದಿನ ಕಳೆದ ದೃಷ್ಟಿಹೀನ ದಂಪತಿ

ಹೈದರಾಬಾದ್: ದೃಷ್ಟಿಹೀನ ವಯೋವೃದ್ಧ ದಂಪತಿ, ಪುತ್ರನ ಸಾವಿನ ಅರಿವಿರದೆ ಶವದೊಂದಿಗೆ ನಾಲ್ಕು ದಿನ ಕಳೆದ ಘಟನೆ ತೆಲಂಗಾಣದ ನಾಗೋಲ್‌ನಲ್ಲಿ ನಡೆದಿದೆ.

ನೆರೆಯವರು ಕೆಟ್ಟ ವಾಸನೆ ಬರುತ್ತಿರುವ ಬಗ್ಗೆ ದೂರು ನೀಡಿದ ನಂತರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ದಂಪತಿಯನ್ನು ರಕ್ಷಿಸಿದ್ದಾರೆ.

ಮದ್ಯವ್ಯಸನಿಯಾಗಿದ್ದ ದಂಪತಿಯ ಕಿರಿ ಮಗ ಪ್ರಮೋದ್ ಕೆಲವು ದಿನಗಳ ಹಿಂದೆ ನಿದ್ದೆಯಲ್ಲಿದ್ದಾಗ ಮೃತಪಟ್ಟಿರಬಹುದು. ಅಂದಿನಿಂದಲೂ ದಂಪತಿ ಏನನ್ನೂ ಸೇವಿಸಿಲ್ಲ. ಮಗನ ಸಾವಿನ ಅರಿವಿಲ್ಲದ ದಂಪತಿ ಆಹಾರಕ್ಕಾಗಿ ಮನವಿ ಮಾಡಿದಂತೆ ಕಾಣುತ್ತದೆ’ ಎಂದು ತಿಳಿಸಿದರು.

95 ಕೆ.ಜಿಯಷ್ಟು ‘ಮೆಥಮ್‌ಫೆಟಮೀನ್’ ವಶ: ಎನ್‌ಸಿಬಿ ಮಾಹಿತಿ

ಮಾದಕವಸ್ತು ತಯಾರಿಕೆ ಲ್ಯಾಬ್ ಪತ್ತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಉತ್ತರ ಪ್ರದೇಶದ ಗೌತಮ್ ಬುದ್ಧ ನಗರದಲ್ಲಿನ ಕೈಗಾರಿಕಾ ಪ್ರದೇಶದಲ್ಲಿ ಸಿಂಥೆಟಿಕ್ ಮಾದಕವಸ್ತುಗಳನ್ನು ತಯಾರಿಸುತ್ತಿದ್ದ ಪ್ರಯೋಗಾಲಯವೊಂದನ್ನು ಮಾದಕವಸ್ತು ನಿಯಂತ್ರಣ ಘಟಕವು (ಎನ್‌ಸಿಬಿ) ಪತ್ತೆಹಚ್ಚಿದೆ. ಈ ಸಂಬಂಧ ತಿಹಾರ್ ಜೈಲಿನ ವಾರ್ಡನ್, ಇಬ್ಬರು ಉದ್ಯಮಿಗಳನ್ನು ಸೇರಿ ಐವರನ್ನು ಎನ್‌ಸಿಬಿ ಬಂಧಿಸಿದೆ.

ಈ ಪ್ರಯೋಗಾಲಯದ ಮೇಲೆ ಅ.25ರಂದು ಎನ್‌ಸಿಬಿ ದಾಳಿ ನಡೆಸಿತ್ತು. ಈ ವೇಳೆ 95 ಕೆ.ಜಿಯಷ್ಟು ‘ಮೆಥಮ್‌ಫೆಟಮೀನ್’ ಮಾದಕವಸ್ತುವನ್ನು ವಶಕ್ಕೆ ಪಡೆದಿತ್ತು. ‘ಕಾರ್ಟೆಲ್ ಜಲೀಸ್ಕೊ ನೋವಾ ಜೆನೆರೊಷಿಯೊನ್’ ಎನ್ನುವ ಮೆಕ್ಸಿಕೊದ ಮಾದಕವಸ್ತು ಜಾಲದ ಪ್ರಮುಖ ಗುಂಪಿನೊಂದಿಗೂ ಈ ಪ್ರಯೋಗಾಲಯ ನಡೆಸುತ್ತಿದ್ದವರಿಗೂ ಸಂಪರ್ಕವಿದೆ ಎಂದು ಎನ್‌ಸಿಬಿ ಹೇಳಿದೆ.

ಕಾರ್ಯತಂತ್ರ ಹೇಗಿತ್ತು?

‘ಈ ಪ್ರಯೋಗಾಲಯವನ್ನು ತೆರೆಯುವಲ್ಲಿ ದೆಹಲಿ ಮೂಲದ ಉದ್ಯಮಿ ಹಾಗೂ ತಿಹಾರ್ ಜೈಲಿನ ವಾರ್ಡನ್ ಪ್ರಮುಖ ಪಾತ್ರವಹಿಸಿದ್ದಾರೆ. ಜೊತೆಗೆ, ಈ ಇಬ್ಬರು ‘ಮೆಥಮ್‌ಫೆಟಮೀನ್’ ತಯಾರಿಕೆಗೆ ಬೇಕಾದ ರಸಾಯನಿಕವನ್ನು ಹಾಗೂ ಯಂತ್ರಗಳನ್ನು ಆಮದು ಮಾಡಿಕೊಂಡಿದ್ದಾರೆ ಎಂಬುದು ಪ್ರಾಥಮಿಕ ತನಿಖೆಯಿಂದ ಖಚಿತಪಟ್ಟಿದೆ’ ಎಂದು ಎನ್‌ಸಿಬಿಯ ಉಪ ಮಹಾನಿರ್ದೇಶಕ (ಕಾರ್ಯಾಚರಣೆ) ಜ್ಞಾನೇಶ್ವರ್ ಸಿಂಗ್ ಮಾಹಿತಿ ನೀಡಿದರು.

‘ಮಾದಕವಸ್ತು ಕಳ್ಳಸಾಗಣೆ ಪ್ರಕರಣವೊಂದರಲ್ಲಿ ಈ ಉದ್ಯಮಿಯನ್ನು ಕಂದಾಯ ಗುಪ್ತಚರ ವಿಭಾಗವು ಈ ಹಿಂದೆ ಬಂಧಿಸಿತ್ತು ಮತ್ತು ಆ ಉದ್ಯಮಿಯನ್ನು ತಿಹಾರ್ ಜೈಲಿನಲ್ಲಿ ಇರಿಸಲಾಗಿತ್ತು. ಈ ವೇಳೆ ಜೈಲಿನ ವಾರ್ಡನ್ ಅವರ ಸಂಪರ್ಕಕ್ಕೆ ಈ ಉದ್ಯಮಿ ಬಂದಿದ್ದಾರೆ’ ಎಂದರು.

‘ಮುಂಬೈ ಮೂಲದ ರಸಾಯನಶಾಸ್ತ್ರಜ್ಞರೊಬ್ಬರನ್ನು ಬಳಸಿಕೊಂಡು ಈ ಇಬ್ಬರು ಮಾದಕವಸ್ತು ಜಾಲದಲ್ಲಿ ತೊಡಗಿಕೊಂಡಿದ್ದರು. ಈ ಪ್ರಯೋಗಾಲಯದಲ್ಲಿ ತಯಾರಿಸಿದ ಮಾದಕವಸ್ತುವಿನ ಗುಣಮಟ್ಟವನ್ನು ಮೆಕ್ಸಿಕೊದ ಗುಂಪಿನ ಸದಸ್ಯರೊಬ್ಬರು ಪರೀಕ್ಷಿಸುತ್ತಿದ್ದರು. ದೆಹಲಿಯಲ್ಲಿಯೇ ಈ ಸದಸ್ಯ ವಾಸವಿದ್ದ’ ಎಂದರು.

‘ಈ ನಾಲ್ವರ ಸಿಂಡಿಕೇಟ್‌ನ ಮತ್ತೊಮ್ಮೆ ‘ಪ್ರಮುಖ ಸದಸ್ಯ’ನನ್ನು ದೆಹಲಿಯಲ್ಲಿ ಬಂಧಿಸಲಾಗಿದೆ. ಈತ ದೆಹಲಿ ಮೂಲದ ಉದ್ಯಮಿಯ ‘ಆಪ್ತ ಸಹಚರ’. ಈ ಗುಂಪಿನ ಜಾಲ ಎಲ್ಲಿಯವರೆಗಿದೆ. ಈ ದಂಧೆಯಿಂದ ಗಳಿಸಿದ ಹಣ ಹಾಗೂ ಆಸ್ತಿಯ ಕುರಿತು ಅಂದಾಜಿಸಲಾಗುತ್ತಿದೆ’ ಎಂದರು.

ಜಮ್ಮುವಿನಲ್ಲಿ ಮತ್ತಿಬ್ಬರು ಉಗ್ರರ ಹತ್ಯೆ

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಅಖನೂರ್ ಸೆಕ್ಟರ್ ಸಮೀಪದ ಅರಣ್ಯದಲ್ಲಿ ಅಡಗಿದ್ದ ಇಬ್ಬರು ಭಯೋತ್ಪಾದಕರನ್ನು ಭದ್ರತಾ ಪಡೆಗಳು ಮಂಗಳವಾರ ಬೆಳಿಗ್ಗೆ ಹತ್ಯೆಗೈದಿವೆ. ಇದರೊಂದಿಗೆ ಗಡಿನಿಯಂತ್ರಣ ರೇಖೆ ಸಮೀಪ ಕಳೆದ 27 ತಾಸು ನಡೆದ ಗುಂಡಿನ ಚಕಮಕಿಯಲ್ಲಿ ಮೂವರು ಉಗ್ರರು ಮೃತಪಟ್ಟಂತಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಸೋಮವಾರ ಸೇನಾ ಆಂಬುಲೆನ್ಸ್ ಮೇಲೆ ಗುಂಡಿನ ದಾಳಿ ನಡೆಸಿದ್ದ ಭಯೋತ್ಪಾದಕರ ಪೈಕಿ ಒಬ್ಬನನ್ನು ಅದೇ ದಿನ ಸಂಜೆ ಹತ್ಯೆ ಮಾಡಲಾಗಿತ್ತು. ಉಳಿದ ಇಬ್ಬರನ್ನು ಮಂಗಳವಾರ ಬೆಳಿಗ್ಗೆ ಸದೆಬಡಿಯಲಾಗಿದೆ ಎಂದು ತಿಳಿಸಿದರು.

ಉಗ್ರರು ಭಾನುವಾರ ರಾತ್ರಿ ಗಡಿಯೊಳಗೆ ನುಸುಳಿರುವ ಸಾಧ್ಯತೆ ಇದೆ. ಅನಂತರ ಅವರು ದೇವಸ್ಥಾನದ ಹೊರಗೆ ಕಾಣಿಸಿಕೊಂಡು, ಸೇನಾ ವಾಹನದ ಮೇಲೆ ದಾಳಿ ನಡೆಸಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗಡಿನಿಯಂತ್ರಣ ರೇಖೆಯುದ್ದಕ್ಕೂ ಸೇನೆ ಹದ್ದಿನ ಕಣ್ಣು

ಶ್ರೀನಗರ: ಇತ್ತೀಚಿನ ಭಯೋತ್ಪಾದಕ ದಾಳಿ ಬೆನ್ನಲ್ಲೇ, ಸೇನೆಯು ಜಮ್ಮು ಮತ್ತು ಕಾಶ್ಮೀರದ ಗಡಿ ನಿಯಂತ್ರಣ ರೇಖೆಯುದ್ದಕ್ಕೂ ಗಸ್ತು ಮತ್ತು ಕಣ್ಗಾವಲನ್ನು ಬಲಪಡಿಸಿದೆ. ಅರಣ್ಯಗಳಲ್ಲಿ ಭಯೋತ್ಪಾದಕ ಚಟುವಟಿಕೆಗಳ ಪತ್ತೆ ಮತ್ತು ಉಗ್ರರನ್ನು ಹಿಮ್ಮೆಟ್ಟಿಸಲು ಡ್ರೋನ್ ಮತ್ತು ಅತ್ಯಾಧುನಿಕ ಕಣ್ಗಾವಲು ವ್ಯವಸ್ಥೆಯನ್ನು ಅಳವಡಿಸಿಕೊಂಡಿದೆ.

‘ಪ್ರಾದೇಶಿಕ ಗಸ್ತು ಹೆಚ್ಚಿಸಲಾಗಿದೆ, ಖಚಿತ ಮಾಹಿತಿ ಮೇರೆಗೆ ಪ್ರದೇಶಗಳ ಸುತ್ತುವರಿಯುವುದು ಮತ್ತು ಗುಪ್ತಚರ ಮಾಹಿತಿ ಆಧಾರದಲ್ಲಿ ಕಾರ್ಯಾಚರಣೆ ನಡೆಸುವುದನ್ನು ಹೆಚ್ಚಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

‘ಅದಾನಿ, ನಿಯಂತ್ರಣ ಸಂಸ್ಥೆಗಳು, ಬಿಜೆಪಿ ನಡುವೆ ಅಪಾಯಕಾರಿ ನಂಟು’

‘ಸಾಂಸ್ಥಿಕ ಚೌಕಟ್ಟಿನ ನೈತಿಕತೆಯ ಅಧಃಪತನ’

ನವದೆಹಲಿ (ಪಿಟಿಐ): ಸೆಬಿ ಅಧ್ಯಕ್ಷೆ ಮಾಧವಿ ಪುರಿ ಬುಚ್ ಅವರ ವಿರುದ್ಧ ಕಾಂಗ್ರೆಸ್ ಪಕ್ಷವು ಮಂಗಳವಾರ ಹೊಸದಾಗಿ ಹಿತಾಸಕ್ತಿ ಸಂಘರ್ಷದ ಆರೋಪಗಳನ್ನು ಮಾಡಿದೆ.

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು, ‘ಏಕಾಧಿಕಾರ ರಕ್ಷಿಸುವ ಗುಂಪಿನ (ಮೊನಾಪಲಿ ಬಚಾವೊ ಸಿಂಡಿಕೇಟ್) ಹುಟ್ಟಿನೊಂದಿಗೆ ದೇಶದ ಸಾಂಸ್ಥಿಕ ಚೌಕಟ್ಟಿನ ನೈತಿಕತೆಯು ಅಧಃಪತನಕ್ಕೆ ತಲುಪಿದೆ. ಈ ಗುಂಪಿನ ಹಿಂದೆ ಅದಾನಿ, ದೇಶದ ಪ್ರಮುಖ ನಿಯಂತ್ರಣ ಸಂಸ್ಥೆಗಳು ಮತ್ತು ಮೋದಿ ನೇತೃತ್ವದ ಬಿಜೆಪಿ ನಡುವಿನ ಅಪಾಯಕಾರಿ ನಂಟು ಇದೆ’ ಎಂದಿದ್ದಾರೆ.


ರಾಹುಲ್

ಮಾಧವಿ ಬುಚ್ ಅವರು ಮಾಡಿದ್ದಾರೆ ಎನ್ನಲಾದ ಅಕ್ರಮಗಳ ಕುರಿತು ಸರಣಿ ವಿಡಿಯೊಗಳನ್ನು ಬಿಡುಗಡೆ ಮಾಡುತ್ತಿರುವ ಕಾಂಗ್ರೆಸ್, ಮಂಗಳವಾರ ಇದೇ ಸರಣಿಯ 3ನೇ ವಿಡಿಯೊವನ್ನು ಬಿಡುಗಡೆ ಮಾಡಿದೆ. ರಾಹುಲ್ ಗಾಂಧಿ ಹಾಗೂ ಕಾಂಗ್ರೆಸ್‌ನ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಅವರು ಮಾತುಕತೆ ನಡೆಸುತ್ತಿರುವ ದೃಶ್ಯಗಳು ಈ ವಿಡಿಯೊಗಳಲ್ಲಿವೆ.

‘ವಿದೇಶಿ ಮೂಲದ ಶಸ್ತ್ರಾಸ್ತ್ರಗಳನ್ನು ರಿಬ್ರ್ಯಾಂಡ್ ಮಾಡುವ ಮೂಲಕ ಕಂಪನಿಯು ಹೇಗೆ ಲಾಭ ಮಾಡುತ್ತಿದೆ ಎಂಬ ಮಾಹಿತಿಯನ್ನು ಅದಾನಿ ಅವರ ಡಿಫೆನ್ಸ್ ವೆಬ್‌ಸೈಟ್ ಬಹಿರಂಗ ಮಾಡಿದೆ. ಇತ್ತ ತರಬೇತಿ, ಪಿಂಚಣಿ ಮತ್ತು ಯುವ ಸೈನಿಕರು ಮತ್ತು ಅವರ ಕುಟುಂಬದ ಕಲ್ಯಾಣಕ್ಕಾಗಿ ಮೀಸಲಿಟ್ಟ ಅನುದಾನವು ‘ಅಗ್ನಿವೀರ’ದಂತಹ ಯೋಜನೆಗಳ ಮೂಲಕ ಬೇರೆ ಕಡೆಗೆ ಹೋಗುತ್ತಿದೆ’ ಎಂದು ರಾಹುಲ್ ಗಾಂಧಿ ಆರೋಪಿಸಿದ್ದಾರೆ.

‘ಈ ದ್ರೋಹವು ರಾಷ್ಟ್ರೀಯ ಭದ್ರತೆ ಮತ್ತು ನಮ್ಮ ಯುವಜನರ ಭವಿಷ್ಯವನ್ನು ಅಪಾಯಕ್ಕೆ ತಳ್ಳುತ್ತಿದೆ’ ಎಂದು ಕಿಡಿಕಾರಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ‘ಪ್ರಧಾನಿ ನರೇಂದ್ರ ಮೋದಿ ಅವರು ‘ಸೆಬಿ’ಯ ಪಾವಿತ್ರ್ಯವನ್ನು ಹಾಳುಗೆಡವುತ್ತಿದ್ದಾರೆ. ಈ ಮೂಲಕ ಕೋಟ್ಯಂತರ ಸಣ್ಣ ಮತ್ತು ಮಧ್ಯಮ ಹೂಡಿಕೆದಾರರ ಶ್ರಮದಾಯಕ ಉಳಿತಾಯವನ್ನು ಅಪಾಯಕ್ಕೆ ತಳ್ಳುತ್ತಿದ್ದಾರೆ’ ಎಂದು ಆರೋಪಿಸಿದ್ದಾರೆ.

‘ನರೇಂದ್ರ ಮೋದಿ ಅವರೇ... ನೀವು ನೇಮಕ ಮಾಡಿದ ಸೆಬಿ ಅಧ್ಯಕ್ಷರ ಅವಧಿಯಲ್ಲಾದ ತಪ್ಪನ್ನು ಮುಚ್ಚಿಕೊಳ್ಳಲು ಸಾಧ್ಯವಿಲ್ಲ’ ಎಂದು ಎಚ್ಚರಿಸಿದ್ದಾರೆ.

‘ನಿಮ್ಮ ಪ್ರೀತಿಯ ಸ್ನೇಹಿತ ಅದಾನಿಗಾಗಿ ಹೇಗೆ ಏಕಸ್ವಾಮ್ಯ ಸೃಷ್ಟಿಸಿದಿರಿ ಎಂಬುದು ಬಯಲಾಗಲಿದೆ! ಹಗರಣದ ಪ್ರತಿಯೊಂದು ಅಂಶದ ತನಿಖೆಗೆ ಜಂಟಿ ಸಂಸದೀಯ ಸಮಿತಿಯ ಅಗತ್ಯವಿದೆ’ ಎಂದು ಖರ್ಗೆ ಅವರು ‘ಎಕ್ಸ್’ನಲ್ಲಿ ಹೇಳಿದ್ದಾರೆ.

ಕಾಂಗ್ರೆಸ್‌ನ ಹೊಸ ಆರೋಪಗಳು

- ಬುಚ್ ಅವರು ತಮ್ಮ ಸ್ವಂತ ಆಸ್ತಿಯನ್ನು ಇಂಡಿಯಾಬುಲ್ಸ್ ಸಮೂಹದೊಂದಿಗೆ ನೇರ ಸಂಬಂಧ ಹೊಂದಿರುವ ಕಂಪನಿಗೆ ಬಾಡಿಗೆಗೆ ನೀಡಿದ್ದಾರೆ.
- ಬುಚ್ ಅವರು ಸೆಬಿಯ ಅಧ್ಯಕ್ಷರಾದ ನಂತರವೂ ಪ್ರಿಡಿಬಲ್ ಹೆಲ್ತ್ ಪ್ರೈ. ಲಿ. ಕಂಪನಿಯಲ್ಲಿ ಈಕ್ವಿಟಿ ಹೊಂದಿದ್ದಾರೆ ಮತ್ತು ಹೂಡಿಕೆ ಮಾಡುತ್ತಿದ್ದಾರೆ. ಈ ಬಗ್ಗೆ ಬುಚ್ ಅಥವಾ ಅದಾನಿ ಸಮೂಹದಿಂದ ಯಾವುದೇ ಪ್ರತಿಕ್ರಿಯೆ ವ್ಯಕ್ತವಾಗಿಲ್ಲ.

ಛತ್ತೀಸಗಢ: 19 ನಕ್ಸಲರ ಬಂಧನ

ಸುಕ್ಮಾ (ಪಿಟಿಐ): ಛತ್ತೀಸಗಢದ ಸುಕ್ಮಾ ಜಿಲ್ಲೆಯ ವಿವಿಧೆಡೆ ಭದ್ರತಾ ಪಡೆಗಳು ನಡೆಸಿದ ಕಾರ್ಯಾಚರಣೆಯಲ್ಲಿ ಕನಿಷ್ಠ 19 ನಕ್ಸಲರನ್ನು ಬಂಧಿಸಲಾಗಿದೆ. ಈ ಪೈಕಿ ಮೂವರು ನಕ್ಸಲರ ಸುಳಿವು ನೀಡಿದವರಿಗೆ ಬಹುಮಾನ ಘೋಷಿಸಲಾಗಿತ್ತು ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಜಗರ್‌ಗುಂಡಾದಲ್ಲಿ 14 ಮಂದಿಯನ್ನು ಬಂಧಿಸಲಾಗಿದೆ. ಬಂಧಿತರೆಲ್ಲರೂ 18ರಿಂದ 40ರ ವಯೋಮಾನದವರಾಗಿದ್ದಾರೆ. ಈ ಪೈಕಿ ಬಾರ್ಸೆ ಹದ್ಮಾ(25), ಬಾರ್ಸೆ ನಾಗೇಶ್(20) ಹಾಗೂ ಹೇಮಲಾ ಜಿತು(18) ಸುಳಿವು ನೀಡಿದವರಿಗೆ ₹1 ಲಕ್ಷ ಬಹುಮಾನ ಘೋಷಿಸಲಾಗಿತ್ತು. ಬಂಧಿತರಿಂದ ಮೂರು ಜಿಲೆಟಿನ್ ಕಡ್ಡಿಗಳು, 300 ಗ್ರಾಂ ಸ್ಫೋಟಕ, ಕಾರ್ಡೆಕ್ಸ್ ತಂತಿ, ಡಿಟೊನೇಟರ್‌ಗಳು ಹಾಗೂ ಬ್ಯಾಟರಿಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದಿದ್ದಾರೆ.

ಭೆಜ್ಜಿಯಲ್ಲಿ ಐವರು ನಕ್ಸಲರನ್ನು ಬಂಧಿಸಲಾಗಿದ್ದು, ಇವರು ಕಳೆದ 8–10 ವರ್ಷಗಳಿಂದಲೂ ಸಕ್ರಿಯರಾಗಿದ್ದರು ಎಂದರು.

ರಣಜಿ ಟ್ರೋಫಿ ಕ್ರಿಕೆಟ್: ಬಿಹಾರದ ಶಕೀಬುಲ್ ಗನಿ ಶತಕ • ಮೊದಲ ಗೆಲುವು ದಾಖಲಿಸಿದ ಮಯಂಕ್ ಬಳಗ

ವೈಶಾಖ, ಶ್ರೇಯಸ್ ದಾಳಿ; ಕರ್ನಾಟಕಕ್ಕೆ ಜಯ

ಪ್ರಜಾವಾಣಿ ವಾರ್ತೆ

ಪಟ್ನಾ: ಭಾರತ ಟಿ20 ಕ್ರಿಕೆಟ್ ತಂಡಕ್ಕೆ ಆಯ್ಕೆಯಾಗಿರುವ ಮಧ್ಯಮವೇಗಿ ವೈಶಾಖ ವಿಜಯಕುಮಾರ್ ಮತ್ತು ಅನುಭವಿ ಸ್ಪಿನ್ನರ್ ಶ್ರೇಯಸ್ ಗೋಪಾಲ್ ಅವರ ಅಮೋಘ ಬೌಲಿಂಗ್‌ನಿಂದಾಗಿ ಕರ್ನಾಟಕ ತಂಡವು ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಗೆಲುವಿನ ಖಾತೆ ತೆರೆಯಿತು.

ಸಿ ಗುಂಪಿನ ಮೊದಲೆರಡೂ ಪಂದ್ಯಗಳು ಮಳೆಗೆ ಕೊಚ್ಚಿಹೋಗಿದ್ದವು. ಆದರೆ ಮೂರನೇ ಪಂದ್ಯದಲ್ಲಿ ಮಯಂಕ್ ಅಗರವಾಲ್ ಬಳಗವು 8 ವಿಕೆಟ್‌ಗಳಿಂದ ಬಿಹಾರ ವಿರುದ್ಧ ಜಯಿಸಿತು. 6 ಅಂಕಗಳನ್ನು ತನ್ನದಾಗಿಸಿಕೊಂಡಿತು. ವೈಶಾಖ (44ಕ್ಕೆ3) ಮತ್ತು ಶ್ರೇಯಸ್ (70ಕ್ಕೆ4) ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಬಿಹಾರ ತಂಡವು ಪಂದ್ಯವನ್ನು ಡ್ರಾ ಮಾಡಿಕೊಳ್ಳಲು ಬಹಳಷ್ಟು ಪ್ರಯತ್ನಿಸಿತು. ತಂಡದ ಬಲಗೈ ಬ್ಯಾಟರ್ ಶಕೀಬುಲ್ ಗನಿ (130; 194ಎ, 4X15, 6X4) ಸುಂದರ ಶತಕ ಕೂಡ ದಾಖಲಿಸಿದರು. ಆದರೂ ಕರ್ನಾಟಕ ತಂಡದ ಬೌಲರ್‌ಗಳು ಬಿಹಾರ ತಂಡವನ್ನು ಎರಡನೇ ಇನಿಂಗ್ಸ್‌ನಲ್ಲಿ 212 ರನ್‌ಗಳಿಗೆ ಕಟ್ಟಿಹಾಕಿತು. ಅದರಿಂದಾಗಿ ಲಭಿಸಿದ 69 ರನ್‌ಗಳ ಗುರಿಯನ್ನು 10.1 ಓವರ್‌ಗಳಲ್ಲಿ 2 ವಿಕೆಟ್ ಕಳೆದುಕೊಂಡು ತಲುಪಿತು. ಆರಂಭಿಕ ಬ್ಯಾಟರ್ ನಿಕಿನ್ ಜೋಸ್ (ಔಟಾಗದೆ 28) ಮತ್ತು ಅಭಿನವ್ ಮನೋಹರ್ (ಔಟಾಗದೆ 17) ತಂಡವನ್ನು ಗೆಲುವಿನ ದಡ ಸೇರಿಸಿದರು.

ಬಿಹಾರ ತಂಡವು ಮೊದಲ ಇನಿಂಗ್ಸ್‌ನಲ್ಲಿ 143 ರನ್ ಗಳಿಸಿತ್ತು. ಆದರೆ ಎರಡನೇ ದಿನದಾಟವು ಮಳೆಯಿಂದಾಗಿ ನಡೆದಿರಲಿಲ್ಲ. ಮೂರನೇ ದಿನ ಕರ್ನಾಟಕ ತಂಡವು ಮೊದಲ ಇನಿಂಗ್ಸ್‌ನಲ್ಲಿ ಮಯಂಕ್ ಅಗರವಾಲ್ ಶತಕ ಮತ್ತು ಮನೀಷ್ ಪಾಂಡೆ ಅರ್ಧಶತಕದ ಬಲದಿಂದ 51 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 287 ರನ್ ಗಳಿಸಿತು. 144 ರನ್‌ಗಳ ಮುನ್ನಡೆ ಸಾಧಿಸಿತು. ಇದೇ ಮೊತ್ತಕ್ಕೆ ಮಂಗಳವಾರ ಬೆಳಿಗ್ಗೆ ಡಿಕ್ಲೇರ್ ಮಾಡಿಕೊಂಡಿತು.

ಕರ್ನಾಟಕದ ಬೌಲರ್‌ಗಳು ಮೊದಲಿಗೆ ಇನಿಂಗ್ಸ್ ಜಯಕ್ಕಾಗಿ ಪ್ರಯತ್ನ ನಡೆಸಿದರು. ಈ ನಿಟ್ಟಿನಲ್ಲಿ ವೇಗದ ಜೋಡಿ ವಿ. ಕೌಶಿಕ್ ಮತ್ತು ವೈಶಾಖ ಅವರು ಉತ್ತಮ ಆರಂಭ ನೀಡಿದರು. ಬಿಹಾರ ತಂಡವು 6 ರನ್‌ಗಳಿಗೆ 2 ವಿಕೆಟ್ ಕಳೆದುಕೊಳ್ಳಲು ಕಾರಣರಾದರು.

ಆದರೆ ಈ ಸಂದರ್ಭದಲ್ಲಿ ಗನಿ ಮತ್ತು ಬಾಬುಲ್ ಕುಮಾರ್ (44; 111ಎ) ಬೌಲರ್‌ಗಳನ್ನು ಕಾಡಿದರು. 3ನೇ ವಿಕೆಟ್ ಜೊತೆಯಾಟದಲ್ಲಿ 130 ರನ್ ಸೇರಿಸಿದರು. ಇದರಿಂದಾಗಿ ಕರ್ನಾಟಕಕ್ಕೆ ಇನಿಂಗ್ಸ್ ಜಯಸಾಧಿಸುವ ಗುರಿ ಕೈತಪ್ಪಿತು. ಆದರೂ ಗೆಲುವಿನ ಆಸೆ ಬಿಡಲಿಲ್ಲ. 40ನೇ ಓವರ್‌ನಲ್ಲಿ ಬಾಬುಲ್ ಕುಮಾರ್ ವಿಕೆಟ್ ಗಳಿಸಿದ ಶ್ರೇಯಸ್ ಜೊತೆಯಾಟವನ್ನು ಮುರಿದರು. ಇಲ್ಲಿಂದ ಮುಂದೆ ಯಾವ ಬ್ಯಾಟರ್ ಕೂಡ ಕ್ರೀಸ್‌ನಲ್ಲಿ ಕಾಲೂರದಂತೆ ಬೌಲರ್‌ಗಳು ದಾಳಿ ನಡೆಸಿದರು. ಈ ನಡುವೆಯೂ ಶತಕ ಗಳಿಸಿದ ಶಕೀಬುಲ್ ಕೊನೆಯವರಾಗಿ ಔಟಾದರು. ವಿದ್ಯಾಧರ ಪಾಟೀಲ ಅವರು ಶಕೀಬುಲ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು.

ವೈಶಾಖ ವಿಜಯಕುಮಾರ್ ಮತ್ತು ಶ್ರೇಯಸ್ ಗೋಪಾಲ್

ನಿಶ್ಚಲ್ ತಾಳ್ಮೆಯ ಬ್ಯಾಟಿಂಗ್

ನವದೆಹಲಿ (ಪಿಟಿಐ): ಕನ್ನಡಿಗ ಡಿ. ನಿಶ್ಚಲ್ (94; 199ಎ, 4X9) ಅವರ ತಾಳ್ಮೆಯ ಬ್ಯಾಟಿಂಗ್ ಹೊರತಾಗಿಯೂ ನಾಗಾಲ್ಯಾಂಡ್ ರಣಜಿ ಟ್ರೋಫಿ ಟೂರ್ನಿಯ ಪ್ಲೇಟ್ ಲೀಗ್ ಹಂತದ ಪಂದ್ಯದಲ್ಲಿ ಗೋವಾ ಎದುರು ಮಣಿಯಿತು.

ಬೆಂಗಳೂರಿನ ನಿಶ್ಚಲ್ ಅವರು 6 ರನ್‌ಗಳ ಅಂತರದಿಂದ ಶತಕ ತಪ್ಪಿಸಿಕೊಂಡರು. 339 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ ನಾಗಾಲ್ಯಾಂಡ್ ತಂಡವು 104.1 ಓವರ್‌ಗಳಲ್ಲಿ 255 ರನ್ ಗಳಿಸಿತು. ಗೋವಾದ ದರ್ಶನ್ ಮಿಸಾಳ್ 5 ವಿಕೆಟ್ ಗೊಂಚಲು ಗಳಿಸಿದರು.

ನಿಶ್ಚಲ್ ಅವರು ಈ ಟೂರ್ನಿಯಲ್ಲಿ ಈಗಾಗಲೇ ಎರಡು ಶತಕ (149 ಮತ್ತು 154) ಗಳಿಸಿದ್ದಾರೆ. ಇದೇ ತಂಡದಲ್ಲಿರುವ ಇನ್ನೊಬ್ಬ ಕನ್ನಡಿಗ ಜೆ. ಸುಚಿತ್ 23 ರನ್ ಗಳಿಸಿದರು. ಗೋವಾ ತಂಡದಲ್ಲಿರುವ ರೋಹನ್ ಕದಮ್ ಕೂಡ ಈ ಪಂದ್ಯದಲ್ಲಿ ಅರ್ಧಶತಕ ಗಳಿಸಿದರು.

ನಿಶ್ಚಲ್ ಡಿ ಬ್ಯಾಟಿಂಗ್

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಗೋವಾ: 179, ನಾಗಾಲ್ಯಾಂಡ್ 147, ಎರಡನೇ ಇನಿಂಗ್ಸ್: ಗೋವಾ 306, ನಾಗಾಲ್ಯಾಂಡ್: 104.1 ಓವರ್‌ಗಳಲ್ಲಿ 255 (ಡಿ. ನಿಶ್ಚಲ್ 94, ಚೇತನ್ ಬಿಸ್ಟ್ 41, ಜೆ. ಸುಚಿತ್ 23, ದರ್ಶನ್ ಮಿಸಾಳ್ 51ಕ್ಕೆ5, ರಾಹುಲ್ ಮೆಹ್ತಾ 48ಕ್ಕೆ4) ಫಲಿತಾಂಶ: ಗೋವಾ ತಂಡಕ್ಕೆ 83 ರನ್‌ಗಳ ಜಯ.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಬಿಹಾರ: 143 (55.5 ಓವರುಗಳಲ್ಲಿ) ಕರ್ನಾಟಕ: 7 ವಿಕೆಟ್‌ಗೆ 287 ಡಿಕ್ಲೇರ್ (51 ಓವರುಗಳಲ್ಲಿ) ಎರಡನೇ ಇನಿಂಗ್ಸ್: ಬಿಹಾರ: 212 (66.2 ಓವರ್‌ಗಳಲ್ಲಿ)

ವೈಭವ್ ಸಿ ಸತೇರಿ ಬಿ ವಾಸುಕಿ 6 (4ಎ, 4x1)
ಶರ್ಮನ್ ಸಿ ನಿಕಿನ್ ಬಿ ವೈಶಾಖ 0 (2ಎ)
ಬಾಬುಲ್ ಸಿ ಮನೋಹರ್ ಬಿ ಶ್ರೇಯಸ್ 44 (111ಎ, 4x5)
ಶಕೀಬುಲ್ ಎಲ್‌ಬಿಡಬ್ಲ್ಯು ಬಿ ವಿದ್ಯಾಧರ್ 130 (194, 4x15, 6x4)
ಬಿಪಿನ್ ಎಲ್‌ಬಿಡಬ್ಲ್ಯು ಬಿ ಶ್ರೇಯಸ್ 7 (34ಎ, 4x1)
ರಾಘವೇಂದ್ರ ಎಲ್‌ಬಿಡಬ್ಲ್ಯು ಬಿ ಶ್ರೇಯಸ್ 4 (9ಎ, 4x1)
ಜಿತಿನ್ ಎಲ್‌ಬಿಡಬ್ಲ್ಯು ಬಿ ವೈಶಾಖ 15 (27ಎ, 4x2, 6x1)
ವೀರ್ ಪ್ರತಾಪ್ ಬಿ ವೈಶಾಖ 0 (2ಎ)
ಹಿಮಾಂಶು ಸಿ ಪಾಂಡೆ ಬಿ ಮೊಹ್ಸಿನ್ 1 (2ಎ)
ಅನುಜ್ ಎಲ್‌ಬಿಡಬ್ಲ್ಯು ಬಿ ಶ್ರೇಯಸ್ 0 (9ಎ)
ಶಕೀಬ್ ಹುಸೇನ್ ಔಟಾಗದೇ 0 (0ಎ)

ಇತರೆ: 5 (ಬೈ 1, ಲೆಗ್‌ಬೈ 3, ನೋಬಾಲ್ 1)

ವಿಕೆಟ್ ಪತನ: 1-6 (ವೈಭವ್ ಸೂರ್ಯವಂಶಿ, 0.4), 2-6 (ಶರ್ಮನ್ ನಿಗ್ರೋಧ್, 1.2), 3-136 (ಬಾಬುಲ್ ಕುಮಾರ್, 39.6), 4-162 (ಬಿಪಿನ್ ಸೌರಭ್, 51.4), 5-180 (ರಾಘವೇಂದ್ರ ಪ್ರತಾಪ್ ಸಿಂಗ್, 53.6), 6-201 (ಜಿತಿನ್ ಯಾದವ್, 60.3), 7-201 (ವೀರಪ್ರತಾಪ್ ಸಿಂಗ್, 60.5), 8-202 (ಹಿಮಾಂಶು ಸಿಂಗ್, 61.6), 9-212 (ಅನುಜ್ ರಾಜ್, 65.6) , 10-212 (ಶಕೀಬುಲ್ ಗನಿ, 66.2)

ಬೌಲಿಂಗ್: ವಾಸುಕಿ ಕೌಶಿಕ್ 6–2–10–1, ವೈಶಾಖ ವಿಜಯಕುಮಾರ್ 12–0–44–3, ವಿದ್ಯಾಧರ ಪಾಟೀಲ 6.2–2–34–1, ಶ್ರೇಯಸ್ ಗೋಪಾಲ್ 24–3–70–4, ಮೊಹ್ಸಿನ್ ಖಾನ್ 16–2–46–1, ನಿಕಿನ್ ಜೋಸ್ 2–0–4–0

ಕರ್ನಾಟಕ: 2ಕ್ಕೆ 70 (10.1 ಓವರ್‌ಗಳಲ್ಲಿ)

ನಿಕಿನ್ ಜೋಸ್ ಔಟಾಗದೇ 28 (33ಎ, 4x2)
ಮಯಂಕ್ ಬಿ ಅನುಜ್ 9 (9ಎ)
ಸ್ಮರಣ್ ಸಿ ರಾಘವೇಂದ್ರ ಬಿ ಹಿಮಾಂಶು 15 (10ಎ, 4x1)
ಅಭಿನವ್ ಮನೋಹರ್ ಔಟಾಗದೇ 17 (10ಎ, 4x2, 6x1)

ಇತರೆ: 1 (ನೋಬಾಲ್ 1)

ವಿಕೆಟ್ ಪತನ: 1-26 (ಮಯಂಕ್ ಅಗರವಾಲ್, 4.1), 2-45 (ಆರ್.ಸ್ಮರಣ್, 7.1)

ಬೌಲಿಂಗ್: ಅನುಜ್ ರಾಜ್ 5.1–0–32–1, ಶಕೀಬ್ ಹುಸೇನ್ 3–0–22–0, ಹಿಮಾಂಶು ಸಿಂಗ್ 2–0–16–1

ಪಂದ್ಯದ ಆಟಗಾರ: ಸಕೀಬುಲ್ ಗನಿ (ಬಿಹಾರ)

ಫಲಿತಾಂಶ: ಕರ್ನಾಟಕಕ್ಕೆ 8 ವಿಕೆಟ್ ಜಯ, 6 ಅಂಕ

ಭವಿಷ್ಯದ ಸ್ಪರ್ಧೆಗಳಿಗೆ ತಾಳ್ಮೆ ಮತ್ತು ಧೈರ್ಯದಿಂದ ಬಕಲ್ ಮಾಡಲು ಭಾರತೀಯ ಕ್ರಿಕೆಟ್ ತಂಡಕ್ಕೆ ಸಲಹೆ ನೀಡುವುದು!

ಐಪಿಎಲ್: ಗಿಲ್, ರಶೀದ್ ಉಳಿಸಿಕೊಳ್ಳಲು ಟೈಟನ್ಸ್ ಚಿತ್ತ

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಗುಜರಾತ್ ಟೈಟನ್ಸ್ ತಂಡವು ನಾಯಕ ಶುಭಮನ್ ಗಿಲ್, ಬ್ಯಾಟರ್ ಸಾಯಿ ಸುದರ್ಶನ್ ಮತ್ತು ಪ್ರಮುಖ ಸ್ಪಿನ್ನರ್ ರಶೀದ್ ಖಾನ್ ಅವರನ್ನು ಉಳಿಸಿಕೊಳ್ಳಲಿದೆ.

ಮುಂಬರುವ ಮೆಗಾ ಹರಾಜು ಪ್ರಕ್ರಿಯೆ ಹಿನ್ನೆಲೆಯಲ್ಲಿ ಆಟಗಾರರ ಉಳಿಕೆ ಮತ್ತು ಬಿಡುಗಡೆ ಪ್ರಕ್ರಿಯೆ ಆರಂಭವಾಗಿದೆ. ಬಿರುಸಿನ ಬ್ಯಾಟರ್‌ಗಳಾದ ರಾಹುಲ್ ತೆವಾಟಿಯಾ ಮತ್ತು ಶಾರೂಕ್ ಖಾನ್ ಅವರನ್ನೂ ತನ್ನಲ್ಲಿಯೇ ಉಳಿಸಿಕೊಳ್ಳಲು ತಂಡವು ನಿರ್ಧರಿಸಿದೆ ಎನ್ನಲಾಗಿದೆ.

‘ಶುಭಮನ್, ರಶೀದ್ ಮತ್ತು ಸಾಯಿ ಅವರನ್ನು ಉಳಿಸಿಕೊಳ್ಳಲು ಫ್ರ್ಯಾಂಚೈಸಿ ನಿರ್ಧರಿಸಿದೆ’ ಎಂದು ಐಪಿಎಲ್ ಮೂಲಗಳು ತಿಳಿಸಿವೆ.

2022ರಲ್ಲಿ ಗುಜರಾತ್ ತಂಡವು ಐಪಿಎಲ್‌ಗೆ ಪದಾರ್ಪಣೆ ಮಾಡಿತ್ತು. ಆಗ ಹಾರ್ದಿಕ್ ಪಾಂಡ್ಯ ನಾಯಕತ್ವದಲ್ಲಿ ಚಾಂಪಿಯನ್ ಆಗಿತ್ತು. ನಂತರದ ವರ್ಷ ರನ್ನರ್ಸ್ ಅಪ್ ಆಗಿತ್ತು. ಆದರೆ ಈ ವರ್ಷ ಗಿಲ್ ನಾಯಕತ್ವದಲ್ಲಿ ಗುಜರಾತ್ ತಂಡವು 8ನೇ ಸ್ಥಾನ ಪಡೆದಿತ್ತು.

ಅಫ್ಗಾನಿಸ್ತಾನದ ರಶೀದ್ ಅವರನ್ನು ಉಳಿಸಿಕೊಳ್ಳುವುದು ನಿರೀಕ್ಷಿತವೇ ಆಗಿತ್ತು. 26 ವರ್ಷದ ರಶೀದ್ ಅವರು 2022ರ ಟೂರ್ನಿಯಲ್ಲಿ 19 ವಿಕೆಟ್ ಗಳಿಸಿದ್ದರು. ಆದರೆ ಕಳೆದ ಟೂರ್ನಿಯಲ್ಲಿ 12 ಪಂದ್ಯಗಳನ್ನು ಆಡಿ 10 ವಿಕೆಟ್ ಗಳಿಸಿದ್ದರು. ಅವರು ಫಾರ್ಮ್ ಕಳೆದುಕೊಂಡಿದ್ದರು. ಸಾಯಿ ಸುದರ್ಶನ್ ಅವರು 12 ಪಂದ್ಯಗಳಿಂದ 527 ರನ್ ಸೇರಿಸಿದ್ದರು. ಅವರು ಭಾರತ ತಂಡವನ್ನು ಮೂರು ಏಕದಿನ ಮತ್ತು ಒಂದು ಟಿ20 ಪಂದ್ಯದಲ್ಲಿ ಪ್ರತಿನಿಧಿಸಿದ್ದಾರೆ. ಅನುಭವಿ ಆಟಗಾರ ತೆವಾಟಿಯಾ ಅವರು ಹೋದ ಟೂರ್ನಿಯಲ್ಲಿ 145 ಕ್ಕಿಂತಲೂ ಹೆಚ್ಚಿನ ಸ್ಟ್ರೈಕ್‌ರೇಟ್‌ನಲ್ಲಿ ಬ್ಯಾಟಿಂಗ್ ಮಾಡಿದ್ದರು.

ಉಳಿಕೆ ಮತ್ತು ಬಿಡುಗಡೆಯನ್ನು ಅಂತಿಮವಾಗಿ ಪ್ರಕಟಿಸಲು ತಂಡಗಳಿಗೆ ಇದೇ 31ರವರೆಗೆ ಗಡುವು ನೀಡಲಾಗಿದೆ. ನವೆಂಬರ್ ಕೊನೆಯ ವಾರದಲ್ಲಿ ಮೆಗಾ ಹರಾಜು ಪ್ರಕ್ರಿಯೆ ನಡೆಯಲಿದೆ.

ಶುಭಮನ್ ಗಿಲ್

ಮಹಿಳಾ ಏಕದಿನ ಕ್ರಿಕೆಟ್: ಮಿಂಚಿದ ದೀಪ್ತಿ ಶರ್ಮಾ

ಸ್ಮೃತಿ ಶತಕ; ಭಾರತಕ್ಕೆ ಸರಣಿ ಜಯ

ಅಹಮದಾಬಾದ್ (ಪಿಟಿಐ): ತಮ್ಮ ಸಾಮರ್ಥ್ಯಕ್ಕೆ ತಕ್ಕ ಆಟವಾಡಿದ ಸ್ಮೃತಿ ಮಂದಾನ ಅವರ ಶತಕದ ಬಲದಿಂದ ಭಾರತ ತಂಡವು ನ್ಯೂಜಿಲೆಂಡ್ ಎದುರಿನ ಏಕದಿನ ಕ್ರಿಕೆಟ್ ಸರಣಿಯನ್ನು ಗೆದ್ದುಕೊಂಡಿತು.

ನರೇಂದ್ರ ಮೋದಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಸರಣಿಯ ಮೂರನೇ ಮತ್ತು ಕೊನೆಯ ಪಂದ್ಯದಲ್ಲಿ ಭಾರತ ತಂಡವು 6 ವಿಕೆಟ್‌ಗಳಿಂದ ಜಯಿಸಿತು. ಇದರೊಂದಿಗೆ ಸರಣಿಯನ್ನು 2–1ರಿಂದ ತನ್ನದಾಗಿಸಿಕೊಂಡಿತು.

ಕಳೆದ ಕೆಲವು ಪಂದ್ಯಗಳಿಂದ ಬ್ಯಾಟಿಂಗ್‌ನಲ್ಲಿ ವಿಫಲರಾಗಿದ್ದ ಸ್ಮೃತಿ ಈ ಪಂದ್ಯದಲ್ಲಿ ಲಯ ಕಂಡುಕೊಂಡರು. 122 ಎಸೆತಗಳಲ್ಲಿ 100 ರನ್ ಗಳಿಸಿದರು. ಅದರಲ್ಲಿ 10 ಬೌಂಡರಿಗಳಿದ್ದವು. ಏಕದಿನ ಕ್ರಿಕೆಟ್‌ನಲ್ಲಿ ಸ್ಮೃತಿ ಗಳಿಸಿದ 8ನೇ ಶತಕ ಇದಾಗಿದೆ. ನಾಯಕಿ ಹರ್ಮನ್‌ಪ್ರೀತ್ ಕೌರ್ (ಔಟಾಗದೇ 59; 63ಎ, 4X6) ಕೂಡ ಅರ್ಧಶತಕದ ಕಾಣಿಕೆ ನೀಡಿದರು. ಅವರು ಸ್ಮೃತಿ ಜೊತೆಗೂಡಿ 117 ರನ್ ಸೇರಿಸಿದರು.

ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ ತಂಡವು ಮಧ್ಯಮ ಕ್ರಮಾಂಕದ ಬ್ಯಾಟರ್ ಬ್ರೂಕ್ ಹ್ಯಾಲಿಡೇ (86; 96ಎ, 4X9, 6X3) ಅವರ ಆಟದ ಬಲದಿಂದ 49.5 ಓವರ್‌ಗಳಲ್ಲಿ 232 ರನ್ ಗಳಿಸಿತು. ಇದಕ್ಕುತ್ತರವಾಗಿ ಆತಿಥೇಯ ತಂಡವು 44.2 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 236 ರನ್ ಗಳಿಸಿತು.

ಸರಣಿಯ ಎರಡನೇ ಪಂದ್ಯದಲ್ಲಿ ಹರ್ಮನ್‌ಪ್ರೀತ್ ಬಳಗವು ಸೋಲನುಭವಿಸಿತ್ತು. ಈ ಪಂದ್ಯದಲ್ಲಿ ಬೌಲರ್‌ಗಳು ಭಾರತ ತಂಡಕ್ಕೆ ಆರಂಭದಲ್ಲಿಯೇ ಯಶಸ್ಸು ತಂದುಕೊಟ್ಟರು. ಅದರಲ್ಲೂ ಪ್ರಿಯಾ ಮಿಶ್ರಾ (41ಕ್ಕೆ2) ಮತ್ತು ದೀಪ್ತಿ ಶರ್ಮಾ (39ಕ್ಕೆ3) ಅವರು ಗಮನ ಸೆಳೆದರು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 49.5 ಓವರ್‌ಗಳಲ್ಲಿ 232 (ಜಾರ್ಜಿಯಾ ಪಿಮರ್ 39, ಬ್ರೂಕ್ ಹ್ಯಾಲಿಡೇ 86, ಇಸಾಬೆಲಾ ಗೇಜ್ 25, ಲಿಯಾ ತಹುಹು ಔಟಾಗದೆ 24, ಪ್ರಿಯಾ ಮಿಶ್ರಾ 41ಕ್ಕೆ2, ದೀಪ್ತಿ ಶರ್ಮಾ 39ಕ್ಕೆ3) ಭಾರತ: 44.2 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 236 (ಸ್ಮೃತಿ ಮಂದಾನ 100, ಯಸ್ತಿಕಾ ಭಾಟಿಯಾ 35, ಹರ್ಮನ್‌ಪ್ರೀತ್ ಕೌರ್ ಔಟಾಗದೆ 59, ಜೆಮಿಮಾ ರಾಡ್ರಿಗಸ್ 22, ಹನಾ ರೋವ್ 47ಕ್ಕೆ2) **ಫಲಿತಾಂಶ:** ಭಾರತ ತಂಡಕ್ಕೆ 6 ವಿಕೆಟ್‌ಗಳ ಜಯ. 2–1ರಿಂದ ಸರಣಿ ಗೆಲುವು. ಪಂದ್ಯದ ಆಟಗಾರ್ತಿ: ಸ್ಮೃತಿ ಮಂದಾನ, ಸರಣಿಯ ಆಟಗಾರ್ತಿ: ದೀಪ್ತಿ ಶರ್ಮಾ.

ಭಾರತ ತಂಡದ ಸ್ಮೃತಿ ಮಂದಾನ ಶತಕ ಗಳಿಸಿ ಸಂಭ್ರಮಿಸಿದರು –ಬಿಸಿಸಿಐ ಎಕ್ಸ್ ಚಿತ್ರ

ಹರ್ಮನ್‌ಪ್ರೀತ್ ಕೌರ್ ಬ್ಯಾಟಿಂಗ್

ಭಾರತ ವಿರುದ್ಧದ ಮೂರನೇ ಟೆಸ್ಟ್‌ಗೂ ವಿಲಿಯಮ್ಸನ್ ಅಲಭ್ಯ

ನವದೆಹಲಿ (ಪಿಟಿಐ): ಗಾಯಾಳಾಗಿರುವ ನ್ಯೂಜಿಲೆಂಡ್‌ನ ಹಿರಿಯ ಬ್ಯಾಟರ್ ಕೇನ್ ವಿಲಿಯಮ್ಸನ್, ನ.1 ರಿಂದ ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಭಾರತ ವಿರುದ್ಧ ನಡೆಯಲಿರುವ ಮೂರನೇ ಹಾಗೂ ಅಂತಿಮ ಕ್ರಿಕೆಟ್ ಟೆಸ್ಟ್ ಪಂದ್ಯವನ್ನೂ ಕಳೆದುಕೊಳ್ಳಲಿದ್ದಾರೆ.

ತೊಡೆಯ ನೋವಿನಿಂದ ಬಳಲುತ್ತಿರುವ ಅವರು ಮೊದಲ ಎರಡು ಟೆಸ್ಟ್‌ಗಳಲ್ಲಿ ಆಡಿರಲಿಲ್ಲ. ಇಂಗ್ಲೆಂಡ್ ವಿರುದ್ಧ ನವೆಂಬರ್ 28 ರಂದು ತವರಿನಲ್ಲಿ ನಡೆಯುವ ಟೆಸ್ಟ್ ಸರಣಿಗೆ ಸಜ್ಜಾಗುವ ಉದ್ದೇಶದಿಂದ ಇಲ್ಲಿ ವಿಶ್ರಾಂತಿ ಪಡೆಯಲು ನಿರ್ಧರಿಸಿದ್ದಾರೆ. ನ್ಯೂಜಿಲೆಂಡ್ ಸರಣಿಯನ್ನು ಈಗಾಗಲೇ 2–0 ಯಿಂದ ಗೆದ್ದಾಗಿದೆ.

ಏಕದಿನ ಬೌಲಿಂಗ್ ರ‍್ಯಾಂಕಿಂಗ್: 2ನೇ ಸ್ಥಾನಕ್ಕೆ ದೀಪ್ತಿ

ದುಬೈ (ಪಿಟಿಐ): ಉತ್ತಮ ಲಯದಲ್ಲಿದ್ದು ಸ್ಥಿರ ಪ್ರದರ್ಶನ ನೀಡುತ್ತಿರುವ ಭಾರತ ತಂಡದ ಆಫ್ ಸ್ಪಿನ್ನರ್ ದೀಪ್ತಿ ಶರ್ಮಾ ಅವರು ಮಂಗಳವಾರ ಪ್ರಕಟವಾದ ಐಸಿಸಿ ಮಹಿಳೆಯರ ಏಕದಿನ ಕ್ರಿಕೆಟ್ ರ‍್ಯಾಂಕಿಂಗ್‌ನಲ್ಲಿ ಎರಡು ಸ್ಥಾನ ಬಡ್ತಿ ಕಂಡಿದ್ದು, ಜೀವನಶ್ರೇಷ್ಠ ಎರಡನೇ ಸ್ಥಾನಕ್ಕೆ ಏರಿದ್ದಾರೆ.

ಇತ್ತೀಚೆಗೆ ದುಬೈನಲ್ಲಿ ನಡೆದ ಮಹಿಳೆಯರ ಟಿ20 ವಿಶ್ವಕಪ್‌ನಲ್ಲಿ ಭಾರತದ ಪರ ಉತ್ತಮ ಪ್ರದರ್ಶನ ನೀಡಿದ್ದರು. ಇದರ ಬೆನ್ನಲ್ಲೇ ನ್ಯೂಜಿಲೆಂಡ್ ವಿರುದ್ಧ ತವರಿನಲ್ಲಿ ನಡೆಯುತ್ತಿರುವ ಹಾಲಿ ಏಕದಿನ ಸರಣಿಯಲ್ಲೂ ಭಾರತದ ಪರ ಯಶಸ್ವಿ ಬೌಲರ್ ಎನಿಸಿದ್ದಾರೆ. ಇಂಗ್ಲೆಂಡ್‌ನ ಎಡಗೈ ಸ್ಪಿನ್ನರ್ ಸೋಫಿ ಎಕ್ಲೆಸ್ಟೋನ್ ಅವರು ಅಗ್ರಸ್ಥಾನದಲ್ಲಿದ್ದಾರೆ.

ಬ್ಯಾಟರ್‌ಗಳ ವಿಭಾಗದಲ್ಲಿ ಭಾರತದ ಜೆಮಿಮಾ ರಾಡ್ರಿಗಸ್ ಮೂರು ಸ್ಥಾನ ಬಡ್ತಿಯೊಡನೆ 30ನೇ ಸ್ಥಾನದಲ್ಲಿದ್ದಾರೆ.

ಪ್ರೊ ಕಬಡ್ಡಿ ಲೀಗ್: ಬೆಂಗಾಲ್–ಪುಣೇರಿ ಪಂದ್ಯ ರೋಚಕ ಟೈ

ಬೆಂಗಳೂರು ಬುಲ್ಸ್‌ಗೆ ಮೊದಲ ಜಯ

ಹೈದರಾಬಾದ್: ಬಹುತೇಕ ಹಿನ್ನಡೆಯಲ್ಲೇ ಇದ್ದ ಬೆಂಗಳೂರು ಬುಲ್ಸ್ ತಂಡ ಅಮೋಘವಾಗಿ ಚೇತರಿಸಿ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ದಬಾಂಗ್ ಡೆಲ್ಲಿ ಕೆ.ಸಿ. ತಂಡದ ಮೇಲೆ 34-33 ರಲ್ಲಿ ಒಂದು ಪಾಯಿಂಟ್‌ನ ರೋಚಕ ಜಯ ಸಾಧಿಸುವಲ್ಲಿ ಯಶಸ್ವಿಯಾಯಿತು. ಆ ಮೂಲಕ ಜಯದ ಖಾತೆಯನ್ನೂ ತೆರೆಯಿತು.

ಇದಕ್ಕೆ ಮೊದಲು ಆಡಿದ ನಾಲ್ಕೂ ಪಂದ್ಯಗಳಲ್ಲಿ ಬುಲ್ಸ್ ಸೋಲನುಭವಿಸಿತ್ತು. ಗಚ್ಚಿಬೌಲಿ ಒಳಾಂಗಣ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ವಿರಾಮದ ವೇಳೆ ದಬಾಂಗ್ ಡೆಲ್ಲಿ 22–14 ರಲ್ಲಿ ಎಂಟು ಪಾಯಿಂಟ್‌ಗಳ ಮುನ್ನಡೆ ಸಾಧಿಸಿತ್ತು. ಆದರೆ ಜೈ ಭಗವಾನ್ ಅವರು ಬುಲ್ಸ್ ನೆರವಿಗೆ ಬಂದರು.

ಸಬ್‌ಸ್ಟಿಟ್ಯೂಟ್ ಆಗಿ ಕಣಕ್ಕಿಳಿದ ಜೈ ಭಗವಾನ್ (11) ಸೂಪರ್ ಟೆನ್ ಗಳಿಸಿದರೆ, ನಾಯಕ ಪ್ರದೀಪ್ ನರ್ವಾಲ್ (7 ಅಂಕ) ನಿರ್ಣಾಯಕ ಸಂದರ್ಭದಲ್ಲಿ ಮಿಂಚಿದರು. ಡೆಲ್ಲಿ ಕಡೆ ನಾಯಕ ಆಶು ಮಲಿಕ್ (13) ಮತ್ತು ಕೆ.ವಿನಯ್ (6) ಗಮನಸೆಳೆದರು.

ನಾಯಕ ಆಶು ಮಲಿಕ್ (13 ಅಂಕ) ಅವರ ಮಿಂಚಿನ ರೇಡಿಂಗ್ ಬಲದಿಂದ ಡೆಲ್ಲಿ ಆರಂಭದಿಂದಲೇ ಮುನ್ನಡೆಯಿತು. ಬುಲ್ಸ್ ಮತ್ತೊಂದು ಸೋಲಿನತ್ತ ಸಾಗುವಂತೆ ಕಂಡಿತು. ಆದರೆ ವಿರಾಮದ ನಂತರ ಪ್ರತಿಹೋರಾಟ ತೋರಿತು. ಮುಕ್ತಾಯಕ್ಕೆ ಹತ್ತು ನಿಮಿಷಗಳಿದ್ದಾಗ ಹಿನ್ನಡೆ 27–22ಕ್ಕೆ ಇಳಿಯಿತು. ಎರಡು ನಿಮಿಷಗಳಿದ್ದಾಗ ನರ್ವಾಲ್ ರೇಡಿಂಗ್ ವೇಳೆ ಡೆಲ್ಲಿ ತಂಡ ಆಲೌಟ್ ಆಗಿ, ತಂಡ ಮೊದಲ ಬಾರಿ ಒಂದು ಪಾಯಿಂಟ್ ಮುನ್ನಡೆಯನ್ನೂ ಪಡೆಯಿತು. ಇದೇ ಅಂತರ ಕಾಪಾಡಿಕೊಳ್ಳುವಲ್ಲಿ ಯಶಸ್ವಿಯಾಯಿತು.

ಮೊದಲ ಪಂದ್ಯ ಟೈ: ಇದಕ್ಕೆ ಮೊದಲು ಪುಣೇರಿ ಪಲ್ಟನ್ ಮತ್ತು ಬೆಂಗಾಲ್ ವಾರಿಯರ್ಸ್ ತಂಡಗಳು 32-32 ರಲ್ಲಿ ಸಮಬಲ ಸಾಧಿಸಿದವು. ಇತ್ತಂಡಗಳು ತಲಾ ಮೂರು ಅಂಕಗಳನ್ನು ಪಡೆದವು. ಇದು ಈ ಆವೃತ್ತಿಯಲ್ಲಿ ಟೈ ಆದ ಮೂರನೇ ಪಂದ್ಯ.

ಪುಣೇರಿ ಪರ ಆಕಾಶ್ ಶಿಂದೆ (8 ಅಂಕ) ಮತ್ತು ಪಂಕಜ್ ಮೋಹಿತೆ (8 ಅಂಕ) ಗರಿಷ್ಠ ವೈಯಕ್ತಿಕ ಅಂಕ ಗಳಿಸಿದರು. ಬೆಂಗಾಲ್ ಪರ ಸುಶೀಲ್ ಕಂಬ್ರೇಕರ್ (10), ನಿತಿನ್ ಧನಕರ್ (6ಅಂಕ) ಮಿಂಚಿದರು.

ಬುಧವಾರದ ಪಂದ್ಯ: ಗುಜರಾತ್ ಜೈಂಟ್ಸ್– ತಮಿಳ್ ತಲೈವಾಸ್ (ರಾತ್ರಿ 8.00); ಯು.ಪಿ. ಯೋಧಾಸ್– ಮತ್ತು ಹರಿಯಾಣ ಸ್ಟೀಲರ್ಸ್ (ರಾತ್ರಿ 9.00)



ಬೆಂಗಾಲ್ ವಾರಿಯರ್ಸ್ ವಿರುದ್ಧ ಪುಣೇರಿ ಪಲ್ಟನ್ ತಂಡದ ಅಸ್ಲಾಂ ಇನಾಮದಾರ್ ಅವರ ರೇಡಿಂಗ್...

ಟಿಟಿ: ಶ್ರೇಯಲ್, ವೇದಲಕ್ಷ್ಮಿಗೆ ಕಿರೀಟ

ಪ್ರಜಾವಾಣಿ ವಾರ್ತೆ

ಧಾರವಾಡ: ಶ್ರೇಯಲ್ ತೆಲಂಗ್ ಮತ್ತು ವೇದಲಕ್ಷ್ಮಿ ಡಿ.ಕೆ. ಅವರು ಧಾರವಾಡದ ಕಾಸ್ಮೊಸ್ ಸೆಂಚುರಿ ಕ್ಲಬ್‌ನಲ್ಲಿ ಮಂಗಳವಾರ ಮುಕ್ತಾಯಗೊಂಡ ಕರ್ನಾಟಕ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಸಿಂಗಲ್ಸ್ ಪ್ರಶಸ್ತಿಯನ್ನು ಗೆದ್ದುಕೊಂಡರು.

ಪುರುಷರ ಸಿಂಗಲ್ಸ್‌ನ ಫೈನಲ್‌ನಲ್ಲಿ ಶ್ರೇಯಲ್ 4–2 (11-8, 11-9, 5-11, 11-6, 10-12, 11-8) ರಿಂದ ಸಮರ್ಥ ಕುರ್ಡಿಕೇರಿ ಅವರನ್ನು ಮಣಿಸಿದರು. ಸೆಮಿಫೈನಲ್‌ನಲ್ಲಿ ಶ್ರೇಯಲ್ 4–3ರಿಂದ ಯಶವಂತ್ ಪಿ. ಅವರನ್ನು; ಸಮರ್ಥ್ 4–1ರಿಂದ ಎಂ. ಕಲ್ಯೆವನನ್ ಅವರನ್ನು ಸೋಲಿಸಿದ್ದರು.

ಮಹಿಳೆಯರ ಸಿಂಗಲ್ಸ್‌ನ ಫೈನಲ್‌ನಲ್ಲಿ ವೇದಲಕ್ಷ್ಮಿ 4–1 (5-11, 11-9, 11-2, 11-9, 11-8) ರಿಂದ ಅನರ್ಘ್ಯ ಮಂಜುನಾಥ್ ಅವರನ್ನು ಹಿಮ್ಮೆಟ್ಟಿಸಿದರು. ಸೆಮಿಫೈನಲ್‌ನಲ್ಲಿ ವೇದಲಕ್ಷ್ಮಿ 4–1ರಿಂದ ತೃಪ್ತಿ ಪುರೋಹಿತ್ ವಿರುದ್ಧ; ಅನರ್ಘ್ಯ 4–2ರಿಂದ ದೇಶ್ನಾ ಎಂ. ವಂಶಿಕಾ ವಿರುದ್ಧ ಗೆಲುವು ಸಾಧಿಸಿದ್ದರು.

19 ವರ್ಷದೊಳಗಿನ ಬಾಲಕರ ವಿಭಾಗದ ಸಿಂಗಲ್ಸ್ ಪ್ರಶಸ್ತಿ ವಿಭಾಸ್ ವಿ.ಜಿ. ಅವರ ಪಾಲಾಯಿತು. ಅವರು ಫೈನಲ್‌ನಲ್ಲಿ 4–1 (14-12, 8-11, 11-7, 11-6, 11-8)ರಿಂದ ಸಂಜಯ್ ಮಾಧವನ್ ಅವರನ್ನು ಸೋಲಿಸಿದರು. ಸೆಮಿಫೈನಲ್‌ನಲ್ಲಿ ವಿಭಾಸ್ 3–1ರಿಂದ ಅಥರ್ವ ನವರಂಗ ವಿರುದ್ಧ; ಸಂಜಯ್ 3–1ರಿಂದ ಸಿದ್ಧಾಂತ್ ಧರಿವಾಲ್ ವಿರುದ್ಧ ಜಯ ಸಾಧಿಸಿದ್ದರು.

ಟ್ರೋಫಿಯೊಂದಿಗೆ ಶ್ರೇಯಲ್, ವೇದಲಕ್ಷ್ಮಿ ಮತ್ತು ವಿಭಾಸ್

ಹಾಕಿ: ರಾಷ್ಟ್ರಮಟ್ಟಕ್ಕೆ ಮೈಸೂರು, ಕಲಬುರಗಿ

ಗೋಣಿಕೊಪ್ಪಲು (ಕೊಡಗು ಜಿಲ್ಲೆ): ಇಲ್ಲಿನ ಪೊನ್ನಂಪೇಟೆ ಕರ್ನಾಟಕ ಪಬ್ಲಿಕ್ ಶಾಲೆಯ ಟರ್ಫ್ ಮೈದಾನದಲ್ಲಿ ನಡೆಯುತ್ತಿರುವ ಪ್ರಾಥಮಿಕ ಮತ್ತು ಪ್ರೌಢಶಾಲಾ ರಾಜ್ಯಮಟ್ಟದ ಶೈಕ್ಷಣಿಕ ಹಾಕಿ ಟೂರ್ನಿಯಲ್ಲಿ ಪಾರಮ್ಯ ಮೆರೆದ ಮೈಸೂರು ಮತ್ತು ಕಲಬುರಗಿ ತಂಡಗಳು ರಾಷ್ಟ್ರಮಟ್ಟದಲ್ಲಿ ಆಡುವ ಅರ್ಹತೆ ಗಳಿಸಿದವು.

ಮಂಗಳವಾರ ನಡೆದ 14 ವರ್ಷದ ಒಳಗಿನ ಬಾಲಕಿಯರ ವಿಭಾಗದಲ್ಲಿ ಕಲಬುರಗಿ ವಿಭಾಗದ ತಂಡ 4-3ರಿಂದ ಬೆಂಗಳೂರು ತಂಡವನ್ನು ಮಣಿಸಿದರೆ, ಬಾಲಕರ ವಿಭಾಗದಲ್ಲಿ ಮೈಸೂರು ತಂಡ 4–2 ಗೋಲುಗಳಿಂದ ಕಲಬುರಗಿ ವಿರುದ್ಧ ಜಯಗಳಿಸಿತು.

ಬೆಳಗಾವಿ 5-0 ಗೋಲುಗಳಿಂದ ಬೆಂಗಳೂರು ಎದುರು, ಮೈಸೂರು 3–2 ರಿಂದ ಕಲಬುರಗಿ ಎದುರು, ಮೈಸೂರು 6-4 ಅಂತರದಿಂದ ಕಲಬುರಗಿ ಎದುರು ಗೆದ್ದವು.

17 ವರ್ಷದ ಒಳಗಿನ ಬಾಲಕಿಯರ ವಿಭಾಗದಲ್ಲಿ ಕೂಡಿಗೆ ವಸತಿ ಶಾಲೆಯ ತಂಡ 9-1 ಗೋಲುಗಳಿಂದ ಬೆಂಗಳೂರು ವಿಭಾಗ ತಂಡದ ಎದುರು ಭರ್ಜರಿ ಗೆಲುವು ಪಡೆಯಿತು. ಮೈಸೂರು ತಂಡವು 7–0 ಅಂತರದಲ್ಲಿ ಬೆಳಗಾವಿ ಎದುರು ಜಯಿಸಿತು. ಕಲಬುರಗಿ ತಂಡವು 2–1ರಿಂದ ಬೆಂಗಳೂರು ತಂಡವನ್ನು ಮಣಿಸಿತು.

17 ವರ್ಷದ ಒಳಗಿನ ಬಾಲಕರ ವಿಭಾಗದಲ್ಲಿ ಬೆಳಗಾವಿ ಮತ್ತು ಕಲಬುರಗಿ ತಂಡ 2-2 ಗೋಲುಗಳಿಂದ ಡ್ರಾ ಸಾಧಿಸಿತು. ಮೈಸೂರು ತಂಡ 7–0ರಿಂದ ಕಲಬುರಗಿ ಎದುರು, ಮೈಸೂರು ವಿಭಾಗದ ಕೂಡಿಗೆ ವಸತಿ ಶಾಲೆ ತಂಡವು 5-1 ಗೋಲುಗಳಿಂದ ಬೆಂಗಳೂರು ತಂಡದ ವಿರುದ್ಧ ಜಯಿಸಿತು.

ಸಿ.ಕೆ.ನಾಯ್ಡು ಟ್ರೋಫಿ ಕ್ರಿಕೆಟ್: ಕರ್ನಾಟಕಕ್ಕೆ ಮುನ್ನಡೆ

ಬೆಂಗಳೂರು: ಕರ್ನಾಟಕ ತಂಡ, ಕರ್ನಲ್ ಸಿ.ಕೆ.ನಾಯ್ಡು ಟ್ರೋಫಿ 23 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿ ಪಂದ್ಯದ ಮೂರನೇ ದಿನವಾದ ಮಂಗಳವಾರ ಮಹಾರಾಷ್ಟ್ರ ವಿರುದ್ಧ 36 ರನ್‌ಗಳ ಮೊದಲ ಇನಿಂಗ್ಸ್ ಪಡೆಯಿತು. ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ದಿನದಾಟ ಮುಗಿದಾಗ ಮಹಾರಾಷ್ಟ್ರ ಎರಡನೇ ಇನಿಂಗ್ಸ್‌ನಲ್ಲಿ 6 ವಿಕೆಟ್‌ಗೆ 187 ರನ್ ಗಳಿಸಿದೆ.

ಮಹಾರಾಷ್ಟ್ರ ಎರಡನೇ ಸರದಿಯಲ್ಲಿ ಕರ್ನಾಟಕದ ಸ್ಪಿನ್ ದಾಳಿಗೆ ಸಿಲುಕಿ ನಿಯಮಿತವಾಗಿ ವಿಕೆಟ್‌ಗಳನ್ನು ಕಳೆದುಕೊಂಡಿತು. ಒಂದು ಹಂತದಲ್ಲಿ 105 ರನ್‌ಗಳಾಗುವಷ್ಟರಲ್ಲಿ 6 ವಿಕೆಟ್ ಕಳೆದುಕೊಂಡು ಸೋಲಿನತ್ತ ಸಾಗಿತ್ತು. ಆದರೆ ವಿಕೆಟ್ ಕೀಪರ್ ಎ.ಎ.ಪವಾರ್ (ಬ್ಯಾಟಿಂಗ್ 45, 135ಎ, 4x4, 6x1) ಮತ್ತು ನಾಯಕ ಎ.ಎಸ್.ನಲವಡೆ (ಬ್ಯಾಟಿಂಗ್ 42, 91ಎ, 4x5, 6x1) ಅವರು ಚೇತರಿಕೆ ನೀಡಿದರು. ಮುರಿಯದ ಏಳನೇ ವಿಕೆಟ್‌ಗೆ 82 ರನ್ ಸೇರಿಸಿ ಆತಿಥೇಯ ತಂಡಕ್ಕೆ ಪ್ರತಿರೋಧ ಒಡ್ಡಿದರು. ಮಹಾರಾಷ್ಟ್ರ ಸದ್ಯ 151 ರನ್ ಮುನ್ನಡೆ ಹೊಂದಿದೆ. ಪಂದ್ಯಕ್ಕೆ ಬುಧವಾರ ಕೊನೆಯ ದಿನವಾಗಿದೆ.

ಆಫ್ ಸ್ಪಿನ್ನರ್ ಶಶಿಕುಮಾರ್ ಕೆ. (52ಕ್ಕೆ3) ಮತ್ತು ಎಡಗೈ ಸ್ಪಿನ್ನರ್ ಪಾರಸ್ ಗುರುಬಕ್ಷ್ ಆರ್ಯ (70ಕ್ಕೆ3) ವಿಕೆಟ್‌ಗಳನ್ನು ಸಮನಾಗಿ ಹಂಚಿಕೊಂಡರು.

ಇದಕ್ಕೆ ಮೊದಲು, ಸೋಮವಾರ 5 ವಿಕೆಟ್‌ಗೆ 242 ರನ್‌ಗಳೊಡನೆ ಆಟ ಮುಂದುವರಿಸಿದ ಕರ್ನಾಟಕ ಆ ಮೊತ್ತಕ್ಕೆ 57 ರನ್ ಸೇರಿಸಲಷ್ಟೇ ಶಕ್ತವಾಯಿತು. 108 ರನ್‌ಗಳೊಡನೆ ಅಜೇಯರಾಗುಳಿದಿದ್ದ ಪ್ರಖರ್ ಚತುರ್ವೇದಿ (109) ಆ ಮೊತ್ತಕ್ಕೆ ಇಂದು ಒಂದು ರನ್ ಸೇರಿಸಿ ಮೊದಲಿಗರಾಗಿ ನಿರ್ಗಮಿಸಿದರು. ಯಶೋವರ್ಧನ್ ಪರಂತಾಪ್ (23) ಮತ್ತು ವಿಕೆಟ್ ಕೀಪರ್ ಕೃತಿಕ್ ಕೃಷ್ಣ (28) ಅವರ ಉಪಯುಕ್ತ ಕೊಡುಗೆಗಳಿಂದ ಕರ್ನಾಟಕ ಮುನ್ನಡೆ ಪಡೆಯುವಲ್ಲಿ ಯಶಸ್ವಿಯಾಯಿತು.

ಸ್ಕೋರುಗಳು: ಮೊದಲ ಇನಿಂಗ್ಸ್: ಮಹಾರಾಷ್ಟ್ರ 263; ಕರ್ನಾಟಕ: 94.2 ಓವರುಗಳಲ್ಲಿ 299 (ಪ್ರಖರ್ ಚತುರ್ವೇದಿ 109, ಯಶೋವರ್ಧನ ಪರಂತಾಪ್ 23, ಕೃತಿಕ್ ಕೃಷ್ಣ 28; ವಿಕಿ ಒಸ್ವಾಲ್ 103ಕ್ಕೆ6, ಶುಭಂ ಮೇದ್ 76ಕ್ಕೆ2); ಎರಡನೇ ಇನಿಂಗ್ಸ್: ಮಹಾರಾಷ್ಟ್ರ 74 ಓವರುಗಳಲ್ಲಿ 6 ವಿಕೆಟ್‌ಗೆ 187 (ದಿಗ್ವಿಜಯ ಪಾಟೀಲ 49, ಕೌಶಲ್ ಎಸ್.ತಾಂಬೆ 26, ಎ.ಎ.ಪವಾರ್ ಬ್ಯಾಟಿಂಗ್ 45, ಎ.ಎಸ್.ನಲವಡೆ ಬ್ಯಾಟಿಂಗ್ 42; ಶಶಿಕುಮಾರ್ ಕೆ. 52ಕ್ಕೆ3, ಪಾರಸ್ ಗುರುಬಕ್ಷ್ ಆರ್ಯ 70ಕ್ಕೆ3).

ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವೇಡ್ ನಿವೃತ್ತಿ

ಮೆಲ್ಬರ್ನ್ (ಪಿಟಿಐ): 2021ರ ಟಿ20 ವಿಶ್ವಕಪ್ ವಿಜೇತ ಆಸ್ಟ್ರೇಲಿಯಾ ತಂಡದಲ್ಲಿದ್ದ ಮ್ಯಾಥ್ಯೂ ವೇಡ್ ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಮಂಗಳವಾರ ವಿದಾಯ ಹೇಳಿದ್ದಾರೆ. 36 ವರ್ಷ ವಯಸ್ಸಿನ ಅವರು ಕೋಚಿಂಗ್‌ನತ್ತ ಮುಖ ಮಾಡಿದ್ದಾರೆ.

ವಿಕೆಟ್‌ಕೀಪರ್, ಬ್ಯಾಟರ್ ಆಗಿರುವ ವೇಡ್, ಮುಂಬರುವ ಪಾಕಿಸ್ತಾನ ವಿರುದ್ಧದ ಟಿ20 ಮತ್ತು ಏಕದಿನ ಸರಣಿಗಾಗಿ ಆಸ್ಟ್ರೇಲಿಯಾದ ಮುಖ್ಯ ಕೋಚ್ ಆ್ಯಂಡ್ರೆ ಬೊರೊವೆಕ್ ಅವರಿಗೆ ಸಾಥ್ ನೀಡಲಿದ್ದು, ಕೋಚಿಂಗ್ ತಂಡವನ್ನು ಸೇರಿಕೊಳ್ಳಲಿದ್ದಾರೆ.

13 ವರ್ಷಗಳ ಕ್ರಿಕೆಟ್ ವೃತ್ತಿಜೀವನದಲ್ಲಿ ವೇಡ್ ಅವರು 36 ಟೆಸ್ಟ್, 97 ಏಕದಿನ ಮತ್ತು 92 ಟಿ20 ಪಂದ್ಯಗಳನ್ನು ಆಸ್ಟ್ರೇಲಿಯಾ ತಂಡಕ್ಕೆ ಆಡಿದ್ದಾರೆ. 2021ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ಅವರು, 2024ರ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಅವರು ಕೊನೆಯ ಬಾರಿ ರಾಷ್ಟ್ರೀಯ ತಂಡಕ್ಕೆ ಆಡಿದ್ದರು.

ದೇಶೀಯ ಕ್ರಿಕೆಟ್‌ನಲ್ಲಿ ಮುಂದುವರಿಯಲು ನಿರ್ಧರಿಸಿರುವ ಅವರು ಟಾಸ್ಮೆನಿಯಾ ತಂಡಕ್ಕೆ ಆಡಲಿದ್ದಾರೆ. ಜೊತೆಗೆ ಬಿಗ್ ಬ್ಯಾಷ್ ಲೀಗ್‌ನಲ್ಲಿ ಹೋಬರ್ಟ್ ಹರಿಕೇನ್ಸ್‌ಗೆ ಮುಂದಿನ ಎರಡು ಋತುಗಳಲ್ಲಿ ಆಡುವರು.

ಮ್ಯಾಥ್ಯೂ ವೇಡ್

ಮ್ಯಾಥ್ಯೂ ವೇಡ್ ಸಾಧನೆ (ಅಂತರರಾಷ್ಟ್ರೀಯ ಕ್ರಿಕೆಟ್)

ಮಾದರಿ	ಪಂದ್ಯ	ರನ್	ಶತಕ	ಅರ್ಧಶತಕ	ಗರಿಷ್ಠ	ಕ್ಯಾಚ್	ಸ್ಟಂಪಿಂಗ್
ಟೆಸ್ಟ್	36	1613	4	5	117	74	11
ಏಕದಿನ	97	1867	1	11	100*	108	9
ಟಿ20	92	1202	0	3	80	58	6

ಎಟಿಪಿ ಫೈನಲ್ಸ್: ಸ್ಥಾನ ಪಡೆದ ಬೋಪಣ್ಣ– ಎಬ್ಡೆನ್ ಜೋಡಿ

ನವದೆಹಲಿ (ಪಿಟಿಐ): ಭಾರತದ ಅನುಭವಿ ಆಟಗಾರ ರೋಹನ್ ಬೋಪಣ್ಣ ಮತ್ತು ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ ಜೋಡಿಯು ಋತುವಿನ ಕೊನೆಯ ಪ್ರತಿಷ್ಠಿತ ಎಟಿಪಿ ಫೈನಲ್ಸ್ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್‌ನಲ್ಲಿ ಸ್ಥಾನ ಪಡೆದಿದ್ದಾರೆ.

ಇಟಲಿಯ ಇನಾಲ್ಪಿ ಅರೇನಾದಲ್ಲಿ ನವೆಂಬರ್ 10ರಿಂದ 17ರವರೆಗೆ ಟೂರ್ನಿ ನಡೆಯಲಿದೆ. ಕರ್ನಾಟಕದ ಬೋಪಣ್ಣ ಅವರಿಗೆ ಇದು ನಾಲ್ಕನೇ ಎಟಿಪಿ ಫೈನಲ್ಸ್ ಟೂರ್ನಿಯಾಗಿದೆ.

ರೋಲೆಕ್ಸ್ ಪ್ಯಾರಿಸ್ ಮಾಸ್ಟರ್ಸ್ ಟೂರ್ನಿಯಲ್ಲಿ ಅಮೆರಿಕದ ನಥಾನಿಯಲ್ ಲ್ಯಾಮನ್ಸ್ ಮತ್ತು ಜಾಕ್ಸನ್ ವಿಥ್ರೋ ಜೋಡಿಯು ಮಂಗಳವಾರ 32ರ ಘಟ್ಟದ ಪಂದ್ಯದಲ್ಲಿ ಹೊರಬಿದ್ದ ನಂತರ ಬೋಪಣ್ಣ– ಎಬ್ಡೆನ್ ಅವರಿಗೆ ಎಟಿಪಿ ಫೈನಲ್ಸ್‌ನಲ್ಲಿ ಸ್ಥಾನ ಖಚಿತಗೊಂಡಿತು. ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರ ಎಂಟು ತಂಡಗಳು ಟೂರ್ನಿಗೆ ಅರ್ಹತೆ ಪಡೆಯಲಿವೆ.

ಬೋಪಣ್ಣ ಮತ್ತು ಎಬ್ಡೆನ್ ಜೋಡಿಯು ಪ್ರಸಕ್ತ ಋತುವನ್ನು ಆಸ್ಟ್ರೇಲಿಯಾ ಓಪನ್ ಕಿರೀಟದೊಂದಿಗೆ ಆರಂಭಿಸಿತ್ತು. ಬೋಪಣ್ಣ ಅವರು ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಿದ ಅತಿ ಹಿರಿಯ ವಯಸ್ಸಿನ ಆಟಗಾರನೆಂಬ ಹಿರಿಮೆಗೂ ಪಾತ್ರವಾಗಿದ್ದರು.

ಎಟಿಪಿ ಫೈನಲ್ಸ್ ಟೂರ್ನಿಗೆ ಸತತ ಎರಡನೇ ಬಾರಿಗೆ ಅರ್ಹತೆ ಪಡೆದಿರುವ ಬೋಪಣ್ಣ– ಎಬ್ಡೆನ್ ಜೋಡಿಯು 2023ರಲ್ಲಿ ಸೆಮಿಫೈನಲ್ ತಲುಪಿತ್ತು. 44 ವರ್ಷ ವಯಸ್ಸಿನ ಬೋಪಣ್ಣ ಟೂರ್ನಿಯಲ್ಲಿ ಚೊಚ್ಚಲ ಪ್ರಶಸ್ತಿಯನ್ನು ಎದುರು ನೋಡುತ್ತಿದ್ದಾರೆ. ಅವರು 2012ರಲ್ಲಿ ಮಹೇಶ್ ಭೂಪತಿ ಅವರೊಂದಿಗೆ ಮತ್ತು 2015ರಲ್ಲಿ ಫ್ಲೋರಿನ್ ಮೆರ್ಗೆಯಾ (ರೊಮೇನಿಯಾ) ಅವರೊಂದಿಗೆ ಫೈನಲ್ ತಲುಪಿದ್ದರು.

ರೋಹನ್ ಬೋಪಣ್ಣ– ಮ್ಯಾಥ್ಯೂ ಎಬ್ಡೆನ್ –ಎಎಫ್‌ಪಿ ಚಿತ್ರ

THE PRINTERS (MYSORE) PRIVATE LIMITED
Publishers: DECCAN HERALD, PRAJAVANI, SUDHA & MAYURA

We are a leading newspaper and magazine publishing group in Karnataka. We invite applications for the following position in our organisation.

Executive-Maintenance/Production

Department : Production
Qualification : BE or Diploma (Electrical, Mechanical or Mechatronics)
Experience : 4 years and above
Job Location : Kumbalgodu (Bangalore), Mangalore

Requirement:
- Should have hands on experience in maintenance and service of High-speed web offset press, Mail room, utility equipment
- Should be thorough in breakdown maintenance, predictive maintenance, preventive and autonomous maintenance.
- Should be willing to work in shifts including night shift.
- Should be able to communicate both in English and Kannada.

Assistant Manager-Talent Acquisition
The Printers (Mysore) Private Limited
75, Mahatma Gandhi Road, Bengaluru – 560 001
E-mail: neesha.srinivas@printersmysore.co.in

ಮೂಡಲಿ ಖುಷಿಯ ಚಿತ್ತಾರ! ದೂರಾಗಲಿ ಬದುಕಿನ ಅಂಧಕಾರ!
ತುಂಬಲಿ ಮನೆ ಮನಗಳಲ್ಲಿ ಸಂಭ್ರಮ ಸಡಗರ! ದೀಪಾವಳಿಯ ಶುಭಾಶಯಗಳು
ಪೂರ್ವಿಕಾ
ನಮ್ಮ ಮನೆ ದೀಪಾವಳಿ
₹11,000 CASHBACK FREE
UPTO 10% CASHBACK TVS CREDIT
Win GOLD VOUCHER ₹1,00,000
Win GIFT VOUCHER ₹5,000
Buy SmartPhone Below ₹12,000 Just Pay ₹499 & Get True Wireless Worth ₹3,499
Buy SmartPhone Between ₹12,001 to ₹25,000 Just Pay ₹799 & Get Calling Smartwatch Worth ₹5,299
Buy SmartPhone Between ₹25,001 to ₹40,000 Just Pay ₹999 & Get Calling Smartwatch Worth ₹7,999
Buy Smartphone Above ₹40,000 Just Pay ₹7,999 & Get Robot Vacuum Worth ₹24,999
Buy Above ₹5,000 & Get a chance to Win
iPhone 16 (128 GB) MRP ₹79,900 Effective Price ₹46,900* PER DAY EMI ₹107*
iPhone 16 Plus (128 GB) MRP ₹89,900 Effective Price ₹56,900* PER DAY EMI ₹121*
*Selected Models Only
Upto ₹5,000* Instant Cashback on Credit Cards of
*Effective Price after Store Discount, Exchange Value Exchange Bonus & Bank Cashback
Protect your iphone Start @ ₹1,999 50% OFF
FREE Apple 20W USB-C Power Adapter Worth ₹1,900
iPhone 15 (128 GB) MRP ₹79,900 Effective Price ₹37,900* PER DAY EMI ₹94*
iPad Wifi 10th Gen 10.9 inch (A14 +64GB) ₹3,000* Instant Cashback 24 Month No Cost EMI EMI ₹1,454*
*T&C Apply. Offer Applicable for Selected Brand Model Only / Offer Valid till 04th Nov 2024
SAMSUNG Galaxy Z Fold 6 5G Upto ₹20,000* Discount 24 Month* No Cost EMI EMI ₹6,042*
SAMSUNG Galaxy S24FE 5G EMI ₹5,000* Upto 12 Months No Cost EMI
SAMSUNG Galaxy A16 5G Upto ₹1,000* Cashback EMI ₹1,583*
SAMSUNG Galaxy A35 5G 8 + 128 GB ₹30,999 ₹25,999* 12 Month* No Cost EMI EMI ₹2,167*
NOTHING CMF Phone 1 / Phone (2a) Phone (2a) Plus Starts @ ₹12,999* Upto ₹3,000* ICICI Bank Instant Cashback Upto ₹3,000 Discount
vivo Y300 Plus 5G (8+128GB) ₹23,999 Effective Price ₹21,999* Upto 85% OFF on Calling Smartwatch Worth ₹5,299
vivo V40 5G (8+128GB) ₹34,999 Effective Price ₹31,499* Upto 85% OFF on Calling Smartwatch Worth ₹7,999
OPPO Reno 12 5G (8+256GB) ₹32,999 Effective Price ₹29,699* Upto 85% OFF on Calling Smartwatch Worth ₹7,999
OPPO A3 Pro 5G (8+128GB) ₹17,999 Effective Price ₹16,499* Upto 85% OFF on Calling Smartwatch Worth ₹5,299
ONEPLUS Nord CE4 Lite 5G (8+256GB) ₹22,999 Effective Price ₹19,999* EMI ₹1,749*
SAMSUNG Galaxy F15 5G (4+128GB) Upto ₹1,000 DISCOUNT 1 RUPEE DOWN PAYMENT EMI @ ₹2,167
Xiaomi 14 Civi 5G (8+256GB) ₹42,999 Effective Price ₹37,999* Upto 65% OFF Vacuum Cleaner Worth ₹24,999
Redmi A3 (6+128GB) ₹8,999 Special Offer ₹7,999* Upto 85% OFF ON TWS Worth ₹3,499
itel A50 (4+64GB) ₹7,399 ₹5,999* Upto 85% OFF ON TWS Worth ₹3,499
TECNO Spark 20 Pro 5G (8+256GB) ₹21,999 ₹10,999* FREE Calling Smartwatch Worth ₹5,299
realme C65 5G (8+128GB) Upto 7.5% Instant Cashback Upto 85% OFF on Calling Smartwatch Worth ₹5,299
realme 13 5G (8+128GB) ₹17,999 Effective Price ₹14,399* Upto 85% OFF on Calling Smartwatch Worth ₹5,299
XIAOMI Smart TV A Series 32" Effective Price ₹10,499 EMI ₹1,333
XIAOMI Smart TV X Series 43" Effective Price ₹23,999 EMI ₹2,167
*T&C Apply For Selected Brands & Models
LAPTOP Starts @ ₹19,990*
hp VICTUS GAMING EMI @ ₹4,886 FREE Laptop Bag Keyboard & Mouse Combo Worth ₹3,478
• AMD Ryzen 5 processor • AMD Radeon RX 6500M Graphics • 8GB+512GB SSD
DELL INSPIRON 3530 EMI @ ₹4,797 FREE Laptop Bag Keyboard & Mouse Combo Worth ₹3,478
• 13th Generation Intel Core i5-1334U Processor • Intel UHD Graphics • 16GB+512GB SSD
ZEBRONICS Zeb-Vita Pro RGB 24W Bluetooth Speaker 65% Discount ₹1,499
boAt Lunar Fit Smartwatch 70% Discount ₹1,999
boAt Aavante Bar Quake 50% Discount ₹7,999
JBL Wave Beam TWS 40% Discount ₹2,999
YARR Type C Earphone 65% Discount ₹499
FIRE-BOLTT Terrain Smartwatch 85% Discount ₹1,799
HDFC BANK Upto* 12% INSTANT DISCOUNT On Credit card & Debit card EMIs
ICICI Bank 7.5%* INSTANT DISCOUNT on Credit & Debit Cards Offer Valid from 24th Oct 2024 to 01st Nov 2024.
*Offer is not applicable on Amazon Pay ICICI Bank Credit Cards.
BAJAJ FINSERV ONE INDIA ONE FINANCER #EMI Anywere
24 Month No Cost EMI
FREE ONE TIME SCREEN REPLACEMENT
SCAN QR CODE TO CHAT ONLINE
Upto 12% INSTANT DISCOUNT On CREDIT CARDS
Customer Helpline : 99406 88855
Shop online @ www.poorvika.com
POORVIKA